ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪ-ಒಂದು ಅಧ್ಯಯನ

(ಕ್ರಿ.ಶ. 5 ರಿಂದ 8ನೇ ಶತಮಾನ)

(ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ

ಜಿ.ಎಸ್. ಸವಿತಕುಮಾರಿ

ಎಂ.ಎ., ಎಂ.ಎ., ಬಿ.ಎಡ್., (ಎಂ.ಫಿಲ್)

ಮಾರ್ಗದರ್ಶಕರು :

ಡಾ. ಪ್ರಭಾಮಣಿ

ಎಂ.ಎ., ಪಿಎಚ್.ಡಿ.,

ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ

ಟೆರೆಷಿಯನ್ ಕಾಲೇಜು, ಮೈಸೂರು.

ಹಂಪಿ ವಿಶ್ವವಿದ್ಯಾಲಯ

ಅಧ್ಯಯನ ಕೇಂದ್ರ : ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

2008

ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪ-ಒಂದು ಅಧ್ಯಯನ

(ಕ್ರಿ.ಶ. 5 ರಿಂದ 8ನೇ ಶತಮಾನ)

(ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ

ಜಿ.ಎಸ್. ಸವಿತಕುಮಾರಿ

ಎಂ.ಎ., ಎಂ.ಎ., ಬಿ.ಎಡ್., (ಎಂ.ಫಿಲ್)

ಮಾರ್ಗದರ್ಶಕರು :

ಡಾ. ಪ್ರಭಾಮಣಿ

ಎಂ.ಎ., ಪಿಎಚ್.ಡಿ.,

ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ

ಟೆರೆಷಿಯನ್ ಕಾಲೇಜು, ಮೈಸೂರು.

ಹಂಪಿ ವಿಶ್ವವಿದ್ಯಾಲಯ

ಅಧ್ಯಯನ ಕೇಂದ್ರ : **ಕರ್ನಾಟಕ ಸಂಘ (ರಿ), ಮಂಡ್ಯ**

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

2008

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದಲ್ಲಿ 2007-08ರಲ್ಲಿ ಸವಿತಾಕುಮಾರಿ ಜಿ.ಎಸ್. ಎಂಬ ನಾನು ಎಂ.ಫಿಲ್. ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೇನೆ. ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ಸಿದ್ಧಪಡಿಸಲು **"ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತು ಶಿಲ್ಪ-ಒಂದು ಅಧ್ಯಯನ" (ಕ್ರಿ.ಶ. 5 ರಿಂದ 8ನೇ ಶತಮಾನ)** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ. ಪ್ರಭಾಮಣಿ,** ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಟೆರೆಷಿಯನ್ ಕಾಲೇಜು, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳಲ್ಲಿ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

[signature]

ಜಿ.ಎಸ್. ಸವಿತ ಕುಮಾರಿ
ಸಂಶೋಧಕಿ
ಹೊಸ ಗಬ್ಬಾಡಿ
ಕಗ್ಗಲಹಳ್ಳಿ ಅಂಚೆ, ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

ದಿನಾಂಕ : 26/9/09
ಸ್ಥಳ : Mandya

ಮಾರ್ಗದರ್ಶಕರ ಪ್ರಮಾಣ ಪತ್ರ

ಕುಮಾರಿ ಜಿ.ಎಸ್. ಸವಿತಾಕುಮಾರಿ ಎಂಬುವರು **ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತು ಶಿಲ್ಪ–ಒಂದು ಅಧ್ಯಯನ (ಕ್ರಿ.ಶ. 5 ರಿಂದ 8ನೇ ಶತಮಾನ)** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆಯ ಈ ನಿಬಂಧವನ್ನು ರಚಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ ಸ್ವತಂತ್ರ ನಿಬಂಧ. ಇದನ್ನು ಮೌಲ್ಯಮಾಪನಕ್ಕಾಗಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ನನ್ನ ಸಮ್ಮತಿಯನ್ನು ಸೂಚಿಸಿದ್ದೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು,
ಡಾ. ಪ್ರಭಾಮಣಿ
ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ
ಟೆರೆಷಿಯನ್ ಕಾಲೇಜು, ಮೈಸೂರು.

Dr. R. PRABHAMANI, M.A., Ph.D.
H.O.D. OF HISTORY
TERESIAN COLLEGE, MYSORE-11

ಸ್ಥಳ : MYSORE
ದಿನಾಂಕ :

ಪರಿವಿಡಿ

ಅಧ್ಯಾಯ–1

ಪೀಠಿಕೆ

ಅಧ್ಯಾಯ–1

ಪೀಠಿಕೆ

ಯಾವುದೇ ಸಾಮ್ರಾಜ್ಯದ ಉಗಮ, ಬೆಳವಣಿಗೆ, ವಿಸ್ತರಣೆ ಮತ್ತು ಅಂತ್ಯವನ್ನು ಕುರಿತು ಅಧ್ಯಯನ ಮಾಡಲು ನಮಗೆ ದೊರೆತಿರುವ ಆಧಾರಗಳಲ್ಲಿ ಸಾಹಿತ್ಯ ಆಧಾರಗಳು ಮತ್ತು ನಾಣ್ಯಗಳು, ಮುದ್ರೆಗಳು ಮತ್ತು ಕಲೆ ಮತ್ತು ವಾಸ್ತುಶಿಲ್ಪಗಳು ಸಹಾಯಕ್ಕೆ ಬರುತ್ತವೆ.

ಯಾವುದೇ ಕಲೆಯು ಬೆಳಕು ಚೆಲ್ಲಬೇಕಾದರೆ ಅದು ಇತಿಹಾಸಕಾರನಿಂದ ಮಾತ್ರ ಸಾಧ್ಯ ಎಂದೋ ನಡೆದ ಘಟನೆಯ ಎಂದೋ ಕೆತ್ತಿದ ಕೆತ್ತನೆಯನ್ನು ಸಂಶೋಧಿಸಿ ಅವುಗಳನ್ನು ಹೆಕ್ಕಿ ತೆಗೆದು ಅವುಗಳ ರಚನೆ ಮತ್ತು ಅವುಗಳ ನಿರ್ಮಾಣದ ಸಮಯ ಅದಕ್ಕಾಗಿ ಅವರು ಬಳಸಿದ ವಸ್ತುಗಳು, ಶಿಲ್ಪಗಳು ಅವುಗಳ ಶೈಲಿಯನ್ನು ತಿಳಿಯಲು ಇತಿಹಾಸಕಾರನ ಶ್ರಮ ಪ್ರಶಂಸನೀಯವಾದುದು. ಯಾವುದೇ ಒಂದು ಕಲೆಯು ನಿರ್ಮಾಣವಾಗಲು ಒಂದಲ್ಲ ಒಂದು ಕಾರಣವಿರುತ್ತದೆ. ಆ ಕಾರಣಗಳಲ್ಲಿ ಮುಖ್ಯವೆಂದರೆ ಅವರ ವಿಜಯದ ಕುರುಹುಗಳಿಗಾಗಿ ವೈರಿಯನ್ನು ಧಮನ ಮಾಡಿದುದರ ಕುರುಹಾಗಿ, ತಂದೆ ತಾಯಿಯ ನೆನಪಿಗಾಗಿ, ಪ್ರೇಮದ ನೆನಪಿಗಾಗಿ, ತಮಗೆ ಕಲೆಯ ಬಗೆಗೆ ಇರುವ ಪ್ರೀತಿಯ ಕುರುಹಾಗಿ ತಮ್ಮ ಆರಾಧ್ಯದೈವದ ನೆನಪಿಗಾಗಿ ಮತ್ತು ತಮ್ಮ ಸರ್ವಧರ್ಮಸಹಿಷ್ಣುತೆಯನ್ನು ಮೆರೆಯುವ ಸಲುವಾಗಿ ವಾಸ್ತುಶಿಲ್ಪಗಳನ್ನು ನಿರ್ಮಿಸುತ್ತಿದ್ದರು.

ಈ ವಾಸ್ತುಶಿಲ್ಪಗಳಲ್ಲಿ ನಾವು ಅವರ ಸಾಮಾಜಿಕ ಜೀವನ, ಅವನ ನಡೆ, ನುಡಿ, ವೇಷಭೂಷಣಗಳ ಬಗೆಗೆ ಅರಿಯಬಹುದು. ಅವರು ಪೂಜಿಸುತ್ತಿದ್ದ ದೇವರ ಬಗೆಗೆ ಅವರಿಗೆ ತಿಳಿದಿದ್ದ ನಾಗರೀಕ ಅಂಶಗಳ ಬಗೆಗೆ ಆಭರಣಗಳ ಬಗೆಗೆ ಅರಿಯಬಹುದು. ಶಿಲ್ಪಿಯ ಕಲಾನೈಪುಣ್ಯತೆ, ಸೌಂದರ್ಯೋಪಾಸನೆ, ಅವರಿಗೆ ಪರಿಚಯವಿದ್ದ ದೇವತೆಗಳ ಬಗೆಗೆ ಪುರಾಣ ಪುಣ್ಯಕತೆಗಳ ಬಗೆಗೆ ಅವರು ಇಟ್ಟುಕೊಂಡಿದ್ದ ವಿದೇಶೀ ಸಂಪರ್ಕದ ಬಗೆಗೆ ಅರಿಯಬಹುದು.

ಇತಿಹಾಸಕಾರನು ಇವುಗಳೆಲ್ಲವನ್ನೂ ಕುರಿತು ಅವಿರತವಾಗಿ ಶ್ರಮಪಡಬೇಕಾಗುತ್ತದೆ. ಕಾರಣ ಇವುಗಳ ನಿರ್ಮಾಣ ಕಾಲದ ಬಗೆಗೆ, ನಿರ್ಮಾಪಕರ ಬಗೆಗೆ ಯಾರಿಗೂ ಅರಿವಿರುವುದಿಲ್ಲ. ಅಲ್ಲಿರುವ ಶಿಲ್ಪಗಳು ಯಾವುದನ್ನು ಕುರಿತವುಗಳಾಗಿವೆ. ಅವುಗಳ ಮಹತ್ವ ಅವುಗಳನ್ನು ಯಾವ ರಾಜರು ಯಾವ

ಕಾಲದಲ್ಲಿ ಎಂದು ತಿಳಿಯಬೇಕಾದರೆ ಇತಿಹಾಸಕಾರನು ಆ ಕಾಲಕ್ಕೆ ಇಳಿಯಬೇಕು ಅಂದರೆ ಆ ಪ್ರದೇಶವನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಬೇಕು. ಇದನ್ನು ತಿಳಿಯಲು ಇರುವ ಆಧಾರಗಳು ಕಡಿಮೆ ಆಗ ಇತಿಹಾಸಕಾರನಿಗೆ ಸಹಾಯಕ್ಕೆ ಬರುವುದು ಅವರ ಬಗೆಗೆ ತಿಳಿಸುವ ಪ್ರತ್ಯಕ್ಷ ಸಾಕ್ಷಿಗಳಾದ ಕಲೆ ಮತ್ತು ವಾಸ್ತುಶಿಲ್ಪಗಳು ಈ ಕಲೆಗಳು ಅವರ ಕಾಲದ ಬಗೆಗೆ ತಿಳಿಸುವುದರ ಜೊತೆಗೆ ಇತರೆ ಎಲ್ಲಾ ಅಂಶಗಳನ್ನು ತಿಳಿಸುತ್ತವೆ. ಅವುಗಳನ್ನು ತಿಳಿಯಬೇಕಾದರೆ ಇತಿಹಾಸಕಾರನಿಗೆ ವಾಸ್ತುಶಾಸ್ತ್ರದ ಅರಿವಿರಬೇಕು. ಇದು ಸಾಮಾನ್ಯ ಮನುಷ್ಯನಿಂದ ಸಾಧ್ಯವಿಲ್ಲ. ಅದು ಕೇವಲ ಇತಿಹಾಸಕಾರನಿಗೆ ಅದರಲ್ಲೂ ಪ್ರೌಢಿಮೆಯಿರುವವನಿಂದ ಮಾತ್ರ ಸಾಧ್ಯ.

ಈ ಕಲೆಗಳಿಂದ ಇವರ ಲಾಂಛನ, ನಾಣ್ಯಗಳ ಬಗೆಗೂ ತಿಳಿಯುತ್ತದೆ. ಅವರ ಹವ್ಯಾಸಗಳು, ಅಭಿರುಚಿಗಳು ನಮಗೆ ತಿಳಿಯುತ್ತವೆ.

ಚಾಲುಕ್ಯರು ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿಗೆ ನೀಡಿದ ವಿಶಿಷ್ಟ ಕೊಡುಗೆ ಎಂದರೆ ಅವರ ಕಾಲದಲ್ಲಿ ಅರಳಿದ ವಾಸ್ತುಶಿಲ್ಪ. ಬಾದಾಮಿ ಮಹಾಕೂಟ ಮತ್ತು ಐಹೊಳೆ, ಪಟ್ಟದಕಲ್ಲುಗಳು ಕಲಾಪ್ರೇಮಿಗಳಿಗೆ ಪುಣ್ಯಕ್ಷೇತ್ರಗಳಾಗಿದ್ದು ಇಲ್ಲಿನ ಕಲಾಸೌಂದರ್ಯವು ಅರಸಿಕರನ್ನು ಸಹ ರಸಿಕರನ್ನಾಗಿ ಮಾಡುತ್ತದೆ. ಕ್ರಿ.ಶ. 6ನೇ ಶತಮಾನದಲ್ಲಿ ನಿರ್ಮಾಣಗೊಂಡ ಈ ಸ್ಮಾರಕಗಳು ಭಾರತದ ಉತ್ಕೃಷ್ಟ ದೇವಾಲಯಗಳ ಸಾಲಿಗೆ ಸೇರಿವೆ. ಬಗೆ ಬಗೆಯ ವಿನ್ಯಾಸಗಳು ವಿಭಿನ್ನ ರೀತಿಯ ಶೈಲಿಗಳಿಂದ ಕೂಡಿರುವ ಇವುಗಳ ಕೆತ್ತನೆ ಶಿಲ್ಪಿಗಳ ಸೃಜನಶೀಲತೆ ಪ್ರತಿಯೊಬ್ಬರಲ್ಲೂ ರೋಮಾಂಚನವನ್ನು ಮೂಡಿಸುತ್ತದೆ. ಮೂಲತಃ ಒಣಹವೆ ಮತ್ತು ಶುಷ್ಕವಲಯದಿಂದ ಕೂಡಿರುವ ಈ ಬಾದಾಮಿಯು ಬೆಟ್ಟಗುಡ್ಡಗಳಿಂದ ಆವೃತವಾಗಿದೆ. ಇಲ್ಲಿ ಹೊಟ್ಟೆಗೆ ಮಳೆಯೇ ಆಧಾರವಾಗಿದ್ದರೂ ಕಣ್ಣಿಗೆ ಹಬ್ಬವನ್ನುಂಟು ಮಾಡುವ ನಾಡು ಇಲ್ಲಿರುವ ಗುಡ್ಡಗಳು ಕೆಂಪು ಮರಳು ಶಿಲೆಗಳಿಂದ ಕೂಡಿವೆ. ಅವುಗಳನ್ನು ಸುಂದರ ಮೂರ್ತಿಗಳನ್ನಾಗಿ ಮೂಡಿಸಿದ ಹಿರಿಮೆ ಇವರಿಗೆ ಸಲ್ಲುತ್ತದೆ. ಕೆಂಪು ಮರಳು ಶಿಲೆಯು ಹೆಚ್ಚು ದಿನಗಳು ಬಾಳಿಕೆ ಬರುವುದಿಲ್ಲ ಎಂದು ತಿಳಿದಿದ್ದರೂ ಅವರು ಅಲ್ಲಿಯೇ ಕಲೆಯನ್ನು ಮೆರೆದಿರುವುದು. ಅವರು ಸ್ಥಳೀಯವಾಗಿ ದೊರೆಯುತ್ತಿದ್ದ ವಸ್ತುಗಳನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಇವುಗಳು ಉತ್ತಮವಾದ ಶಿಲ್ಪಗಳನ್ನು ನಾಜೂಕಾಗಿ ಕೆತ್ತಲು ಸಹಾಯಕವಾಗಿದೆ ಹಾಗೂ ಕಲ್ಲುಗಳನ್ನು ಬಳಸಿ ಎತ್ತರವಾದ ಜಗಲಿಯನ್ನು ಬಳಸಿ ಎತ್ತರವಾದ ದೇವಾಲಯದ ನಿರ್ಮಾಣದಲ್ಲಿ ತೊಡಗಿದ ಮೊದಲ ಕನ್ನಡ ಮನೆತನದವರಾಗಿದ್ದಾರೆ. ತಮ್ಮ ಈ ಕಲಾಪ್ರೌಢಿಮೆಯಿಂದ ವಿಶ್ವದ ಗಮನವನ್ನು ಸೆಳೆದಿದ್ದು

ಕಲೆಯು ಬದುಕಿರುವವರೆಗೂ ತಮ್ಮ ಹೆಸರು ಅಚ್ಚಳಿಯದಂತೆ ಇರುವ ಕಾರ್ಯವನ್ನು ಮಾಡಿದ್ದಾರೆ. ಇವರ ಶಿಲ್ಪಕಲೆಯ ನಾಡುಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಇಟಗಿ, ಅಜಂತಾ, ಎಲ್ಲೋರ, ಬಳ್ಳಿಗಾವೆ, ಸಂಡೂರು, ಬನವಾಸಿಗಳನ್ನು ಕುರಿತು ಈಗಾಗಲೇ ನೂರಾರು ಲೇಖನಗಳು ಹೊರಬಂದಿದ್ದರೂ ಸಹ ಅವುಗಳನ್ನು ಮತ್ತೆ ಅಧ್ಯಯನ ಮಾಡುವ ಉದ್ದೇಶದಿಂದ ಹೊಸ ವಿಚಾರಗಳನ್ನು ಗುರುತಿಸುವ ಉದ್ದೇಶದಿಂದ ನಾನು ಈ ನಿರ್ಬಂಧವನ್ನು ತೆಗೆದುಕೊಂಡಿದ್ದೇನೆ. ಇಲ್ಲಿ ಉತ್ತರದ ನಾಗರಶೈಲಿ, ದಕ್ಷಿಣದ ದ್ರಾವಿಡ ಶೈಲಿ ಮತ್ತು ಅವೆರಡನ್ನು ಕ್ರೂಢೀಕರಿಸಿ ನಾವೇಸರ ಶೈಲಿಯನ್ನು ಹುಟ್ಟಿಸಿ ಕಲಾಕೃತಿಯನ್ನು ರಚಿಸಿದ್ದಾರೆ. ಈ 3 ಶೈಲಿಗಳನ್ನು ಮೆಚ್ಚುವ ರಸಿಕರು ಇವುಗಳ ತವರುಮನೆಗಳಾದ ಐಹೊಳೆ, ಬಾದಾಮಿ, ಪಟ್ಟದಕಲ್ಲಿಗೆ ಹೋಗಲೇಬೇಕು ವೇಸರ ಶೈಲಿಯನ್ನು ಹುಟ್ಟುಹಾಕಿ ಹೆಚ್ಚು ಹೆಚ್ಚು ಸೂಕ್ಷ್ಮತೆಯನ್ನು ಅಳವಡಿಸಿ ನಿರ್ಮಿಸಿದ ಶಿಲ್ಪಗಳು ಪ್ರಪಂಚದ ವಾಸ್ತುಶಿಲ್ಪಕಲೆಯ ಸಾಲಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯವನ್ನು ಕರ್ನಾಟಕಕ್ಕೆ ತಂದುಕೊಟ್ಟಿದ್ದಾರೆ. ದೇವಾಲಯ, ಸಂಸ್ಕೃತಿಯ ಆಧ್ಯಾತ್ಮಿಕ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಇದ್ದರೂ ಆದಕ್ಕೆ ವಿರುದ್ಧವಾದ ಕಾಮ, ಕರ್ಮಾಚರಣೆ ಹಾಗೂ ಲೌಕಿಕ ಸುಖಗಳನ್ನು ಶಿಲ್ಪಗಳಲ್ಲಿ ಅಳವಡಿಸಿ ಜೋಡಿಸಲಾಗಿದೆ. ಶಿಲ್ಪಿಯೂ ಕೂಡ ಆಧ್ಯಾತ್ಮಿಕ ಸಾಂಕೇತಿಕ ಸೌಂದರ್ಯಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ಕಲ್ಪನೆ, ಆದರ್ಶಗಳಿಗೆ ಕೊರತೆಯಾಗದಂತೆ ಅಭಿವ್ಯಕ್ತಿಸಿ ಕಲೆಯ ಶ್ರೀಮಂತಿಕೆಯನ್ನು ವೃದ್ಧಿಪಡಿಸಿದ್ದಾನೆ.

ಇಲ್ಲಿಯವರೆಗೂ ಇದರ ಬಗೆಗೆ ಬಹಳಷ್ಟು ಇತಿಹಾಸಜ್ಞರು ಮತ್ತು ಪ್ರಾಚ್ಯ ವಸ್ತುಸಂಗ್ರಹಾಲಯದವರು ಮತ್ತು ಪುರಾತತ್ವ ಇಲಾಖೆಯವರು ಇತರ ಕಲೆ ಮತ್ತು ವಾಸ್ತುಶಿಲ್ಪದ ಬಗೆಗೆ ಅಧ್ಯಯನ ಕೈಗೊಂಡಿದ್ದು ಹಲವು ಕೃತಿಗಳನ್ನು ಮತ್ತು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಅವರುಗಳೆಂದರೆ, ವಿದೇಶೀಯ ಬರಹಗಾರರೆಂದರೆ ಪರ್ಗ್ಯೂಸನ್, ಕಸಿನ್ಸ್, ಪರ್ಸಿಬ್ರೌನ್, ಹೈನ್‌ರಿಚ್, ಜಿಮ್ಮರ್, ದಿ.ಬಿ. ಬೆನೆಟ್, ಜಾರ್ಜ್, ಎಂ. ಮೊರಾಸ್ ಹಾಗೆಯೇ ಭಾರತೀಯ ಇತಿಹಾಸಜ್ಞರೆಂದರೆ ಡಾ. ನೀಲಕಂಠಶಾಸ್ತ್ರಿ, ಡಾ. ತಿಪ್ಪೇರುದ್ರಸ್ವಾಮಿ, ಬಾ.ರಾ. ಗೋಪಾಲ್, ಪ್ರೊ. ಚಿದಾನಂದಮೂರ್ತಿ, ಕೆ.ಸಿ. ಈರಣ್ಣ, ಅಣ್ಣಿಗೇರಿ, ಅ.ಸುಂದರ, ಡಾ. ಎಸ್. ರಾಜಶೇಖರ್, ಶೀಲಕಾಂತಪತ್ತಾರ, ಪಿ.ಬಿ. ದೇಸಾಯಿ, ವೆಂಕಟರಮಣಪ್ಪ, ಎಂ.ವಿ. ನರಸಿಂಹಮೂರ್ತಿ ಭಟ್ಟ, ಹೆಚ್.ಸಿ.ಕೆ., ಹೆಚ್.ವಿ. ಶ್ರೀನಿವಾಸ್ ಪಾಡೇಗಾರ್ ಮತ್ತು ಲೇಖಕಕಾರ ಡಾ. ಹಾ.ಮ.ನಾಯಕ ಮತ್ತು ಶಿವರಾಮಕಾರಂತರು ಇವರು ಕಲೆಯನ್ನು ಅವರು ಗುಹಾಂತರ ದೇವಾಲಯ ರಾಚನೀಕ ದೇವಾಲಯಗಳು ಅವರ ಕಾಲದ ಚಿತ್ರಕಲೆ

ಮತ್ತು ನಾಣ್ಯಗಳ ಮೂಲಕ ಗುರುತಿಸಿದ್ದಾರೆ. ಇವರುಗಳ ಅಭಿಪ್ರಾಯಗಳ ಸಂಗ್ರಹ ಮಾಡುವ ಪ್ರಯತ್ನ ಮಾಡಿದ್ದು ಅವರುಗಳ ಸಮೀಕ್ಷೆಯ ಜೊತೆಗೆ ಕೆಲವು ಅಭಿಪ್ರಾಯಗಳನ್ನು ತಿಳಿಸುವ ಪ್ರಯತ್ನ ನಡೆದಿದೆ.

ಅಧ್ಯಯನದ ಉದ್ದೇಶ :

ಬಾದಾಮಿ ಚಾಲುಕ್ಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಬಗೆಗೆ ಈಗಾಗಲೇ ಬಹಳಷ್ಟು ಲೇಖನಗಳು ಹೊರಬಂದಿವೆ. ಇದರ ಬಗೆ ಪರ್ಸಿಬ್ರೌನರು "ದಿ.ದೆಂಪಲ್ ಆರ್ಕಿಟೆಕ್ಚರ್ ಆಫ್ ಸೌತ್ ಇಂಡಿಯಾ" ಎಂಬುದರಲ್ಲಿ ಬಾದಾಮಿ ಚಾಲುಕ್ಯರ ಒಂದೊಂದು ಕಲೆಯ ಸೌಂದರ್ಯವನ್ನು ಯಥಾವತ್ತಾಗಿ ಕಣ್ಣಿಗೆ ಕಾಣುವಂತೆ ರಚಿಸಿದ್ದಾರೆ. ಅದೇ ರೀತಿ ಅ. ಸುಂದರರವರು, ವಿರೂಪಾಕ್ಷಪ್ಪನವರು, ಶೀಲಾಕಾಂತ್ ಪತ್ತಾರ್, ಶ್ರೀನಿವಾಸ್ ವಿ. ಪಾಡಿಗಾರ್‌ರವರು ಭಟ್ಟ ಹೆಚ್.ವಿ. ಶ್ರೀನಿವಾಸಮೂರ್ತಿ, ಪಿ.ಬಿ. ದೇಸಾಯಿ ಎಫಿಗ್ರಾಫಿಯ ಕರ್ನಾಟಕ ಮತ್ತು ವಿಶ್ವಕೋಶದಲ್ಲಿ ಬಹಳಷ್ಟು ವಿಚಾರಗಳನ್ನು ಮಂಡಿಸಿದ್ದಾರೆ.

ಇವುಗಳನ್ನೆಲ್ಲಾ ಅಧ್ಯಯನ ಮಾಡಿ ಸ್ಥಳ ವೀಕ್ಷಣೆ ಮಾಡಿದಾಗ ಅದರ ಬಗೆಗೆ ಇವರೆಲ್ಲರ ಅಭಿಪ್ರಾಯಗಳ ಒಟ್ಟಾರೆ ಸಾರವನ್ನು ಒಂದು ಕಡೆ ಕ್ರೋಢೀಕರಿಸಿ ಕೆಲವು ವಿಚಾರಗಳನ್ನು ತಿಳಿಸಲು ಪ್ರಯತ್ನಿಸಿದ್ದೇನೆ. ಕಲೆಯ ಆಗರ, ಕಲೆಯ ಪ್ರಯೋಗಾಲಯ ಎಂಬಂತೆ ಇರುವ ಕಲೆ ಮತ್ತು ವಾಸ್ತುಶಿಲ್ಪದ ಅಧ್ಯಯನ ಮಾಡುವುದೇ ಒಂದು ರೀತಿಯ ರೋಚಕದ ಕೆಲಸ. ಕಲೆಯ ನಿಜವಾದ ಮಹತ್ವವನ್ನು ಇಡೀ ವಿಶ್ವಕ್ಕೆ ತೋರಿಸಿಕೊಟ್ಟ ಮತ್ತು ಸಕಲ ಕಲೆಗಳ ಧರ್ಮಗಳ ಮತ್ತು ಸಂಗಮದಂತಿರುವ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬನವಾಸಿಯ ದೇವಾಲಯಗಳ ಶೈಲಿ ಮತ್ತು ಕಲಾಕುಸುರಿಯ ಬಗೆಗೆ ತನ್ನ ಅಲ್ಪ ತಿಳುವಳಿಕೆಯ ಮೂಲಕ ವಿವರಿಸಲು ಹೊರಟಿದ್ದೇನೆ: ಎಲ್ಲಾ ಕಲೆಗಳಲ್ಲಿ ಏಕರೂಪದ ಲಕ್ಷಣಗಳನ್ನು ಗುರುತಿಸುವುದು, ಗುಹಾಲಯಗಳ ಲಕ್ಷಣಗಳನ್ನು ಗುರುತಿಸುವುದು, ಇಲ್ಲಿನ ದೇವಾಲಯಗಳ ಮೇಲ್ಛಾವಣಿಗಳು, ಕಂಬಗಳು, ಶಿಖರಗಳು, ಗೋಡೆಗಳು, ದ್ವಾರ ಮತ್ತು ಗರ್ಭಗುಡಿಗಳ ಸ್ವರೂಪ ಮತ್ತು ಲಕ್ಷಣಗಳನ್ನು ಅರಿಯುವ ಸಣ್ಣ ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ :

ಬಾದಾಮಿ ಚಾಲುಕ್ಯರ ಕಲೆಯು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ ಇದು ದಕ್ಷಿಣ ಭಾರತದ ಬಹಳಷ್ಟು ಪ್ರದೇಶಗಳವರೆಗೆ ಅಂದರೆ ವಿಂದ್ಯದಿಂದ ಕಾವೇರಿಯವರೆಗೂ ಹರಡಿದೆ.

ಅವುಗಳಲ್ಲಿ ಮಹಾರಾಷ್ಟ್ರದ ಅಜಂತಾ, ಎಲ್ಲೋರ, ಎಲಿಫೆಂಟಾ, ಆಂಧ್ರಪ್ರದೇಶದ ಆಲಂಪುರದಲ್ಲಿನ ತಾರಕಬ್ರಹ್ಮ ದೇವಾಲಯ, ಬನವಾಸಿಯ ಮಧುಕೇಶ್ವರ ದೇವಾಲಯ ಮತ್ತು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬಳ್ಳಿಗಾವೆ ಮತ್ತು ಇತರೆ ಪ್ರದೇಶಗಳಲ್ಲಿ ಕಾಣಬಹುದು. ಇವರ ಕಲೆಯ ವಿಶೇಷತೆ ಎಂದರೆ ದೇವಾಲಯಗಳು ಮತ್ತು ಶಿಲ್ಪಕಲೆಗಳನ್ನು ಕಾಣಬಹುದು.

ದೇವಾಲಯಗಳಲ್ಲಿ ನಿರ್ಮಿತ ದೇವಾಲಯಗಳು ಬಹಳಷ್ಟು ಕಂಡುಬರುತ್ತವೆ. ಅವುಗಳನ್ನು ನೋಡಿದಾಗ ಎಲ್ಲಾ ಧರ್ಮಗಳಿಗೂ ಸಮಾನಸ್ಥಾನ ನೀಡಿರುವುದನ್ನು ಗಮನಿಸಬಹುದು. ಅಂದರೆ ಇಲ್ಲಿಯೂ ಸಕಲ ಧರ್ಮಗಳ ಸಂಗಮವಾಗಿರುವುದನ್ನು ಕಾಣಬಹುದು.

ಶೈವಧರ್ಮಕ್ಕೆ ಸಂಬಂಧಿಸಿದ ವಿರೂಪಾಕ್ಷ ದೇವಾಲಯ, ಮಾಲೆಗಿತ್ತಿ ಶಿವಾಲಯ, ಮಲ್ಲಿಕಾರ್ಜುನ ದೇವಾಲಯ, ಮೇಲುಶಿವಾಲಯ, ಪಾಪನಾಥ ದೇವಾಲಯ, ಮಹಾಕೋಟೇಶ್ವರ ದೇವಾಲಯ, ಗಳಗನಾಥ ದೇವಾಲಯ, ಸಂಗಮೇಶ್ವರ, ಲಾಡ್‌ಖಾನ್ ಮತ್ತು ಇತರೆ ದೇವಾಲಯಗಳನ್ನು ಕಾಣಬಹುದು. ಜೊತೆಗೆ ಗುಹಾಲಯಗಳಲ್ಲಿ ಮೊದಲನೇ ಗುಹಾಂತರ ದೇವಾಲಯವನ್ನು ಶಿವನಿಗೆ ಅರ್ಪಿಸಲಾಗಿದೆ. ಅದೇ ರೀತಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಬಹಳಷ್ಟು ದೇವಾಲಯಗಳು ನಿರ್ಮಾಣವಾಗಿವೆ. ಜೊತೆಗೆ ಬಹಳಷ್ಟು ಗುಹಾಂತರ ದೇವಾಲಯಗಳು ಅಂದರೆ ಐಹೊಳೆಯ ರಾವಳಫಡಿ ಗುಹಾಲಯ, ಬಾದಾಮಿಯ ಎರಡು ಮತ್ತು ಮೂರನೇ ಗುಹೆಯನ್ನು ವಿಷ್ಣುವಿಗೆ ಅರ್ಪಿಸಲಾಗಿದೆ.

ಜೈನಧರ್ಮಕ್ಕೆ ಸಂಬಂಧಿಸಿದಂತೆ ನಾಲ್ಕನೇ ಗುಹೆಯಲ್ಲಿನ ಕೆತ್ತನೆಗಳನ್ನು ಕಾಣಬಹುದು. ಮೇಗುತ್ತಿ ದೇವಾಲಯವು ಪ್ರಮುಖ ಉದಾಹರಣೆಯಾಗಿದೆ. ಅದೇ ರೀತಿಯಾದ ಇಲ್ಲಿ ಬಹಳಷ್ಟು ಬಸದಿಗಳು ಇದ್ದುದರ ಕುರುಹುಗಳಿದ್ದು ಅವುಗಳು ಈಗ ಶಿಥಿಲಗೊಂಡಿವೆ.

ಬೌದ್ಧಧರ್ಮ ಇವರ ಕಾಲದಲ್ಲಿ ಅವಸಾನದ ಅಂಚಿನಲ್ಲಿದ್ದರೂ ಬೌದ್ಧಧರ್ಮೀಯರಿಗೆ ಮತ್ತು ಆ ಧರ್ಮಕ್ಕೆ ತಮ್ಮದೆ ಆದ ಕೊಡುಗೆಗಳು ಮತ್ತು ದತ್ತಿಗಳನ್ನು ನೀಡಿದ್ದರು ಎಂಬುದಕ್ಕೆ ಅವರ ಕಾಲಕ್ಕೆ ಸೇರಿದ ದುರ್ಗದೇವಾಲಯ ಬೌದ್ಧದೇವಾಲಯದ ವಿನ್ಯಾಸ ಹೊಂದಿರುವುದನ್ನು ಕಾಣಬಹುದು. ಬೌದ್ಧಚೈತ್ಯಗಳ ಅವಶೇಷಗಳನ್ನು ಕಾಣಬಹುದು. ಇವುಗಳ ಬಗೆಗೆ ಇಲ್ಲಿ ಅಧ್ಯಯನ ಮಾಡಲಾಗಿದೆ. ಬೌದ್ಧಧರ್ಮದ ಅಧ್ಯಯನಕ್ಕಾಗಿ ಬಂದಿದ್ದ ಹ್ಯೂಯನ್‌ತ್ಸಾಂಗನಿಗೆ ಪುಲಿಕೇಶಿ ನೀಡಿದ ಸಹಕಾರವು ಇವರು ಎಲ್ಲಾ ಧರ್ಮಗಳಿಗೂ ಸಮಾನಸ್ಥಾನ ನೀಡಿದ್ದುದರ ಬಗೆಗಿನ ಒಂದು ದೃಷ್ಟಾಂತವನ್ನು ನೀಡುತ್ತದೆ. ಶಕ್ತಿದೇವತೆಗಳ ದೇವಾಲಯಗಳು ಕಂಡುಬಂದಿವೆ. ಅವುಗಳಲ್ಲಿ ದುರ್ಗ ದೇವಾಲಯ, ಸಂಡೂರಿನ ಪಾರ್ವತಿ ದೇವಾಲಯ, ಮಹಿಷಾಸುರ ಮರ್ಧಿನಿ, ಗೌಡರ ಗುಡಿ ದೇವಾಲಯ ಹುಚ್ಚಿಮಲ್ಲಿ ದೇವಾಲಯಗಳು ಇವರ ಕಾಲದ ಶಕ್ತಿದೇವತೆಗಳಾಗಿದ್ದವು. ಇವುಗಳ ನಿರ್ಮಾಣದ ಶೈಲಿ ಅವುಗಳ ಸೌಂದರ್ಯವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಇವರ ಕಾಲದಲ್ಲಿ ನಿರ್ಮಿಸಲಾದ ಕೆಲವು ದೇವಾಲಯಗಳು, ಶಿಲ್ಪಕಲೆಗಳು ಶಿಥಿಲಗೊಂಡಿವೆ. ಅವುಗಳಲ್ಲಿ ಗಳಗನಾಥ ದೇವಾಲಯ, ಸಂಗಮೇಶ್ವರ ದೇವಾಲಯ, ಮಾಲೆಗಿತ್ತಿ ಶಿವಾಲಯಗಳು ಪ್ರಮುಖವಾದವುಗಳು.

ಇಲ್ಲಿ ಬಹಳಷ್ಟು ದೇವಾಲಯಗಳ ಅವಶೇಷಗಳನ್ನು ಕಾಣಬಹುದು. ಇಲ್ಲಿನ ದೇವಾಲಯಗಳಲ್ಲಿ ಬಾದಾಮಿಯಲ್ಲಿ ಗುಹಾಲಯಗಳನ್ನು ಮತ್ತು ದೇವಾಲಯಗಳನ್ನು ಅರಿಯುವುದು. ಪಟ್ಟದಕಲ್ಲಿನ ನಾಗರ, ವೇಸರ, ದ್ರಾವಿಡ ಶೈಲಿಗಳ ಸಂಗಮವಾಗಿರುವುದನ್ನು ಕಾಣಬಹುದು. ಐಹೊಳೆಯನ್ನು ದೇವಾಲಯಗಳ ಪ್ರಯೋಗ ಎಂದು ಹೆಸರಿಸಲಾಗಿದೆ.

ಇಲ್ಲಿಯ ದೇವಾಲಯಗಳ ಮೇಲ್ಚಾವಣಿಯ ಪ್ರಮುಖ ಲಕ್ಷಣವೆಂದರೆ ಸೂಕ್ಷ್ಮಕೆತ್ತನೆಗಳಿಂದ ಕೂಡಿರುವ ಶಿಖರದ ಮೇಲ್ಚಾವಣೆ, ಶಂಕುವಿನಾಕಾರದ ಶಿಖರದ ಮೇಲ್ಚಾವಣೆ ಪಿರಮಿಡ್‌ನಾಕಾರದ ಶಿಖರದ ಮೇಲ್ಚಾವಣೆ.

ಇಲ್ಲಿನ ವಾಸ್ತುಶಿಲ್ಪವನ್ನು ನೋಡಿದ ರಿಲ್ಲಾರವರು ಹೀಗೆ ಹೇಳಿದ್ದಾರೆ. “For beauty is nothing but beginning of terror we are shall just able to bear” ಇಲ್ಲಿನ ಕಲಾಕೃತಿ ಸೊಬಗಿನ ಈ ಹೇಳಿಕೆ ಕಿರೀಟಪ್ರಾಯದಂತಿದೆ.

ವಿಧಾನ :

ಈ ಕಾರ್ಯದಲ್ಲಿ ಹಲವು ವಿಧಾನಗಳು ಮತ್ತು ಸೂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳಲ್ಲಿ ಪ್ರಕಟಿತ ಹೇಳಿಕೆಯನ್ನು ಗ್ರಂಥಾಲಯಗಳಲ್ಲಿದ್ದ ಈಗಾಗಲೇ ಪ್ರಕಟಿತವಾದ ಮುದ್ರಿಕೆಗಳ ಅಧ್ಯಯನ, ಮೂರು ದಿನಗಳ ಕಾಲ ಬಾದಾಮಿ, ಐಹೊಳೆ, ಪಟ್ಟದಕಲ್ಲಿನಲ್ಲಿ ಕ್ಷೇತ್ರಾಧ್ಯಯನ ಕಾರ್ಯವನ್ನು ಕೈಗೊಳ್ಳಲಾಗಿದೆ ಹಾಗೂ ಅಲ್ಲಿನ ನಿವಾಸಿಗಳು ಮತ್ತು ವಿಶ್ವಪರಂಪರೆಯ ಪಟ್ಟಿಯಲ್ಲಿನ ಹೇಳಿಕೆಗಳು ಪ್ರವಾಸಿಗಳ ಕಥನಗಳು, ಪ್ರವಾಸಿ ಮಾರ್ಗದರ್ಶಕಗಳು ಚಾರ್ಟುಗಳು ಮತ್ತು ಛಾಯಾಚಿತ್ರಗಳ ಮೂಲಕ ಅಧ್ಯಯನ ಮತ್ತು ನಕ್ಷೆಗಳು, ಶಾಸನಗಳು, ನಾಣ್ಯಗಳ ಸಹಾಯದಿಂದ ಅಧ್ಯಯನ ಮಾಡುವ ಕಾರ್ಯ ಕೈಗೊಳ್ಳಲಾಗಿದೆ.

ಮೈಸೂರು, ಬಾದಾಮಿ, ಐಹೊಳೆ, ಬೆಂಗಳೂರಿನ ಮಿಥಿಕ್ ಸೊಸೈಟಿ, ಐ.ಸಿ.ಹೆಚ್.ಆರ್. ಪ್ರಸಾರಾಂಗ ಮತ್ತು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಮಾಹಿತಿಗಳನ್ನು ಕಲೆಹಾಕಿದೆ. ಇಂಟರ್‌ನೆಟ್ ಮೂಲಕವೂ ವಿಷಯಗಳನ್ನು ಮತ್ತು ಚಿತ್ರಗಳನ್ನು ಕಲೆಹಾಕಲಾಗಿದೆ. ಹಾಗೂ ಪುರಾತತ್ವ ಇಲಾಖೆಯವರ ಜೊತೆ ಸಂದರ್ಶನ ಮತ್ತು ಅವರ ಸಂಶೋಧನೆಗಳ ಮಾಹಿತಿ ಸಂಗ್ರಹವನ್ನು ಮಾಡಲಾಗಿದೆ.

ಅಧ್ಯಾಯ–2

ಚಾರಿತ್ರಿಕ ಹಿನ್ನೆಲೆ

ಅಧ್ಯಾಯ–2

ಚಾರಿತ್ರಿಕ ಹಿನ್ನೆಲೆ

ಬಾದಾಮಿಯಲ್ಲಿ ಆಳ್ವಿಕೆ ನಡೆಸಿದ ಪ್ರಮುಖ ಮನೆತನ ಚಾಲುಕ್ಯ. ಇವರು ಕ್ರಿ.ಶ. 6ನೇ ಶತಮಾನದಿಂದ 8ನೇ ಶತಮಾನದವರೆಗೂ ಕಾವೇರಿಯಿಂದ ನರ್ಮದಾ ನದಿವರೆಗೂ ವಿಶಾಲ ಸಾಮ್ರಾಜ್ಯವನ್ನು ನಿರ್ಮಿಸಿ ಆಳ್ವಿಕೆ ನಡೆಸಿದರು. ಇವರು ಕೇವಲ ಪರಾಕ್ರಮಿಗಳಾಗಿದ್ದಲ್ಲದೆ ಉತ್ತಮ ಆಡಳಿತಗಾರರು, ಪ್ರಜಾ ಪರಿಪಾಲಕರು, ಸರ್ವಧರ್ಮ ಸಹಿಷ್ಣುಗಳಾಗಿಯೂ, ಕಲಾ ರಸಿಕರಾಗಿಯೂ, ಕಲೆಯ ಸಿರಿಯನ್ನು ಉತ್ತುಂಗಕ್ಕೆ ಏರಿಸಿದ ನಕ್ಷತ್ರಗಳಾಗಿ ಇದ್ದಾರೆ. ಎಲ್ಲಿಯವರೆಗೂ ಕಲೆಯು ತನ್ನ ಸ್ಥಾನವನ್ನು ಉಳಿಸಿಕೊಂಡಿರುತ್ತದೆಯೋ ಅಲ್ಲಿಯವರೆಗೂ ಈ ಸಾಮ್ರಾಜ್ಯದ ನೆನಪು ಮಾಸದಂತೆ ಅಚ್ಚಳಿಯದೆ ಉಳಿದಿರುತ್ತದೆ. ಮೊದಲು ಇವರು ಕದಂಬ ಮತ್ತು ಕಂಚಿಯ ಪಲ್ಲವರ ವಿರುದ್ಧ ಹೋರಾಟ ನಡೆಸಿ ತಮ್ಮ ನೆಲೆಯನ್ನು ಸ್ಥಾಪಿಸಿದ ಚಾಲುಕ್ಯ ಅರಸರು ಮಲಪ್ರಭ ನದಿಯ ದಂಡೆಯ ಐಹೊಳೆಯಲ್ಲಿ ಮೊದಲಿಗೆ ತಮ್ಮ ರಾಜಧಾನಿಯನ್ನು ಸ್ಥಾಪಿಸಿರಬೇಕು.[1]

ಮೂಲತಃ ಬಾದಾಮಿಯು ಹಿಂದೆ ವಾತಾಪಿಯೆಂದು ಕರೆಯಲ್ಪಡುತ್ತಿತ್ತು. ಟಾಲೆಮಿ ಬರೆದ 'A Guide to Geography' ಎಂಬ ಪುಸ್ತಕದಲ್ಲಿ ಆತನು 'ಬದಿಯ ಮೆಯೋಏಯ್‌ಯೇ ಬಾದಾಮಿ ಎಂದು 'ಮೆಕ್ರಿಂಡಲ್ ಅವರು ಗುರುತಿಸಿದ್ದಾರೆ.[2] ಇದು ಮಲಪ್ರಭ ನದಿಯ ದಡದಲ್ಲಿದ್ದು ಬನಶಂಕರಿ ಕ್ಷೇತ್ರವಿದೆ. ಈ ಕ್ಷೇತ್ರವು ಸ್ಕಂದ ಪುರಾಣದಲ್ಲಿ ವರ್ಣಿತವಾಗಿದೆ.[3] ಇಂತಹ ನಾಡಿನಲ್ಲಿ ಇವರನ್ನು ಪಶ್ಚಿಮದ ಚಾಲುಕ್ಯರು ಎಂದೂ ಸಹ ಕರೆಯಲಾಗುತ್ತದೆ. ಇವರ ಕನ್ನಡ ಪ್ರೇಮ ಹೇಗಿತ್ತೆಂದರೆ ಸಮಕಾಲೀನ ಮತ್ತು ಅನಂತರದ ರಾಜರು ಇವರನ್ನು 'ಕರ್ಣಾಟರು' ಎಂದು ಕರೆದರು. ಈ ವಂಶದ ಪ್ರಮುಖ ರಾಜರೆಂದರೆ 1ನೇ ಪುಲಿಕೇಶಿ, ಮಂಗಳೇಶ, ಇಮ್ಮಡಿ ಪುಲಿಕೇಶಿ, ಇಮ್ಮಡಿ ವಿಕ್ರಮಾದಿತ್ಯ

---

1 ಶಿವರಾಮ ಕಾರಂತ, ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪು.1

2 M.C. Crendle's Ancient India ad described by Toptolency, A fascimile reprint, Sundarnath, Majundar Shastri, Chucker Vertly, Chatterjee and Co. Ltd., Calcutta, 1927, P.17.

3 ಮಲ್ಲಾರಭಟ್ಟ ಪೂಜಾರ, 1979, ಶ್ರೀ ಶಾಕಂಬರಿ ಲಘು ಚರಿತ್ರೆಯು ಚೋಳಚಗುದ್ದ, ಪು.1.

[illegible]

[illegible]

[illegible]

[illegible]

ಇವರ ಕಾಲದಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಇಟ್ಟಗಿ ಮತ್ತು ಇತರೆ ಪ್ರದೇಶಗಳು ಇವರ ಕಲಾಸಂಸತ್ತಿನ ಕೇಂದ್ರಗಳಾಗಿದ್ದವು. ಇಂತಹ ಮಹಾನ್ ವ್ಯಕ್ತಿಗಳ ಮೂಲದ ಬಗ್ಗೆ ತಿಳಿಯೋಣ.

ಮೂಲ :

ಇವರ ಮೂಲದ ಬಗ್ಗೆ ತಿಳಿಯುತ್ತಾ ಹೋದರೆ ಎಲ್ಲಾ ಸಾಮ್ರಾಜ್ಯಗಳ ಮೂಲದಂತೆ ಇದೂ ಸಹ ವಾದ–ವಿವಾದಗಳಿಂದ ಇವರ ಬಗ್ಗೆ 'ಬಿಲ್ಹಣ'ನ 'ವಿಕ್ರಮಾಂಕ ದೇವ ಚರಿತ'ವು ಕೆಲವು ಮಾಹಿತಿಗಳನ್ನು ನೀಡುತ್ತದೆ. ಅವರ ಪ್ರಕಾರ ಹೇಳುವುದಾದರೆ ಚಾಲುಕ್ಯವಂಶದ ಮೂಲಪುರುಷನು ಬ್ರಹ್ಮನ ವರಪ್ರಸಾದದಿಂದ ಅಂದರೆ ದುಷ್ಟರನ್ನು ಶಿಕ್ಷಿಸಲು ಇಂದ್ರನ ವಿನಂತಿಯ ಮೇರೆಗೆ ಬ್ರಹ್ಮನು ಸಂಧ್ಯಾವಂದನೆ ಮಾಡುವಾಗ ಅವನ ಚುಲುಕದಿಂದ ವೀರಯೋಧನೊಬ್ಬ ಹುಟ್ಟಿದನೆಂದು, ಅವನೇ ಚಾಲುಕ್ಯ ವಂಶದ ಮೂಲಪುರುಷನೆಂದು ಹೇಳಿದ್ದಾನೆ. ಆದರೆ ಇದು ಸತ್ಯಕ್ಕೆ ದೂರವಿರುವ ಸಂಗತಿಯಾಗಿದೆ.[4]

ಇವರ ಮೂಲದ ಬಗ್ಗೆ ಪ್ರಮುಖವಾಗಿ 2 ಪಂಥಗಳನ್ನು ಕಾಣಬಹುದು.

1. ಹಾರತೀಯ ಪಂಥ :

ಮಹೀಪತಿ ಗೋತ್ರ ಮಾನವ್ಯ ಸೂತ್ರ ಚಂದ್ರವಂಶ ಸಂಜಾತರಾದ ಮುದ್ದಪ್ಪನಾಯಕ ಮತ್ತು ಇವನ ಪತ್ನಿ ಸಾಕೇತ ಗೋತ್ರ (ಸಾಯಿಂದಾಣ ಸೂತ್ರ ಸೂರ್ಯವಂಶಕ್ಕೆ ಸೇರಿದವರಾಗಿದ್ದು, ಇವರಿಬ್ಬರ ಮಗಳಾದ ರತ್ನಾಂಬಿಕೆ ತನ್ನ ಪತಿ ಜೊತೆಯಲ್ಲಿ ಕುಕ್ಕುಟ ಪಾದಕ್ಕೆ ಹೋಗಿದ್ದಾಗ ಅಲ್ಲಿನ ಸೌಂದರ್ಯವನ್ನು ನೋಡಿ, ಅಲ್ಲಿಯೇ ನೆಲೆನಿಂತರು. ಒಂದು ದಿನ ರತ್ನಾಂಬಿಕ ದಂಪತಿಗಳು ಮಲಗಿದ್ದಾಗ ಒಂದು ದಿವ್ಯಮೂರ್ತಿಯು ಪ್ರತ್ಯಕ್ಷವಾಗಿ ನಿಮ್ಮ ವಂಶದ ಪೂರ್ವಾಚಾರ್ಯರು ನಾವು ನಿಮಗೆ ಸಂತಾನವಿಲ್ಲವೆಂದು ಮನನೊಂದುಕೊಳ್ಳುವುದು ಬೇಡ, ಜಗತ್ತಿನ ಏಳು ತಾಯಂದಿರಿಂದ ಪೋಷಿಸಲ್ಪಟ್ಟು, ರಕ್ಷಿಸಲ್ಪಟ್ಟಿರುವ ಮಹಾಶಕ್ತಿಶಾಲಿನಿಯಾದ 'ಹರಿತಿ' ಅಮ್ಮನವರನ್ನು ಪತ್ನಿ ಸಮೇತವಾಗಿ ಉಪಾಸನೆ ಮಾಡಿದರೆ ಆ ದೇವಿಯ ವರದಿಂದ ನಿಮ್ಮ ವಂಶವು ಅಚಂದ್ರಾರ್ಕವಾಗಿ ಬೆಳಗುವುದುಂಟು

---

4 ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.18.

ಆಶೀರ್ವದಿಸಿದರು.[5] ಇವರ ವರದಿಂದ ಹುಟ್ಟಿದ ಗಂಡುಮಗುವಿಗೆ ಹರಿತಿ ಎಂದು ಕರೆದರು. ಅವನು ಹಂಚಿದೇವಿಯ ಆರಾಧಕನಾಗಿ ಧ್ಯಾನಸಕ್ತನಾಗಿ ಕಾಲಕಳೆದದ್ದೇ ಅವನ ಪೋಷಕರಿಗೆ ಚಿಂತೆಯಾಗಿದ್ದಾಗ "ಸಾರೋಟ ಸ್ವಾಮಿ"ಗಳು ಅವರ ಬಳಿಗೆ ಬಂದು ನಿಮ್ಮ ಚಿಂತೆ ನನಗೆ ಅರ್ಥವಾಗಿದೆ ಚಿಂತಿಸಬೇಡಿ ನಿಮ್ಮ ಮಗನ ತಪಶಕ್ತಿಯ ಪರಿಣಾಮವಾಗಿ ಅವನು ಬೆಳಗಿನ ಜಾವ ಸೂರ್ಯ ನಮಸ್ಕಾರ ಮಾಡುತ್ತಿರುವಾಗ ಅವನ ಕೈಯಿಂದ ಬೀಳುವ ನೀರನ್ನು ಗಮನಿಸಿ ಎಂದು ಹೇಳಿ ಅಲ್ಲಿಂದ ಹೊರಟು ಹೋದರು.[6]

ಬೆಳಗಿನ ಜಾವ ಅವರು ತನ್ನ ಮಗನ ಪೂಜೆಯನ್ನು ಗಮನಿಸುತ್ತಿದ್ದಾಗ ಅವನ ಕೈಯಿಂದ ಬೀಳುತ್ತಿದ್ದ ನೀರಿನಿಂದ ಮಗುವಿನ ಜನನವಾಯಿತು. ಅಂದಿನಿಂದ ಈ ಪೀಳಿಗೆಯವರನ್ನು ಚಳುಕ ಅಥವಾ ಚಾಲುಕ್ಯರು ಎಂದು ಕರೆದರು. ಇವನ ನಂತರ ಬಂದವರೆಲ್ಲರೂ ಚಂಡಪ್ರಚಂಡರಾಗಿ ವೈದಿಕ ಕುಲ ಭೇರುಂಡರಾಗಿ ಇಡೀ ಭರತಖಂಡದಲ್ಲಿಯೇ ಮೆರೆದರು. ನಂತರದ ದಿನಗಳಲ್ಲಿ ಪಲ್ಲವರ ಮತ್ತು ಕದಂಬರ ಹಾವಳಿಯಿಂದಾಗಿ ತಲೆತಪ್ಪಿಸಿಕೊಂಡು ಪಾರಾಗುವ ಸ್ಥಿತಿಗಳಿದಾಗ ತಮ್ಮ ಮೂಲವಂಶದ ಹೆಸರಿಗೆ ಮಾರ್ಪಾಡು ಗಳಿಸಿಕೊಂಡು ಹರಿತಿ ನಾಯಕರೆಂದು ಹೆಸರಿಸಿಟ್ಟುಕೊಂಡು ಪಾರಾದರೆಂದು ತಿಳಿದುಬರುತ್ತದೆ. ಇನ್ನೊಂದು ಮೂಲದ ಪ್ರಕಾರ ಹರಿತಿ ಎಂಬುದು ಬೌದ್ಧರ ದೇವತೆಯೆಂದು ತಿಳಿದುಬಂದಿದ್ದು ಇದು ಇಕ್ಷ್ವಾಕುಗಳ ಕಾಲದಲ್ಲಿ ನಿರ್ಮಾಣವಾಯಿತೆಂದು ನಾಗಾರ್ಜುನ ಕಣಿವೆಯಲ್ಲಿ ಕಂಡುಬಂದ ಸಂಶೋಧನೆಯಿಂದ ತಿಳಿದುಬರುತ್ತದೆ.[7]

2. ಕಾರ್ತಿಕೇಯ ಪಂಥ :

ಚಾಲುಕ್ಯ ದೊರೆಗಳು ತಮ್ಮನ್ನು ತಾವು ಕಾರ್ತಿಕೇಯನ ಭಕ್ತರು ಎಂದು ಹೇಳುವುದರಲ್ಲಿ ಹೆಮ್ಮೆಪಡುತ್ತಿದ್ದರು. ಈ ದೇವತೆಯು ನಾಗಾರ್ಜುನ ಕೊಂಡದಲ್ಲಿ ತನ್ನ ಅನುಯಾಯಿಗಳನ್ನು ಹೊಂದಿತ್ತು.[8]

---

5 ಹರಿತಿಸಿರಿ ಹಾರತೇಯರು, ಪು.221.

6 ಅದೇ.

7 A praise of Aihole, Badami, Mahakoota and Pattadakallu, Margi Publications.

8 ಅದೇ.

ಚಾಲುಕ್ಯ ಎಂಬ ಪದವನ್ನು ಜೇಮ್ಸ್ ಬರ್ಜೆಸ್ ಮತ್ತು ಹೆನ್ರಿ ಕಜ್ಜಿನ್ಸ್ ತಪ್ಪಾಗಿ ಚಾಲುಕ್ಯ ಎಂದು ಬಳಸಿದರು. ಉಳಿದವರು ಹಾಗೆಯೇ ಬಳಸುತ್ತಾ ಬಂದಂತೆ ತೋರುತ್ತದೆ. ಚಲ್ಕ್ಯ ಎಂಬುದು ಈ ರಾಜಕುಲದ ಹೆಸರಿನ ಸರಿಯಾದ ರೂಪವಿರಬಹುದು.[9] ಆದರೆ ಇದುವರೆಗೆ ಲಭ್ಯವಾದ ಚಾಲುಕ್ಯರ ಶಾಸನಗಳಲ್ಲಿ ಕಂಡುಬರುವಂತೆ ಇವರ ಹೆಸರು ಚಲುಕ್ಯ, ಚಲಕ್ಯ, ಚಳ್ಕಿ, ಚಲುಕಿನ್, ಚುಳುಕಿ, ಚಳುಕ್ಯ, ಚಳುಕಿಕಿ ಎಂದು ಹೆಸರಿಸಲಾಗಿದೆ.[10]

ಬಾದಾಮಿಯ ಅರಸರಿಗೆ ಸಂಬಂಧಿಸಿದಂತೆ ಆದಿಯ ಆಕಾರ ರೂಪ 'ಚಾಲುಕ್ಯ' ತೀರಾ ಅಪರೂಪ. ಆದ್ದರಿಂದ ಚಲುಕ್ಯ ಎಂಬುದು ಈ ರಾಜವಂಶದ ಹೆಸರೇ ಹೊರತು ಚಾಲುಕ್ಯ ಎಂದಲ್ಲ.[11]

ಕೆಲವು ವಿದ್ವಾಂಸರು ಇವರ ಮೂಲವನ್ನು ಕನ್ನಡದಲ್ಲಿಯೂ ಹುಡುಕುವ ಪ್ರಯತ್ನ ಮಾಡಿದ್ದಾರೆ. ಚಲ್ಕಿ, ಚಲುಕಿ, ಸಲುಕಿ, ಸಲ್ಕಿ ಎಂಬ ಪದದ ರೂಪಗಳೆಂದೂ, ಸಲ್ಕಿ ಎಂಬುದು ಒಂದು ಕೃಷಿ ಉಪಕರಣವೆಂದು, ಇವರು ಕೃಷಿಕರಾಗಿರಬಹುದೆಂದು ಎಸ್.ಸಿ. ನಂದಿಮಠರು ತಿಳಿಸಿದರು.[12]

ಒಟ್ಟಾರೆ ಇವರ ಶಾಸನಗಳು ಮತ್ತು ಕೆಲವು ಕುರುಹುಗಳ ಆಧಾರದ ಮೇಲೆ ಇವರು ಕನ್ನಡಿಗರು ಎಂದು ಗುರುತಿಸಲಾಗಿದೆ.

ಇವರ ಮನೆತನದ ಚರಿತ್ರೆಯು ಜಯಸಿಂಹನಿಂದ ಪ್ರಾರಂಭವಾಗುತ್ತದೆ. ಕ್ರಿ.ಶ. 578ರ ಶಾಸನದ ಪ್ರಕಾರ ಇವರು ಕದಂಬರು ಮತ್ತು ಕುಟುಗಳಂತೆ ಬ್ರಾಹ್ಮಣ ಮಾನನ್ಯಗೋತ್ರಕ್ಕೆ ಸೇರಿದವರೆಂದು ನಂತರ ತಮ್ಮನ್ನು ತಾವು ಚಂದ್ರವಂಶದವರೆಂದು ಕರೆದು ಜೊತೆಗೆ ಅಯೋಧ್ಯೆಯ ಅರಸರ ವಂಶಸ್ಥರೆಂದು ಕರೆದುಕೊಂಡಿದ್ದು ಇದರ ಬಗ್ಗೆ ಸ್ಪಷ್ಟ ನಿದರ್ಶನವಿಲ್ಲ.[13]

---

9 ಕರ್ನಾಟಕ ರಾಜ್ಯ ಗೆಜೆಟಿಯರ್, 1984, ಬೆಂಗಳೂರು–1.

10 Epigraphy India, Chalukya Inscriptions.

11 ಶೀಲಕಾಂತ್ ಪತ್ತಾರ, ಬಾದಾಮಿ ಮತ್ತು ಸಾಂಸ್ಕೃತಿಕ ಅಧ್ಯಯನ, ಪು.17.

12 ಅದೇ.

13 Neelakanta Shashtri, G. Srinivasachari, Advance History of India.

ಜಯಸಿಂಹ (ಕ್ರಿ.ಶ. 500–520) :

ಮಹಾಕೂಟ ಸ್ತಂಭಶಾಸನವು ಈತನನ್ನು ಕುಬೇರನಿಗೆ ಹೋಲಿಸಿದೆ. ಐಹೊಳೆಯ ಪ್ರಶಸ್ತಿ ಶಾಸನವು ಈತನನ್ನು ಮಹಾಯೋಧನೆಂದು, ಚಂಚಲೆಯಾದ ರಾಜಲಕ್ಷ್ಮಿಯನ್ನು ನಿಗ್ರಹಿಸಿದವನೆಂದು ತಿಳಿಸಿದೆ.[14] ಇವನ ಬಗ್ಗೆ ಮಂಗಳೇಶನ ಮಹಾಕೂಟ ಶಾಸನ 42ನೇ ಪುಲಕೇಶಿಯ ಐಹೊಳೆ ಪ್ರಶಸ್ತಿ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಇವನು ಕ್ರಿ.ಶ. 500ರಲ್ಲಿ ರಾಷ್ಟ್ರಕೂಟ ದೊರೆ ಇಂದ್ರನನ್ನು ಸೋಲಿಸಿ ಅಧಿಕಾರಕ್ಕೆ ಬಂದನು ಎಂದು ಅನೇಕ ಶಾಸನಗಳಲ್ಲಿ ತಿಳಿಸಿದೆ.[15] ಇನ್ನೊಂದು ಮೂಲದ ಪ್ರಕಾರ ಇವನು ಕದಂಬರ ಮಾಂಡಲೀಕನಾಗಿ ಆಳ್ವಿಕೆ ನಡೆಸಿರಬಹುದೆಂದು ತೋರಿಸಿದೆ.[16]

ರಣರಾಗ (ಕ್ರಿ.ಶ. 520–540) :

ಜಯಸಿಂಹನ ಮಗನಾದ ರಣರಾಗನು ಬಹುಶಃ ಕದಂಬರ ಸಾಮಂತನಾಗಿ ಆಳ್ವಿಕೆ ನಡೆಸಿರಬಹುದೆಂದು ತಿಳಿದುಬರುತ್ತದೆ. ಮಹಾಕೂಟ ಶಾಸನವು ಇವನನ್ನು ಕದನಾಸಕ್ತನಾಗಿದ್ದು ಸ್ವಜನ ಪ್ರೀತಿಯನ್ನು ಗಳಿಸಿ ಶತ್ರುಗಳು ಹೆದರುವಂತೆ ಮಾಡಿದ್ದನೆಂದು ತಿಳಿಸಿದೆ.[17] ಈತನ ಬಗೆಗೆ ಯಾವ ಶಾಸನಗಳೂ ಲಭ್ಯವಿಲ್ಲ.

ಒಂದನೇ ಪುಲಿಕೇಶಿ (ಕ್ರಿಶ. 540–566) :

ಚಾಲುಕ್ಯರ ಮೊಟ್ಟ ಮೊದಲ ಐತಿಹಾಸಿಕ ವ್ಯಕ್ತಿ ಇವನೇ ಕೂದಲುಳ್ಳವನ್ನು ಶಾಸನಗಳು ಇವನನ್ನು ಪುಲಿಕೇಶಿನ್, ಪುಲಿಕೇಶಿನ್, ಪುಲುಕೇಶಿನ್ ಎಂದು ವಿವಿಧ ರೂಪಗಳಲ್ಲಿ ತಿಳಿಸಿವೆ ಎಂದರೆ ಹುಲಿಯಂತಹ ಕೂದಲುಳ್ಳವನು ಮತ್ತು ಹೊಳೆಯುವ ಕೂದಲುಳ್ಳವನು ಎಂದರ್ಥ.[18] ಇವನಿಗೆ ಶ್ರೀ ಪೃಥ್ವಿವಲ್ಲಭ, ಶ್ರೀವಲ್ಲಭ ರಣವಿಕ್ರಮ ಮುಂತಾದ ಬಿರುದುಗಳು ಇದ್ದವು.[19] ಇವನು ಅಶ್ವಮೇಧ, ಅಗ್ನಿಸ್ತೋಮಾ, ವಾಜಪೇಯ, ಬಹುಸುವರ್ಣ, ಹಿರಣ್ಯಗರ್ಭಕ್ರತು, ಅಗ್ನಿಚಯನ ಮುಂತಾದ

---

14 ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1979, ಮೈಸೂರು.

15 Mahajan, V.D., Ancient India, P.690.

16 ಕೆ.ಪಿ. ಈರಣ್ಣ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.1.

17 ಅದೇ.

18 ಅದೇ, ಪು.2.

19 V.D. Mahajan, Ancient India, P.692.

ಯಾಗಗಳನ್ನು ಮಾಡಿದನೆಂದು ಹೇಳಲಾಗಿದೆ.[20] ಇವನನ್ನು ಪುರಾಣದ ನಾಯಕರಾದ ಯಯಾತಿ ಮತ್ತು ದಿಲೀಪರಿಗೆ ಹೋಲಿಸಲಾಗಿದೆ. ಇವನಿಗೆ ಮಾನವ ಧರ್ಮಶಾಸ್ತ್ರ, ಪುರಾಣಗಳು, ರಾಮಾಯಣ ಮತ್ತು ಮಹಾಭಾರತ ಮತ್ತು ಇತರೆ ಇತಿಹಾಸಗಳ ಪರಿಚಯವಿತ್ತು.[21] ಇವನನ್ನು ಬಾದಾಮಿಯ ಬಂಡೆಯ ಪ್ರಪಾತದಲ್ಲಿರುವ ಶಾಸನವು ಚಾಲುಕ್ಯ ವಲ್ಲಭೇಶ್ವರ ಎಂದು ಕರೆದಿದೆ ಹಾಗೆ ಇದು ಇವನು ಬಹಳ ಬಲಶಾಲಿಯಾಗಿದ್ದನೆಂಬ ವಿಷಯವನ್ನು ಹೊರಗೆಡಹುತ್ತದೆ.[22]

ಇವನು ಬಾದಾಮಿಯ ದುರ್ಬೇಧ್ಯವಾದ ಕೋಟೆಯನ್ನು ನಿರ್ಮಿಸಿದನು. ಇಂದು ಕಾಂತಿ ಮತ್ತು ದುರ್ಲಭದೇವಿ ಇವನ ರಾಣಿಯರು ಪೊಗವರ್ಮ, ಕೀರ್ತಿವರ್ಮ ಮತ್ತು ಮಂಗಳೇಶ ಇವನ ಮಕ್ಕಳು. ಪೊಗವರ್ಮನು ತಂದೆಯ ಕಾಲದಲ್ಲಿಯೇ ತಂದೆಯ ಕಾಲದಲ್ಲಿಯೇ ಮರಣ ಹೊಂದಿರಬಹುದೆಂದು ತಿಳಿದುಬರುತ್ತದೆ. ಇನ್ನೊಂದು ಪೊಗವರ್ಮ ಕೀರ್ತಿವರ್ಮನ ಮತ್ತೊಂದು ಹೆಸರೆಂದು ತಿಳಿಸಿದೆ. ಇವನು ಕ್ರಿ.ಶ. 540ರಲ್ಲಿ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.[23]

ಕೀರ್ತಿವರ್ಮ (ಕ್ರಿ.ಶ. 566-596) :

ಇವನು ಪುಲಿಕೇಶಿಯ ಮರಣಾನಂತರ ಅಧಿಕಾರಕ್ಕೆ ಕ್ರಿ.ಶ. 5667ರಲ್ಲಿ ಬಂದನು. ಇವನಿಗೆ ಸತ್ಯಾಶ್ರಯ, ಪುರು-ರಣ ಪರಾಕ್ರಮ, ವಲ್ಲಭ, ಪೃಥ್ವಿವಲ್ಲಭ ಎಂಬ ಬಿರುದುಗಳಿದ್ದವು. ಇಮ್ಮಡಿ ಪುಲಿಕೇಶಿಯು ತಂದೆಯನ್ನು ವಾತಾಪ್ಯ ಪ್ರಥಮ ವಿಧಾತ ಎಂದು ಹೊಗಳಿದ್ದಾನೆ. ನಳ, ಮೌರ್ಯ, ಕದಂಬರಿಗೆ ಇವನು ಕಾಳರಾತ್ರಿಯಾಗಿದ್ದನು.[24] ಇವನು ಕದಂಬರಿಂದ ಉತ್ತರಕರ್ನಾಟಕದ ಭಾಗವನ್ನು, ಮೌರ್ಯರಿಂದ ಕೊಂಕಣ ರಾಜ್ಯವನ್ನು, ಪೂರ್ವದ ನೆಲವಡಿ ಪ್ರದೇಶವನ್ನು ನಳರಿಂದ ವಶಪಡಿಸಿಕೊಂಡು ರಾಜ್ಯವನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತರಿಸಿದನು.[25] ಇವುಗಳ ಜೊತೆಗೆ ವಾತಾಪಿಯನ್ನು ಸುಂದರ ದೇವಾಲಯಗಳಿಂದ ಅಲಂಕರಿಸಿದ್ದು ಇವನ ಹಿರಿಮೆಗೆ ಒಂದು ಅತ್ಯುತ್ತಮ ನಿದರ್ಶನ. ಈತನ

---

20 ಅದೇ.

21 ಅದೇ.

22 ಪ್ರೊ. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1979.

23 ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.20.

24 ಅದೇ.

25 ಅದೇ, ಪು.20.

ಆಳ್ವಿಕೆಯಲ್ಲಿಯೇ ಸುಂದರವಾದ ವೈಷ್ಣವ ಗುಹೆ ನಿರ್ಮಾಣಗೊಂಡು, ಮಹಾಕೂಟೇಶ್ವರ ಗುಡಿ, ಬಾಣಂತಿ ಗುಡಿಗಳು ಬಹುಶಃ ಇವನ ಕಾಲದಲ್ಲಿಯೇ ರಚಿತಗೊಂಡಿರಬಹುದು.[26] ಇವನು ಬಹುಸುವರ್ಣ ಮತ್ತು ಅಗ್ನಿಸ್ತೋಮ ಯಾಗಗಳನ್ನು ನಡೆಸಿದನು.

ಮಂಗಳೇಶ (ಕ್ರಿ.ಶ. 596–610) :

ಕೀರ್ತಿವರ್ಮನ ಸಾವಿನ ನಂತರ ಅವನ ಮಗ ಇಮ್ಮಡಿ ಪುಲಿಕೇಶಿಯು ಅಪ್ರಾಪ್ತ ವಯಸ್ಕನಾಗಿದ್ದುದರಿಂದ ಅವನ ತಮ್ಮನಾದ ಮಂಗಳೇಶನು ಅಧಿಕಾರಕ್ಕೆ ಬಂದನು. ಇವನು ದುರ್ಬಲದೇವಿಯನ್ನು ಸ್ವಗುರುಪತ್ನಿ ಎಂದು ಕರೆದಿರುವುದರಿಂದ ಕೀರ್ತಿವರ್ಮನ ತಾಯಿ ಮತ್ತು ಇವನ ತಾಯಿ ಬೇರೆ ಬೇರೆಯಾಗಿದ್ದರೆಂದು ತಿಳಿದುಬರುತ್ತದೆ.[27] ಇವನು ಸಾಮ್ರಾಜ್ಯದ ವಿಸ್ತರಣೆಗಾಗಿ ಶ್ರಮಿಸಿದ್ದನು ಇವನ ಸೈನ್ಯ ಸೇನಾಶ್ವಗಳ ಪುಟವೆಂದಿದ್ದ ಧೂಳಿ ಪೂರ್ವಕರ ಸಮುದ್ರ ತೀರಗಳನ್ನು ಆವರಿಸಿತ್ತೆಂದು ಐಹೊಳೆ ಶಾಸನವು ತಿಳಿಸುತ್ತದೆ ಇದು ಘೋರಯುದ್ಧದಲ್ಲಿ ಮಂಗಳೇಶನು ಕಾಳಚೂರಿ, ಬುದ್ಧರಾಜನನ್ನು ಸೋಲಿಸಿ ಅವನ ಸಂಪತ್ತನ್ನೆಲ್ಲಾ ಕಸಿದುಕೊಂಡನೆಂದೂ ಸಹ ತಿಳಿಸುತ್ತದೆ.[28] ಆ ಕಳಚೂರಿ ಚಕ್ರಾಧಿಪತ್ಯ ಪತನ ಮಾಡಿದ್ದರ ನೆನಪಿಗಾಗಿ ಮಕುಟನಾಥ ದೇವಾಲಯವನ್ನು ನಿರ್ಮಿಸಿದನು ಹಾಗೂ ಅಲ್ಲಿ ಒಂದು ಧರ್ಮಸ್ತಂಭವನ್ನು ಸ್ಥಾಪಿಸಿದನು.[29]

ಇವನು ರೇವತಿ ದ್ವೀಪವನ್ನು ವಶಪಡಿಸಿಕೊಂಡು ಸ್ವಾಮಿ ರಾಜನನ್ನು ಉಪರಾಜನನ್ನಾಗಿ ಮಾಡಿದಾಗ ಅವನೇ ನಿಜವಾದ ರಾಜನಂತೆ ವರ್ತಿಸತೊಡಗಿದಾಗ, ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಇಂದ್ರವರ್ಮನಿಗೆ ಆಡಳಿತವನ್ನು ಒಪ್ಪಿಸಿದನು. ತನ್ನ ಸಹೋದರ ಕೀರ್ತಿವರ್ಮನ ಪುಣ್ಯಕ್ಕಾಗಿ ಬಾದಾಮಿಯಲ್ಲಿರುವ ವೈಷ್ಣವ ಗುಹಾಲಯವನ್ನು ಪೂರ್ಣಗೊಳಿಸಿದನು.[30] ಇವನು ಉತ್ತರಭಾರತದಲ್ಲಿ ತನ್ನ ದಿಗ್ವಿಜಯವನ್ನು ನಡೆಸಿ ಗಂಗಾನದಿಯ ತೀರದಲ್ಲಿ ಒಂದು ಜಯಸ್ತಂಭವನ್ನು ಸ್ಥಾಪಿಸಬೇಕೆಂಬುದು

---

26 ಶ್ರೀನಿವಾಸ ಪಾಡೀಗಾರ್, Vishnu cult in Karnataka.

27 ಹರಿತಿಸಿರ್, ಹಾರಿತೇಯರು.

28 ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ, 1974.

29 ಡಾ. ಶೀಲಕಾಂತ ಪತ್ತಾರ, ಬಾದಾಮಿ, ಪು.7.

30 ಶ್ರೀನಿವಾಸ್ ಪಾಡಿಗರ್, Vishnu Cult in Karnataka.

ಇವನ ಸಂಕಲ್ಪವಾಗಿತ್ತೆಂದು ಮಹಾಕೂಟ ಶಾಸನವೊಂದು ಹೇಳಿದೆ.[31] ಆದರೆ ಅವನ ಪ್ರಯತ್ನಗಳು ಸಫಲವಾಗಲಿಲ್ಲ. ಕಾರಣ ಅವನ ರಾಜ್ಯದಲ್ಲಿ ಅಪಾಯಗಳು ಸಂಭವಿಸಿದವು.

ಸ್ವಭಾವತಃ ಇವನು ಉದಾರಿಯೂ, ವಿದ್ವಾಂಸನೂ, ಸಚ್ಚಾರಿತ್ರ್ಯವುಳ್ಳವನೂ, ರಾಜನೀತಿ ನಿಪುಣನೂ ಆಗಿದ್ದನೆಂದು ಶಾಸನಗಳು ವಿವರಿಸುತ್ತವೆ.[32] ಇವನು ಮಾಡಿದ ಯುದ್ಧಗಳಲ್ಲಿ ವಂಗ, ಅಂಗ, ಅತ್ತೂರು, ಮಗಧ, ಮಾದ್ರಕ, ಕೇರಳ ಗಂಗಾ ಮುಂತಾದವರನ್ನು ಸೋಲಿಸಿದನೆಂದು ತಿಳಿದುಬರುತ್ತದೆ.[33] ಇವನಿಗೆ ರಣವಿಕ್ರಮ, ಪೃಥ್ವಿವಲ್ಲಭ, ರಣ ಪರಾಕ್ರಮ, ಪರಮ ಭಾಗವತ ಮುಂತಾದ ಬಿರುದುಗಳಿದ್ದವು.[34]

ಇಮ್ಮಡಿ ಪುಲಿಕೇಶಿಯು ಪ್ರಾಪ್ತವಯಸ್ಕನಾದ ನಂತರ ಅವನಿಗೆ ಸಾಮ್ರಾಜ್ಯವನ್ನು ಬಿಟ್ಟುಕೊಡಲಿಲ್ಲ. ಆದ್ದರಿಂದ ಯುವರಾಜನು ಬಾಣರ ಸಹಾಯದಿಂದ ಮಂಗಳೇಶನೊಂದಿಗೆ ನಾಡನೂರು ಗ್ರಾಮದ ಎಳ್ಪಟ್ಟು ಸಿಂಬಿಗೆ ಎಂಬ ರಣರಂಗದಲ್ಲಿ ಹೋರಾಡಿ ತನ್ನ ಹಕ್ಕಿನ ಸಿಂಹಾಸನವನ್ನು ಕ್ರಿ.ಶ. 610ರಲ್ಲಿ ದಕ್ಕಿಸಿಕೊಂಡನು.

ಎರಡನೇ ಪುಲಿಕೇಶಿ :

ಎರಡನೇ ಪುಲಿಕೇಶಿಯು ಬಾದಾಮಿ, ಚಾಲುಕ್ಯರ ಸಂತತಿಯ ಅಗ್ರಗಣ್ಯ ಅರಸ ಮತ್ತು ಕರ್ನಾಟಕದ ಮೊದಲ ಸಾಮ್ರಾಟ. ಒಂದನೆಯ ಕೀರ್ತಿವರ್ಮನ ಹಿರಿಯ ಮಗನಾದ ಇವನು ತನ್ನ ಚಿಕ್ಕಪ್ಪನನ್ನು ಸೋಲಿಸಿ ಕ್ರಿ.ಶ. 610ರಲ್ಲಿ ಪಟ್ಟಕ್ಕೆ ಬಂದು ಕ್ರಿ.ಶ. 642ರ ವರೆಗೆ ಆಳ್ವಿಕೆ ನಡೆಸಿದನು. ಇವನು ಪ್ರತಿಮ ವಿರನಾಗಿದ್ದನು.

ಇವನು ಅಧಿಕಾರಕ್ಕೆ ಬಂದಾಗ ಸಿಂಹಾಸನವು ಹೂವಿನ ಹಾಸಿಗೆಯಾಗಿರಲಿಲ್ಲ. ಸುತ್ತೆಲ್ಲಾ ವೈರಿಗಳು ಅಂದರೆ ಕೇವಲ ವಿದೇಶಿ ವೈರಿಗಳಲ್ಲದೆ ಅವನ ಸಾಮಂತರೇ ಅವನ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಇವನು ತಾನು ಕೈಗೊಂಡ ಯುದ್ಧಗಳಲ್ಲೆಲ್ಲಾ ಜಯಗಳಿಸಿದನು. ಬನವಾಸಿಯ

31 ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ, 1974.

32 ಎಪಿಗ್ರಫಿಯ ಇಂಡಿಯಾ.

33 V.D. Mahajan, Ancient India, P.692.

34 ಅದೇ.

ಕದಂಬರು, ಗಂಗ, ಅಳುಪರು, ಈತನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಧೃವಸೇನನು ಈತನ ಜೊತೆ ಮೈತ್ರಿ ಮಾಡಿಕೊಂಡನು. ಇದರಿಂದ ಇವನಿಗೆ 'ಪರಮೇಶ್ವರ' ಎಂಬ ಬಿರುದು ಲಭಿಸಿತು.[35]

ಇವನು ಪಶ್ಚಿಮ ಸಮುದ್ರದ ಸಿರಿ ಎನಿಸಿದ್ದ 'ಘಾರಾಪ್ರುರಿ'ಯನ್ನು ನೌಕದಳದ ಸಹಾಯದಿಂದ ಧ್ವಂಸಗೊಳಿಸಿದನು. ಉತ್ತರದಲ್ಲಿ ಲಾಟ, ಮಾಳವನ, ಗೂರ್ಜರು ತಾವಾಗಿಯೇ ಶರಣಾದರು. ಈತನ ಸೈನ್ಯವನ್ನು ಕಂಡ, ಕೋಸಲ, ಕಳಿಂಗ ಅರಸರು ಭಯಭೀತರಾದರು. ಪೂರ್ವ ಕರಾವಳಿಯ ವಿಷ್ಣುಕೊಂಡನರನ್ನು ಸೋಲಿಸಿ ಪುಷ್ಮಪುರ ದುರ್ಗವನ್ನು ಕೈವಶ ಮಾಡಿಕೊಂಡನು. ನಂತರ ಕುಣಾಲವನ್ನು ವಶಪಡಿಸಿಕೊಂಡನು. ಇದೇ ವೆಂಗಿದೇಶ ಇಲ್ಲಿನ ಅಧಿಕಾರವನ್ನು ನೋಡಿಕೊಳ್ಳಲು ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನನ್ನು ನೇಮಿಸಿದನು. ಅವನೇ ಮುಂದೆ ವೆಂಗೀ ಸಾಮ್ರಾಜ್ಯ ಅಥವಾ ಕಲ್ಯಾಣ ಚಾಲುಕ್ಯ ಎಂಬ ಹೊಸ ಮನೆತನವನ್ನು ಪ್ರಾರಂಭಿಸಿದನು.

ಹೀಗೆ ಪುಲಿಕೇಶಿಯು ಹೊರರಾಜ್ಯದವರೊಂದಿಗೆ ಯುದ್ಧದಲ್ಲಿ ತೊಡಗಿದ್ದಾಗ ಇವನ ಪ್ರಾಂತ್ಯಾಧಿಕಾರಿಗಳು ಅಪ್ಪಾಯಿಕ ಮತ್ತು ಗೋವಿಂದರು ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಇವರಲ್ಲಿ ಒಬ್ಬ ಮಂಗಳೇಶನ ಪುತ್ರನಿರಬೇಕೆಂದು ತಿಳಿದುಬರುತ್ತದೆ.[36] ಅವರನ್ನು ಸೋಲಿಸಲು ಇವನು ಒಡೆದು ಆಳುವ ನೀತಿಯನ್ನು ಅನುಸರಿಸಿದನು. ಮೊದಲು ಗೋವಿಂದನನ್ನು ಸೋಲಿಸಿ ಅವನ ಜೊತೆ ಮೈತ್ರಿಯನ್ನು ಮಾಡಿಕೊಂಡು ಅವನ ಸಹಾಯದಿಂದ ಅಪ್ರಾಯತನನನ್ನು ಕೊಂದನು.[37]

ಇವನ ಸಾಮ್ರಾಜ್ಯವು ಗುಜರಾತ್‌ದಿಂದ ಪೀರಾಪುರದವರೆಗೂ, ನರ್ಮದಾ ನದಿಯಿಂದ ಪೆನಾರ ನದಿಯವರೆಗಿನ ಇಡೀ ದಕ್ಷಿಣದ ತಪ್ಪಿಲನವರೆಗೂ ಹಬ್ಬಿತ್ತು. ಇವನ ಕಾಲದಲ್ಲಿಯೇ ಉತ್ತರದಲ್ಲಿ ಹೃರ್ಧವರ್ಧನನ್ನು ಆಳ್ವಿಕೆ ಅನ್ವೆಸುತ್ತಿದ್ದು ಅವನ ಸಾಮ್ರಾಜ್ಯವು ಉತ್ತರದಲ್ಲಿ ಗಂಗಾನದಿಯಿಂದ ನರ್ಮದೆಯವರೆಗೂ ಹರಡಿತು. ಅವನಿಗೆ ಇಡೀ ಭಾರತದಲ್ಲಿ ಚಕ್ರವರ್ತಿಯಾಗಬೇಕೆಂಬ ಆಸೆಯಿತ್ತು. ಆದರೂ ಇವರಿಬ್ಬರೂ ಒಬ್ಬರ ಬಗ್ಗೆ ಮತ್ತೊಬ್ಬರು ಅರಿತಿದ್ದರು. ಸಮಾನ ಬಲವುಳ್ಳವರೂ ಎಂಬ ಅರಿವಿತ್ತು. ಆಗ ಹರ್ಷವರ್ಧನನು ಇವನನ್ನು ತನ್ನ ಸಾಮ್ರಾಜ್ಯಕ್ಕೆ ಬಂದು ಮೈತ್ರಿ ಮಾಡಿಕೊಳ್ಳುವಂತೆ

---

35 ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ, 1974.

36 ಕೆ.ಪಿ. ಈರಣ್ಣ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ.

37 V.D. Mahajan, Ancient India, P.692.

ರಾಯಭಾರಿಯ ಜೊತೆಯನ್ನು ಆಮಂತ್ರಣವನ್ನು ಕಳುಹಿಸಿದ್ದಾಗ ಇವನು ವೀರರಾದವರು ಯುದ್ಧಭೂಮಿಯಲ್ಲಿ ಮಾತನಾಡು ಎಂದು ಪ್ರತಿ ಸಂದೇಶ ಕಳುಹಿಸಿದನು.

ಆಗ ಹರ್ಷನು ಇವನನ್ನು ನರ್ಮದಾ ನದಿಯ ತೀರದಲ್ಲಿ ಎದುರಿಸಲಾಗಿ ಪುಲಿಕೇಶಿಯ ಶೌರ್ಯದ ಮುಂದೆ ಸೋಲನ್ನುನುಭವಿಸಬೇಕಾಯಿತು ಎಂದು ಐಹೊಳೆ ಶಾಸನ ತಿಳಿಸುತ್ತದೆ.[38] ಇದರಿಂದಾಗಿ ಪುಲಿಕೇಶಿಯು 99,000 ಗ್ರಾಮಗಳನ್ನೊಳಗೊಂಡ 3 ಮಹಾರಾಷ್ಟ್ರಗಳು ಅಂದರೆ ಮಹಾರಾಷ್ಟ್ರ, ಕರ್ನಾಟಕ, ಪಶ್ಚಿಮ ಕರಾವಳಿ, ಕೊಂಕಣ ಇವನ ಅಧೀನಕ್ಕೊಳಪಟ್ಟು, ದಕ್ಷಿಣ ಪಥೇಶ್ವರ ಎಂಬ ಬಿರುದನ್ನು ಗಳಿಸಿದನು.[39] ಈತನ ಸೈನ್ಯವನ್ನು ಕೆಂಡ, ಕೋಸಲ, ಕಳಿಂಗ ಅರಸರು ಭಯಭೀತರಾದರು.

ಇವನು ತನ್ನಲ್ಲಿದ್ದ ಗಣಸೈನ್ಯದ ನೆರವಿನಿಂದ ಕಾವೇರಿ ದಾಟಿ ಚೋಳ, ಪಾಂಡ್ಯ, ಕೇರಳಗಳ ಅರಸರ ವಿರುದ್ಧ ಗೆಲುವುಗಳಿಗೆ ಧನಕನಕಾದಿ ವಸ್ತುವಾಹಾನಾದಿಗಳ ಸಮೇತ ಬಾದಾಮಿಗೆ ಹಿಂದಿರುಗಿ ಸಮಾರಂಭವನ್ನು ಆಯೋಜಿಸಿದನು ಎಂದು ಐಹೊಳೆ ಶಾಸನ ತಿಳಿಸುತ್ತದೆ.[40] ಇವನ ಆಸ್ಥಾನಕ್ಕೆ ಹ್ಯೂಯನ್‌ತ್ಸಾಂಗನು ಭೇಟಿ ನೀಡಿದ್ದ ಇವನ ಆಡಳಿತ ವೈಖರಿಯನ್ನು, ಸೈನ್ಯದ ತುಕಡಿಯನ್ನು ಕುರಿತು ಮನಸಾರೆ ಹೊಗಳಿದ್ದಾನೆ. ಇವನ ಬಳಿ ಬಲಿಷ್ಠರಾದ ಸೈನಿಕರೂ, ಆನೆಗಳೂ ಇರುವುದರಿಂದ ನೆರೆಹೊರೆಯ ರಾಜರನ್ನು ಲಕ್ಷಿಸದೆ ಹೋರಾಟ ನಡೆಸುತ್ತಾನೆ[41] ಎಂದಿದ್ದಾನೆ.

ಇವನ ಧರ್ಮಕಾರ್ಯಗಳು, ಲೋಕಹಿತಕಾರ್ಯಗಳಾಗಿವೆ. ಪ್ರಜೆಗಳು ಇವನಿಗೆ ವಿಧೇಯರಾಗಿದ್ದಾರೆಂದು ಮತ್ತು ಇವನ ವೇಷ-ಭೂಷಣಗಳ ಬಗೆಗೆ ಸಂಪೂರ್ಣ ಮಾಹಿತಿ ನೀಡಿದ್ದಾನೆ.[42] ಪುಲಿಕೇಶಿಯ ಕೀರ್ತಿ ಪರ್ಷಿಯಾದ ದೊರೆ 2ನೇ ಖುಸ್ರೊಗೆ ತಿಳಿಯಿತು. ಖುಸ್ರುವು ಪುಲಿಕೇಶಿಯ ಆಸ್ಥಾನಕ್ಕೆ ರಾಯಭಾರಿಗಳನ್ನು ಕಳುಹಿಸಿದ್ದನು. ಈ ರಾಜತಾಂತ್ರಿಕ ಸಂಬಂಧವನ್ನು ಅಜಂತ, ಗುಹಾಲಯದ ಚಿತ್ರಗಳು ದಿಗ್ದರ್ಶಿಸುತ್ತದೆ. ಪುಲಿಕೇಶಿಯೂ ಸಹ ತನ್ನ ರಾಯಭಾರಿಗಳನ್ನು ಖುಸ್ರುವಿನ

---

38 ಕೆ.ಪಿ. ಈರಣ್ಣ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.4.

39 ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ.

40 ಅದೇ.

41 ಅದೇ.

42 ಅದೇ.

ಆಸ್ಥಾನಕ್ಕೆ ಕಳುಹಿಸಿದ್ದನೆಂದು, ಪತ್ರ ವ್ಯವಹಾರ ಇದ್ದಿತೆಂದು ಅರಬ್ ಇತಿಹಾಸಕಾರ ತಬರಿ ತಿಳಿಸುತ್ತಾನೆ.[43]

ಹೀಗೆ ಕಂಚಿಯವರೆಗೂ ಮುಂದುವರಿದು ಕಂಚಿಯ ಮೇಲೆ ಎರಡು ಬಾರಿ ಯುದ್ಧ, ಕೈಗೊಂಡ ಪಲ್ಲವ ಮೊದಲ ದೊರೆ ಮಹೇಂದ್ರವರ್ಮನು ಕಾಂಚೀಪುರದಲ್ಲಿ ಅಡಗಿಕೊಂಡಿದ್ದನೆಂದು ನಂತರ ಅವನನ್ನು ಹುಡುಕಿ ಕೊಂದನು ಎಂದು ತಿಳಿದುಬರುತ್ತದೆ. ಇವರಿಬ್ಬರ ನಡುವೆ ವೈರತ್ವ ಪ್ರಕೃತಿಯ ನಿಯಮವೇ ಇರಬೇಕು.[44] ಮಹೇಂದ್ರವರ್ಮನ ನಂತರ ಅಧಿಕಾರಕ್ಕೆ ಬಂದ ನರಸಿಂಹವರ್ಮನು ತನ್ನ ತಂದೆಗೆ ಆದ ಅಪಮಾನದ ಸೇಡು ತೀರಿಸಿಕೊಳ್ಳಲು ಕ್ರಿ.ಶ. 642ರಲ್ಲಿ ಚಾಲುಕ್ಯ ಸಾಮ್ರಾಜ್ಯದ ಮೇಲೆ ದಾಳಿ ನಡೆಸಿದನು. ಮಣಿಮಂಗಲ, ಪಿರಿಯಾಲ, ಸೊರಮಾರಗಳಲ್ಲಿ ನಡೆದ ಯುದ್ಧಗಳಲ್ಲಿ ಇಮ್ಮಡಿ ಪುಲಿಕೇಶಿಯು ಸೋಲನ್ನನುಭವಿಸಿದನು. ನಂತರ ವಾತಾಪಿಯನ್ನು ಹಾಳುಗೆಡವಿ ನರಸಿಂಹವರ್ಮನು ವಾತಾಪಿಗೊಂಡ ಎಂಬ ಬಿರುದು ಗಳಿಸಿದನು. ಈ ಯುದ್ಧದಲ್ಲಿ ಹೋರಾಡುತ್ತಲೇ ಪುಲಿಕೇಶಿಯು ಸಾವನ್ನಪ್ಪಿದರು.

ಯಾವ ಸಾಮ್ರಾಜ್ಯವನ್ನು ಒಂದು ಭವ್ಯ ಪರಂಪರೆಯ ನಾಡಾಗಿ ಮೆರೆಸಿದನೋ ಅದೇ ಸಾಮ್ರಾಜ್ಯವು ಹಾಳಾಗುವ ಸ್ಥಿತಿಯನ್ನು ಪುಲಿಕೇಶಿಯು ನೋಡುವಂತಾಗಿದ್ದು ಒಂದು ವಿಪರ್ಯಾಸವೇ ಸರಿ. ಇವನ ನಂತರ ಚಾಲುಕ್ಯ ಸಾಮ್ರಾಜ್ಯ ಹಂಚಿ ಹರಿದುಹೋಯಿತು.

ಅನಂತರದ ಚಾಲುಕ್ಯ ಅರಸರು

ಒಂದನೇ ವಿಕ್ರಮಾದಿತ್ಯ (ಕ್ರಿ.ಶ. 655–681) :

ಕ್ರಿ.ಶ. 655ರಲ್ಲಿ ಪಲ್ಲವರ ನಾಡಹಿಡಿತದಿಂದ ಬಾದಾಮಿಯನ್ನು ಬಿಡಿಸಿಕೊಳ್ಳುವಲ್ಲಿ ಒಂದನೇ ವಿಕ್ರಮಾದಿತ್ಯನು ಯಶಸ್ವಿಯಾದನು. ಕುಸಿದುಹೋಗಿದ್ದ ವಂಶದ ಘನತೆ ಗೌರವಗಳನ್ನು ಮರುಸ್ಥಾಪಿಸಿದ ಕೀರ್ತಿ ವಿಕ್ರಮಾದಿತ್ಯನದು. ಇವನಿಗೆ ಶ್ರೀವಲ್ಲಭ, ಅನಿವಾರಿತರಣರಸಿಕ, ರಾಜಮಲ್ಲ ಮುಂತಾದ ಬಿರುದುಗಳಿದ್ದವು. ಪಲ್ಲವರ ದಾಳಿ ಮತ್ತು ಆಕ್ರಮಣಗಳಿಂದ ಚಾಲುಕ್ಯರ ಸಾಮ್ರಾಜ್ಯ ನಲುಗಿ

---

43 V.D. Mahajan, Ancient India, P.694.

44 ಶೀಲಕಾಂತ ಪತ್ತಾರ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಅಧ್ಯಯನ, ಪು.22.

ಹೋಗಿತ್ತು. ನರಸಿಂಹವರ್ಮ ಅವನ ಮಗ ಇಮ್ಮಡಿ ಮಹೇಂದ್ರವರ್ಮ ಮತ್ತು ಅವನ ಮಗ ಮೊದಲನೆಯ ಪರಮೇಶ್ವರವರ್ಮ ಎಂಬ ಪಲ್ಲವರ ಮೂಲ ತಲೆಮಾರಿನ ರಾಜರುಗಳು ಅಂದರೆ ನರಸಿಂಹನ ಮಗ ಇಮ್ಮಡಿ ಮಹೇಂದ್ರವರ್ಮ ಮತ್ತು ಒಂದನೇ ಪರಮೇಶ್ವರರ ಮೇಲೆ ಯುದ್ಧ ಮಾಡಿ ಜಯಶಾಲಿಯಾದನು. ಇವನ ಗೆಲುವಿಗೆ ಆತನ ಕುದುರೆ ಚಿತ್ರತಂಡ ಮತ್ತು ಖಡ್ಗಗಳು ನೆರವಾದವೆಂದು ತಿಳಿಸಲಾಗಿದೆ.[45] ಇವನು 670ನೇ ಇಸವಿಯಲ್ಲಿ ಪಲ್ಲವರನ್ನು ಅವರ ರಾಜಧಾನಿಯಿಂದ ಕಾಂಚಿವರೆಗೂ ಓಡಿಸಿದನು ಮತ್ತೆ ಆತನು 674ರಲ್ಲಿ ಕಾವೇರಿಯ ದಕ್ಷಿಣ ತೀರದ ಉರಗಪುರ ಎಂಬಲ್ಲಿ ತಂಗಿದ್ದನು. ಇವೆಲ್ಲವೂ ಅವನ ಕಾಂಚಿಯ ಪಲ್ಲವರ ಮೇಲೆ ಸಾಧಿಸಿದ ವಿಜಯಗಳ ಸೂಚಿ ಎಂಬುದರಲ್ಲಿ ಸಂದೇಹವಿಲ್ಲ.

ಇವನು ಸುದರ್ಶನಾಚಾರ್ಯರಿಂದ ಶಿವಮಂಡಲ ದೀಕ್ಷೆಯನ್ನು ಪಡೆದಿದ್ದನು.[46] ಇವನ ನಂತರದ ಚಾಲುಕ್ಯ ಅರಸರು ಶೈವಧರ್ಮಕ್ಕೆ ಹೆಚ್ಚಿನ ಒಲವು ತೋರಿದ್ದರಿಂದ ಮಹಾಕೂಟ ಮತ್ತು ಪಟ್ಟದಕಲ್ಲು ಶೈವ ಕೇಂದ್ರಗಳೂ ಬೆಳೆದವು. ಇವನಿಗೆ ಪರಮಮಾಹೇಶ್ವರ ಎಂಬ ಬಿರುದಿತ್ತು.[47]

ವಿನಯಾದಿತ್ಯ (ಕ್ರಿ.ಶ. 681–696) :

ಇವನು ತನ್ನ ತಂದೆಯ ಕಾಲದಲ್ಲಿಯೇ ರಾಜ್ಯಭಾರ ಕ್ರಮ ಮತ್ತು ಯುದ್ಧಗಳಲ್ಲಿ ಭಾಗವಹಿಸಿ ತರಬೇತಿಯನ್ನು ಹೊಂದಿದ್ದರಿಂದ ಚಾಲುಕ್ಯ ರಾಜ್ಯಭಾರವನ್ನು ನಿರ್ವಹಿಸುವಲ್ಲಿ ಯಾವ ತೊಂದರೆಯನ್ನೂ ಅನುಭವಿಸಲಿಲ್ಲ. ಇವನು ಕಾಂಚೀ, ಕೇರಳ, ಚೋಳ ಅರಸರನ್ನು ಸೋಲಿಸುದುದಾಗಿ ಶಾಸನಗಳು ತಿಳಿಸುತ್ತವೆ.[48] ತನ್ನ ತಂದೆಯಿಂದ ನಿರ್ಣಾಯಕವಾಗಿ ಪರಾಜಿತರಾಗಿದ್ದುದರಿಂದ ಪಲ್ಲವರು ಯಾವ ತೊಂದರೆಯನ್ನು ವಿನಯಾದಿತ್ಯನಿಗೆ ಉಂಟುಮಾಡಲಾಗಲಿಲ್ಲ. ಇವನು ದ್ವೀಪರು, ಚೋಳರು, ಅಳುಪರು, ಗಂಗರಿಂದ ಮತ್ತು ಸಿಂಹಳರಿಂದ ಕಪ್ಪವನ್ನು ಸಂಗ್ರಹಿಸಿದನು.[49] ಇವನ ರಾಣಿ ವಿನಯವತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರಿಗಾಗಿ ಕ್ರಿ.ಶ. 699ರಲ್ಲಿ ತ್ರಿಕೂಟಾಲಯ

45 ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.22.

46 ಅದೇ.

47 ಅದೇ, ಪು.22.

48 ಅದೇ.

49 V.D. Mahajan, Ancient India.

ನಿರ್ಮಿಸಿದಳು. ಇದು ಕರ್ನಾಟಕದ ಪ್ರಥಮ ತ್ರಿಕೂಟಾಲಯ. ಇವನಿಗೆ ಶ್ರೀ ಪೃಥ್ವೀವಲ್ಲಭ, ಸತ್ಯಾಶ್ರಯ, ಯುದ್ಧಮಲ್ಲ, ರಾಜಾಶ್ರಯ ಎಂಬ ಬಿರುದುಗಳಿದ್ದವು.[50]

ವಿಜಯಾದಿತ್ಯ (ಕ್ರಿ.ಶ. 696–733) :

ಇವನು ತನ್ನ ಅಜ್ಜ ಮತ್ತು ತಂದೆಯ ಕಾಲದಲ್ಲಿ ಆಡಳಿತ ಮತ್ತು ಯುದ್ಧಕಲೆಯಲ್ಲಿ ಚೆನ್ನಾಗಿ ತರಬೇತಿ ಪಡೆದಿದ್ದು ಅನುಭವಿ ರಾಜಕುಮಾರನಾಗಿದ್ದನು. ಸಿಂಹಾಸನಕ್ಕೆ ಬಂದ ಕೂಡಲೇ ತೊಂದರೆಯನ್ನುಂಟು ಮಾಡುತ್ತಿದ್ದ ಎಲ್ಲರನ್ನು ಅಡಗಿಸಿ ಶಾಂತಿ ಮತ್ತು ಸುಭೀಕ್ಷವನ್ನುಂಟು ಮಾಡಿದನು. ಇವನು ಪಟ್ಟದಕಲ್ಲಿನಲ್ಲಿ ವಿಜಯೇಶ್ವರ ಗುಡಿಯನ್ನು ನಿರ್ಮಿಸಿದನು.[51] ನಿರವಧ್ಯ ಮತ್ತಿತರ ಸಾಹಿತಿಗಳಿಗೆ ಆಶ್ರಯವನ್ನು ಕೊಟ್ಟನು.[52] ಇವನು ತನ್ನ ಕೊನೆಗಾಲದಲ್ಲಿ ಮತ್ತೆ ಪಲ್ಲವರ ವಿರುದ್ದ ಯುದ್ಧ ಮಾಡಬೇಕಾಯಿತು. ಪಲ್ಲವರನ್ನು ಸೋಲಿಸಿದ್ದುದು ಮಾತ್ರವಲ್ಲದೆ ಅವರಿಂದ ಕಪ್ಪ ಕಾಣಿಕೆಗಳನ್ನು ಸಂಗ್ರಹ ಮಾಡಿದರು. ಈತನು ಸರ್ವಧರ್ಮ ಸಹಿಷ್ಣುವಾಗಿದ್ದನು. ಈತನ ಸಹೋದರಿ ಕುಂಕುಮ ಮಹಾದೇವಿಯು ಲಕ್ಷ್ಮೇಶಾನದಲ್ಲಿ ಆನೆಸೆಜ್ಜೆ ಜಿನಾಲಯವನ್ನು ಕಟ್ಟಿಸಿದಳು.[53] ಈತನ ಹೆಸರಿನಲ್ಲಿ ಈತನ ಮಡದಿಯು ವಿನಾಪೊಟೆಯು ಮಹಾಕೂಟೇಶ್ವರನಿಗೆ ರತ್ನಪೀಠ, ರಜತವ್ರತ ಮತ್ತು ಭೂದಾನ ಮಾಡಿದಳು.[54]

ಇಮ್ಮಡಿ ವಿಕ್ರಮಾದಿತ್ಯ (ಕ್ರಿ.ಶ. 733–744) :

ಇವನು ಕೇವಲ ಹನ್ನೆರಡು ವರ್ಷಗಳ ಕಾಲ ರಾಜ್ಯಭಾರ ಮಾಡಿದರೂ ತಾನು ಕೈಗೊಂಡ ಎಲ್ಲಾ ಯುದ್ಧಗಳಲ್ಲಿಯೂ ಜಯಶಾಲಿಯಾದನು. ಇವನು ಪಲ್ಲವರನ್ನು ನಿರ್ಮೂಲನಗೊಳಿಸಬೇಕೆಂಬ ಉದ್ದೇಶದಿಂದ ತುಂಡಾದ ವಿಷಯವನ್ನು ಹೊಕ್ಕು ನಂದಿಪೋತವರ್ಮನನ್ನು ಹೊಡೆದು ಓಡಿಸಿದನು.[55]

---

50 ಅದೇ.

51 ಅ. ಸುಂದರ, ಚರಿತ್ರಾ ಸಂಪುಟ–1.

52 ಕೆ.ಪಿ. ಬಸವರಾಜು, History and Culture of Karnataka.

53 ಬಿ.ಆರ್. ಗೋಪಾಲ್, ಕರ್ನಾಟಕ ಇತಿಹಾಸ.

54 ಅದೇ.

55 ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.23.

ಹಲವಾರು ಕದನಗಳನ್ನು ಹೂಡಿ ನಿರಂತರವಾಗಿ ಯಶಸ್ಸನ್ನು ಸಂಪಾದಿಸಿದ ಇವನು ಪಟ್ಟಾಭಿಷೇಕವಾಗುತ್ತಿದ್ದಂತೆಯೇ ಅರಬ್ ದಾಳಿಕೋರರಿಂದ ಇವನ ರಾಜ್ಯಕ್ಕೆ ಅಪಾಯ ಉಂಟಾಯಿತು. ತಾಜಿಕ್‌ರು ಹಲವಾರು ಯುದ್ಧಗಳಲ್ಲಿ ಜಯಗಳಿಸಿ ಗುಜರಾತಿಗೆ ನುಗ್ಗಿದರು. ಇವರು ಸಂಪತ್ತು ದೋಚುವ ಉತ್ತರ ದಖನ್‌ನಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸುವ ಪ್ರಯತ್ನದಲ್ಲಿದ್ದರು. ಇವರು ಗುಜರಾತಿನ ನವಸಾರಿಕ ಪ್ರದೇಶವನ್ನು ಮುತ್ತಿದರು. ಆಗ ಅಲ್ಲಿನ ಪ್ರಾಂತ್ಯಾಧಿಪತಿಯಾಗಿದ್ದ ಪುಲಕೇಶಿ ಇವನು ಮುಸ್ಲಿಂ ಧಾಳಿಯನ್ನು ತಡೆದುದಲ್ಲದೆ ಅದನ್ನು ಹಿಂದಕ್ಕೆ ಓಡಿಸಿದ. ಇವನಿಗೆ 'ಅವನಿ ಜನಾಶ್ರಯ' ಎಂಬ ಬಿರುದನ್ನು ನೀಡಿದ. ಹೀಗೆ ಗಡಿರಕ್ಷಣೆಗೆ ವಿಕ್ರಮಾದಿತ್ಯನು ಆದ್ಯತೆ ನೀಡಿದ.

ಇದಾದ ನಂತರ ಇಮ್ಮಡಿ ವಿಕ್ರಮಾದಿತ್ಯನು ಕಾಂಚೀಪುರದ ಪಲ್ಲವ ಅರಸ ನಂದಿವರ್ಮ ಪಲ್ಲವಮಲ್ಲನ ವಿರುದ್ಧ ಮೂರು ಬಾರಿ ಯುದ್ಧವನ್ನು ಘೋಷಿಸಿದ. ಇದನ್ನು ಉಳ್ಳಾಲ ಶಾಸನವು ತಿಳಿಸುತ್ತದೆ. ಗೆಲುವಿನ ಚಿಹ್ನೆಯಾಗಿ ಅವನಿಂದ ಕದಮುಖವಾದಿತ್ಯ, ಸಮುದ್ರಘೋಷ ಎಂಬ ವಿಶೇಷ ವಾದ್ಯಗಳನ್ನೂ, ಖಟ್ವಾಂಗಧ್ವಜ ಎಂಬ ರಾಜಚಿಹ್ನೆಯನ್ನು ಆನೆ ಮತ್ತು ಅಪಾರ ಸಂಪತ್ತನ್ನೂ ಕಿತ್ತುಕೊಂಡನು. ಕಾಂಚಿಪುರ ಅವನ ವಶವಾಯಿತು. ಅಲ್ಲಿನ ರಾಜಸಿಂಹೇಶ್ವರ ಅಥವಾ ಕೈಲಾಸನಾಥ ದೇವಾಲಯಕ್ಕೆ ಅಪಾರವಾದ ದಾನದತ್ತಿಗಳನ್ನು ನೀಡಿದ.[56] ಇವನ ಔದಾರ್ಯದ ಸಂಕೇತವಾಗಿ ಇವನ ಸಾಧನೆಯ ಕನ್ನಡ ಶಾಸನ ಇನ್ನೂ ಆ ದೇವಾಲಯದಲ್ಲಿದೆ. ಪಾಂಡ್ಯ, ಚೋಳ, ಕೇರಳ, ಕರಭ್ಯರನ್ನು ಸೋಲಿಸಿ ದಕ್ಷಿಣ ಸಮುದ್ರ ತೀರದಲ್ಲಿ ಜಯಸ್ತಂಭವನ್ನು ನೆಟ್ಟನು.[57]

ಇವನು ಹೈಹಯವಂಶದ ರಾಜಕುಮಾರಿಯಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರನ್ನು ಮದುವೆಯಾಗಿದ್ದನು. ಇಬ್ಬರೂ ಸ್ಪರ್ಧಾ ಮನೋಭಾವದಿಂದ ಧಾರ್ಮಿಕ ಕೈಂಕರ್ಯ ಮತ್ತು ಕಲಾಸೇವೆಯನ್ನು ಕೈಗೊಂಡ ಮಹಾನ್ ಸ್ತ್ರೀರತ್ನಗಳು ಲೋಕಮಹಾದೇವಿಯು ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯ ಕಟ್ಟಿಸಿದಳು.[58]

---

56 ಅದೇ.

57 ಶ್ರೀನಿವಾಸ ಪಾಡ್ಗೇಗಾರ್, Vishnu Cult in Karnataka.

58 ಶೀಲವಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ.

ಇದು ಈ ವಿರೂಪಾಕ್ಷ ದೇವಾಲಯವೆಂದು ಪ್ರಸಿದ್ಧವಾಗಿದೆ. ತ್ರೈಲೋಕ್ಯ ಮಹಾದೇವಿಯು ಪಟ್ಟದಕಲ್ಲಿನಲ್ಲಿ ತ್ರೈಲೋಕೇಶ್ವರಿಯನ್ನು ನಿರ್ಮಿಸಿದಳು. ಇದು ಇಂದು ಮಲ್ಲಿಕಾರ್ಜುನ ದೇಗುಲವೆಂದು ಹೆಸರಾಗಿದೆ. ಇವನ ಕಾಲದಲ್ಲಿ ಚಾಲುಕ್ಯರ ಸಾಮ್ರಾಜ್ಯ ಉಚ್ಛ್ರಾಯದ ಸ್ಥಿತಿಯನ್ನು ತಲುಪಿತು. ರೇಖಾನಗರ ಶಿಖರ ವಿನ್ಯಾಸ ಈತನ ಕಾಲದಲ್ಲಿಯೇ ನಿರ್ಮಾಣಗೊಂಡವು.[59]

ಇಮ್ಮಡಿ ಕೀರ್ತಿವರ್ಮ (ಕ್ರಿ.ಶ. 745–757) :

ಎರಡನೇ ವಿಕ್ರಮಾದಿತ್ಯ ಮತ್ತು ತ್ರೈಲೋಕ್ಯ ಮಹಾದೇವಿಯರ ಮಗನಾದ ಇಮ್ಮಡಿ ಕೀರ್ತಿವರ್ಮ ಕ್ರಿ.ಶ. 745ರಲ್ಲಿ ಅಧಿಕಾರಕ್ಕೆ ಬಂದನು. ಈ ವಂಶದ ಕಡೆಯ ಚಕ್ರವರ್ತಿ ಇಮ್ಮಡಿ ಕೀರ್ತಿವರ್ಮ. ಕ್ರಿ.ಶ. 753ರಲ್ಲಿ ದಂತಿದುರ್ಗನು ಆಳೂಪರ ಜೊತೆ ಸೇರಿ ಇವನನ್ನು ಸೋಲಿಸಿದನು. ದಂತಿದುರ್ಗನ ಸಾವಿನ ನಂತರ ತನ್ನ ಸಾಮ್ರಾಜ್ಯವನ್ನು ಮತ್ತೆ ಪಡೆಯಲು ಯತ್ನಿಸುತ್ತಿದ್ದಾಗ ದಂತಿದುರ್ಗನ ಉತ್ತರಾಧಿಕಾರಿಯಾದ ಇವನ ಚಿಕ್ಕಪ್ಪ ಒಂದನೇ ಕೃಷ್ಣನು ಪೂರ್ಣವಾಗಿ ಕೀರ್ತಿವರ್ಮನ ಆಳ್ವಿಕೆಯನ್ನು ಕ್ರಿ.ಶ. 757ರಲ್ಲಿ ಕೊನೆಗಾಣಿಸಿ ಹಾರಾಡುವ ಪಾಲಿಧ್ವಜವನ್ನು ಬಲವಂತವಾಗಿ ಕಿತ್ತುಕೊಳ್ಳುವುದರ ಮೂಲಕ ಚಾಲುಕ್ಯರ ಅವನತಿಗೆ ಕಾರಣನಾದನು.[60]

ಚಾಲುಕ್ಯರು ಉತ್ತಮ ಯೋಧರಾಗಿದ್ದುದು ಮಾತ್ರವಲ್ಲದೆ ಉತ್ತಮ ಆಡಳಿತಗಾರರು ಮತ್ತು ಸಮಧರ್ಮ ಸಹಿಷ್ಣುಗಳಾಗಿದ್ದರು. ಆಡಳಿತವನ್ನು ಸರಳಗೊಳಿಸುವುದಕ್ಕಾಗಿ ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ನಾಡು–ವಿಷಯ, ಪ್ರಾಂತ್ಯ ಮೊದಲಾಗಿ ವಿಂಗಡಿಸಲಾಗಿತ್ತು. ಅವರ ಕಾಲದ ಅಧಿಕಾರಿಗಳೆಂದರೆ ಶಾಸನಾಧಿಕಾರಿ, ದಂಡಾಧಿಕಾರಿ, ಧರ್ಮಾಧಿಕಾರಿ, ಶ್ರೀಕರಣ ಸರ್ವಾಧಿಕಾರಿ, ಕರಿತು ರಗವರ್ಗಡೆ ಮೊದಲಾದವರಾಗಿದ್ದರು. ಪ್ರಜೆಗಳು ಸುಖ ಮತ್ತು ಸುಭಿಕ್ಷದಿಂದಿದ್ದರು ಎಂದು ಹ್ಯೂಯನ್‌ತ್ಸಾಂಗ್ ತಿಳಿಸಿದ್ದಾರೆ (ಸಿ.ಯು.ಡಿ.)

ಹಾಗೆಯೇ ಇವರ ಕಾಲದಲ್ಲಿ ಎಲ್ಲಾ ಧರ್ಮಗಳಿಗೂ ಸಮಾನಸ್ಥಾನವಿತ್ತು. ಇವರು ವೈಧಿಕ ಧರ್ಮಾವಲಂಬಿಗಳಾಗಿದ್ದರು ವೈಷ್ಣವ, ಶೈವ, ಶಾಕ್ಯ ಪಂಥಗಳಿಗೆ ಪ್ರೋತ್ಸಾಹ ನೀಡಿದರು ಹಾಗೂ

---

59 ಎಸ್. ರಾಜಶೇಖರ, ಕಲೆ ಮತ್ತು ವಾಸ್ತುಶಿಲ್ಪ.

60 V.D. Mahajan, Ancient India.

ಇವರ ಕಾಲದಲ್ಲಿ ಹಲವು ಬೌದ್ಧ ಮತ್ತು ಜೈನಬಸದಿಗಳು ನಿರ್ಮಾಣವಾದುದರಿಂದ ಇವರು ಈ ಧರ್ಮಗಳಿಗೂ ಸಹ ಪ್ರಾಮುಖ್ಯತೆ ನೀಡಿದರೆಂದು ತಿಳಿದುಬರುತ್ತದೆ. ಇಂತಹ ಸಾಮ್ರಾಜ್ಯವು ಸುಮಾರು 200 ವರ್ಷಗಳ ಕಾಲ ಆಳ್ವಿಕೆಯನ್ನು ನಡೆಸಿ ತನ್ನ ಅಂತ್ಯವನ್ನು ಕಂಡಿದುದು ಒಂದು ಶೋಚನೀಯ ವಿಚಾರವೇ ಸರಿ. ಇವರ ಕಾಲದಲ್ಲಿ ಹಲವು ದೇವಾಲಯ, ಗುಹಾಲಯಗಳು, ಕಲೆಗಳು ರೂಪಿತವಾದವು. ಅವುಗಳ ಬಗೆಗೆ ಮುಂದಿನ ಅಧ್ಯಾಯದಲ್ಲಿ ತಿಳಿಯೋಣ..

ಅಧ್ಯಾಯ–3

ವಾಸ್ತುಶಿಲ್ಪ

ಅಧ್ಯಾಯ–3

ವಾಸ್ತುಶಿಲ್ಪ

ವಾಸ್ತು ಮತ್ತು ಶಿಲ್ಪ ಎನ್ನುವ ಪದಗಳ ಸಮಾಗಮವಾಗಿ ವಾಸ್ತುಶಿಲ್ಪ ಎನ್ನುವ ಪದ ಬಳಕೆಯಲ್ಲಿದೆ. ಈ ವಾಸ್ತುಶಿಲ್ಪ ರಚನೆಯು ಬುದ್ಧನ ನಂತರ ಉದಯವಾಯಿತು. ಕ್ರಿ.ಶ.ದ ನಂತರ ಆಚರಣೆಗೆ ಬಂದ ಕಾರ್ಯವಾಗಿದೆ. ಇವರ ಕಾಲವನ್ನು ನೋಡಿದಾಗ ಇವರ ವಾಸ್ತುಶಿಲ್ಪದ ನಿರ್ಮಾಣವು ಅಷ್ಟೇನು ಪ್ರಾಚೀನವಲ್ಲವೆಂಬುದು ಕಂಡುಬರುತ್ತದೆ. ಅಲೆಗ್ಸಾಂಡರ್ ರೇ "ವಾಸ್ತುಶಿಲ್ಪ ಎನ್ನುವುದು ಸಮಕಾಲೀನ ನಾಗರೀಕತೆಗಳ ಕೈಗನ್ನಡಿ" ಎಂದಿದ್ದಾರೆ. ಸಮರಾಂಗಣ ಕ್ಷೇತ್ರದಲ್ಲಿ ಬೋಚರಾಜ ವಾಸ್ತುಶಿಲ್ಪದ ಬಗೆಗೆ ಈ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ಮಹಾವಟವೃಕ್ಷ, ಬಿಳಿಲುಗಳು, ಮೂರ್ತಿಶಿಲ್ಪ ದೇವಾಲಯ ನಿರ್ಮಾಣ, ಪ್ರಸಾದ ರಚನೆ, ಕೋಟೆ ಕೊತ್ತಲಗಳ ರಚನೆಯಲ್ಲಿ ಕಂಡುಬರುವ ಕುಸುರಿಯ ವಾಸ್ತುಶಿಲ್ಪ.[1]

ಪ್ರಸ್ತುತ ಚಾಲುಕ್ಯರ ವಾಸ್ತುಶೈಲಿಯನ್ನು ಸಾಂಸ್ಥಿಕ ಗ್ರಂಥದಲ್ಲಿ ಉತ್ತಮವಾಗಿರುವ ವೇಸರ ಶೈಲಿಯ ಜೊತೆಗೆ ಹೋಲಿಸಬಹುದು. ದಕ್ಷಿಣ ಭಾರತೀಯರಿಂದ ದ್ರಾವಿಡ, ಉತ್ತರ ಭಾರತೀಯರಿಂದ ನಾಗರ ವಾಸ್ತುಶಿಲ್ಪ ಸಂಪ್ರದಾಯಗಳು ಸೇರಿರುತ್ತವೆ. ಕಸಿನ್ಸ್‌ರವರು ತಿಳಿಸುವಂತೆ "ಚಾಲುಕ್ಯರ ವಾಸ್ತುಶಿಲ್ಪಗಳು ದಕ್ಷಿಣ ಭಾರತದ ಪಲ್ಲವರಂತೆ ಗೋಪುರ ರಚನೆಯಲ್ಲಿ ಅಂತಸ್ತುಗಳನ್ನು ಬಳಸಿಕೊಂಡರೆ ಪ್ರತಿ ಅಂತಸ್ತಿನ ಎತ್ತರವನ್ನು ಕಡಿಮೆ ಮಾಡಿ ಅದನ್ನು ಸೂಕ್ಷ್ಮ ಅಲಂಕಾರ ಶಿಲ್ಪಗಳಿಂದ ಕೂಡಿದೆ (H. Cousins, Chalukuan Architecture). ಮುಂದೆ ಇದು ಅತಿ ಎನ್ನುವಷ್ಟು ಹೆಚ್ಚಾಯಿತು.ಇದರ ತತ್ಫಲವಾಗಿ ತಕ್ಷಣಕ್ಕೆ ನೋಡಿದರೆ ಕಾಣಿಸದಿರುವಷ್ಟು ಸೂಕ್ಷ್ಮವಾದವು ನಂತರ ಇವರ ಜಾತಕಿಯ ಗೋಪುರ ರಚನೆಯ ತತ್ವಗಳನ್ನು ಸೇರಿಸಿಕೊಂಡು ಪ್ರತಿ ಅಂತಸ್ತಿನ ಮಾಡುಗಳು ಸೇರು ಹೆಚ್ಚು ಕಡಿಮೆ ಲಂಬವಾದ ಒಂದೇ ಪಟ್ಟಿ ಎಂಬಂತೆ ನಿರ್ಮಿಸಿದರು. ಜೊತೆಗೆ ಇದಲ್ಲದೆ ಇವರ ಮತ್ತೊಂದು ಅಂಶವೆಂದರೆ ಬೌದ್ಧಚೈತ್ಯಗಳ ರೀತಿಯ ಅರ್ಧವರ್ತುಲಾಕಾರ.[2]

---

1 ಪ್ರೊ. ಚಿದಾನಂದಮೂರ್ತಿ, ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ. 450–1130.

2 ಕರ್ನಾಟಕ ಪರಂಪರೆ, ಪು.454.

ಇಲ್ಲಿನ ಆರಂಭದ ದೇವಾಲಯಗಳ ಗಾತ್ರ ವಿಸ್ತಾರ ಅಷ್ಟೊಂದು ದೊಡ್ಡದಾಗಿಲ್ಲ. ಆದರೆ ಭಿನ್ನ ಶೈಲಿಗಳ ಸೊಗಡನ್ನು ಪ್ರಕಟಿಸುವುದರಲ್ಲಿ ಸಮರ್ಥವಾದವು. ಈ ಒಂದು ರೀತಿಯಲ್ಲಿ ಹುಟ್ಟಿಕೊಂಡ 2 ಮುಖ್ಯ ಶೈಲಿಗಳೆಂದರೆ ನಾಗರ ಮತ್ತು ದ್ರಾವಿಡ ಎಂಬ ಹೆಸರಿನಿಂದ ಫರ್‌ಗ್ಯೂಸನ್ ಕರೆದಿದ್ದಾರೆ.[3]

ಇವರ ಕಾಲದ ಪ್ರಮುಖ ವಾಸ್ತುಶಿಲ್ಪ ಶೈಲಿಗಳನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಧಾರವಾಡ, ಶಿವಮೊಗ್ಗ, ಇಟ್ಟಗಿ, ಬಿಕನೂರು, ಗದಗ, ಲಕ್ಕುಂಡಿ, ಡಂಬಳ, ಆನಗಲ್ಲು, ಬಂಕಾಪುರ, ಲಕ್ಷ್ಮೇಶ್ವರ, ಹಾವೇರಿ, ಹಾನವಟ್ಟ, ಗಳಗನಾಥ, ಕಾಡದಾನಪುರ ಇತ್ಯಾದಿ ಕಡೆ ಕಾಣಬಹುದು. ಇತರ ವಾಸ್ತುಶಿಲ್ಪ ಶೈಲಿಯೇ ಇನ್ನಷ್ಟು ಸೂಕ್ಷ್ಮವಾಗಿ ಚಮತ್ಕಾರವಾಗಿ ಸೊಗಸುಗಾರಿಕೆಯಿಂದ ವಾಸ್ತುಶಿಲ್ಪ ನಿರ್ಮಿಸಲು ಹೊಯ್ಸಳರಿಗೆ ಮಾರ್ಗದರ್ಶನವಾಯಿತು.[4]

ಚಾಲುಕ್ಯ ಅರಸರು ಸರ್ವಧರ್ಮ ಸಹಿಷ್ಣುಗಳಾಗಿದ್ದು ಕಲೆಯ ಆರಾಧಕರಾಗಿದ್ದು ವೈದಿಕ ಸಂಸ್ಕೃತಿಯನ್ನು ಪ್ರಸಾರ ಮಾಡಿದರೂ ಸಹ ಹಲವು ಜೈನ ಮತ್ತು ಬೌದ್ಧರ ವಾಸ್ತುಶಿಲ್ಪಗಳ ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರಿಗೆ ಉತ್ತಮ ಸೌಂದರ್ಯ ಪ್ರಜ್ಞೆಯಿದ್ದು ಕಲಾಕೃತಿಗಳನ್ನು ಪೋಷಿಸುವುದರಲ್ಲಿ ಹೆಮ್ಮೆ ಪಡುತ್ತಿದ್ದು ಅಸಂಖ್ಯಾತ ವಾಸ್ತುಶಿಲ್ಪಿಗಳಿಗೂ ಶಿಲ್ಪಿಗಳಿಗೂ ಆಶ್ರಯದಾತರಾಗಿದ್ದಾರೆ.

ಇವರ ವಾಸ್ತುಶಿಲ್ಪ ಚಟುವಟಿಕೆಯು 2 ನಿರ್ದಿಷ್ಟ ಹಂತಗಳನ್ನು ಕಂಡಿತು. ಮೊದಲನೆಯ ಹಂತವು ಕ್ರಿ.ಶ. 535ರಲ್ಲಿ ಸ್ಥಾಪನೆಯಾಗಿ 642ರವರೆಗೂ ಬಹುದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆದರು. 2ನೇ ಹಂತವು ಕ್ರಿ.ಶ. 655 ರಿಂದ ಮತ್ತು ಆಳ್ವಿಕೆಯನ್ನು ಪ್ರಾರಂಭಿಸುವುದರ ಮೂಲಕ ಕ್ರಿ.ಶ. 757ರ ವರೆಗೂ ಮುಂದುವರಿಯಿತು.[5]

ಮೊದಲ ಹಂತ :

ಈ ಹಂತವು ಒಂದನೇ ಪುಲಿಕೇಶಿಯ ಕೋಟೆಯ ನಿರ್ಮಾಣದ ಮೂಲಕ ಪ್ರಾರಂಭವಾಯಿತು. ಇದು ಇತರ ರಾಜರಿಗೂ ಸ್ಫೂರ್ತಿಯನ್ನು ನೀಡಿತು. ನಂತರ ಬಂದ ಕೀರ್ತಿವರ್ಮನು ಬಾದಾಮಿ

---

3 ಡಾ. ಶಿವರಾಮಕಾರಂತ, ಚಾಲುಕ್ಯ ವಾಸ್ತುಶಿಲ್ಪ, ಪು.12.

4 ಅದೇ.

5 ಅ.ಸುಂದರ ಕರ್ನಾಟಕ ಚರಿತ್ರೆ, ಪು.487.

ನಗರವನ್ನು ಸುಂದರಗೊಳಿಸಿದನು.[6] ಮಂಗಳೇಶನು ಗುಹಾದೇವಾಲಯಗಳ ನಿರ್ಮಾಣ ಮಾಡಿದನು. 2ನೇ ಪುಲಿಕೇಶಿಯು ಒಬ್ಬ ಶ್ರೇಷ್ಠ ಕಲಾಪೋಷಕವಾಗಿದ್ದು ಇವನ ಕಾಲದಲ್ಲಿ ದ್ರಾವಿಡ ಮತ್ತು ನಾಗರ ಎರಡೂ ಶೈಲಿಗಳ ದೇವಾಲಯಗಳು ನಿರ್ಮಾಣಗೊಂಡವು. ಅವುಗಳಲ್ಲಿ ಬಾದಾಮಿಯ ಮೇಲು ಶಿವಾಲಯ ಮತ್ತು ಕೆಳಶಿವಾಲಯ ಸಂಗಮದ ಸಂಗಮೇಶ್ವರ ದೇವಾಲಯ ಮತ್ತು ರವಿಕೀತಿ ನಿರ್ಮಿಸಿದ ಮೇಗುತಿ ದೇವಾಲಯಗಳು ದ್ರಾವಿಡ ಶೈಲಿಯವುಗಳಾದರೆ ಐಹೊಳೆಯ ಹುಚ್ಚೆಮಲ್ಲಿ ಗುಡಿ ಅತಿಪ್ರಾಚೀನ ರೇಖಾನಗರ ಮಾದರಿಯ ದೇವಾಲಯ.[7]

ಈ ಎಲ್ಲಾ ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪದ ಅಭೂತ ಸೃಷ್ಟಿಗಳಾಗಿವೆ. ಕ್ರಿ.ಶ. 642ರಲ್ಲಿ ಪಲ್ಲವರು ಬಾದಾಮಿಯನ್ನು ಅತಿಕ್ರಮಿಸಿದ್ದರಿಂದ ಕಲೆಯ ನಿರ್ಮಾಣದಲ್ಲಿ ಸ್ವಲ್ಪ ದಿನಗಳ ಕಾಲ ಚಾಲುಕ್ಯರಿಗೆ ಗ್ರಹಣ ಬಡಿದಿತ್ತು. ನಂತರ ಕ್ರಿ.ಶ. 650ರಲ್ಲಿ ಮೊದಲನೆಯ ವಿಕ್ರಮಾದಿತ್ಯನು ವಾಸ್ತುಶಿಲ್ಪವನ್ನು ಶಿಲ್ಪಕಲೆಯನ್ನು ಬೆಳೆಸಲು ಪ್ರಯತ್ನಿಸಿದನು. ದೇವಾಲಯ ವಾಸ್ತುಶಿಲ್ಪ ಮತ್ತು ಹಿಂದೂ ಮೂರ್ತಿಶಿಲ್ಪಗಳು ಬೆಳವಣಿಗೆಯನ್ನೊಂದಿದವು.

ಈ ಹಂತದಲ್ಲಿ ವಿಕ್ರಮಾಧಿತ್ಯನು ಶೈವಮತಕ್ಕೆ ಮತಾಂತರ ಗೊಂಡನು. ಇದು ಹಲವು ಶೈವ ದೇವಾಲಯಗಳ ನಿರ್ಮಾಣಕ್ಕೆ ಸಹಾಯಕವಾಯಿತು. ಇವನ ಕಾಲದಲ್ಲಿ ನಿರ್ಮಾಣವಾದಂತಹ ಶಿವಾಲಯಗಳೆಂದರೆ ಪಟ್ಟದಕಲ್ಲು, ಆಲಂಪುರಾ, ಮಹಾನಂದಿ, ಪಾಪನಾಶಿಂ, ಪಾನ್ಯಂ, ಐಹೊಳೆ ಬಾದಾಮಿ, ಮಹಾಕೂಟಗಳಲ್ಲಿ ನಿರ್ಮಾಣವಾದವು.[8] ಬಾದಾಮಿಯ ಮಾಲಗತ್ತಿ ಶಿವಾಲಯ ದ್ರಾವಿಡ ಶೈಲಿಯಿದ್ದು ಇವರ ಮಹಾನ್ ಕೊಡುಗೆಯಾಗಿವೆ. ಇವನ ನಂತರ ವಿನಯಾದಿತ್ಯನು ಆಲಂಪುರದಲ್ಲಿ ಆಂಧ್ರದಲ್ಲೇ ಅತ್ಯಂತ ಸುಂದರವಾದ ಚಾಲುಕ್ಯ ದೇವಾಲಯವನ್ನು ನಿರ್ಮಿಸಿದನು. ಇದರ ಬಗ್ಗೆ ಮುಂದೆ ವಿವರಿಸಲಾಗಿದೆ. ರಾಯಚೂರು ಜಿಲ್ಲೆಯ ಇಟ್ಟಗಿಯಲ್ಲಿ ಸುಂದರವಾದ ವಿನ್ಯಾಸವುಳ್ಳ ಒಂದು ತೋರಣವನ್ನು ನಿಲ್ಲಿಸಲಾಗಿದೆ. ಈ ಕಾಲದ ಇನ್ನೆರಡು ದೇವಾಲಯಗಳೆಂದರೆ ಪಾನ್ಯದ ಶಿವದೇವಾಲಯ ಮತ್ತು ಮಹಾನಂದಿಯ ಮಹಾನಂದೀಶ್ವರ ದೇವಾಲಯ.

---

6 ಅ. ಸುಂದರ, ಕರ್ನಾಟಕ ಚರಿತ್ರೆ, ಸಂಪುಟ-1, ಪು.487.

7 ಅ. ಸುಂದರ, ಕರ್ನಾಟಕ ಸಂಪುಟ ಚರಿತ್ರೆ, ಭಾಗ-1, ಪು.488.

8 ಅ. ಸುಂದರ, ಕರ್ನಾಟಕ ಸಂಪುಟ ಚರಿತೆ-1, ಪು.489.

ಕ್ರಿ.ಶ. 696ರಲ್ಲಿ ಅಧಿಕಾರಕ್ಕೆ ಬಂದ ವಿಜಯಾದಿತ್ಯನು ಪಟ್ಟದಕಲ್ಲಿನಲ್ಲಿ ದೇವಾಲಯ ನಿರ್ಮಾಣ ಚಟುವಟಿಕೆಯನ್ನು ಪ್ರಾರಂಭಿಸಿದ ಮೇರು ವ್ಯಕ್ತಿ. ಇವನು ದ್ರಾವಿಡ ಶಿಖರದ ಮೂಲರೂಪ ಹೊಂದಿರುವ ವಿಜಯೇಶ್ವರ ದೇವಾಲಯ ನಿರ್ಮಿಸಿದನು. ಕರ್ನಾಟಕದ ವೈಭವದ ತ್ರಿಕೂಟ ದೇವಾಲಯ ನಿರ್ಮಾಣದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನ ತಾಯಿ ವಿನಯಾವತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು ಮಹೇಶ್ವರಗಳನ್ನು ಪ್ರತಿಷ್ಠಾಪಿಸಲು ಬಂದು ತ್ರಿಕೂಟ ದೇವಾಲಯವನ್ನು ನಿರ್ಮಿಸಿದಳು. ಇದು ಈಗ ಶಿಥಿಲವಾಗಿದ್ದು ಜಂಬುಲಿಂಗ ದೇವಾಲಯವೆಂದು ಹೆಸರಾಯಿತು.[9] ಇವರ ಸಹೋದರಿಯಾದ ಕುಂಕುಮ ಮಹಾದೇವಿಯು ಪುರಿಗೆರೆಯ ಆನೆಸೆಜ್ಜೆ ಬಸದಿಯನ್ನು ಕಟ್ಟಿಸಿದಳು. ಇವನ ಕಾಲದ ಇತರ ದೇವಾಲಯಗಳೆಂದರೆ ನಾಗನಾಥ ಕೊಳದಲ್ಲಿ ನಾಗನಾಥ ದೇವಾಲಯ, ಬನ್ನಿಕೊಪ್ಪದಲ್ಲಿ ಅರ್ಜುನೇಶ್ವರ ದೇವಾಲಯ ಆಲಂಪುರದಲ್ಲಿ ವಿಶ್ವಬ್ರಹ್ಮ ಮತ್ತು ಗರುಡಬ್ರಹ್ಮ, ಮಹಾಕೂಟ ದೇವಾಲಯ, ಲಾಡ್‌ಖಾನ್ ದೇವಾಲಯ, ಹುಚ್ಚಪ್ಪಯ್ಯನ ಗುಡಿ, ಗೌಡರಗುಡಿ ಮತ್ತು ಸಿದ್ಧನಕೊಳ್ಳದಲ್ಲಿ ಲಕುಲಿಶ ದೇವಾಲಯ.

2ನೇ ವಿಕ್ರಮಾಧಿತ್ಯನ ಕಾಲದಲ್ಲಿ ಚಾಲುಕ್ಯರ ಪ್ರಭಾವವು ಉನ್ನತ ಶಿಖರಕ್ಕೆ ಏರಿದವು. ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲುಗಳಲ್ಲಿರುವ ಇವನ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯು ವಾಸ್ತುಶಿಲ್ಪದ 2 ಅತ್ಯುತ್ತಮ ಮಾದರಿಯನ್ನು ಕಟ್ಟಿಸಿದಳು. ಅವುಗಳೆಂದರೆ, ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಇವುಗಳನ್ನು ಅವರು ಕಂಚಿಯನ್ನು ಗೆದ್ದುದರ ಸ್ಮರಣಾರ್ಥವಾಗಿ ಕಟ್ಟಿಸಿದರು.[10] ವಿಷ್ಣು ಪುಷ್ಕರಣೆಯ ಸುತ್ತಲೂ ಅನೇಕ ಸಣ್ಣ ದೇವಾಲಯಗಳು ನಿರ್ಮಾಣಗೊಂಡಿದ್ದು ರೇಖಾನಾಗರ ಶಿಖರಗಳನ್ನೊಂದಿವೆ ಈ ಕಾಲದಲ್ಲಿ ಹುಟ್ಟಿದ ಇನ್ನೊಂದು ದೇವಾಲಯ ಐಹೊಳೆಯ ಚೈತ್ಯಾ ಗುಡಿ. ಇದು ಸುಂದರವಾದ ರಚನೆಯಿಂದ ಕೂಡಿದೆ. ಇವನ ಕಾಲದಲ್ಲಿಯೇ ಪದ್ಮ ಬ್ರಹ್ಮ ದೇವಾಲಯ ನಿರ್ಮಾಣಗೊಂಡಿತು. ಈ ವಂಶದ ಕೊನೆಯ ಅರಸನಾದ ಕೀರ್ತಿವರ್ಮನಿಂದ ಪಟ್ಟದಕಲ್ಲಿನ ಪಾಪನಾಥ ದೇವಾಲಯ ಮತ್ತು ಮಹಾಕೂಟದಲ್ಲಿ ಕದಂಬ ನಾಗರ ಶಿಖರ ವಿನ್ಯಾಸದ ಇನ್ನೂ ಕೆಲವು ಸಣ್ಣ ದೇವಾಲಯಗಳು ನಿರ್ಮಾಣಗೊಂಡವು.

---

9 ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಾಂಸ್ಕೃತಿಕ ಪರಂಪರೆ.

10 ಅದೇ.

ಇವರ ಧಾರ್ಮಿಕ ಕಟ್ಟಡಗಳನ್ನು ಗಮನಿಸಿದಾಗ ಈ ಕಾಲದ ವಾಸ್ತುಶಿಲ್ಪ ಇನ್ನೂ ಶೈಶವಾವಸ್ಥೆಯಲ್ಲಿತ್ತೆಂದು ಕಟ್ಟಡಗಳಿಗೆ ಬಳಸಲಾದ ದೈತ್ಯಾಕಾರದ ಕಂಬಗಳು, ತೊಲೆಗಳು, ದೊಡ್ಡಚಪ್ಪಡಿಗಳು, ಛಾವಣಿಗಳು ಸೂಚಿಸುತ್ತವೆಂದು ಕಸಿನ್ಸ್ ತಿಳಿಸಿದ್ದಾರೆ.[11]

ಬಾದಾಮಿ ಚಾಲುಕ್ಯರ ಆರಂಭ ಕಾಲದ ದೇವಾಲಯಗಳು ಹೊರನೋಟಕ್ಕೆ ಗುಡಿಗಳಂತೆಯೇ ಕಾಣಿಸುವುದಿಲ್ಲ. ಆಯಾಕಾರ ಅಥವಾ ಚೌಕಾಕಾರದ ತಳವಿನ್ಯಾಸವಿರುವ ಈ ಗುಡಿಗಳಲ್ಲಿ ಕಂಡುಬರುವುದು ಒಂದು ದೊಡ್ಡ ಹಜಾರ ಮಾತ್ರ ಇದರೊಳಗೆ ಹಿಂಬದಿಯ ಗೋಡೆಗಳಲ್ಲಿ ಗರ್ಭಗಳನ್ನು ಅಳವಡಿಸಲಾಗಿದೆ. ಇವು ದೇವಾಲಯ ವಿನ್ಯಾಸದ ಪ್ರಯೋಗಾತ್ಮಾಕ ಆರಂಭಿಕ ವಿನ್ಯಾಸದ ಪ್ರಯೋಗಾತ್ಮಕ ಘಟ್ಟಗಳನ್ನು ಸೂಚಿಸುತ್ತವೆ. ಬಾದಾಮಿ ಚಾಲುಕ್ಯರು ಬಾದಾಮಿ ಮತ್ತು ಐಹೊಳೆಗಳನ್ನು ರಕ್ಷಣಾ ಕೋಟೆಗಳನ್ನು ನಿರ್ಮಿಸಿದ್ದು ಅವು ಸರಳ ವಿನ್ಯಾಸವನ್ನೊಂದಿದ್ದು ಯಾವುದೇ ವಿಧವಾದ ಬಂಧಕಗಳನ್ನು ಉಪಯೋಗಿಸದೆ ದೊಡ್ಡ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಿ ಕಟ್ಟಲಾಗಿದೆ. ಅಂತಹ ವಾಸ್ತುಶಿಲ್ಪದ ಕೆಲವು ಲಕ್ಷಣಗಳನ್ನು ತಿಳಿಯೋಣ.

ಮಾಡು :

ಮಂಟಪದ ಗಾತ್ರ ಕಿರಿದಾಗಿರುವ ಸಂದರ್ಭದಲ್ಲಿ ಅದನ್ನು ಬೋಳುಮಾಳಿಗೆಯಂತೆಯೂ, ಹಿಪ್ಪಾರು ಮಳಿಗೆಯಂತೆಯೂ ರೂಪಿಸಿದ್ದಾರೆ. ಅದು ಹಿಂಭಾಗದ ಗರ್ಭಗುಡಿಯ ಶಿಖರಕ್ಕೆ ಅಡ್ಡಬರುವುದಿಲ್ಲ. ಗರ್ಭಗುಡಿಯ ಪಾಯಕ್ಕಿಂತ ಅದರ ಮಂಟಪದ ಗಾತ್ರ ಹೆಚ್ಚಿರುವ ಕಡೆ ಈ ಮಾಡನ್ನು ರಚಿಸಿದ್ದಾರೆ. ಈ ಮಾಡುಗಳು ಗೋಪುರದ ಚಂದವನ್ನು ಹಾಳುಗೆಡವಿದೆ. ನಾಗರಶೈಲಿಯ ರಚನೆಗಳಲ್ಲಿ ಗರ್ಭಗುಡಿಯ ಗಾತ್ರ ಮೀರಿಸುವ ಮಂಟಪಗಳು ಇರುವ ಕಡೆ ಮಾಡುಗಳು ನಿರ್ಮಿತವಾಗಿವೆ.[12]

ಮಂಟಪ :

ಗೋಡೆಗಳ ವಾಸ್ತುರಚನೆಯಲ್ಲಿ ಮೇರುಗನ್ನು ನೀಡುವ ಸಾಧನವೇ ಮಂಟಪ. ಬಾದಾಮಿಯ ಮಾಲಗಿತ್ತಿ ದೇವಾಲಯ ಮತ್ತು ಐಹೊಳೆಯ ಹುಚ್ಚಿಮಲ್ಲಿಗುಡಿಯ ಮಂಟಪಗಳಲ್ಲಿ ಕೆಲವೇ

---

11 H. Cousins, Indian Architecture.

12 ಡಾ. ಶಿವರಾಮಕಾರಂತ, ಚಾಲುಕ್ಯರ ಕಲೆ ಮತ್ತು ವಾಸ್ತುಶಿಲ್ಪ.

ಸ್ತಂಬಗಳನ್ನು ಬಳಸಿದ್ದಾರೆ. ಅವು ಹೊರಗೂ ಮುಖ ಮಂಟಪದ ಮಾಡನ್ನೆ ಎತ್ತಿ ಹಿಡಿದಿದೆ. ಇವು ಚೌಕಕಾರದ ಸರಳ ರಚನೆಗಳಾಗಿವೆ. ದುರ್ಗಾ ದೇವಾಲಯದ ಮಂಟಪವು ತೆರೆದ ಮಂಟಪವಾಗಿದ್ದು ಸುತ್ತಲೂ ಜಗಲಿಯ ಹೊರಮೈ ತೆರವಾಗಿದೆ. ಇವರು ಮಂಟಪಕ್ಕೆ ಬಳಸುವ ಸ್ತಂಭಗಳು ಮಾಡಿಗೆ ಆಧಾರವಾಗಿರುವ ಜೊತೆಗೆ ಚೆಲುವನ್ನು ಒದಗಿಸಿವೆ. ಈ ಮಂಟಪದ ಮೇಲಿರುವ ಶಿಲ್ಪಗಳು ಅಲಂಕಾರ ವಿಗ್ರಹ ಶಿಲ್ಪಗಳಾಗಿದ್ದು ಇವು ದೇವರ ಮೂರ್ತಿಗಳಲ್ಲಿ ಕೇವಲ ಗಂಡು ಹೆಣ್ಣಿನ ಶೃಂಗಾರ ಸಮಯದ ವಿವಿಧ ಭಂಗಿಗಳು ಈ ರೀತಿಯ ಮಂಟಪಗಳನ್ನು ಲಾಡ್‌ಖಾನ್ ಗುಡಿಯ ಹಾಗೂ ಹುಚ್ಚಪ್ಪಯ್ಯ ಮಠದ ಮುಂಭಾಗದಲ್ಲೂ ಕಾಣಬಹುದು.

ಅಧಿಷ್ಠಾನಗಳು :

ಅಧಿಷ್ಠಾನವು ಕಟ್ಟಡಕ್ಕೆ ಭದ್ರ-ಬುನಾದಿಯನ್ನೊದಗಿಸಿ ಅದರ ಭಾರವನ್ನು ಎತ್ತಿ ಹಿಡಿಯುತ್ತದೆ. ಇದರ ವಿವಿಧ ಭಾಗಗಳನ್ನು ಬಗೆ-ಬಗೆಯ ವಿನ್ಯಾಸಗಳಿಂದ ಸೌಂದರ್ಯಯುತವಾಗಿ ಮಾಡಲಾಗಿದೆ. ಅಧಿಷ್ಠಾನದ ಮುಖ್ಯ ಭಾಗಗಳೆಂದರೆ, ಉಪಾನಗಳ ಹಾಗೂ ಕಪೋತ, ಉಪಾನ ಕೆಳಗಿನ ಭಾಗವಾದರೆ ಕಪೋತ ಮೇಲಿನ ಬಾಗ, ಕಪೋತವು ಚೈತ್ಯಕೊಡುಗಳಿಂದ ಅಲಂಕೃತವಾಗಿರುವುದು ಸಾಮಾನ್ಯ. ಅಧಿಷ್ಠಾನದಲ್ಲಿ ಕಪೋತದ ಬಳಕೆಯು ಚಾಲುಕ್ಯರ ವಿಶಿಷ್ಟತೆಯಾಗಿದೆ.[13] ಮೇಲಣ ಶಿವಾಲಯದ 'ಗಳ'ಭಾಗದಲ್ಲಿ ರಾಮಾಯಣ ಮತ್ತು ಕೃಷ್ಣಚರಿತ್ರೆಯ ಸನ್ನಿವೇಶಗಳನ್ನು ಕೆತ್ತಲಾಗಿದೆ. ಇವು ಸಮಕಾಲಿನ ಸಾಮಾಜಿಕ ಜೀವನವನ್ನು ಚಿತ್ರಿಸುತ್ತವೆ. ಆಲಂಪುರದ ದೇವಾಲಯಗಳ 'ಗಳ' ಭಾಗದಲ್ಲಿ ಪುಷ್ಪ ನಕ್ಷೆಗಳು, ನವಿಲು, ಸಿಂಹದಂತಹ ಪ್ರಾಣಿಗಳು ಕೆತ್ತಲ್ಪಟ್ಟಿವೆ.[14] ಮಹಾಕೂಟದ ಮಕುಟೇಶ್ವರ ದೇವಾಲಯವು ವಾಸ್ತುಶಿಲ್ಪದ ದೃಷ್ಟಿಯಿಂದ ಒಂದು ವಿಶಿಷ್ಟ ದೇವಾಲಯವಾಗಿದ್ದು ಅದರ ಅಧಿಷ್ಠಾನವು 'ಉಪಾನ', 'ಕೂಡು'ಗಳಿಂದ ಅಲಂಕೃತವಾದ ಕಪೋತ, ಕುಮುದ, ವ್ಯಾಲಗಳ ಶಿಲ್ಪಗಳಿಂದ ಕೂಡಿದ 'ಗಳ' ಇದೆ.

---

13 ಡಾ. ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.251.

14 ಪರ್ಸಿಬ್ರೌನ್, The Temple Architecture of South India.

ಗೋಡೆಗಳು :

ಚಾಲುಕ್ಯರ ರಾಚನಿಕ ಗೋಡೆಗಳಲ್ಲಿ ಎರಡು ಪ್ರಕಾರಗಳನ್ನು 'ಜಾರ್ಜ್ ಮಿಷೆಲ್' ಗುರುತಿಸಿದ್ದಾರೆ.[15] ಒಂದು ಬಗೆಯ ಗೋಡೆಗಳ ಮೇಲ್ಮೈಯು ಅರ್ಧಗಂಬಗಳಿಂದ ವಿಭಾಗಿಸಲಾಗಿದ್ದು ಅವುಗಳಿಂದ ರಚಿತವಾದ ಅನೇಕ ಮುಂಬಣೆ, ಹಿಂಬಣೆಗಳು, ಅಧಿಷ್ಠಾನದಿಂದ ಮಂಜೂರುಗಳವರೆಗೆ ಚಾಚಿಕೊಂಡಿವೆ. ಇದರಿಂದಾಗಿ ಅನೇಕ ಮೇಲ್ಮೈಗಳು ಉಂಟಾಗಿವೆ. ಈ ರೀತಿಯ ಗೋಡೆಗಳು ಮೇಲಣ ಶಿವಾಲಯ, ಮಾಲಗಿತ್ತಿ ಶಿವಾಲಯಗಳಲ್ಲಿ ಕಂಡುಬರುತ್ತವೆ. ಎರಡನೆ ಪ್ರಕಾರದ ಗೋಡೆಗಳು ಯಾವುದೇ ಮುಂಬಣೆ, ಹಿಂಬಣೆಗಳಿಲ್ಲದೆ ಒಂದೇ ಮೇಲ್ಮೈಯನ್ನು ಹೊಂದಿವೆ. ಉದಾಹರಣೆ : ನಾಗನಾಥ ದೇವಾಲಯ.

ಇದನ್ನು ಆಧರಿಸಿ ಎಸ್. ರಾಜಶೇಖರ್‌ರವರು ಈ ಎರಡು ವಿಧದ ಗೋಡೆಗಳನ್ನು ಸರಳ ಮತ್ತು ಅಲಂಕಾರಿಕ ಗೋಡೆಗಳೆಂದು ಗುರುತಿಸಿದ್ದಾರೆ.[16]

ಕೋಷ್ಠಗಳು :

ಚಾಲುಕ್ಯರ ದೇವಾಲಯಗಳ ಗೋಡೆಗಳಲ್ಲಿ ಕೋಷ್ಠಗಳು ಸಾಮಾನ್ಯ ಅಂಶಗಳಾಗಿವೆ. ಮೇಲಣ ಶಿವಾಲಯದ ಪ್ರತಿಯೊಂದು ಗೋಡೆಯ ಮಧ್ಯಭಾಗದಲ್ಲಿ ಒಂದು ಕೋಷ್ಠ ಇದೆ. ಇವುಗಳನ್ನು ದೇವಕೋಷ್ಠಗಳು ಎನ್ನುತ್ತಾರೆ. ಅವುಗಳ ಮೇಲ್ಭಾಗದಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಇವರು ನಿರ್ಮಿಸಿರುವ ಕೋಷ್ಠಗಳಲ್ಲಿ ವಿವಿಧ ಮೂರ್ತಿಗಳನ್ನು ಬಿಡಿಸಲಾಗಿದೆ. ಅವುಗಳಲ್ಲಿ ಗೋವರ್ಧನ ಗಿರಿಧಾರಿ, ಕಾಲಿಯಮರ್ಧನ ಮತ್ತು ಅಷ್ಟಭುಜ ನರಸಿಂಹ ಮತ್ತು ವಿಷ್ಣು ಹಾಗೂ ಶಿವರ ಮೂರ್ತಿಗಳನ್ನು ಕೆತ್ತಲಾಗಿದೆ. ದುರ್ಗಾಗುಡಿಯಲ್ಲಿ 11 ದೇವಕೋಷ್ಠಗಳು ಇವೆ. ಮಾಳಗಿತ್ತಿ ಶಿವಾಲಯದ ದೇವಕೋಷ್ಠಗಳಿಗೆ ನಾಸಿಕಗಳ ಅಲಂಕಾರವಿರುವುದಿಲ್ಲ. ಆದರೆ ಬಾದಾಮಿಯ ಜಂಬುಲಿಂಗ ಕೋಷ್ಠಗಳು ನಾಸಿಕಗಳಿಂದ ಶೋಭಿತವಾಗಿದ್ದರೂ ಸೂಕ್ಷ್ಮಕೆತ್ತನೆಯ ಅಲಂಕಾರವಿಲ್ಲ.[17]

---

15 ಡಾ. ಶೀಲಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.252.

16 ಡಾ. ಎಸ್. ರಾಜಶೇಖರ್, ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ.

17 Percy Brown, The Temple Architecture fo South India.

ಜಾಲಾಂದರಗಳು :

ಜಾಲಾಂದರಗಳು ದೇವಾಲಯದ ಹೊರಗೋಡೆಯ ಭಾಗಗಳಾಗಿವೆ. ಇವು ದೇವಾಲಯಗಳಿಗೆ ಗಾಳಿ ಮತ್ತು ಬೆಳಕನ್ನು ಒದಗಿಸಿಕೊಡುತ್ತವೆ. ವಾಸ್ತು ವಿಜ್ಞಾನದ ದೃಷ್ಟಿಯಿಂದ ಇವು ಅತ್ಯಂತ ಮಹತ್ವದ್ದಾಗಿವೆ. ದೇವಾಲಯದ ಸೌಂದರ್ಯವನ್ನು ಇವು ಹೆಚ್ಚಿಸಿವೆ. ಆರಂಭದಲ್ಲಿ ಅತ್ಯಂತ ಚಿಕ್ಕವೂ, ಅಲಂಕಾರರಹಿತವೂ ಆಗಿದ್ದು ನಂತರದ ದಿನಗಳಲ್ಲಿ ದೊಡ್ಡದಾದ ಅಲಂಕಾರಪೂರಿತ ಜಾಲಾಂದರಗಳನ್ನು ನಿರ್ಮಿಸಲಾಗಿದೆ.

ಚಾಲುಕ್ಯ ದೇವಾಲಯಗಳ ಜಾಲಾಂದರಗಳು, ಇತರೆ ದೇವಾಲಯಗಳ ಜಾಲಾಂದರಗಳಿಗಿಂತ ಅಳತೆ, ಆಕಾರ, ನಕ್ಷೆಗಳಲ್ಲಿ ವೈವಿಧ್ಯತೆಯಿಂದ ಕೂಡಿವೆ. ಮೇಲಣ ಶಿವಾಲಯದ ಜಾಲಾಂದರಗಳು ಹೆಚ್ಚು ಕಡಿಮೆ ಚಚ್ಚೌಕವಾಗಿದೆ.[18] ಮೇಲಣ ಶಿವಾಲಯದ ಉತ್ತರ ಹಾಗೂ ದಕ್ಷಿಣದಲ್ಲಿ ಚೌಕಾಕಾರದ ರಂಧ್ರಗಳು ಪಶ್ಚಿಮದ ಗೋಡೆಯಲ್ಲಿ ತ್ರಿಕೋನಾಕಾರದ ರಂಧ್ರಗಳಿವೆ. ಇದರ ಇನ್ನೊಂದು ಜಾಲಾಂದರವು ವೃತ್ತಾಕಾರವಾಗಿದ್ದು 16 ಅರಗಳಿರುವ ಮತ್ಸ್ಯಚಕ್ರವನ್ನು ಹೊಂದಿದ್ದು ಅದು ಬಹುಪಾಲು ಹಾಳಾಗಿದೆ.[19] ಈ ಅದ್ಭುತ ಕಲಾಕೃತಿಯ ನಿರ್ಮಾತೃಗಳು ನಿಜವಾಗಿಯೂ ಹೊಗಳಿಕೆಗೆ ಅರ್ಹರು.

ಹಂಸಮಾಲೆ :

ದೇವಾಲಯದ ಮುಂಜೂರಿನ ಒಳಭಾಗದಲ್ಲಿ ಹಂಸಮಾಲೆಗಳ ಕೆತ್ತನೆ ಇರುವುದು ಇವರ ದೇವಾಲಯಗಳ ಒಂದು ವಿಶಿಷ್ಟ ಲಕ್ಷಣವಾಗಿದೆ. ಕಲಾರಸಿಕರಿಗೆ ಈ ಪಕ್ಷಿಗಳು ಶಿಖರದ ಭಾಗವನ್ನು ಎತ್ತಿ ಹಿಡಿಯುವಂತೆ ಕಂಡುಬರುತ್ತದೆ. ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ ದೇವಾಲಯಗಳಲ್ಲಿ ಹಂಸಮಾಲೆಯ ಜಾಗದಲ್ಲಿ ಗಣಗಳ ಸಾಲನ್ನು ಕೆತ್ತಿರುವುದು ಒಂದು ವಿಶೇಷತೆ.[20] ಭೂತನಾಥ, ಜಂಬುಲಿಂಗ ದೇವಾಲಯಗಳು, ಮಹಾಕುಟ ಮಕುಟೇಶ್ವರ, ಮಲ್ಲಿಕಾರ್ಜುನ, ನಾಗನಾಥ ದೇವಾಲಯಗಳು ಈ ಹಂಸಮಾಲೆಯಿಂದ ಅಲಂಕೃತವಾಗಿವೆ. ಮಹಾಕೂಟದ ಮಲ್ಲಿಕಾರ್ಜುನ ಮತ್ತು

---

18 ಡಾ. ಶೀಲಕಾಂತ ಪತ್ತಾರ, ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ, ಪು.253.

19 H. Cousins, Chalukyan Architecture.

20 ಅದೇ.

ನಾಗನಾಥ ದೇವಾಲಯಗಳಲ್ಲಿ ಈ ಹಂಸಗಳು ಜೋಡಿಯಾಗಿ ತಮ್ಮ ಚುಂಚುಗಳಲ್ಲಿ ಮಾಲೆ ಹಿಡಿದು ಹಾರುತ್ತಿರುವಂತೆ ಚಿತ್ರಿಸಿರುವುದು ಒಂದು ವಿಶೇಷ.[21]

ಕಂಬಗಳು :

ಇವರ ದೇವಾಲಯಗಳಲ್ಲಿ ಕಂಬಗಳು ಹೆಚ್ಚು ಅಲಂಕೃತವಾಗಿಲ್ಲ. ಇವುಗಳ ತಳಭಾಗ ಚಚ್ಚೌಕವಾಗಿದ್ದು ಅವುಗಳ ಹಿಡಿಕೆಯೂ ಸಹ ಚೌಕಕಾರವಾಗಿರುತ್ತವೆ. ಎಲ್ಲಾ ಕಂಬಗಳಿಗೂ ಬೋವಿಗಳಿವೆ ಇವುಗಳನ್ನು 'ರುಚುಕ'ಗಳೆಂದು ಕರೆಯುತ್ತಾರೆ.[22] ಇವರ ಕಾಲದ ಕಂಬಗಳ ದಂಡಭಾಗವು ಸಮಾನಾಂತರ ಪಟ್ಟಿಕೆಗಳಿಂದ ಅಲಂಕೃತವಾಗಿರುತ್ತದೆ. ಈ ಪಟ್ಟಿಕೆಗಳ ಮೇಲೆ ಸಾಮಾನ್ಯವಾಗಿ ಅರ್ಧ ವರ್ತುಲದ ಪದಕಗಳಿರುತ್ತವೆ ಎರಡು ಪಟ್ಟಿಕೆಗಳಿದ್ದಾಗ ಒಂದು ದಂಡದ ತಳಭಾಗದಲ್ಲಿ ಇನ್ನೊಂದು ಮೇಲ್ಭಾಗದಲ್ಲಿರುವುದುಂಟು. ಈ ಪಟ್ಟಿಕೆಗಳು ನಕ್ಷೆಗಳಿಂದ ಅಥವಾ ಪುಟ್ಟಶಿಲ್ಪಗಳಿಂದ ಶೋಭಿತವಾಗಿರುತ್ತವೆ. ಇಲ್ಲಿನ ಕಂಬಗಳಲ್ಲಿ ಯಾಳಿ, ಶಿವಪಾರ್ವತಿ, ರತಿಮನ್ಮಥರು, ಸುಂದರವಾದ ಸ್ತ್ರೀ ಸಾಲಭಂಜಿಕೆಗಳನ್ನು ಬಿಡಿಸಲಾಗಿದೆ ಹಾಗೂ ಇಲ್ಲಿ ರಸಿಕ ದಂಪತಿಗಳ ಚಿತ್ರಗಳನ್ನು ಬಿಡಿಸಲಾಗಿದೆ.[23]

ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ ಗುಡಿಗಳಲ್ಲಿಯ ಸಭಾಮಂಟಪದಲ್ಲಿ ಎರಡು ಅಡ್ಡಪಟ್ಟಿಕೆಗಳ ಪದಕಗಳೊಂದಿಗೆ ಮೇಲೆ ಕೆಳಗೆ ಸಮಾಂತರವಾಗಿದ್ದು ಅವೆರಡನ್ನು ಇನ್ನೊಂದು ಲಂಬವಾದ ಅಡ್ಡಪಟ್ಟಿಯು ಜೋಡಿಸುತ್ತಿರುವಂತೆ ಕೆತ್ತನೆ ಮಾಡಲಾಗಿದೆ.

ಇವರ ಕಲೆಯಲ್ಲಿ ಪ್ರೌಢಿಮೆ ಪಡೆದಂತೆಲ್ಲಾ ಕಂಬಗಳ ಮೆಲೆಯೂ ದಂಡದ ಒಂದು ಇಲ್ಲವೇ ಎರಡು ಬದಿಗಳಲ್ಲಿ ಸುಮಾರು ಒಂದೂವರೆ ಮೀಟರ್ ಎತ್ತರವಿರುವ ಶಿಲ್ಪಗಳನ್ನು ಬಿಡಿಸಲಾಗಿದೆ. ನಾಗನಾಥ ದೇವಾಲಯದ ಕಂಬಗಳ ಮೇಲೆ ವಿಥುನಾಸಕ್ತ ದಂಪತಿಗಳನ್ನು ಕೆತ್ತಲಾಗಿದೆ. ಪಟ್ಟದಕಲ್ಲಿನಲ್ಲಿರುವ ಕಂಬಗಳ ಶಿಲ್ಪಗಳು ಉತ್ಕೃಷ್ಟವಾದವುಗಳಾಗಿವೆ. ವಿರೂಪಾಕ್ಷ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ಕೈಲಾಸವನ್ನು ಎತ್ತುವ ರಾವಣನ ಶಿಲ್ಪವನ್ನು ಕಾಣಬಹುದು.[24]

---

21 ಭಾ.ರಾ. ಗೋಪಾಲ್, ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ.

22 ಡಾ. ಶೀಲವಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.254.

23 ಪರ್ಸಿಬ್ರೌನ್, ಟೆಂಪಲ್ ಆರ್ಕಿಟೆಕ್ಚರ್.

24 ಪರ್ಸಿಬ್ರೌನ್, ಟೆಂಪಲ್ ಆರ್ಕಿಟೆಕ್ಚರ್.

ಆಲಂಪುರ, ಪಟ್ಟದಕಲ್ಲಿನ ಗಳಗನಾಥ ದೇವಾಲಯಗಳಲ್ಲಿ ಕುಂಭ ಶಿಲ್ಪಗಳನ್ನು ಕಾಣಬಹುದು. ಕಂಬಗಳನ್ನು ತೊಲೆಗೆ ಹೊಂದಿಕೊಂಡಂತೆ ಮೇಲ್ಛಾವಣಿಗೆ ಹೆಚ್ಚಿನ ಬೆಂಬಲವನ್ನು ನೀಡಲು ಕಂಬಗಳನ್ನು ನಿರ್ಮಿಸಿದ್ದಾರೆ.[25]

ಬೋದುಗೆಗಳು :

ಕಂಬಗಳ ಮೇಲ್ಭಾಗದಲ್ಲಿ ತೊಲೆಗೆ ಹೊಂದಿಕೊಂಡ ಬೋದುಗೆಗಳನ್ನು ಕಾಣಬಹುದು. ಬಾದಾಮಿಯ ದೇವಾಲಯಗಳಲ್ಲಿ 2 ಬಗೆಯ ಬೋದುಗೆಗಳನ್ನು ಕಾಣಬಹುದು. ಅವುಗಳೆಂದರೆ, (1) ವಕ್ರ ಅಂಚಿನ ಬೋದುಗೆಗಳು ಮತ್ತು (2) ತರಂಗ ಬೋದುಗೆಗಳು.

ವಕ್ರ ಅಂಚಿನ ಬೋದುಗೆಗಳು ಬಾದಾಮಿಯ ದೇವಾಲಯಗಳಲ್ಲಿ ಹೆಚ್ಚು ಕಂಡುಬರುತ್ತವೆ. ಮಾಲಗಿತ್ತಿ ಶಿವಾಲಯದ ಮಂಟಪದಲ್ಲಿನ ಬೋದುಗೆಗಳು ವೃತ್ತಾಕಾರವಾಗಿದ್ದು ಮುಖಮಂಟಪದ ಬೋದುಗೆಗಳಿಂದ ಹೆಚ್ಚು ಅಲಂಕೃತವಾಗಿವೆ. ಭೂತನಾಥ, ಜಂಬುಲಿಂಗ, ಮಲ್ಲಿಕಾರ್ಜುನ, ನಾಗನಾಥ ದೇವಾಲಯಗಳಲ್ಲಿ ಸುರುಳಿಯಂತೆ ಕಾಣುವ ಬೋದುಗೆಗಳನ್ನು ತರಂಗ ಬೋದುಗೆಗಳೆಂದು ಕರೆಯುತ್ತಾರೆ.

ಬಾಗಿಲುವಾಡಗಳು :

ಚಾಲುಕ್ಯರು ನಿರ್ಮಿಸಿದ ಬಾಗಿಲುವಾಡಗಳಲ್ಲಿ ನದಿದೇವತೆಗಳ ಶಿಲ್ಪಗಳಿವೆ. ಕೆಲವು ಬಾಗಿಲುವಾಡಗಳು ಮಿಥುನಚಕ್ರ ಶಿಲ್ಪಗಳಿಂದ ಅಲಂಕೃತವಾಗಿವೆ. ಮಹಾಕೂಟದ ಮಹಾಲಿಂಗ ಗುಡಿಯ ಗರ್ಭಗೃಹದ ಬಾಗಿಲಿನ ಎಡಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳನ್ನು, ಮಿಥುನ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಬಾಗಿಲುವಾಡುಗಳ ಮೇಲ್ಭಾಗದಲ್ಲಿ ಕೆಲವು ಉಬ್ಬುಶಿಲ್ಪಗಳಿವೆ. ಅಲ್ಲಿರುವ ಮಧ್ಯಚೈತ್ಯದ ಕೂಡುವಿನಲ್ಲಿರುವ ಮೂರ್ತಿಯು ಆ ಗುಡಿಯ ಪ್ರಧಾನ ದೇವತೆಯ ಮೂರ್ತಿಯೇ ಆಗಿರುತ್ತದೆ.[26]

---

25 ಅದೇ.

26 ಡಾ. ರಾಜಶೇಖರ್, ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ.


ಜಂಬುಲಿಂಗ ಗುಡಿಯ ಮಂಟಪದ ಬಾಗಿಲುವಾಡದ ಮೇಲೆ 3 ಚೈತ್ಯ ಕೊಡುಗಳಿದ್ದು ಮಧ್ಯದಲ್ಲಿ ಶಿವ, ಉತ್ತರ ಮತ್ತು ದಕ್ಷಿಣದಲ್ಲಿ ವಿಷ್ಣು ಮತ್ತು ಬ್ರಹ್ಮ ಇದ್ದಾರೆ. ಈ ಶಿಲ್ಪಗಳ ಕ್ರಮದಲ್ಲಿಯೂ ಒಳಗೆ 3 ಗರ್ಭಗೃಹಗಳಿವೆ.

ಇಳಿಜಾರು ಮಾಳಿಗೆಗಳು :

ಇವರ ವಾಸ್ತುಶೈಲಿಯಲ್ಲಿ ಇವೂ ಕೂಡ ಸೇರಿವೆ. ಇವು ದೇವಾಲಯಗಳಲ್ಲಿ ಸಭಾಮಂಟಪವೇ ದೊಡ್ಡದು. ದೇವಾಲಯಗಳ ಕಂಬಗಳ ಸಾಲುಗಳು ಸಭಾಮಂಟಪವನ್ನು 3 ಭಾಗಗಳಾಗಿ ವಿಂಗಡಿಸುತ್ತವೆ. ಎಡ, ಬಲಗಳಲ್ಲಿರುವ ಭಾಗಗಳನ್ನು ಪಾರ್ಶ್ವ ಮಂಟಪಗಳೆಂದು ಮಧ್ಯದ ಭಾಗಗಳನ್ನು ಮಧ್ಯಮಂಟಪಗಳೆಂದು ಕರೆಯಬಹುದು. ಮಧ್ಯಮಂಟಪದ ಮಾಳಿಗೆಯು ಪಾರ್ಶ್ವ ಮಂಟಪಗಳ ಮಾಳಿಗೆಗಳಿಗಿಂತ ಎತ್ತರವಾಗಿದ್ದು ನೆಲಕ್ಕೆ ಸಮಾನಾಂತರವಾಗಿರುತ್ತವೆ. ಆದರೆ ಪಾರ್ಶ್ವಮಂಟಪಗಳ ಮಾಳಿಗೆಗಳು ಇಳಿಜಾರಾಗಿವೆ.

ಶಿಖರಗಳು :

ಬಾದಾಮಿಯ ಚಾಲುಕ್ಯರ ಕಾಲದ ಶಿಖರಗಳನ್ನು 3 ಪ್ರಕಾರಗಳಾಗಿ ವಿಂಗಡಿಸಬಹುದು.



ನಾಗರ ಶೈಲಿಯ ಶಿಖರವನ್ನು ಗುರುತಿಸಬೇಕಾದರೆ ನಾವು ಗರ್ಭಗೃಹದ ಮಾಡುವನ್ನು ಗಮನಿಸಿದಾಗ ನಮಗೆ ಪಿರಮಿಡ್ಡಿನಂತೆ ನಾಲ್ಕು ಮೈಗಳಿರುವ ಒಂದು ಶಿಖರ ಕಾಣಿಸುತ್ತದೆ. ತಳದಿಂದ ಸ್ತೂಪಿಯವರೆಗೆ ಚೌಕಾಕಾರವಿರುವ ದೇವಾಲಯವು ನಾಗರಶೈಲಿಯದು ಎಂದು ಗುರುತಿಸಬಹುದು.

ಬಾದಾಮಿಯಲ್ಲಿ ರಚಿತವಾದ ಈ ಶೈಲಿಯ ದೇವಾಲಯಗಳೆಂದರೆ ಮೇಲಣ ಶಿವಾಲಯ ಮತ್ತು ಭೂತನಾಥ ದೇವಾಲಯ.[27]

ಎ) ದ್ರಾವಿಡ ಶೈಲಿ :

ಶಿಖರದ ತಳಭಾಗವು ಚಚ್ಚೌಕವಾಗಿದ್ದರೂ ಅದರ ಮೇಲಿನ ಭಾಗ ಅಷ್ಟಕೋನವುಳ್ಳದ್ದಾಗಿದ್ದರೆ ಅದು ದ್ರಾವಿಡ ಶಿಖರ ಇಂತಹ ಶಿಖರಗಳಲ್ಲಿ ಮೆಟ್ಟಿಲುಗಳಂತೆ ಮೇಲಕ್ಕೆ ಹೋದಂತೆ ಕಿರಿದಾಗುವ ಅಂತಸ್ತುಗಳಿವೆ, ಅವುಗಳ ಮೇಲೆ ಸುಂದರ ಕೆತ್ತನೆಗಳಿರುವ ಶಿಲ್ಪಗಳನ್ನು ಕಾಣಬಹುದು. ಉದಾ : ಪಟ್ಟದಕಲ್ಲಿನ ವಿರೂಪಾಕ್ಷ ಹಾಗೂ ಮಲ್ಲಿಕಾರ್ಜುನ ದೇವಾಲಯ ಈ ಶೈಲಿಯ ಶಿಖರಗಳ ಮುಂಭಾಗದಲ್ಲಿ ಸುಖನಾಸವು ಚಾಚಿಕೊಂಡಿದ್ದು ಇದು ಔತರೇಯ ಪದ್ಧತಿಯ ರೇಖಾನಾಗರ ಶಿಖರದ ಪ್ರಧಾನ ಲಕ್ಷಣವಾಗಿದೆ.

ಬಿ) ವೇಸರ ಶೈಲಿ :

ಇದು ಸಿಪ್ಪೆ ತೆಗೆದ ಕಿತ್ತಳೆಹಣ್ಣಿನಂತೆ ವೃತ್ತಾಕಾರದಲ್ಲಿರುತ್ತದೆ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅವುಗಳು ವಾಗಾಡಾಂಬರ ಗೋಳಾಕಾರದ ಶಿಖರದಂತೆ ಕಾಣುತ್ತದೆ. ಒಳಭಾಗದಲ್ಲಿ ಬಾಗಿದ್ದು ತುದಿಯಲ್ಲಿ ಶಿಖರವು ಅಲಂಕೃತವಾಗಿದೆ (ಪರ್ಸಿಬ್ರೌನ್– ಟೆಂಪಲ್ ಆರ್ಕಿಟೆಕ್ಚರ್).

ಈ ಶೈಲಿಯು ದ್ರಾವಿಡ ಮತ್ತು ನಾಗರ ಶೈಲಿಯ ಮಿಶ್ರಣವಾಗಿದೆ. ಇದರ ನಿರ್ಮಾತೃ ಚಾಲುಕ್ಯರೇ ಆಗಿರುವುದರಿಂದ ಇದನ್ನು ಚಾಲುಕ್ಯ ಶೈಲಿ ಎಂತಲೂ ಕರೆಯುತ್ತಾರೆ. ಬಾದಾಮಿಯಲ್ಲಿ ಈ ಶೈಲಿಯ ಶಿಖರಗಳು ಕಂಡುಬರುವುದಿಲ್ಲ.

ಸಿ) ರೇಖಾನಗರ :

ಇದರ ಪ್ರಮುಖ ಲಕ್ಷಣವೆಂದರೆ ಬಾಗಿದ ರೇಖೆಯ ಆಕಾರ ಶಿಖರ ಮತ್ತು ಅದರ ಮೇಲೆ ಇರುವ ಕಳಶ. ಈ ಶಿಖರದ ವಿನ್ಯಾಸವು ಉತ್ತರಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಚಾಲುಕ್ಯರ ಸಂಗಮೇಶ್ವರ, ಮಹಾಲಿಂಗ ದೇವಾಲಯ, ಹುಚ್ಚಿಮಲ್ಲಿ ಗುಡಿ, ಚಕ್ರಗುಡಿ, ಪಾಪನಾಥ, ಗಳಗನಾಥನ ಶಿಖರಗಳು ಈ ಶೈಲಿಯ ಶಿಖರಗಳಾಗಿವೆ.

---

27 The Praise of Aihole, Badami, Pattadakal and Mahakoota, Margi Publications.

ಡಿ) ಫಂಸನಾ :

ಇದನ್ನು ಆಧುನಿಕ ಇತಿಹಾಸಜ್ಞರು ಕದಂಬ, ನಾಗರ ಶಿಖರ ಎಂದು ಗುರುತಿಸಿದ್ದಾರೆ. ಪ್ರಾಚೀನ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಇದರ ಹೆಸರು ಫಂಸನ ಎಂದೇ ಇದೆ.[28] ಈ ಶೈಲಿಯು ರೇಖಾನಗರ ಶಿಖರ ಶೈಲಿಯಿಂದ ಒಡಮೂಡಿದ ಇನ್ನೊಂದು ಪ್ರಭಾವ ಎನ್ನಬಹುದಾಗಿದೆ. ಉದಾಹರಣೆಗೆ : ಐಹೊಳೆಯ ಗಳಗನಾಥ.

ಮುಚ್ಚಿಗೆಗಳು :

ಸ್ತಂಭ ಮತ್ತು ಗೋಡೆಗಳನ್ನು ಮುಚ್ಚುವುದಕ್ಕೆ ಮುಚ್ಚಿಗೆ ಎಂದು ಕರೆಯುತ್ತಾರೆ. ಮಂಟಪದ ಆಯ ಕಿರಿದಾಗಿದ್ದು ಅದು ಗೋಡೆಗಳಿಂದಾವೃತವಾಗಿದ್ದರೆ ಅಥವಾ ಅದನ್ನು ನಾಲ್ಕು ಸ್ತಂಭಗಳು ಎತ್ತಿ ಹಿಡಿಯುವಂತಿದ್ದರೆ ಅವುಗಳನ್ನು ಹಾಸುಗಲ್ಲಿಗಳಿಂದ ಮುಚ್ಚಿದ್ದಾರೆ. ಮುಚ್ಚಿಗೆಯ ಒಳಮೈ ಬೋಳಾಗಿ ಕಾಣಿಸದಂತೆ ಅದರ ಮೇಲೆ ಚಿತ್ರಗಳನ್ನು ಕೆತ್ತಿದ್ದಾರೆ. ಬಾದಾಮಿ, ಐಹೊಳೆಯ ಗುಹೆಗಳ ಮುಚ್ಚಿಗೆಯಲ್ಲಿ ಅಪ್ಸರ ದಂಪತಿಗಳು, ಮಯೂರವಾಹನ, ಸ್ಕಂದ ಮೊದಲಾದ ಉಬ್ಬು ಕೆತ್ತನೆಯ ಶಿಲ್ಪಗಳಿವೆ. ಐಹೊಳೆಯ ಕೊಂತಿಗುಡಿಯು ಸುಮಾರು 20x10 ಅಡಿ ವಿಶಾಲವಾದ ಮುಚ್ಚಿಗೆಯುಳ್ಳದ್ದಾಗಿದ್ದು ಅದನ್ನು ಮೂರು ದೊಡ್ಡ ಹಾಸುಗಲ್ಲುಗಳಿಂದ ಮುಚ್ಚಿದ್ದಾರೆ. ಆ ಚಪ್ಪಡಿಗಲ್ಲುಗಳು ನೆಲದಲ್ಲಿರುವಾಗಲೇ ಒಂದೊಂದರ ಮೇಲೂ ಬ್ರಹ್ಮ, ವಿಷ್ಣು, ಮಹೇಶ್ವರರ ಉಬ್ಬು ಕೆತ್ತನೆಯನ್ನು ಮಾಡಿ ಅನಂತರ ಮುಚ್ಚಿರುವುದನ್ನು ಕಾಣಬಹುದು.

ಇಲ್ಲಿನ ಮೇಲ್ಛಾವಣಿಯನ್ನು ನೀಳಭುಜಗಳನ್ನು ಮಂಟಪದ ಚೌಕವನ್ನು ಮೂಲೆ ಮುರಿದ ಕಿರಿದಾಗಿ ಮಾಡಿ ಏರಿಸುವ ಕ್ರಮದಲ್ಲಿ ಅದನ್ನು ವರ್ತುಲಾಕಾರಕ್ಕೆ ಇಳಿಸಿ ಅವುಗಳನ್ನು ಬಾಣಲಿಯಂತೆಯೂ ನಿರ್ಮಿಸಿ ತಮಗೆ ಬೇಕಾದ ಆಕಾಶಕ್ಕೆ ಅವುಗಳನ್ನು ಕಡಿದು ತಮಗೆ ಬೇಕಾದ ಚಿತ್ರಗಳನ್ನು ಮಾಡಿ ಅನಂತರ ಮಂಟಪದ ಮೇಲೆ ಅವುಗಳನ್ನು ಜೋಡಿಸಿ ನೋಡುಗರ ಕಣ್ಣೂರೆಗೊಳಿಸಿದವರಲ್ಲಿ ಚಾಲುಕ್ಯರ ಮತ್ತರ ವಾಸ್ತುಶೈಲಿಯ ವಾಸ್ತುಶಿಲ್ಪ ತಜ್ಞರು ನಿಪುಣರು. ಉದಾಹರಣೆಗೆ : ಹಾಸುಗಲ್ಲಿನ ಹಾರಕೇಶ್ವರ ದೇವಾಲಯ, ಆನವಟ್ಟಿಯ ದೇವಾಲಯ ಮುಂತಾದವುಗಳು ಪ್ರಮುಖವಾದವುಗಳು. ಬಹಳ ಹಿಂದೆ ಕಸಿನ್ಸ್ 31 ಗುಡಿಗಳು ಇವೆ ಎಂದು

---

28 ಡಾ. ಶೀಲವಂತ ಪತ್ತಾರ, ಕಲೆಗಳು, ಪು.259.

ಗುರುತಿಸಿದರು. ವಿಚಿತ್ರವೆಂದರೆ ಬಹುಮಟ್ಟಿನದನ್ನು ವೈಯಕ್ತಿಕ ಆಸ್ತಿಗಳೆಂದು ಬಳಸಲಾಗಿದ್ದು ಅವು ವಾಸಸ್ಥಳಗಳಾಗಿದ್ದವು. ಗುಡಿಗಳ ಹೊರಮಂಟಪ, ದನದ ಕೊಟ್ಟಿಗೆ, ಒಳಗಿನ ಭಾಗ, ಮಲಗುವ ಮನೆ, ಗರ್ಭಗೃಹವು, ಪೂಜಾಗೃಹವೂ, ಅಡುಗೆಮನೆಯೂ ಆಗಿತ್ತು. ಆದರೆ ಈಗ ಸರ್ಕಾರದವರು ಅವುಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡಿದ್ದಾರೆ. ಗುಡಿಗಳು ದುರಸ್ತಿಯಾಗಿವೆ. ಐಹೊಳೆಯಲ್ಲಿ ಎಲ್ಲಿ ನೋಡಿದರಲ್ಲೂ ದೇವಾಲಯಗಳು ಇದೊಂದು ಕಲಾ ಶಾಲೆ ವಾಸ್ತುಶಿಲ್ಪದ ಬಯಲು ಪ್ರದರ್ಶನ ಶಾಲೆ ಎಂಬುದು ಅಕ್ಷರಶಃ ಸತ್ಯ.

ಎ. ಗುಹ ದೇವಾಲಯಗಳು :

ದೈತ್ಯಾಕಾರದ ಬಂಡೆಗಳನ್ನು ಕೊರೆದು ಸುಂದರವಾದ ಶಿಲ್ಪಗಳನ್ನು ನಿರ್ಮಿಸಿರುವುದೇ ಗುಹ ದೇವಾಲಯಗಳು. ಈ ಗುಹ ದೇವಾಲಯಗಳು ಚಾಲುಕ್ಯರ ಕಾಲದಲ್ಲಿ ಬಾದಾಮಿ, ಐಹೊಳೆಯಲ್ಲಿ ನಿರ್ಮಿತವಾದವು. ಈ ಗುಹಾಲಯಗಳ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದ ಕೀರ್ತಿ ಕೀರ್ತಿವರ್ಮನಿಗೆ ಸಲ್ಲುತ್ತದೆ. ಇವನು ಸ್ಥಾಪಿಸಿದ ಗುಹಾಲಯ ಕಾರ್ಯ ನಿರ್ಮಾಣವನ್ನು ಪುರ್ಣಗೊಳಿಸಿ ಬಾದಾಮಿಯ ಅತಿದೊಡ್ಡ ಚಾಲುಕ್ಯ ಗುಹೆಯನ್ನು ಉತ್ಕನನ ಮಾಡಿ ವಿಷ್ಣು ದೇವಾಲಯವನ್ನು ನಿರ್ಮಿಸಿದ ಕೀರ್ತಿ ಮಂಗಳೇಶನಿಗೆ ಸಲ್ಲುತ್ತದೆ. ಆದ್ದರಿಂದ ಇವನನ್ನು ಗುಹಾಲಯಗಳ ಪಿತಾಮಹ ಎಂದು ಕರೆಯಲಾಗಿದೆ. ಇವನು ಕೊರೆಯಿಸಿದ ಲಕ್ಷೀಶ ಗುಹದೇವಾಲಯವೇ ಪ್ರಪ್ರಥಮ ಗುಹಾಲಯ.[29]

ಗುಹಾಲಯಗಳನ್ನು ಬಾದಾಮಿಯ ಸ್ಥಳೀಯರು ಮೇಣಬಸದಿ ಎನ್ನುತ್ತಾರೆ. ಕಾರಣ ಇವು ನೆಲಮಟ್ಟಕ್ಕಿಂತ ಹೆಚ್ಚು ಎತ್ತರವಿರುವುದರಿಂದ ಮೇಗಣ ಬಸದಿಗಳು ಎನಿಸಿದ್ದು ಕಾಲನಂತರದಲ್ಲಿ ಮಣ ಬಸದಿ ಎಂದು ತರ್ಜುಮೆಗೊಂಡವು.[30] ಈ ಗುಹಾಲಯಗಳು ಹಲವು ಸುಂದರ ಕೆತ್ತನೆಗಳು, ಮೂರ್ತಿ ಶಿಲ್ಪ, ಉಬ್ಬು ಶಿಲ್ಪ ಮತ್ತು ವರ್ಣಚಿತ್ರಗಳಿಂದ ಕೂಡಿವೆ. ಇವರ ಗುಹಾಲಯಗಳ ವರ್ಣಚಿತ್ರಗಳು ಶೋಧಿಸಿದ ಕೀರ್ತಿ 'ಸ್ಟೇಲಾ ಕ್ಯಾಮರೀಳ'ರವರಿಗೆ ಸಲ್ಲುತ್ತದೆ. ಗುಹಾಲಯಗಳ ಚಿತ್ರಕಲೆಗಳ ಬಗ್ಗೆ ಶಿವರಾಮಕಾರಂತರ ಕರ್ನಾಟಕ ಚಿತ್ರಕಲೆ ತಿಳಿಸುತ್ತದೆ.

---

29 K.R. Srinivas, Cave Temples of the Pallavas, P.62.

30 ಡಾ. ಶೀಲಕಾಂತ ಪತ್ತಾರ, ಬಾದಾಮಿ, ಪು.27.

I. ಬಾದಾಮಿಯ ಗುಹಾದೇವಾಲಯಗಳು :

ಇಂದಿನ ಸಾಮಾನ್ಯ ಹಳ್ಳಿಯಾದ ಬಾದಾಮಿಯು 6ನೇ ಶತಮಾನದಿಂದ 8ನೇ ಶತಮಾನದವರೆಗೆ ಒಂದು ಭವ್ಯ ಸಾಮ್ರಾಜ್ಯವಾಗಿ ಒಂದು ಕಲೆಯ ಆಗರವಾಗಿ ಮೆರೆದಿತ್ತು. ಭೌಗೋಳಿಕವಾಗಿ ಒಣಹವೆಯಿಂದ ಕೂಡಿದ ಮತ್ತು ಮಳೆಯನ್ನು ಜೀವನದ ಆಧಾರವಾಗಿ ನಂಬಿರುವ ಜನರಿಂದ ಆವೃತವಾಗಿದೆ. ಇದು ಕೆಂಪು ಮರಳಗಲ್ಲಿನಿಂದ ಕೂಡಿದ ದೈತ್ಯಕಾರದ ಗುಹೆಗಳನ್ನು ಹೊಂದಿವೆ. ಈ ಕಲ್ಲುಗಳು ಮೃದುವಾಗಿದ್ದು ಭಾವಪೂರ್ಣವಾದ ಶಿಲ್ಪಗಳ ನಿರ್ಮಾಣಕ್ಕೆ ಸಹಾಯಕವಾಗಿವೆ. ಬಾದಾಮಿಯ ಪ್ರಮುಖ ಆಕರ್ಷಣೆ ಎಂದರೆ ಗುಹಾಂತರ ದೇವಾಲಯಗಳೇ ಆಗಿದೆ. ಭೂತನಾಥ ದೇವಾಲಯದ ಉತ್ತರದ ಕಡೆಗಿರುವ ಎತ್ತರ ಕಲ್ಲುಗುಡ್ಡವನ್ನು ಕೊರೆದು ಬಾದಾಮಿಯನ್ನು ನಿರ್ಮಿಸಲಾಗಿದೆ. ಎದುರುಗಿರುವ ಕೊಳಕ್ಕೆ ಕಟ್ಟಿರುವ ಕಲ್ಲುಗೋಡೆಯೋ ಎಂಬಂತಿರುವ ಒಂದೇ ಕಲ್ಲಿನಿಂದ 6ನೇ ಶತಮಾನದಲ್ಲಿ ಚಾಲುಕ್ಯರಿಂದ ನಿರ್ಮಿತವಾದ ಒಂದು ಕೃತಕ ಕೆರೆಯಿದ್ದು ಅಲ್ಲಿ ನಿಂತು ನೋಡಿದರೆ ಆ ಗುಹೆಗಳ ಸಾಲು ಮನಸೂರೆಗೊಳ್ಳುವಂತೆ ಮಾಡುತ್ತಿದೆ. ಈ ಜಾಗದಲ್ಲಿ ಉತ್ಖನನ ಕಾರ್ಯವನ್ನು ಕೈಗೊಳ್ಳಲಾಗಿದೆ. ಅಲ್ಲಿಂದ ಹೊರ ತೆಗೆಯಲಾದ ದಕ್ಷಿಣ ಕೋಟೆಯು ಇವರ ಕಾಲದ ಗುಹಾಂತರ ದೇವಾಲಯದ ಮಾಹಿತಿಯನ್ನು ನೀಡುತ್ತದೆ.[31]

ಇಲ್ಲಿ ನಾಲ್ಕು ಗುಹೆಗಳು ಕಂಡುಬರುತ್ತಿದೆ. ಅವುಗಳಲ್ಲಿ 1 ಶೈವ, 2 ಮತ್ತು 3ನೇಯದು ವೈಷ್ಣವ ಗುಹಾಲಯ, 4ನೇಯದು ಜೈನ ಗುಹೆ ಇವುಗಳಲ್ಲಿ 3ನೇ ಗುಹೆ ಸಾಮಾನ್ಯವಾದ ಹೊರನೋಟ ಮತ್ತು ವಿನ್ಯಾಸಗಳಲ್ಲಿ ಈ ಗುಹೆಗಳೆಲ್ಲವು ಒಂದೇ ರೀತಿಯಲ್ಲಿದ್ದು ವಿಸ್ತಾರದಲ್ಲಿ ಮಾತ್ರ ಹೆಚ್ಚು ಕಡಿಮೆ ಇರಬಹುದು. ಇವುಗಳಲ್ಲಿ ಒಂದೊಂದರಲ್ಲಿ 3 ಮುಖ್ಯ ವಿಭಾಗಗಳನ್ನು ಕಾಣುತ್ತೇವೆ. ಅವುಗಳ ಮೆಟ್ಟಿಲುಗಳನ್ನು ಏರಿ ಹೋಗುತ್ತಿದ್ದಂತೆ ಮೊದಲು ಸಿಗುವುದು ಕಂಬಗಳಿಂದ ಕೂಡಿದ ಮುಖಮಂಟಪ ಅದನ್ನು ದಾಟಿದರೆ ಒಂದು ದೊಡ್ಡಮಂಟಪ ಅವರ ಕೊನೆಯಲ್ಲಿ ಎದುರಿಗೆ ಒಂದು ಚಿಕ್ಕ ಗರ್ಭಗುಹ ಅದು ಸ್ವಲ್ಪ ಎತ್ತರದಲ್ಲಿದ್ದು ರಂಗಮಂಟಪದಿಂದ ಮೆಟ್ಟಿಲುಗಳನ್ನು ಏರಿ ಪ್ರವೇಶಿಸುವಂತಿರುತ್ತದೆ. ಒಟ್ಟಾರೆ ಇವರ ಕಾಲದ ಗುಹಾಂತರ ದೇವಾಲಯದ ನಿರ್ಮಾಣವು ಬಂಡೆಗಳನ್ನು ಕೊರೆದು ಆಕಾಶವನ್ನು ನಿರ್ಮಿಸುವ ಕಲೆ ಎನ್ನಬಹುದು. ಇಲ್ಲಿನ 3 ಗುಹಾಲಯದಲ್ಲಿ

---

31 The Praise of A.B.M.P., Margi Publications.

ಒಂದು ಮೊಗಸಾಲೆ ಕಂಬಗಳನ್ನು ಮೊಗಸಾಲೆ ಇದೆ. ಜೈನ ಗುಹೆಗಳಲ್ಲಿ ಕಂಬಗಳ ಹಜಾರ ಇಲ್ಲ. ಅದಕ್ಕೆ ಬದುಕಂಬಗಳು ಇಲ್ಲ. ಆಯತಾಕಾರದ ಮುಖಮಂಟಪವಿದೆ. ಇಲ್ಲಿನ ಎಲ್ಲ ಗುಹೆಗಳು ನಿರಂಧಾರ ಮಾದರಿಯವು.[32] ಈ ಗುಹಾಲಯಗಳಿಗೆ ವರ್ಷದ ಯಾವ ಕಾಲದಲ್ಲಿಯೂ ಸೂರ್ಯನ ಕಿರಣವು ನೇರವಾಗಿ ಪ್ರವೇಶಿಸಲಾರದು.

ಮರಳಿನ ಚೆಲುವು ವಿಶೇಷವಾಗಿದೆ. ಅವುಗಳ ಮೇಲೆ ಬಿಸಿಲು ಬೀಳುವಾಗ ಪಾಡಲ, ಹಳದಿ, ಗೋಪಿ, ಕಂದು, ನೇರಳೆ ಮೊದಲಾದ ಹಲವು ಛಾಯೆಗಳು ಕುಣಿದಾಡುತ್ತಿರುತ್ತವೆ.[33] ಇದರಲ್ಲಿ ಇನ್ನೊಂದು ವಿಶೇಷವೆಂದರೆ ಭಾದ ಪ್ರತಿಮೆಯುಳ್ಳ ನೈಸರ್ಗಿಕ ಗುಹೆ ಇರುವುದು ಕಂಡುಬರುತ್ತದೆ.[34] ಈ ಗುಹಾಲಯ ಇರುವ ಬೆಟ್ಟದ ಅಡಿಯಲ್ಲಿ ವಿಶಾಲವಾದ ಅಗಸ್ತ್ಯ ತೀರ್ಥವಿದೆ. ಇಲ್ಲಿನ ನಾಲ್ಕೂ ಗುಹಾಲಯಗಳನ್ನು ದಕ್ಷಿಣ ಗುಡ್ಡದ ಉತ್ತರ ಬದಿಯಲ್ಲಿ ಕೊರೆಯಲಾಗಿದ್ದು ಎಲ್ಲಾ ಗುಹಾಲಯಗಳು ಹೆಚ್ಚು ಕಡಿಮೆ ಉತ್ತರಾಭಿಮುಖವಾಗಿವೆ.

1. ಒಂದನೇ ಗುಹೆ :

ಸುಮಾರು 40 ರಿಂದ 42 ಮೆಟ್ಟಿಲುಗಳನ್ನು ಏರಿ ಹೋಗುತ್ತಿದ್ದಂತೆ ಮೊದಲಿಗೆ ಕಾಣಿಸುವುದೇ ಶೈವ ಗುಹೆ. ಈ ಗುಹಾಲಯವು ಹೊರಗಡೆಯಿಂದ ನೋಡಿದರೆ ಸಣ್ಣದಾಗಿ ಭಾಸವಾಗುತ್ತದೆ. ಅದರ ಒಳಗೆ ಹೋಗಲು ಮುಂಭಾಗದಲ್ಲಿ ಮೆಟ್ಟಿಲುಗಳ ಸರಣಿಯಿದೆ. ವಿವಿಧ ಭಂಗಿಗಳಲ್ಲಿರುವ ಗಣಗಳಿಂದ ಅಲಂಕೃತವಾದ ದ್ವಾರದ ಎರಡು ಕಡೆಗಳಲ್ಲೂ ಕಂಡುಬರುತ್ತಿದೆ. ಈ ಗುಹೆ ಮುಂಭಾಗದ ಒಳಗೆ ಇರುವ ಸಜ್ಜೆಗಳು ಶಿವ–ಪಾರ್ವತಿಯರ ವಿವಾಹವನ್ನು ಚಿತ್ರಿಸುವ ಸಣ್ಣ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿದೆ. ಮೊದಲನೆ ಗುಹೆಯಲ್ಲಿ ಸರಳ ಅಲಂಕಾರವಿರುವುದು ಕಂಡುಬರುತ್ತದೆ. ಇದರ ಸೂರು ಸರಳವಾಗಿದೆ. ಇಲ್ಲಿರುವ ಕಟ್ಟಿದ ದೇವಾಲಯವನ್ನೆ ಹೋಲುವಂತೆ ಕಂಬಗಳು ಅದರ ಬೋದಿಗೆಗಳು ಚಾಚುಪೀಠಗಳು ಮೇಲ್ಛಾವಣಿ ಶಿಲ್ಪಗಳು ಮನಸೂರೆಗೊಳ್ಳುತ್ತವೆ. ಈ ಗುಹೆಯ ಹೊರಗೆ ನಿಂತು ತಲೆ ಎತ್ತಿ ನೋಡಿದರೆ ಅದರ ಛಾವಣಿಯ ಮೇಲೆ ನೂರಾರು ಅಟ್ಟಗಳ ಕಲ್ಲುಗುಡ್ಡ

---

32 ಅ.ಸುಂದರ, ಕರ್ನಾಟಕ ಸಂಪುಟ ಚರಿತ್ರೆ, ಪು.491.

33 ಡಾ. ಶಿವರಾಮ ಕಾರಂತ, ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪು.10.

34 ಅದೇ.

ಬೆಳೆದು ನಿಂತಿರುವುದು ಕಾಣುತ್ತದೆ. ಮೇಣಕ್ಕಿಂತಲೂ ಸೂಕ್ಷ್ಮ ಶಿಲ್ಪಕಲೆಗಳ ನಿರ್ಮಾಣವನ್ನು ನೋಡಿದರೆ ಅವರ ಕಲಾಪ್ರೌಢಿಮೆಯು ಅರಿವಾಗುತ್ತದೆ. ಇಲ್ಲಿನ ಅತಿ ಗಮನಾರ್ಹ ಶಿಲ್ಪಗಳೆಂದರೆ ನಟರಾಜ, ಹರಿಹರ, ಅರ್ಧನಾರೀಶ್ವರ ಸುಂದರವಾದ ಶಿಲ್ಪಕೃತಿಗಳು ಚೌಕಾಕಾರದ ಮಂಟಪಗಳಲ್ಲಿ ಕಂಡುಬರುತ್ತವೆ. ಅರ್ಧನಾರೀಶ್ವರನಿಗೆ ಪುಷ್ಪಮಾಲೆಯನ್ನು ಅರ್ಪಿಸಲು ದಂಪತಿಗಳು ತೇಲಿಬರುತ್ತಿದ್ದಾರೆ ಇಲ್ಲಿರುವ ಅರ್ಧನಾರೀಶ್ವರನ ಶಿಲ್ಪ ಬಹಳ ಕುಶಲತೆಯಿಂದ ಕೂಡಿದೆ. ಇದರ ಬಲಭಾಗ ಶಿವನ ರೂಪದಿಂದ, ಎಡಭಾಗ ಪಾರ್ವತಿಯ ರೂಪದಿಂದ ಕೂಡಿದೆ. ಇದರ ಎತ್ತರ 223 ಸೆಂ.ಮೀ. ಇಲ್ಲಿ ನೃತ್ಯ ಮಾಡುತ್ತಿರುವ ನಟರಾಜನಿಗೆ 18 ಕೈಗಳಿದ್ದು ಪ್ರತಿ ಕೈಯಲ್ಲೂ ಒಂದಲ್ಲಾ ಒಂದು ಆಯುಧ ಹಿಡಿದಿದ್ದಾನೆ. ಈ ವಿಗ್ರಹವು ಪಶ್ಚಿಮ ಗೋಡೆಯಲ್ಲಿ ಕಂಗೊಳಿಸುತ್ತಿದೆ. ಈ ನಟರಾಜನ ನಾಟ್ಯ ಭಂಗಿಯು ಭಾವಪೂರ್ಣವೂ ಆಗಿರುವಂತೆ ಕಂಡುಬರುತ್ತದೆ. ಇದರ ಎತ್ತರ 152 ಸೆಂ.ಮೀ. ಇವನ 18 ಕೈಗಳಲ್ಲಿ ಹಾವು, ಢಮರು, ಜಪಮಾಲೆ, ತಂತಿವಾದ್ಯ, ಪಾಶ, ತ್ರಿಶೂಲ, ಪರಶು, ವೀಣೆ, ಬೆಂಕಿ ಕಂಡುಬರುತ್ತದೆ.[35]

ಇವನ ಈ ನರ್ತನದಲ್ಲಿ ಅವನ ಪರಿವಾರವು ಪಾಲ್ಗೊಂಡಿದ್ದು ಎಡಗಡೆ ಸಂತಸದಲ್ಲಿ ಕುಣಿಯುವ ಗಣೇಶ, ಅವನ ಬದಿಗೆ ಷಣ್ಮುಖ, ಮೃದಂಗವಾದಕ ಇದ್ದರೆ ಇನ್ನೊಂದು ಬದಿಗೆ ನಂದಿ ಇದೆ. ಇಲ್ಲಿ ನಟರಾಜನ ಭಂಗಿ, ನಗುಮೊಗ ಮತ್ತು ಜಡೆ ಕಣ್ಮನ ತಣಿಸುತ್ತವೆ.[36] ಈ ಗುಹೆಯ ಗರ್ಭಗುಡಿಯಾದ ಬಾಗಿಲುವಾಡದ ಮೇಲೆ ದಳಗಳು, ಹೂವಿನ ವಿನ್ಯಾಸಗಳು ಬಹುಕೋಳವೆಯಾಕಾರದ ಗೋಡೆ ಕಂಬಗಳು ಚೌಕಾಕೃತಿಯ ಕಾಂಡಭಾಗ ಮತ್ತು ಗುಲಾಬಿಯ ಸಾಲು ಕೆತ್ತಲ್ಪಟ್ಟಿದೆ. ವಿವಿಧ ಪಟ್ಟಿಕೆಗಳಲ್ಲಿ ಗುಲಾಬಿ ಪಟ್ಟಿಕೆ ಮಾತ್ರ ಬಾಗಿಲಿನ ಮೂರು ಪಕ್ಕಗಳಲ್ಲಿ ಹಾಯುತ್ತದೆ. ಬಾಗಿಲ ಚೌಕಟ್ಟಿನ ಮೇಲೆ ಯಾವುದೇ ರೀತಿಯು ಮೂರ್ತಿ ಶಿಲ್ಪಗಳಲ್ಲಿ[37] ಇಲ್ಲಿನ ಗರ್ಭಗುಹದ ಬಾಗಿಲಿನ ಆಚಾಚೆ ಇರುವ ದೊಡ್ಡ ಗೋಡೆಗಂಬಗಳ ಮೇಲೆ ಶಂಖನಿಧಿ ಮತ್ತು ಪಧ್ಮನಿಧಿಗಳನ್ನು ಕಟ್ಟಲಾಗಿದೆ. ಇಲ್ಲಿರುವ ಇತರ ವಿಗ್ರಹಗಳಲ್ಲಿ ಹರಿಹರನದು ಮತ್ತೊಂದು ಸುಂದರ ಶಿಲ್ಪ, ಇದರ ಬಲಭಾಗವು ಶಿವರೂಪವಾಗಿದ್ದು ಪರಶು, ನಾಗ, ನಂದಿ ಮತ್ತು ತ್ರಿಶೂಲಗಳಿಂದ ಸುಲಭವಾಗಿ ಗುರುತಿಸಬಹುದು. ಎಡಭಾಗವು ವಿಷ್ಣು

---

35 ಪಾರ್ಸಿಬ್ರೋನ್, ಇಂಡಿಯನ್ ಆರ್ಕಿಟೆಕ್ಚರ್.

36 ಡಾ. ಶೀಲಕಾಂತ ಪತ್ತಾರ, ಬಾದಾಮಿ ಶಿಲ್ಪಕಾಶಿ.

37 ಅದೇ.

ರೂಪವಾಗಿದ್ದು ಶಂಖ, ಚಕ್ರ, ಗಧ, ಉಧ್ಮಗಳಿಂದ ಅಲಂಕೃತವಾಗಿದ್ದು ಕೆಳಗಡೆ ಗರುಡನ ಶಿಲ್ಪ ಇದೆ. ಪಾರ್ವತಿ ಮತ್ತು ಲಕ್ಷ್ಮಿಯರು ಎರಡೂ ಕಡೆ ನಿಂತಿದ್ದಾರೆ. ಮತ್ತೊಂದು ವಿಶಿಷ್ಟ ಶಿಲ್ಪವೆಂದರೆ ಮಹಿಷಾಸುರ ಮರ್ಧಿನಿ ಇದು ನಟರಾಜನ ಬದಿಗೆ ಅಂದರೆ ಸ್ವಲ್ಪ ಒಳಗೆ ಹೋದರೆ ಕಾಣಸಿಗುತ್ತದೆ. ಈಕೆ ರಾಕ್ಷಸನನ್ನು ಕೊಲ್ಲುವ ಭಂಗಿಯಲ್ಲಿದೆ. ಕೋಣ ರೂಪಿ ರಾಕ್ಷಸನನ್ನು ಅವಳು ತ್ರಿಶೂಲದಿಂದ ಕೊಲ್ಲುತ್ತಿದ್ದಾಳೆ. ಅದನ್ನು ಕಂಡು ಆಕೆಗೆ ವಿಜಯಮಾಲೆಯನ್ನು ಅರ್ಪಿಸಲು ಗಂಧರ್ವರು ಆಕಾಶಮಾರ್ಗದಲ್ಲಿ ತೇಲುತ್ತಾ ಬರುತ್ತಿದ್ದಾರೆ. ದೇವಿಯ ಪೀಠದ ಗನ ಸಮೂಹ ಇದೆ. ಬಲಗಡೆ ನವಿಲಿನ ಮೇಲೆ ಕುಳಿತ ಷಣ್ಮುಖ, ಎಡಗಡೆ ಗಣೇಶ ಇದ್ದಾರೆ. ಗರ್ಭಗುಡಿಯ ಪೀಠದ ಮೇಲೆ ಶಿವಲಿಂಗ ಇದೆ. ಮೊಗಸಾಲೆಯ ಹೊರಗೆ ಎಂದರೆ ಹರಿಹರ ಮೂರ್ತಿಯ ಬಲಕ್ಕೈ ತ್ರಿಶೂಲ ಹಿಡಿದ ದ್ವಾರಪಾಲಕನ ಶಿಲ್ಪವಿದೆ. ದ್ವಾರಪಾಲಕನ ಮೇಲಗಡೆ ನಂದಿಯ ಮೇಲೆ ಕುಳಿತ ಶಿವಪಾರ್ವತಿಯ ಉಬ್ಬುಶಿಲ್ಪವಿದೆ. ಮೊಗಸಾಲೆಯ ಮಧ್ಯೆ 5 ಹೆಡೆಯ ನಾಗ ಮತ್ತು ಸುತ್ತ ಪಕ್ಷಿ–ಪ್ರಾಣಿಗಳು ಇವೆ. ಹರಿಹರ ಮೂರ್ತಿ ಇದ್ದ ಎಡಕತ್ತಿನ ಮೇಲೆ ಹಾರಾಡುವ ಗಂಧರ್ವ ಜೋಡಿ ಇದೆ. ಎಡಗಡೆಯ ಆಧಾರಪೀಠದ ಮೇಲೆ ಕುಬ್ಜ ಗಣ ಇದೆ. ಹಾಡುವ, ಕುಣಿಯುತ್ತಿರುವ ಶಿಲ್ಪ. ಕಹಳೆ, ಶಂಖ, ಕೊಳಲುಗಳು ನಯನ ಮನೋಹರವಾಗಿದೆ. ಇಲ್ಲಿನ ಕಂಬಗಳಲ್ಲಿ ನರಸಿಂಹ, ಗರುಡ, ಪ್ರಾಹ್ಲಾದ, ಶಿವಲಿಂಗ, ಮಿಥುನ, ಯೋಗಿ ಇತ್ಯಾದಿ ಶಿಲ್ಪಗಳಿವೆ ಈ ಗುಹಾಲಯದ ಕಾಲವನ್ನು ಸ್ಪಷ್ಟವಾಗಿ ನಿರ್ಧರಿಸುವ ಶಾಸನಗಳಿಲ್ಲ. ಆದರೆ ಶಿಲ್ಪ ಶೈಲಿಯ ಹಾಗೂ 3ನೇ ಗುಹಾಲಯದಲ್ಲಿರುವ ಮಂಗಳೇಶನ ಶಾಸನದ ಆಧಾರದ ಮೇಲೆ ಈ ಗುಹಾಲಯಗಳ ರಚನೆಯ ಕಾಲ 6ನೇ ಶತಮಾನವಿರಬಹುದೆಂದು ತಿಳಿಯಲಾಗಿದೆ.[38]

ರಮೇಶ್‌ರವರು, ಮಂಗಳೇಶನು ಸ್ವತಃ ತನ್ನನ್ನು ತಾನೇ ನಟರಾಜನಿಗೆ ಹೋಲಿಸಿ ಪ್ರತಿಮೆಯಲ್ಲಿ ರೂಪಿಸಿಕೊಂಡಿದ್ದಾನೆ ಎಂದಿದ್ದಾರೆ. ಇಲ್ಲಿನ ಸರಳ ಅಲಂಕಾರವುಳ್ಳ ಬಾಗಿಲುವಾಡಗಳನ್ನು ನೋಡಿ ಬಾದಾಮಿಯಲ್ಲಿ ನಿರ್ಮಾಣವಾದ ಮೊದಲ ಗುಹಾಲಯವೆಂದು ಸರಳವಾಗಿ ಊಹಿಸಬಹುದು.[39]

---

38 ಡಾ. ತಿಪ್ಪೇರುದ್ರಸ್ವಾಮಿ, ಚಾಲುಕ್ಯ ಸಾಮ್ರಾಜ್ಯದ ಸಾಂಸ್ಕೃತಿಕ ಪರಂಪರೆ.

39 K.V. Ramesh, Chalukyas of Vatapi.

2. 2ನೇ ಗುಹೆ :

ಮೊದಲ ಗುಹೆಯಿಂದ ಬಲಕ್ಕೆ ಸುಮಾರು 65 ಮೆಟ್ಟಿಲುಗಳನ್ನು ಏರಿ ಹೋದರೆ ಕಾಣುವ ಗುಹೆಯೇ ವೈಷ್ಣವ ಗುಹೆ. ಇದು 578ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು ಎಂದು ತಿಳಿಯಲು ಶಾಸನ ಆಧಾರ ಇದೆ.[40] ಈ ಗುಹೆ ಅಲ್ಲಿನ ಎಲ್ಲ ಗುಹೆಗಳಿಗಿಂತ ಪ್ರಾಚೀನ ಎಂದು ಪುರಾತನಗಳು ಹೇಳುವುದರಿಂದ ಇದು 6ನೇ ಶತಮಾನದ ಮೊದಲ ದಶಕದಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಾಧ್ಯತೆ ಇದೆ. ಸುಮಾರು 33 ಅಡಿ ಅಗಲದ ಈ ಗುಹೆಯ ಮುಂದೆಯೂ ಒಂದು ಚಿಕ್ಕ, ನೇರವಾದ ಜಗುಲಿ ಇದೆ. ಇದರ ಕೆಳಗೆ ಹಲಗೆಗಲ್ಲಿನ ಮೇಲೆ ಕುಬ್ಜ ಆಕಾರದ ಶಿವಗಣಗಳನ್ನು ಕೆತ್ತಲಾಗಿದೆ. ಅವು ವಿಚಿತ್ರ ಆಕಾರಗಳಲ್ಲಿ ಇದೆ. ಬಲಗೈಯಲ್ಲಿ ತಂಬಿಗೆ ಇಟ್ಟುಕೊಂಡು ಒಂದು ಗಣ ಕುಣಿಯುತ್ತಿದ್ದರೆ, ಇನ್ನೊಂದು ಲಂಗೋಟಿಯನ್ನು ಕೈಯಲ್ಲಿ ಹಿಡಿದು ಓಡುತ್ತಿದೆ. ಒಂದು ಕೊಂಬನ್ನು ಊದುತ್ತಿದ್ದರೆ ತಲೆಯನ್ನು ಕೆದರಿಕೊಂಡು ನರ್ತಿಸುತ್ತಿದೆ. ಮಗದೊಂದಕ್ಕೆ 4 ಕೈಗಳು ಜಗಲಿಯ ಒಂದೊಂದು ಬದಿಯಲ್ಲಿ ದ್ವಾರಪಾಲಕರ ಹುಟ್ಟು ಶಿಲ್ಪಗಳು ಎಡಗೈಯಲ್ಲಿ ದುಂಡಾದ ವಸ್ತುವೊಂದನ್ನು ಹಿಡಿದಿರುವ ಒಬ್ಬನ ಬಲಗೈ ವಸ್ತ್ರದ ಗಂಟಿನ ಮೇಲೆ ಇದೆ. ಇವನು ಆಭರಣಗಳನ್ನು ಧರಿಸಿ ಕಿರೀಟಧಾರಿಯಾಗಿದ್ದಾನೆ. ಇವನ ಎಡಗಡೆ ಪುಷ್ಪವೊಂದನ್ನು ಹಿಡಿದ ಒಬ್ಬ ಸ್ತ್ರೀ ಇನ್ನೊಬ್ಬ ದ್ವಾರಪಾಲಕ ಚಿತ್ರಿಸಲ್ಪಟ್ಟಿದ್ದಾನೆ.

ಮುಖಮಂಟಪದ 2 ಗೋಡೆಯಲ್ಲೂ ವರಾಹ ಅವತಾರವನ್ನೂ, ವಾಮನ ಅವತಾರವನ್ನೂ ನಿರೂಪಿಸುವ ದೊಡ್ಡ ವಿಗ್ರಹ ಇದೆ.[41] ವರಾಹ 'ಪ್ರತ್ಯಲಿಡಾ' ಈ ಮೂರ್ತಿಯು ಭವ್ಯವೂ, ಭಾವಪೂರ್ಣವೂ ಆಗಿದೆ. ಚಾಲುಕ್ಯದ ರಾಜ್ಯಲಾಂಛನ ವರಹ. ಅದನ್ನು ಮನುಷ್ಯನ ದೇಹದಂತೆ ಗುರುತಿಸಿದ್ದು ಮುಖ ಮಾತ್ರ ವರಹದ್ದು. ಇದರ ಎತ್ತರ 219 ಸೆಂ.ಮೀ. ಇವನ 4 ಕೈಗಳಲ್ಲಿದ್ದು 2 ಕೈಗಳಲ್ಲಿ ಶಂಖ–ಚಕ್ರವಿದ್ದು ಒಂದು ಎಡಗೈಯಲ್ಲಿ ಕಮಲದ ಹೂವಿದ್ದು ಆ ಕಮಲದ ಪೀಠದ ಮೇಲೆ ಪಾತಾಳದಿಂದ ರಕ್ಷಿಸಿದ್ದು ಭೂದೇವಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ವರಹ ಮುಖದಲ್ಲಿ ಕೋರೆಯ ಹಲ್ಲಿದೆ. ವರಹನಿಗೆ ತನ್ನ ಪರಿವಾರದೊಂದಿಗೆ ಹೊಂದಿಸುತ್ತಿರುವ ವಿಶೇಷನ ಚಿತ್ರವನ್ನು ಈ ಮೂರ್ತಿಯ ಕೆಳಗೆ ಕೊರೆಯಲಾಗಿದೆ.[42]

---

40 ಬಿ.ಆರ್. ಗೋಪಾಲ್, ಕರ್ನಾಟಕದ ಕಲೆಗಳು, ಪು.47.

41 ಅದೇ.

42 ಚಾಲುಕ್ಯ ಶಿಲ್ಪಕಲೆ, ಪು.52.

ಈ ಗುಹೆಯ ಮುಂಭಾಗದ 4 ಕಂಬಗಳು ಮತ್ತು 2 ಗೋಡೆ ಕಂಬಗಳ ಮೇಲೆ ಒಬ್ಬ 5 ಹಾಸುಗಲ್ಲುಗಳು ಹಿಂಬದಿಯ 2 ಕಂಬಗಳು ಹಾಗೇ 4 ಗೋಡೆಗಳ ಮೇಲೆ ಇನ್ನು ಐದು ಹಾಸುಗಲ್ಲುಗಳು ಪ್ರತಿಯೊಂದರ ಮುಖದಲ್ಲೂ ನಿಮ್ನ ಫಲಕವಿದ್ದು ಎರಡೂ ಕಡೆ ಗೋಡೆಗಂಬಗಳಿವೆ. ಕೆಳಗಡೆ ಕಮಲದ ದಳಗಳ ಸಾಲು, ಅಮೃತ ಮಂಥನ, ಮಹಿಷಾಸುರ ಮರ್ಧಿನಿ, ಕೃಷ್ಣನು ಕಂಸನನ್ನು ಕೊಲ್ಲುವವರೆಗಿನ ಬಾಲಲೀಲೆಗಳು ಇಲ್ಲಿನ ಪ್ರಮುಖ ಚಿತ್ರಕಲೆಗಳಾಗಿವೆ. ಮಂಟಪದ ಛಾವಣಿ 5 ಅಂಕಗಳಾಗಿ ವಿಂಗಡಿಸಿದ್ದು ಅವುಗಳ ಮುಂದುಗಡೆ ಮೊಸಳೆಯ ಮುಖದಿಂದ ಹೊರಬರುತ್ತಿರುವ ಸಿಂಹಗಳ ಆಕಾರದ ಚಾಚುಪೀಠಗಳಿವೆ. ಛಾವಣಿಯ ಎಡ ಅಂಕಣದಲ್ಲಿ ಚದುರಾಕಾರದ ನಂದ್ಯಾವರ್ತ. 'C' ಚಿಹ್ನೆ ನಾಲ್ಕು ಮೂಲೆಗಳೇ 4 ಸ್ವಸ್ತಿಕಗಳು ಮತ್ತು ಮಧ್ಯದ ವಿಸ್ತಾರವಾದ ಅಂಕಣದಲ್ಲಿ ಒಂದರ ಒಳಗೆ ಒಂದರಂತೆ 3 ಚಕ್ರಗಳಿದ್ದು 3ನೇ ಚೌಕದಲ್ಲಿ ಮೀನುರೂಪದ 16 ಹರೆಗಳ ಒಂದು ಚಕ್ರ ಒಂದು ಕಮಲ ಅದರ ಗುಂಭವಾಗಿರುವಂತೆ ಬಿಡಿಸಿದೆ. ಇದು ವಿಷ್ಣುವಿನ ಚಕ್ರವನ್ನು ಪ್ರತಿನಿಧಿಸುತ್ತದೆ. ಇದರ ಬಲಗಡೆಯ ಸಂಧಾವರ್ತ ಚಿಹ್ನೆಯ ಅಂಕಣದಲ್ಲಿನ ಸ್ವಸ್ತಿಕಗಳು ಮೂಲೆಯಲ್ಲಿರದೆ ಎದುರು-ಬದುರಾಗಿವೆ. ಮೂಲೆಗಳಲ್ಲಿ ಹಾರುತ್ತಿರುವ ಒಂದೊಂದು ಜೊತೆ ಗಂಧರ್ವರ ದೃಶ್ಯವಿದೆ.

ಕೊನೆಯ ಅಂಕಣದಲ್ಲಿ ಗರುಡನ ಮೇಲೆ ಕುಳಿತಿರುವ ಚತುರ್ಭುಜಗಳ ವಿಷ್ಣುವಿದ್ದು, ಗರುಡನಿಗೆ ರೆಕ್ಕೆಗಳನ್ನು ಬಿಡಿಸದಿರುವುದು ಗಮನಾರ್ಹವಾದ ಅಂಶವಾಗಿದೆ C ಗುಹೆಯಲ್ಲಿ ವರ್ಣಚಿತ್ರಗಳನ್ನು ಲೇಪಿಸಿದ್ದು ಅವು ಈಗ ಮಾಸಿಹೋಗಿವೆ. ಹೆಚ್ಚು ಬೆಳಕಿನ ಸಹಾಯದಿಂದ ನೋಡಿದರೆ ಅವು ಅಸ್ಪಷ್ಟವಾಗಿ ಕಾಣಿಸುತ್ತದೆ. ಇತರ ಬಾಗಿಲುವಾಡದ ಶಾಖೆಗಳು ಕಲಾತ್ಮಕವಾಗಿದ್ದು ದಳಶಾಖೆ, ಹಗ್ಗ ವಿನ್ಯಾಸ ಪಟ್ಟಿಕೆ, ವಲ್ಲರಿ, ಸ್ತಂಬ ಶಾಖೆ ಮತ್ತು ಪುಷ್ಪಶಾಖೆಗಳನ್ನು ಆಕರ್ಷಕವಾಗಿ ಬಿಡಿಸಲಾಗಿದೆ. ಈ ಗುಹೆಯಲ್ಲಿ ಕಂಬ ತೋಳುಗಳ ಮೇಲೆ ಹೂಗಳ ಅಲಂಕಾರವನ್ನು ಬಿಡಿಸಲಾಗಿದೆ. ಅಷ್ಟಭುಜದ ಮತ್ತು ಚೌಕಾಚಾರದ ಕಾಂಡವುಳ್ಳ ಗೋಡೆಗಂಬ ಮತ್ತು ಗುಲಾಬಿಪಟ್ಟಿಕೆ, ಎಲೆಗಳು ಮತ್ತು ಹಗ್ಗದ ವಿನ್ಯಾಸವಿರುವ ಪಟ್ಟಿಕೆಗಳು ಇವೆ. ಗುಲಾಬಿ ಪಟ್ಟಿಕೆಯು ಬಾಗಿಲ ಚೌಕಟ್ಟಿಗೆ 3 ಪಕ್ಕಗಳಲ್ಲಿ ಇದೆ. ತ್ರಿವಿಕ್ರಮನ ಆಕಾಶದತ್ತ ಕಾಲುಚಾಚಿದ್ದು ಅದರ ಕೆಳಗಿರುವ ಶಿಲ್ಪಗಳ ಪೂರ್ವದ ಕತೆಯನ್ನು ನೆನಪಿಸುತ್ತದೆ. ವಿಷ್ಣು ಕುಬ್ಜ ವಿಪ್ರನಾಗಿ ನಿಂತಿದ್ದಾನೆ. ಆತನ ಎದುರು ಬಲಿ ಚಕ್ರವರ್ತಿಯ ಗುರುಗಳಾದ ಶುಕ್ರಾಚಾರ್ಯರು ಅರ್ಘ್ಯ ನೀಡುತ್ತಿದ್ದಾರೆ. ತನ್ನ ಪರಿವಾರದೊಂದಿಗೆ ಬಲಿಯು ಗುರುಗಳ ಸಮ್ಮುಖದಲ್ಲಿ ಕುಬ್ಜ ಬ್ರಾಹ್ಮಣನಿಗೆ 3 ಹೆಜ್ಜೆಗಳ ದಾನವನ್ನು ನೀಡುತ್ತಿದ್ದಾನೆ. ಬಲಿಯು ದಾನಗೈಯುತ್ತಲೇ ವಿಷ್ಣು

ವಿರಾಟರೂಪವನ್ನು ತಳೆದ ಒಂದು ಪಾದದಿಂದ ಭೂಮಿಯನ್ನು ಇನ್ನೊಂದು ಪಾದದಿಂದ ಆಕಾಶವನ್ನೆಲ್ಲಾ ಆವರಿಸಿದ್ದನ್ನು ಇಲ್ಲಿ ತೋರಿಸಲಾಗಿದೆ. ತ್ರಿವಿಕ್ರಮನು ತನ್ನ 7 ಕೈಗಳಲ್ಲಿ ಶಂಖ, ಚಕ್ರ, ಗದೆ, ಬಾಣ, ತಾಲು, ಖಡ್ಗ, ಬಿಲ್ಲುಗಳನ್ನು ಹಿಡಿದುಕೊಂಡು ಘೋರರೂಪ ತಾಳಿದ್ದಾನೆ. ಇನ್ನೊಂದು ಕೈ ಆಕಾಶದತ್ತ ಬೆರಳು ಚಾಚಿದೆ. ಈ ಆಕಾಶವನ್ನು ಆವರಿಸಿದ್ದಾನೆ. 3ನೇ ಹೆಜ್ಜೆಗೆ ಸ್ಥಳವೆಲ್ಲಿ ಎಂದು ಅದು ಪ್ರಶ್ನಿಸುವಂತಿದೆ.[43] ಇದರ ಬಾಗಿಲಿನ ಚೌಕಟ್ಟಿನ ಮೇಲ್ಭಾಗದಲ್ಲಿ 3 ರೇಖಾನಾಗರ ಶಿಖರದ ಮಾದರಿಗಳಿವೆ.

ಈ ಗುಹೆಯ ಮುಂಭಾಗದ ಕಂಬಗಳ ಮೇಲೆ ಸಿಂಹಗಳು ನಿಂತಿದ್ದು ಸೂರಿಗೆ ಅವಲಂಬಿತವಾಗಿದೆ. ಇಲ್ಲಿರುವ ಶಿಲ್ಪಕಲೆಗಳು ಅತ್ಯಂತ ಹಳೆಯ ಶಿಲ್ಪಗಳಾಗಿವೆ.

3. ನೈಸರ್ಗಿಕ ಗುಹಾಲಯ :

ಎರಡನೆಯ ಗುಹಾಲಯದಿಂದ ಪೂರ್ವಕ್ಕೆ ಹತ್ತಿರದಲ್ಲಿ ಅದರ ಎಡಕ್ಕೆ ಸುಮಾರು 25–30 ಅಡಿಗಳ ಅಂತರದಲ್ಲಿ ಒಂದು ನೈಸರ್ಗಿಕ ಗುಹೆ ಇದೆ. ಇದರ ಪೂರ್ವದಿಕ್ಕಿನ ಗೋಡೆಯ ಮೇಲೆ ಬೋಧಿಸತ್ವ ಪದ್ಮಪಾಣಿಯ ಮೂರ್ತಿಯನ್ನು ಕಲ್ಲಿನಲ್ಲಿ ಕಡೆದಿದೆ. ಕಿರೀಟಧಾರಿಯಾದ ಈ ಮೂರ್ತಿಯು ಪಾದದವರೆಗೂ ವಸ್ತ್ರವನ್ನು ಉಟ್ಟಂತೆ ತೋರಿಸಿದೆ. ತಲೆಯ ಹಿಂದೆ ಪ್ರಭಾಮಂಡಲ ವಿಗ್ರಹದ ಎರಡೂ ಕಡೆ ಹಲವಾರು ಸಣ್ಣ ಕುತೂಹಲಕರ ಆಕೃತಿಗಳಿವೆ. ಕೆಳಗಡೆಯ ಭಿತ್ತಿಚಿತ್ರದಲ್ಲೂ ಒಂದು ಸರ್ಪ, ಸುರಂಗದಿಂದ ಹೊರಬರುತ್ತಿರುವ ಒಬ್ಬ ಪುರುಷ ಸುರಂಗದ ಕೆಳಗೆ ಎರಡು ಕೈಗಳನ್ನು ಮೇಲೆತ್ತಿ ದ್ರವಕುಂಡದಲ್ಲಿ ಮುಳುಗುತ್ತಿರುವಂತಿರುವ ಇಬ್ಬರು ಮನುಷ್ಯರ ಚಿತ್ರವಿದ್ದು ಬಹುಶಃ ಇದು ನರಕದ ಚಿತ್ರಣ ಎಂದು ಊಹಿಸಲಾಗಿವೆಂದಾದರೂ ಈ ಊಹೆ ಸಂದೇಹಾಸ್ಪದ.[44] ಹಾಗೂ ಇಲ್ಲಿ ಬಹಳಷ್ಟು ಹಾಳಾಗಿರುವ ಶಿಲ್ಪವೊಂದಿದ್ದು ಪದ್ಮಪಾಣಿ ಇದನ್ನು ಬುದ್ಧನದು ಎಂದು ಗುರುತಿಸಲಾಗಿದೆ. ಬಾದಾಮಿಯಲ್ಲಿ ಸಿಗುವ ಬೌದ್ಧಶಿಲ್ಪ ಇದೊಂದೇ.[45] ಇದು ಕೊರೆದ ಗುಹೆಯಲ್ಲ. ಆದ್ದರಿಂದ ಇದನ್ನು ಸ್ವಾಭಾವಿಕ ಗುಹೆ ಎಂದು ಕರೆಯಲಾಗುತ್ತದೆ.

---

43 ಡಾ. ಶೀಲಕಾಂತ ಪತ್ತಾರ.

44 ಬಿ.ಆರ್. ಗೋಪಾಲ್, ಕರ್ನಾಟಕದ ಕಲೆಗಳು, ಪು.56.

45 ಡಾ. ಶೀಲಕಾಂತ ಪತ್ತಾರ, ಬಾದಾಮಿ, ಪು.32.

4. 3ನೇ ಗುಹೆ :

ವೈಷ್ಣವ ಗುಹಾಲಯ ಎರಡನೆಯ ಗುಹೆಯಿಂದ ಪೂರ್ವಕ್ಕೆ, ಕಲ್ಲಿನಲ್ಲಿ ಕಡೆದ ಸುಮಾರು 60 ಮೆಟ್ಟಿಲುಗಳನ್ನೇರಿ ಹಾದುಹೋದರೆ ಒಂದು ವಿಶಾಲವಾದ ಅಂಗಳದಲ್ಲಿ 3ನೇ ಗುಹೆ ಎದುರಾಗುತ್ತದೆ. ಅದೇ ವೈಷ್ಣವ ಗುಹಾಲಯ ಇದರ ನಿರ್ಮಾತೃ ಮಂಗಳೇಶ ಇದು ಕ್ರಿ.ಶ. 578ರಲ್ಲಿ ಪೂರ್ಣಗೊಂಡಿತೆಂದು ಮಂಗಳೇಶನ ಶಾಸನದಿಂದ ತಿಳಿದುಬರುತ್ತದೆ. ಇದೇ ಅತ್ಯಂತ ಹೆಚ್ಚು ಕಲಾತ್ಮಕವಾಗಿರುವುದರಿಂದ ಇದೇ ಅವರ ಕೊನೆಗೆ ಗುಹಾಲಯ ದೇವಾಲಯ ಎಂದು ನಂಬಲಾಗಿದೆ. ಪರ್ಸಿಬೌನ್‌ರವರು ಇದೇ ಮೊದಲು ಕೆತ್ತಲ್ಪಟ್ಟ ಗುಹಾಲಯ ಉಳಿದ 2 ಮತ್ತು 1ನೇಯ ಹಾಗೂ ಜೈನ ಗುಹೆಗಳು ನಂತರದಲ್ಲಿ ಅಸ್ತಿತ್ವಕ್ಕೆ ಬಂದವು ಎಂದು ವಾದಿಸಿದ್ದಾರೆ.

ಇದು ಮುಂಭಾಗದ ಗರ್ಭಗುಡಿಯನ್ನು ಸೇರಿಸಿದಂತೆ 70 ಅಡಿ ಅಗಲವಾಗಿದೆ. ಇದನ್ನು ಶಾಸನದಲ್ಲಿ ಮಹಾವಿಷ್ಣುಗೃಹವೆಂದು ಕರೆದಿದ್ದಾರೆ. ಮುಖಮಂಟಪದಲ್ಲಿ ಆರು ಕಂಬಗಳು ಬರಡು ತುದಿಗಳಲ್ಲಿ ಒಂದೊಂದು ಗೋಡೆಗಂಬವೂ ಇದೆ. ಮಹಾಮಂಟಪದಲ್ಲಿ 14 ಕಂಬಗಳು ಅಚ್ಚೊತ್ತಿದ ಮೆತ್ತೆಯ ಬೋದಿಗೆಯ ಮೇಲೆ ಸ್ಥೂಲವಾದ ಚಾಚುಪೀಠಗಳಲ್ಲಿ ಕಾರ್ತಿಕೇಯನೊಡನೆ ಶಿವಪಾರ್ವತಿ, ಅರ್ಧನಾರೀಶ್ವರ, ರತಿ–ಮನ್ಮಥರ ವಿಗ್ರಹಗಳೂ ಮದನಿಕೆ ವಿಗ್ರಹಗಳನ್ನು ಅಳವಡಿಸಲಾಗಿದೆ. ಒಟ್ಟು ಹದಿನಾರು ವಿಸ್ತಾರವಾಗಿ ಬಿಡಿಸಿದ ಉಬ್ಬು ಚಿತ್ರಗಳಲ್ಲದೆ ಛಾವಣಿಗಳಲ್ಲೂ ಅನೇಕ ಚಿತ್ರಗಳಿವೆ. ಮೂಲಮಂಟಪದ ಕಪೋತರ ಮಧ್ಯೆ ಗರುಡನ ಶಿಲ್ಪವಿದೆ. ಪಕ್ಕದ ಎರಡು ಗೋಡೆಗಳಲ್ಲಿ ಅನಂತಶಯನನಾದ ವಿಷ್ಣುವಿನ ಸುಮಾರು 7–8 ಅಡಿಗಳ ಅಗಲ ಮತ್ತು 12 ಅಡಿ ಎತ್ತರ ವಿಗ್ರಹವೂ ವಿಷ್ಣುವಿನ ನರಸಿಂಹಾವತಾರವನ್ನು ನಿರೂಪಿಸುವ ಇನ್ನೊಂದು ದೊಡ್ಡ ವಿಗ್ರಹವಿದೆ. ವಿಷ್ಣುವಿನ ಮೂರ್ತಿಗೆ 8 ಕೈಗಳಿವೆ. ಈ ಕೈಗಳಲ್ಲಿ ಶಂಖ, ಚಕ್ರ, ಡಾಲು, ಖಡ್ಗ, ಬಿಲ್ಲು, ಬಾಣ, ಗದೆ ಇವೆ. ಒಂದು ಕೈ ಸೊಂಟದ ಮೇಲಿದೆ. ಈ ಭವ್ಯಮೂರ್ತಿಯು ಯಾವುದೇ ಪೀಠವಿಲ್ಲದೆ ನಿಂತಿರುವುದು ವಿಶೇಷ. ಹೊರಗಿನ ಜಗಲಿಯ ಬಲ ಎಡ ಗೋಡೆಗಳಲ್ಲದೆ, ಇದರ ಗರ್ಭಗೃಹ ಎತ್ತರದಲ್ಲಿದ್ದು ಅದರ ಮುಂದುಗಡೆ ಸಾಕಷ್ಟು ಬಯಲು ಇದೆ. ಇದು ಬೌದ್ಧವಿಹಾರಗಳನ್ನು ನೆನಪಿಗೆ ತರುತ್ತದೆ.[46] ಇಲ್ಲಿನ ಗರ್ಭಗುಡಿಯಲ್ಲಿ ವಿಷ್ಣುವಿನ ವಿರಹದ ಪೀಠ ಮಾತ್ರ ಇದ್ದು ಇದರ ಮೂಲ ಕಳುವಾಗಿದೆ.

46 ಡಾ. ತಿಪ್ಪೇರುದ್ರಸ್ವಾಮಿ, ಬಾ.ಚಾ.ಸಾಂ.ಪ., ಪು.121.

ಗರ್ಭಗುಡಿಯ ಮುಂದಿನ ಗರುಡನ ಶಿಲ್ಪದ ಬಲಗಡೆಗೆ ಕೆಲವು ವರ್ಣಚಿತ್ರಗಳಿವೆ. ಮಹಾಮಂಟಪಹ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಬ್ರಹ್ಮ, ವಿಷ್ಣು, ಬುದ್ಧ, ಗಂಧರ್ವ, ಶಿವ ಹಾಗೂ ಕಾರ್ತಿಕೇಯರ ಮೂರ್ತಿಗಳಿವೆ.

ಈ ಗುಹಾಲಯದ ಗರ್ಭಗೃಹದ ಬಾಗಿಲುವಾಡದಲ್ಲಿ ಸೂಕ್ಷ್ಮವಾದ ಕೆತ್ತನೆ ನಡೆದಿದ್ದು ಏಳು ಕಂಬಗಳಿವೆ. ಗುಲಾಬಿ ಅಲಂಕಾರ ಹಗ್ಗದ ಹೆಣೆಗೆ ಚೌಕಗಳು, ಚೌಕ ಅಚ್ಚುಗಳು ನಿಯತ ಅಂತರದಲ್ಲಿ ಹೂವುಗಳು ಹಲವು ಅಷ್ಟವಿನ್ಯಾಸ ಮತ್ತು ಒಂದು ಸಾಲು ಹೂವಿನ ದಳಗಳು, ಗೋಂಡೇ ಹೂಗಳ ಮತ್ತು ಒಂದು ಸಾಲುಗಳು ಹೂವಿನದಳಗಳ ಉಬ್ಬುಶಿಲ್ಪಗಳಾಗಿವೆ. ಹಗ್ಗ ಹೂವು ಪಟ್ಟಿಕೆಗಳು ಪಿಲಸ್ಟರ್‌ಗಳ ಕೆಳಗೆ ದೇವದಂಪತಿಗಳ ಮೂರ್ತಿಗಳನ್ನು ಕೆತ್ತಲಾಗಿದೆ.[47] ಬಾಗಿಲುವಾಡದ ಮೂರು ಕಡೆಗಳಲ್ಲಿ ಗುಲಾಬಿ ಹೂಗಳು ಸರಳಪಟ್ಟಿಕೆ ಮತ್ತು ಹೂದಳ ಪಟ್ಟಿಗೆಗಳು ಹಾಯ್ದು ಹೋಗಿವೆ. ಸೆಜ್ಜ ಭಾಗದಲ್ಲಿರುವ ಹಗ್ಗ ಪಟ್ಟಿಕೆಯು ಮಕರಶಿಲ್ಪದಲ್ಲಿ ಕೊನೆಗೊಳ್ಳುವುದು ಸ್ವಾರಸ್ಯಕರವಾದ ವಿಚಾರವಾಗಿದೆ.[48] ಗರ್ಭಗೃಹಕ್ಕೆ ಹೋಗುವ ಮೆಟ್ಟಿಲುಗಳ ಪಕ್ಕದಲ್ಲಿ 4 ಗಂಧರ್ವ ದಂಪತಿಗಳ ಕೆಳಗೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಇದರ ಸುತ್ತಲೂ ಸುಂದರ ಕೆತ್ತನೆಗಳಿದ್ದು ಒಂದು ದೊಡ್ಡಗುಡಿಯ ಮಧ್ಯಭಾಗದಲ್ಲಿದ್ದು ಆಚೆ ಈಚೆ ಎರಡು ಕೂಟ ದೇವಾಲಯಗಳಿಗೆ ಸಾಲು ಗುಡಿಯಲ್ಲಿ ಗರುಡನ ಬೆನ್ನ ಮೇಲೆ ಕುಳಿತ ವಿಷ್ಣುಮೂರ್ತಿಯನ್ನು ಕೆತ್ತಲಾಗಿದೆ.

ಇಲ್ಲಿ ಕಂಡು ಬರುವ ಚಾಚುಪೀಠದ ವಿಗ್ರಹಗಳು, ದೇವದಂಪತಿ ಮತ್ತಿತರ ವಿಗ್ರಹಗಳು ಕರ್ನಾಟಕದಲ್ಲಿ ಸಿದ್ಧಪಡಿಸಿದ ಅತಿ ಪ್ರಾಚೀನ ವಿಗ್ರಹಗಳೆಂದು ಗಮನಿಸಬೇಕಾದ ಅಂಶ. ಗುಹೆಯ ಪಶ್ಚಿಮ ಗೋಡೆಯ ಮೇಲೆ ತ್ರಿವಿಕ್ರಮ ಮೂರ್ತಿಯಿದ್ದು 340 ಸೆಂ.ಮೀ. ಎತ್ತರವಾಗಿದ್ದು ಆಕರ್ಷಣೀಯವಾಗಿದೆ. ಇಲ್ಲಿಯೂ ವಾಮನ ಅವತಾರವನ್ನು ಮನೋಜ್ಞವಾಗಿ ಕೆತ್ತಿದ್ದಾರೆ. ಇಲ್ಲಿ ಬಾಣ, ಗದೆ, ಶಂಖ, ಚಕ್ರಗಳನ್ನು ಹಿಡಿದ ಮತ್ತು ಆಕಾಶದತ್ತ ಎಡಗೈಯನ್ನು ಚಾಚಿದ ತ್ರಿವಿಕ್ರಮನಿದ್ದಾನೆ. ಇದರ ಪಕ್ಕದ ವಾಮನ ಮೂರ್ತಿ ಭಗ್ನಗೊಂಡಿದೆ. ಒಂದು ಪಾದದಿಂದ ಭೂಮಿಯನ್ನು ಇನ್ನೊಂದು ಪಾದದಿಂದ ಆಕಾಶವನ್ನು ಆಕ್ರಮಿಸಿದ ನಿಲುವು ಈ ಮೂರ್ತಿಯದು. ಇಲ್ಲಿ ಸೂರ್ಯ ಚಂದ್ರ ಶುಕ್ರಾಚಾರ್ಯ,

---

47 ಅ. ಸುಂದರ, ಕರ್ನಾಟಕ ಚರಿತ್ರೆ, ಪು.493.

48 ಅ.ಸುಂದರ, ಕರ್ನಾಟಕ ಚರಿತ್ರೆ, ಪು.493.

ಬಲಿಚಕ್ರವರ್ತಿ ಮತ್ತು ಅವನ ಹೆಂಡತಿ ತ್ರಿವಿಕ್ರಮನನ್ನು ಎಳೆಯಲು ಹವಣಿಸುತ್ತಿರುವ ಒಬ್ಬ ರಾಕ್ಷಸ ಇದ್ದಾರೆ.

ಇಲ್ಲಿಂದ ಪಶ್ಚಿಮ ಗೋಡೆಯ ಒಳ ತುದಿಗೆ ಹೋದರೆ ಅದ್ಭುತ ಭಂಗಿಯ ವಿಜಯ ನರಸಿಂಹ ಇದ್ದಾನೆ. ಇದರ ಎತ್ತರ 330 ಸೆಂ.ಮೀ. ಇದರ ವಿಶೇಷವೆಂದರೆ ಈ ಮೂರ್ತಿಯು ನಗುತ್ತಿದ್ದು ಚತುರ್ಭುಜಗಳನ್ನೊಂದಿದೆ. ಗದೆ, ಡಲು, ಕಮಲದ ಹೂಗಳನ್ನು ಹಿಡಿದಿದ್ದಾನೆ. ಇದರ ವಿಶೇಷತೆ ಎಂದರೆ ತಲ್ಕೆ ಸಿಂಹದ ಆಕಾರದಲ್ಲಿದ್ದು ತಲೆಯ ಕೇಸರದ ಮಧ್ಯ ಕೈ ಬೈತಲೆ ಇದೆ. ಇವರ ಬಲಕ್ಕೆ ಪ್ರಹ್ಲಾದ ಎಡಕ್ಕೆ ಗರುಡ ಇದ್ದರೆ, ಇಲ್ಲಿ ಕಾಣುವ ಕಮಲ ಮುಕುಟದ ನರಸಿಮಃ ಶಿಲಪ್ಪ ಗುಪ್ತ ಮತ್ತು ಪಾಂಡಯ್ರ ಕಾಲದ ವೈಶಿಷ್ಟ್ಯ[49] ಇಲ್ಲಿಯ ಇತರ ಗುಹೆಗಳೆಂದರೆ ಹರಿಹರ ಇದು ಮುಖಮಂಟಪದಲ್ಲಿ ಭವ್ಯವಾಗಿ 353 ಸೆಂ.ಮೀ. ಎತ್ತರವಾಗಿದೆ,.

ಮಹಾವಿಷ್ಣು ಇದು ಅತ್ಯಂತ ಸುಂದರ ವಿಗ್ರಹ. ಇದರ ಎತ್ತರ 337 ಸೆಂ.ಮೀ. ವಿಷ್ಣುವು ಆದಿಶೇಷನ ಮೇಲೆ ಕುಳಿತಿದ್ದಾನೆ. ಆದಿಶೇಷನು ಏಳು ಹೆಡೆಗಳನ್ನು ಛತ್ರಿಯೋಪಾದಿಯಲ್ಲಿ ವಿಷ್ಣುವಿನ ತಲೆಯ ಮೇಲೆ ಹರಡಿಕೊಂಡಿದ್ದಾನೆ. ಚಾಲುಕ್ಯ ದೊರೆಗಳು ಸಿಂಹಾಸನ ರಾಜಠೀವಿಯಲ್ಲಿ ಕುಳಿತುಕೊಳ್ಳುತ್ತಿದ್ದಾರೆ ತಿಳಿದುಬರುತ್ತದೆ.[50]

ನರವರಾಹ ವಿಷ್ಣುವಿನ ವಿಗ್ರಹದ ಎಡಕ್ಕೆ ಉತ್ತರಾಭಿಮುಖವಾಗಿ ನಿಂತಿದೆ. ಇದರ ಎತ್ತರ 258 ಸೆಂ.ಮೀ. ಇದು ಎರಡನೆಯ ಗುಹೆಯಲ್ಲಿರುವ ಮೂರ್ತಿಗಿಂತ ದೊಡ್ಡದು ಇದು ಸುಂದರವಾಗಿದೆ. ಇಲ್ಲಿನ ಕೆಲವು ಬಂಡೆಗಳ ಮೇಲೆ, ಮೆಟ್ಟಿಲುಗಳ ಮೇಲೆ ಒಂದೆರಡು ವಿಗ್ರಹಗಳ ಮೇಲೆ ಅಯ್ಯಸ್ವಾಮಿ, ಕಲ್ಯುಟ್ಟಿ ದೋಣಿಸಾವಿ ಎಂಬ ಕನ್ನಡ ಶಿಲ್ಪಗಳ ಹೆಸರುಗಳಿವೆ.[51] ಹಾಗೆಯೇ ಕಪೋಟದ ಒಳಬದಿಯ ಗರುಡ ವಿಗ್ರಹದ ಮೇಲೆ 'ನೆಲವಳೆ' ಎಂಬ ಹೆಸರಿದೆ. 'ಎರಂಡರ ಗಣಚನ ಕೀರ್ತನ' ಶ್ರೀಚಂದ್ರಕೀರ್ತಿಯ ಭಟ್ಟಂ ಮಾಡಿದ ದುರ್ಗದೇವಿಯನ್ ಎಂಬ ಶಾಸನಗಳಿವೆ. ಇವುಗಳ ಬಹುಶಃ ಶಿಲ್ಪಿಗಳ ಹೆಸರುಗಳು.[52]

---

49 ಶಿಲ್ಪಕಲೆಗಳು, ಪು.56.

50 ಕರ್ನಾಟಕದ ಶಿಲ್ಪಕಲೆಗಳು, ಪು.56.

51 ಬಾ.ರಾ. ಗೋಪಾಲ್, ಕರ್ನಾಟಕದ ಕಲೆಗಳು, ಪು.58.

52 ಅದೇ.

ಯಾಳಿ, ಶಿವಪಾರ್ವತಿಯರು, ರತಿಮನ್ಮಥರು, ಮದನಿಕಾವಿಗ್ರಹ, ರತಿಮನ್ಮಥರ ಚಿತ್ರ ಸಾಲಭಂಜಿಕೆ, ಸೋಮಪಾನ ಮಾಡಿ ಬೀಳುವ ಹಂತದಲ್ಲಿರುವ ಹೆಣ್ಣಿನ ಚಿತ್ರಗಳಿವೆ.

5. 4ನೇ ಗುಹೆ :

ಬಾದಾಮಿ ಗುಹೆಗಳಲ್ಲಿ ಅತಿ ಚಿಕ್ಕ ಮತ್ತು 4ನೆಯ ಗುಹೆಯಾಗಿದೆ. ಇದು ಎಲ್ಲಾ ಗುಹೆಗಳಿಗಿಂತ ಸ್ವಲ್ಪ ಎತ್ತರವಾಗಿದ್ದು ಜೈನ ಸಂಪ್ರದಾಯಕ್ಕೆ ಸೇರಿದೆ. ಬಹುಷಃ ಇದು ಮಂಗಳೇಶನಿಂದ ನಿರ್ಮಿಸಲ್ಪಟ್ಟಿರಬಹುದು. ಇದನ್ನು "ಮೇಣದ ಬಸದಿ" ಎಂದೂ ಕರೆಯುತ್ತಾರೆ. ಇದರ ನಿರ್ಮಾಣದ ಅವಧಿ 7ನೇ ಶತಮಾನವಿರಬಹುದೆಂದು ವಿದ್ವಾಂಸರು ತರ್ಕಿಸುತ್ತಾರೆ.[53]

ಇದರ ಕಂಬ ಮತ್ತು ಛತ್ತುಗಳಿಗೆ ಹೆಚ್ಚಿನ ಅಲಂಕಾರವಿಲ್ಲದ ಸರಳ ಸಾದಾ ಗುಹಾಲಯವಾಗಿದೆ. ಇಲ್ಲಿನ ವಿಶೇಷವೆಂದರೆ ಇಲ್ಲಿನ ಸಭಾಮಂಟಪ ಮುಖಮಂಟಪಕ್ಕಿಂತ ಚಿಕ್ಕದಾಗಿದೆ. ಬಾದಾಮಿಯ ಉಳಿದ ದೇವಾಲಯಗಳಲ್ಲಿ ಕಂಡುಬಂದಂತೆ ಇದರ ಅಧಿಷ್ಠಾನದಲ್ಲಿ ಹಣಪಟ್ಟಿಗೆ ಇಲ್ಲ. ಈ ಗುಹೆಯ ಮುಂಭಾಗದಲ್ಲಿ ಚಾಚುಪೀಠದ ಬೌದ್ಧಿಕೆಗಳುಳ್ಳ 4 ಕಂಬಗಳಿವೆ. ಈ ಗುಹೆಯ 31 ಅಡಿ ಅಗಲ ಮತ್ತು 16 ಅಡಿ ಆಳವಾಗಿದೆ. ಇಲ್ಲಿರುವ 4 ಕಂಬಗಳು ನೆಲದ ಮೇಲೆ ಮಲಗಿರುವ ಸಿಂಹದ ಬೆನ್ನ ಮೇಲೆ ಇಟ್ಟಿರುವಂತೆ ಕಾಣುವವು. ಕಂಬದ ಕಾಂಡವು ಚೌಕವಾಗಿದ್ದು ಮೆಲ್ತುದಿಯಲ್ಲಿ ವಿನ್ಯಾಸವಿರುವ ಪಟ್ಟಿಕೆಯನ್ನು ಹೊಂದಿದೆ. ಎಲ್ಲ ಕಂಬಗಳ ಮೆತ್ತಗಿನ ಮುಚ್ಚಳವು ಚೌಕವಾಗಿವೆ. ಅರೆಗೋಳವಿಯಾಕಾರದ ಕುಂಭಕ್ಕೆ ಪದಕದ ಅಲಂಕಾರವಿದೆ. ಇದರ ಚಾಚುಗಳು ತರಂಗ ಮಾದರಿಯಲ್ಲಿದ್ದು ಕಂಬಗಳ ಹೊರಮುಖದಲ್ಲಿ ಕೊಂಬಿರುವ ಸಿಂಹಗಳು ಗುಹೆಗೆ ಆಧಾರವಾಗಿರುವಂತೆ ನಿಂತಿವೆ. ಈ ಗುಹೆಯ ಗರ್ಭಗೃಹದ ಬಾಗಿಲುವಾಡದ ವಿವಿಧ ಪಟ್ಟಿಗಳ ಮೇಲೆ ಹೂಗಳು ವಜ್ರಾಕೃತಿಯ ಹೆಣೆಗೆ ಕೊಳವೆಯಾಕಾರದ ಕುಂಭ ವೃತ್ತಾಕಾರದ ಮುಚ್ಚಳ ಮತ್ತು ಚೌಕಾಕೃತಿಗಳ ಚೌಕಟ್ಟುಗಳನ್ನು ಕೆತ್ತಲಾಗಿದೆ.

ಮೊಗಸಾಲೆಯ ಪಶ್ಚಿಮ ಗೋಡೆಯ ಮೇಲೆ ಪಾರ್ಶ್ವನಾಥ ವಿಗ್ರಹವಿದೆ. ಆದರೆ ಕೆಲವರು ಇದು 7ನೇ ತೀರ್ಥಂಕರ ಸುಪಾರ್ಶ್ವನಾಥನ ವಿಗ್ರಹ ಎನ್ನುತ್ತಾರೆ. ಇದು ಸುಂದರವಾಗಿದೆ. ದೇವಕನ್ನಿಕೆಯೊಬ್ಬಳು

---

53 ಡಾ. ಶಿವರಾಮಕಾರಂತ ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಪು.11.

ಈ ಮೂರ್ತಿಯ ಬಳಿ ಕೊಡೆಯಿಡಿದಿರುವುದು. ಧರಣೇಂದ್ರ ಪದ್ಮಾವತಿಯರೂ ಕೆಳಗೆ ಕಮಠರೂ ಇದ್ದಾರೆ.

ಪಾರ್ಶ್ವನಾಥನ ಎದುರಿಗೆ ಪೂರ್ವದ ಗೋಡೆಯಲ್ಲಿ ಬಾಹುಬಲಿಯ ಭವ್ಯ ವಿಗ್ರಹವಿದೆ. ಈ ಮೂರ್ತಿಯ ಎತ್ತರ 233 ಸೆಂ.ಮೀ. ಕರ್ನಾಟಕದಲ್ಲಿ ಬಹುಶಃ ಈ ಮೂರ್ತಿಯೇ ಅತ್ಯಂತ ಪ್ರಾಚೀನ ಗೊಮ್ಮಟ ವಿಗ್ರಹ ಆಗಿರಬಹುದು. ಇಲ್ಲಿ ಬಾಹುಬಲಿ ಖಡ್ಗಾಸನನಾಗಿ ನಿಂತಿದ್ದು ಭುಜಗಳವರೆಗೂ ಕೂದಲು ಹರಡಿವೆ. ಕೈಕಾಲುಗಳವರೆಗೆ ಬಳ್ಳಿ ಸುತ್ತುವರಿದಿದೆ. ಪಾದಗಳ ಮೇಲೆ ಸರ್ಪ ಸುಳಿದಾಡುತ್ತವೆ. ಅವರ ಸುತ್ತಮುತ್ತ ಇಬ್ಬರು ರಾಜಸ್ತ್ರೀಯರಿದ್ದಾರೆ.

ಬಾಹುಬಲಿಯ ಎಡಬದಿಯಲ್ಲಿ ಉತ್ತರಾಭಿಮುಖವಾದ ಗೋಡೆಯಲ್ಲಿ ಮಹಾವೀರನು ಖಡ್ಗಾಸನದಲ್ಲಿದ್ದು ಕೆಳಗೆ ಮೂರು ಸಿಂಹಗಳಿವೆ. ಅಲ್ಲೇ ಕಲ್ಪವೃಕ್ಷದ ಕೆಳಗೆ ಯಕ್ಷ-ಯಕ್ಷಿಣಿಯರಿದ್ದಾರೆ. ಮಹಾವೀರನ ತಲೆಯ ಮುಕ್ಕೊಡೆಯ ಸುತ್ತಲಿನ ಪ್ರಭಾವಳಿಯಲ್ಲಿ 24 ತೀರ್ಥಂಕರರು ಇದ್ದಾರೆ. ಇದರ ಎದುರಿಗೆ ಸಿಂಹಪೀಠದಲ್ಲಿ ಧ್ಯಾನಮುದ್ರೆಯಲ್ಲಿರುವ ಮಹಾವೀರನ ಮೂರ್ತಿಯಿದೆ. ಇಲ್ಲಿ ಒಂದು ಶಾಸನವೂ ಸಹ ಇದೆ. ಇದು ಹೊಯ್ಸಳರ ಕಾಲಕ್ಕೆ ಸೇರಿದುದೆಂದು ತಿಳಿದುಬರುತ್ತದೆ.

ಗರ್ಭಗುಡಿಯಲ್ಲಿ ಸಿಂಹಪೀಠದ ಮೇಲೆ ಮಹಾವೀರನು ಮೆದುವಾದ ದಿಂಬಿಗೆ ಒರಗಿ ಕುಳಿತಿದ್ದು, ಎಡಬದಿಯಲ್ಲಿ ಚಾಮರಧಾರಿಗಳಿರುವುದನ್ನು ಕಾಣಬಹುದು. ಇಲ್ಲಿಂದ ಈಚೆಗೆ ಬಂದು ನೋಡಿದರೆ ಎದುರಿಗೆ ಒಂದು ಭವ್ಯ ನೋಟ ಕಂಡುಬರುವುದು. ಅದು ಅಗಸ್ತ್ಯತೀರ್ಥ ಇದು ವಿಶಾಲವಾದ ಸರೋವರವಾಗಿದ್ದು ಇಲ್ಲಿಯೇ ಅಗಸ್ತ್ಯಮುನಿಯು ತಪಸ್ಸು ಮಾಡಿದರು ಎಂದು ಪುರಾಣಗಳು ತಿಳಿಸುತ್ತವೆ.

II. ಐಹೊಳೆಯ ಗುಹಾಲಯಗಳು :

ಐಹೊಳೆಯು ವಾಸ್ತುಶಿಲ್ಪದ ತೊಟ್ಟಿಲು ಎಂದು ಮೊದಲೇ ಹೆಸರು ಗಳಿಸಿದೆ. ಇಲ್ಲಿ ಬೌದ್ಧ, ಜೈನ ಹಾಗೂ ವೈದಿಕ ಸಂಪ್ರದಾಯಗಳಿಗೆ ಸೇರಿದ ಒಟ್ಟು 5 ಗುಹಾಲಯಗಳಿವೆ. ಇವುಗಳಲ್ಲಿ ಬೌದ್ಧಗುಹೆ ಅತ್ಯಂತ ಪ್ರಾಚೀನವಾದುದು. ಇದು ಮಹಡಿಯನ್ನೊಳಗೊಂಡಿದೆ. ಈ ಗುಹಾಲಯಗಳನ್ನು

‘ಕಲ್ಮನೆ’ ಎಂದು ಮಂಗಳೇಶನ ಕನ್ನಡದ ಶಾಸನವು ತಿಳಿಸಿದೆ.[54] ಹಾಗೂ ಮತ್ತೊಂದು ರೀತಿಯಲ್ಲಿ ‘ಲಯನ’ವೆಂದೂ ಸಹ ಕರೆಯುತ್ತಾರೆ.[55] ಈ ಗುಹಾಲಯಗಳು ‘L’ ಆಕಾರವನ್ನು ಹೋಲುತ್ತವೆ. ಚಾಲುಕ್ಯರ ಕಾಲದ ಅತ್ಯಂತ ವಿಕಸಿತವಾದ ತಲವಿನ್ಯಾಸವನ್ನು ಐಹೊಳೆಯ ರಾವಣಫಡಿ ಮತ್ತು ಮೀನಬಸದಿಗಳಲ್ಲಿ ಕಾಣುತ್ತೇವೆ. ಇಲ್ಲಿನ ಗುಹಾದೇವಾಲಯಗಳ ವಾಸ್ತುಶಿಲ್ಪವನ್ನು 5 ನಿದರ್ಶನಗಳಿಂದ ಪ್ರತಿನಿಧಿಸಿದೆ. ಇವುಗಳಲ್ಲಿನ ಒಂದು ಅರ್ಧ ನಿರ್ಮಾಣವಾಗಿದ್ದು ಇನ್ನರ್ಧ ಕೊರೆದದ್ದು. ಗುಹೆಗಳಲ್ಲಿ ಎರಡು ಹಿಂದೂ, ಒಂದು ಬೌದ್ಧ, ಒಂದು ಜೈನ ಮತ್ತು 5ನೇಯದು ಬುದ್ಧ ಅಥವಾ ಜೈನ ಯಾವ ಪಂಥಕ್ಕೆ ಬೇಕಾದರೂ ಸೇರಿಸಬಹುದಾದಂತದ್ದು.

ಐಹೊಳೆಯ ಗುಹೆಗಳು ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಯ ಅಂಕಗಳಲ್ಲಿ ಬಾದಾಮಿಯ ಗುಹೆಗಳಿಗಿಂತ ಬಹುಮಟ್ಟಿಗೆ ಬೇರೆಯಾದವು. ಜೈನಗುಹೆ ಮತ್ತು ಹಿಂದೂ ಗುಹೆಯ ನಕ್ಷೆಗಳಲ್ಲಿ ಕೆಲವು ಸಮಾನ ಅಂಶಗಳಿವೆ. ಮೊದಲನೆಯದರಲ್ಲಿ ಒಂದು ಗರ್ಭಗೃಹ 2 ಪಾರ್ಶ್ವಕೋಷ್ಠಗಳು ಒಂದು ಚಚ್ಚೌಕವಾದ ಹಜಾರ ಮತ್ತು ಆಯಾಕಾರದ ಮೊಗಸಾಲೆಯಿದೆ. ಆದರೆ ಹಿಂದೂ ದೇವಾಲಯದಲ್ಲಿ ಮೊಗಸಾಲೆ ಇಲ್ಲ. ಇಲ್ಲಿ ರಾವಣಫಡಿಗೆ ಎತ್ತರವಾದ ಅಧಿಷ್ಠಾನವಿದ್ದು, ಮೀನಬಸದಿಯಲ್ಲಿ ಅದಿಲ್ಲ. ಇಲ್ಲಿನ ಎರಡೂ ಗುಹೆಗಳ ಸಮಾನ ಲಕ್ಷಣವೆಂದರೆ ಬಲಪಕ್ಕದ ಕೊಠಡಿಯಲ್ಲಿ ದೊಡ್ಡ ಕೆತ್ತನೆಯಿರುವ ಫಲಕವು ಮೂರು ಗೋಡೆಗಳಲ್ಲಿ ಕಂಡುಬರುವುದು.

ಇಲ್ಲಿರುವ ಗುಹಾಲಯಗಳನ್ನು ಕುರಿತು ಒಂದೊಂದಾಗಿ ತಿಳಿಯೋಣ.

1. ಬೌದ್ಧ ಗುಹಾಲಯ :

ಇದು ಅತ್ಯಂತ ಹಳೆಯ ಗುಹಾಲಯ. ಇದು ಮಹಡಿಯನ್ನೊಳಗೊಂಡಿದ್ದು ಇದರ ಹಿಂಭಾಗವನ್ನು ಕಲ್ಲಿನಲ್ಲಿ ಕೊರೆಯಲಾಗಿದ್ದು ಮುಂಭಾಗವನ್ನು ಕಲ್ಲುಗಳಿಂದ ಕಟ್ಟಲಾಗಿದೆ. ಇದು ಗರ್ಭಗುಡಿ ಮತ್ತು ಚತುರಾಕಾರದ ಮೊಗಸಾಲೆಯನ್ನು ಒಳಗೊಂಡಿದೆ. ಇಲ್ಲಿಯ ವರಾಂಡದ ಭುವನೇಶ್ವರಿಯಲ್ಲಿ ಬುದ್ಧನ ಶಿಲ್ಪವಿದ್ದು ಅತ್ಯಂತ ಸುಂದರವಾಗಿದ್ದು ಬುದ್ಧನು ಚಿನ್ಮುದ್ರೆಯಲ್ಲಿದ್ದಂತೆ ತೋರಿಸಲಾಗಿದೆ. ಇದರ ಮೇಲಣ ಮಹಡಿ ಒಂದು ಚೈತ್ಯ. ಇದರ ದ್ವಾರಗಳ ಮೇಲೆ

---

54 ಡಾ. ಶೀಲವಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.237.

55 ಅದೇ.

ಬೌದ್ಧಜಾತಕಗಳಿಂದ ಆಯ್ದ ಬುದ್ಧನಿಗೆ ಸಂಬಂಧಿಸಿದ ದೃಶ್ಯಗಳನ್ನೊಳಗೊಂಡಿರುವ ಚಿಕ್ಕಮೂರ್ತಿಗಳನ್ನು ಕೆತ್ತಲಾಗಿದೆ. ಗರ್ಭಗುಡಿಯಲ್ಲಿದ್ದ ಬುದ್ಧನ ವಿಗ್ರಹ ಭಗ್ನವಾಗಿದ್ದ ಕಾರಣದಿಂದಲೋ ಏನೋ ಅದನ್ನು ಅನೇಕ ವರ್ಷ ಗುಹೆಯ ಅಂಗಳದಲ್ಲಿ ಇಡಲಾಗಿತ್ತು.[56] ಇತ್ತೀಚೆಗೆ ಇದನ್ನು ಐಹೊಳೆಯ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. ಇದನ್ನು ಒಂದನೇ ಪುಲಿಕೇಶಿಯು ನಿರ್ಮಿಸಿರಬಹುದೆಂದು ವಿದ್ವಾಂಸರ ಅಭಿಮತ.

2. ಮೀನ ಬಸದಿ :

ಇದನ್ನು ಮೀನಬಸ್ತಿ ಎಂದೂ ಸಹ ಕರೆಯುತ್ತಾರೆ. ಇದೊಂದು ಜೈನ ಗುಹಾಲಯ ಇದು ಮೇಗುಟಿಯ ನೈರುತ್ಯಕ್ಕೆ ಇದೆ. ಇದನ್ನು ಮೊದಲು 2 ಅಂತಸ್ತಿನ ಜಿನಾಲಯವೆಂದು ಕರೆಯಲಾಗಿತ್ತು. ಇದರ ಅರ್ಧಭಾಗ ನೈಸರ್ಗಿಕ ಗುಹೆ. ಇದು ಗರ್ಭಗೃಹವನ್ನು ಹೊಂದಿದ್ದು ಎರಡೂ ಕಡೆ ಅದರ ಮುಂದೆ ಮಂಟಪ ಮತ್ತು ಕಂಬಗಳ ತೆರೆದ ಅಂಗಳಗಳಿವೆ. ಇವುಗಳು ನಯಗೊಳಿಸಿದ ಕಲ್ಲುಗಳಿಂದ ಕಟ್ಟಲ್ಪಟ್ಟಿವೆ. ಇವುಗಳ ಅಂಗಳದಲ್ಲಿ 4 ಚೌಕಾಕಾರದ ಕಂಬಗಳು 2 ಅರೆಗಂಬಗಳೂ ಇವೆ. ಒಳಗೆ 3 ಕೋಣೆಗಳಿದ್ದು ಮಧ್ಯದ್ದು ಗರ್ಭಗುಡಿ ಇದರ ಎರಡೂ ಕಡೆಯಿರುವ ಕೋಣೆಗಳಿದ್ದು ಮಧ್ಯದ್ದು ಗರ್ಭಗುಡಿ ಇದರ ಎರಡೂ ಕಡೆಯಿರುವ ಕೋಣೆಗಳಲ್ಲಿ ಯಾವುದೇ ಕೆತ್ತನೆಗಳಿಲ್ಲ. ಇದರ ಮೇಲಂತಸ್ತಿನಲ್ಲೂ ಕೆಳಗಿದ್ದಂತೆ ಒಂದು ಅಂಗಳವಿದ್ದು ಒಂದೇ ಒಂದು ಗರ್ಭಗುಡಿಯಿದೆ. ಮೇಲಂತಸ್ತಿಗೆ ಹೋಗಲು, ಮೆಟ್ಟಿಲುಗಳಿಲ್ಲ. ಇಲ್ಲಿಗೆ ಗುಹೆಯ ಹೊರಬದಿಯಿಂದಲೇ ಹೋಗಬೇಕು. ಇದರ ದ್ವಾರದ ಚೌಕಟ್ಟು ಅಲಂಕೃತವಾಗಿವೆ. ಇದರ ಗರ್ಭಗೃಹದ ನಡುವೆ ಒಂದು ದಾರಿಯಾದ ಸಿಂಹಪೀಠವಿದ್ದು ನೆಲ ಮತ್ತು ಸಿಂಹಪೀಠವು ಒಂದೇ ಶಿಲೆಯಲ್ಲಿ ಕೊರೆಯಲ್ಪಟ್ಟಿವೆ. ಪೀಠದ ಮೇಲೆ ನೀಳಕೇಶಿಯಾದ ಜಿನವಿಗ್ರಹವು ಮುಕ್ಕೋಡಿಯ ಕೆಳಗೆ ಕುಳಿತಿರುವ ಭಂಗಿಯಲ್ಲಿದೆ. ಇದರ ಎರಡೂ ಬದಿಗಳಲ್ಲಿ ಬ್ರಾಹ್ಮೀ ಮತ್ತು ಸುಂದರಿಯರು ಇರುವರು. ಗೊಮ್ಮಟನ ಸುತ್ತಲೂ ಸರ್ಪಗಳು ಹರಿದಾಡುವಂತೆ ಕೆತ್ತಲಾಗಿದೆ. ಪಾರ್ಶ್ವನಾಥ ಶಿಲ್ಪವು ಜೈನಶಿಲ್ಪದ ಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಕೆತ್ತಲಾಗಿದೆ. ಪಾರ್ಶ್ವನಾಥನು ಕಾರ್ಯೋತ್ಸಾಹ ಭಂಗಿಯಲ್ಲಿದ್ದು ತಪಸ್ಸಿನಲ್ಲಿ ನಿರತನಾದಂತೆ, ತಪಸ್ಸನ್ನು ಕೆಡಿಸಲು ಕಮಠ ಪಾರ್ಶ್ವನಾಥನ ಮೇಲೆ ದಾಳಿ ಇಟ್ಟಂತೆ ಧರಣೇಂದ್ರಯಕ್ಷ, ಪದ್ಮಾವರ ಯಕ್ಷಿಯರು

56 ಡಾ. ತಿಪ್ಪೇರುದ್ರಸ್ವಾಮಿ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.122.

[illegible]

ಪಾರ್ಶ್ವನಾಥನನ್ನು ಕಮಠನ ಧಾಳಿಗಳಿಂದ ರಕ್ಷಿಸಿದಂತೆ ಕೆತ್ತಲಾಗಿದೆ. ಬಲಭಾಗದ ಕೋಣೆಯ 3 ಗೋಡೆಗಳ ಮೇಲೆ ಪಾರ್ಶ್ವನಾಥನ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ಕೆತ್ತಲಾಗಿದೆ. ಅದರಲ್ಲೂ ಪಾರ್ಶ್ವನಾಥನು ಮೊದಮೊದಲು ರಾಜವೈಭೋಗವನ್ನು ಅನುಭವಿಸಿರುವಂತೆಯೂ ನಂತರ ತೀರ್ಥಂಕರ ಪದವಿಗೇರಿ ಧರಣೇಂದ್ರ ಪದ್ಮಾವತಿಯರೊಂದಿಗೆ ಯೋಗಾಸನದಲ್ಲಿ ತೊಡಗಿರುವಂತೆಯೂ, ಎಡಗಡೆಯ ಮೇಲಿನ ಶಿಲ್ಪವು ಇಂದ್ರನು ಐರಾವತವನ್ನು ಏರಿಕೊಂಡು ಪಾರ್ಶ್ವನಾಥನಿಗೆ ಅಭಿಷೇಕ ಮಾಡಲು ಬರುತ್ತಿರುವಂತೆಯೂ ರೂಪಿಸಲಾಗಿದೆ. ದಕ್ಷಿಣ ಭಾರತದಲ್ಲಿಯೇ ಈ ಬಗೆಯ ಶಿಲ್ಪ ಇದೊಂದೇ ಎಂದು ಹೇಳಬಹುದು.[57] ಇಲ್ಲಿರುವ ಜಿನನನ್ನು ಗುರುತಿಸುವುದು ಕಷ್ಟ. ಏಕೆಂದರೆ ಇಲ್ಲಿನ ಪೀಠದ ಮೇಲೆ ಯಾವುದೇ ಲಾಂಛನವಿಲ್ಲ. ಇಲ್ಲಿನ ಗರ್ಭಗೃಹವು ಹಜಾರಕ್ಕಿಂತ ಸ್ವಲ್ಪ ಎತ್ತರವಾಗಿದೆ. ಇದು ಇಲ್ಲಿನ ವಿಶೇಷತೆಯಾಗಿದೆ. ಇಲ್ಲಿನ ಗರ್ಭಗೃಹದ ಮುಖಭಾಗದಲ್ಲಿ ಒಂದು ಅಂಚು ಕಟ್ಟಿದ್ದು ಎಲೆಗಳು ಮತ್ತು ಹೂವುಗಳ ವಿನ್ಯಾಸವನ್ನು ಕೆತ್ತಿದೆ. ಎರಡೂ ಕಂಬಗಳ ಜೊತೆಗೆ ಚೈತ್ಯದ ಮಾದರಿಯ ಅಲಂಕಾರವೂ ಇದೆ.

ಇಲ್ಲಿರುವ ಕಂಬಗಳು ಈ ಗುಹಾಲಯದ ಹಜಾರವನ್ನು ಮೊಗಸಾಲೆಯಿಂದ ಬೇರ್ಪಡಿಸುತ್ತವೆ. ಈ ಕಂಬಗಳಿಗೆ ಚೌಕಾಕಾರವಾದ ತಳಭಾಗವು, ಅಷ್ಟಭುಜ, ಶೋಡಶ ಭುಜ, ಕಾಂಡಭಾಗವು ಮೇಲೆ ಶೋಡಶ ಮುಖಗಳುಳ್ಳ ಕುಂಭವು ಚೌಕಾಕಾರದ ಮುಚ್ಚಿಗೆಯು ಮುಷ್ಠಿಬಂಧಾಕೃತಿಯ ಚಾಚುಶಿಲ್ಪವೂ ಇದೆ. ಛಾವಣಿಯಲ್ಲಿ ದೊಡ್ಡ ಕಮಲಗಳು ಹೂಗಳ ಅಲಂಕಾರ, ಸುಂದರವಾದ ಬಾಲಗಳುಳ್ಳ ಮೀನುಗಳು, ಮಕರಗಳು, ಬಾಲಗಳಿರುವ ದಂಪತಿಗಳನ್ನು ಕೆತ್ತಲಾಗಿದೆ. ಛಾವಣಿಯ ಚೌಕಾಕಾರದ ಅಂಚು ಗುಲಾಬಿ ಪಟ್ಟಿಕೆಗಳಿಂದ ಕೂಡಿದೆ.

ಗರ್ಭಗೃಹಕ್ಕೆ ಹೋಗುವ ದ್ವಾರದ ಬಾಗಿಲಿನ ಎರಡೂ ಪಕ್ಕೆಗಳಲ್ಲಿ ತ್ರಿಭಂಗಿಯಲ್ಲಿ ನಿಂತ ದಿವ್ಯ ಆಕೃತಿಗಳಿವೆ. ಎಡಗಡೆಯ ಶಿಲ್ಪದಲ್ಲಿ ಮೀನನ್ನು ಹಿಡಿದುಕೊಂಡಿರುವ ಯಕ್ಷನ ಶಿಲ್ಪವಿದೆ. ಈ ಶಿಲ್ಪದಿಂದಲೇ ಈ ಬಸದಿಗೆ 'ಮೀನ ಬಸದಿ' ಎಂದು ಹೆಸರು ಬಂದಿರುವುದು.[58]

---

57 ಡಾ. ತಿಪ್ಪೇರುದ್ರಸ್ವಾಮಿ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.123.

58 ಅ. ಸುಂದರ, ಕರ್ನಾಟಕ ಚರಿತ್ರೆ, ಪು.500.

3. ರಾವಣ ಫಡಿ :

ಚಾಲುಕ್ಯರ ಕಾಲದ ವಿಕಸಿತವಾದ ತಲವಿನ್ಯಾಸವನ್ನು ಇಲ್ಲಿ ಕಾಣಬಹುದು. ಇದೊಂದು ಶಿವಗುಹೆ. ಇಲ್ಲಿ ಒಂದು ಗರ್ಭಗೃಹ, ಅಂತರಾಳ, ಸಭಾಮಂಟಪ ಎರಡು ಪಾರ್ಶ್ವಕೋಷ್ಠಗಳಿಂದ ಕೂಡಿದ್ದು ವಾಸ್ತುನಿರ್ಮಾಣಕಾರರಲ್ಲಿ ಬೆಳವಣಿಗೆ ಹಂತವನ್ನು ಸೂಚಿಸುತ್ತಿರುವುದರಿಂದ ಎಸ್. ರಾಜಶೇಖರ್‌ರವರು ಅವರ ನಿರ್ಮಾಣ ಕಾಲವನ್ನು 7ನೇ ಶತಮಾನದ ಉತ್ತರಾರ್ಧವೆಂದು ತಿಳಿಸುತ್ತಾರೆ.[59]

ಈ ಗುಹೆಯ ಗರ್ಭಗೃಹಕ್ಕೆ ನೇರವಾಗಿ ಒಂದು ನಂದಿಯ ವೇದಿಕೆ ಇದೆ. ಇದು ಹೊರನೋಟಕ್ಕೆ ಬಹಳ ಸಾಧಾರಣವಾಗಿ ಇರುವಂತೆ ಕಾಣಿಸುವ ವಿಸ್ತಾರದಲ್ಲಿ ಸಣ್ಣದಾಗಿ ಕಾಣುತ್ತಿದ್ದು ಇದನ್ನು ಒಳಹೊಕ್ಕಾಗ ಇದರ ಒಳಗಿನ ಶಿಲ್ಪ ಸಮುಚ್ಚಯ ಎಂತಹವರನ್ನು ಬೆರಗುಗೊಳಿಸುತ್ತದೆ. ಈ ಗುಹಾಲಯವು 6ನೇ ಶತಮಾನದ ಕೊನೆಯ ಭಾಗಕ್ಕೆ ಸೇರಿರಬಹುದೆಂದು ಅ. ಸುಂದರವರು ಅಭಿಪ್ರಾಯ ಪಡುತ್ತಾರೆ. ಆದರೆ ಎಸ್. ನಾಗರಾಜುರವರು ಇದು 6ನೇ ಶತಮಾನಕ್ಕೆ ಸೇರಿರಬಹುದೆಂದು ಭಾವಿಸುತ್ತಾರೆ. ಇವೆಲ್ಲಾ ವಾದಗಳನ್ನು ತಳ್ಳಿಹಾಕಿರುವ ಹೆಚ್. ಸರ್ಕಾರರವರು ಇಲ್ಲಿರುವ ಮೊಗಸಾಲೆಯ ಗೂಡುಗಳಲ್ಲಿನ ಮೂರ್ತಿಗಳು ಪಲ್ಲವರಿಂದ ಪ್ರಭಾವಿತವಾಗಿರುವುದರಿಂದ ಇದನ್ನು 8ನೇ ಶತಮಾನದ ಆಧಿಭಾಗದಲ್ಲಿ ನಿರ್ಮಿಸಿರಬಹುದೆಂದು ಭಾವಿಸಿದ್ದಾರೆ. ಈ ಗುಹೆಯು ನಟರಾಜನ ಶಿಲ್ಪವಿರುವ ಅಧಿಷ್ಠಾನದಲ್ಲಿ 'ಶ್ರೀ ಕಣಮಿಞ' ಎಂಬ ಹೆಸರನ್ನು ಕೆತ್ತಿದ್ದು ಅದನ್ನು ಕುರಿತು ಇತ್ತೀಚೆಗೆ ಕೆ.ವಿ. ರಮೇಶ್‌ರವರು ಇದು 'ಶ್ರೀ ರಣವಿಕ್ರ' ಆಗಿದ್ದು ಮಂಗಳೇಶನ ಬಿರುದು ಆಗಿರಬಹುದೆಂದು ಸೂಚಿಸಿದ್ದಾರೆ. ಈ ಶಾಸನದ ಲಿಪಿಯು ಕ್ರಿ.ಶ. 6ನೇ ಶತಮಾನದ್ದಾಗಿದ್ದು ಇದು ಮಂಗಳೇಶನಿಂದ ನಿರ್ಮಿತವಾದುದು ಎಂದು ಹೇಳಿದ್ದಾರೆ.[60]

ರಮೇಶ್‌ರವರ ಪ್ರಕಾರ ಹೇಳುವುದಾದರೆ ದಶಭುಜನ ನಟರಾಜನ ಪ್ರತಿಮೆಯಲ್ಲಿ ಮಂಗಳೇಶನು ತನ್ನನ್ನು ತಾನು ರೂಪಿಸಿಕೊಂಡಿದ್ದರೆ ಅಲ್ಲಿನ ವಿಗ್ರಹಗಳಲ್ಲಿ ಇತರ ವಿಗ್ರಹಗಳಾದ ಮಾತೃಕೆಯರು, ಪಾರ್ವತಿ, ಕಾರ್ತಿಕೇಯ, ಗಣೇಶರು ಮಂಗಳೇಶನ ಪೂರ್ವಜರನ್ನು ಅರಮನೆಯ

---

59 ಡಾ. ಎಸ್. ರಾಜಶೇಖರ್ ಕರ್ನಾಟಕದಲ್ಲಿ ಕಲೆ ಮತ್ತು ವಾಸ್ತುಶಿಲ್ಪ.

60 ಬಾ.ರಾ. ಗೋಪಾಲ್, ಕರ್ನಾಟಕದ ಶಿಲ್ಪಕಲೆಗಳು, ಪು.47.

ಸ್ತ್ರೀಯರನ್ನು ಪ್ರತಿನಿಧಿಸಬಹುದಲ್ಲಾ ಎಂದು ಊಹಿಸಲಾಗಿದೆ.[61] ಆದರೆ ವಾಸ್ತವದಲ್ಲಿ ಈ ಗುಹೆಯು ಕ್ರಿ.ಶ. 578ರಲ್ಲಿ ಅಸ್ತಿತ್ವಕ್ಕೆ ಬಂದಿತು ಎನ್ನಲು ಶಾಸನ ಆಧಾರವೂ ಇದೆ. ಈ ಗುಹಾಲಯಕ್ಕೂ ಗುಹಾಲಯದ ಹೆಸರಿಗೂ, ರಾವಣನಿಗೂ ಏನೂ ಸಂಬಂಧವಿಲ್ಲ. ಗುಹೆಯಲ್ಲಿನ ನಟರಾಜನ ಮೂರ್ತಿಯನ್ನು ರಾವಣನ ಮೂರ್ತಿಯಿರಬಹುದೆಂದು ಭಾವಿಸಿ ಈ ಹೆಸರು ಬಂದಿರಬಹುದು ಅಥವಾ 'ರಾವಳ' ಎಂಬ ವ್ಯಕ್ತಿಯೊಬ್ಬ ಇಲ್ಲಿ ವಾಸವಾಗಿದ್ದುದರಿಂದ ಅವನ ಹೆಸರೇ ಈ ಗುಹೆಗೆ ಅನ್ವಯಿಸಲ್ಪಟ್ಟಿರಬಹುದೆಂದು ಊಹಿಸಲಾಗಿದೆ. ಮರಾಠಿ ಆಡು ಭಾಷೆಯಲ್ಲಿ 'ರಾವಳ್' ಎಂಬ ಪದಕ್ಕೆ 'ಕಲ್ಲು' ಎಂಬ ಅರ್ಥವಿದೆ. ಹಿಂದೆ ಈ ಭಾಗವೆಲ್ಲವೂ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದರಿಂದ ಮರಾಠಿ ಭಾಷೆಯ ಪ್ರಭಾವ ಇಲ್ಲಿದೆ.[62]

ಇದೊಂದು ಮರಳುಗಲ್ಲಿನಲ್ಲಿ ಕೊರೆದ ಗುಹೆ ವಿಸ್ತಾರದಲ್ಲಿ ಇದು ಕಿರಿದಾಗಿದ್ದು 30 ಅಡಿಗಳಷ್ಟು ಉದ್ದದ ಭಾವಣಿಯ ಗುಹೆಯಾಗಿದೆ. ಇದರ ಎತ್ತರ ಸುಮಾರು 10 ಅಡಿಗಳು ಹೆಚ್ಚು ಕಡಿಮೆ ಅರ್ಧಸಮಾನ ಕೇಂದ್ರದ ವಿನ್ಯಾಸದ ಗೋಡೆಯ ಮಧ್ಯದ ಮಂಟಪ ನಾಲ್ಕೂ ಕಡೆ ತೆರೆದಿದೆ. ಮುಂಭಾಗದಲ್ಲಿ ಎರಡೂ ಕಡೆ ಕೋಷ್ಠದೊಳಗೆ ಕುಬ್ಜಾಕಾರದ ಶಂಖನಿಧಿ ಮತ್ತು ಪದ್ಮನಿಧಿಗಳ ಉಬ್ಬುಶಿಲ್ಪಗಳಿವೆ. ಇಲ್ಲಿರುವ ದ್ವಾರಪಾಲಕರ ವಿಗ್ರಹಗಳು ಮತ್ತು ಸಪ್ತಮಾತೃಕೆಯರ ವಿಗ್ರಹಗಳು ಇತರ ವಿಗ್ರಹಗಳಿಗಿಂತ ಭಿನ್ನವಾಗಿವೆ. ಇಲ್ಲಿ ದ್ವಾರಪಾಲಕರು ಧರಿಸಿರುವ ಕಿರೀಟ–ಮಕುಟಗಳು ಮೇಲಕ್ಕೆ ಹೋದಂತೆ ಕಿರಿದಾಗುವ 'ಸಿಥಿಯನ್' ಶೈಲಿಯಲ್ಲಿವೆ. ಅವರು ಧರಿಸಿರುವ ವಸ್ತ್ರದ ಮಡಿಕೆಗಳು ಸಹ ವಿಭಿನ್ನ ಶೈಲಿಯಲ್ಲಿವೆ.

ಗುಹೆಯ ಅಂತರಾಳದ ಹಿಂಬದಿಯ ಮಧ್ಯದಲ್ಲಿ ಒಂದು ಗರ್ಭಗುಡಿಯಿದ್ದು, ಅದರೊಳಗೆ ಶಿವಲಿಂಗವಿದೆ. ಪೀಠ ಮತ್ತು ಲಿಂಗ ಒಂದೇ ಕಲ್ಲಿನಿಂದ ಕೊರೆಯಲ್ಪಟ್ಟಿದ್ದು ಅದೇ ಕಲ್ಲಿನಲ್ಲೇ ಗರ್ಭಗೃಹದ ನೆಲವನ್ನೂ ಕೊರೆದಿದೆ.

ಈಗ ಹಾನಿಗೊಂಡಿರುವ ಭಾವಣಿಯಲ್ಲಿ ಕಮಲಗಳಿವೆ. ಬೌದ್ಧಧರ್ಮದ ಸ್ತೂಪಗಳಲ್ಲಿ ಇದ್ದಂತೆ ಇದನ್ನೂ ಸಹ ಬಹುಮಟ್ಟಿಗೆ ಚೌಕಾಕಾರವಾಗಿ ಕೊರೆಯಲಾಗಿದೆ. ಇದೊಂದು ತ್ರಿಕೂಟಾಚಲವಾಗಿದೆ. ಈ

---

61 ಅದೇ.

62 ಬಾ.ರಾ ಗೋಪಾಲ, ಕರ್ನಾಟಕದ ಕಲೆಗಳು, ಪು.45.

ಗುಹೆಯ ಬಲಗಡೆ ಎರಡು ಮತ್ತು ಎಡಗಡೆ 4 ಮೆಟ್ಟಿಲುಗಳನ್ನು ಏರಿದರೆ ಪಕ್ಕದ ಗುಡಿಗಳಿಗೆ ಹೋಗಬಹುದು. ಇದರ ಎದುರಿನ ಅಂತರಾಳಕ್ಕೂ ಸಹ 2 ಮೆಟ್ಟಿಲುಗಳಿವೆ. ಅಂತರಾಳದ ಬಲಭಾಗದ ಗುಡಿಯಲ್ಲಿ ಸಪ್ತಮಾತೃಕೆಯರ ವಿಗ್ರಹಗಳಿವೆ. ಹಜಾರದ ಗೋಡೆಗಳಲ್ಲಿ ಶಿವ, ಹರಿಹರ ಮತ್ತು ಅರ್ಧನಾರೀಶ್ವರ ಮುಂತಾದ ವಿಗ್ರಹಗಳನ್ನು ಕೆತ್ತಲಾಗಿದೆ. ಅಕಾರದಲ್ಲಿ ಇವು ದೊಡ್ಡದಾಗಿವೆ. ಇದರ ಕೋಷ್ಠಗಳ ತಳಹದಿಯೂ, ಸುಖನಾಸಿಯ ತಳಭಾಗವೂ ವಿವಿಧ ಭಂಗಿಗಳೆಲ್ಲಿರುವ ಯಕ್ಷರ ಶಿಲ್ಪಗಳಿಂದ ಕೂಡಿವೆ. ಯಕ್ಷರು ವೀಣೆ, ಮದ್ದಳೆ, ಶಂಖಗಳನ್ನು ಧಾರಿಸುತ್ತಿರುವಂತೆ ಚಿತ್ರಿಸಲಾಗಿದೆ. ಇಲ್ಲಿನ ಮಂಟಪದ ಛಾವಣಿಯಲ್ಲಿ ಹೂವುಗಳ ಚೌಕಪಟ್ಟಿಗಳಿಂದ ಆವರಿಸಲ್ಪಟ್ಟ ದೊಡ್ಡ ಕಮಲವಿದೆ. ಮಧ್ಯಭಾಗದಲ್ಲಿ ಇಳಿಬಿದ್ದಿರುವ ಛತ್ತು, ಅಲ್ಲಲ್ಲಿ ಉಬ್ಬುಕೆತ್ತನೆಗಳನ್ನು, ಅಂತರಾಳದ ಛಾವಣಿಯನ್ನು ಮೂರು ಪದಕಗಳಾಗಿ ವಿಂಗಡಿಸಿದ್ದು ಒಂದರಲ್ಲಿ ಇಂದ್ರನು ಶಚಿಯೊಡನೆ ಐರಾವತದಲ್ಲಿ ಕುಳಿತು ವಿಹರಿಸುತ್ತಿರುವ, ಕೊನೆಯದರಲ್ಲಿ ವಿಷ್ಣುವು ಗರುಡಾಸೀನನಾಗಿರುವ ವಿಗ್ರಹಗಳಿವೆ. ಮಧ್ಯದ ಪದಕದಲ್ಲಿ ಸೂಕ್ಷ್ಮವಾಗಿ ಕೆತ್ತಿರುವ ಕಮಲವಿದೆ. ಮೊದಲನೆಯ ಅಂತರಾಳದ ಗೋಡೆಯಲ್ಲಿ ಮನುಷ್ಯನ ಆಕಾರದ ವರಾಹ ಮೂರ್ತಿಯನ್ನು ಅದರ ಎದುರಿನ ಗೋಡೆಯಲ್ಲಿ ಮಹಿಷಾಸುರಮರ್ಧಿನಿ ಶಿಲ್ಪಗಳಿವೆ. ಇಲ್ಲಿ ಗರ್ಭಗುಡಿಯನ್ನು ಬೇರ್ಪಡಿಸುವ ಬಾಗಿಲಿವೆ. ಆದರೆ ಬಿದ್ದುಹೋಗಿದ್ದು ಸ್ವಲ್ಪಭಾಗ ಮಾತ್ರ ಉಳಿದಿದೆ. ಭೂದೇವಿಯು ವರಹನ ಎಡಭುಜದ ಮೇಲೆ ಕುಳಿತಂತೆ ಕೆತ್ತಲ್ಪಟ್ಟಿರುವುದು ಮತ್ತೊಂದು ಕುತೂಹಲಕಾರಿ ಸಂಗತಿ. ರಾವಣಫಡಿಯಲ್ಲಿ ಕಾಣುವಷ್ಟು ಅಂಗಗಳು ಬಾದಾಮಿ ಚಾಲುಕ್ಯರ ಯಾವ ಗುಹೆಯಲ್ಲೂ ಕಂಡುಬರಲಾರವು.

4. ಜೈನ ದೇವಾಲಯ :

ಇದು ಐಹೊಳೆಯ ಮೇಗುಲಿಯ ನೈರುತ್ಯಕ್ಕಿದೆ. ಇದನ್ನು ಎರಡು ಅಂತಸ್ತಿನ ಜಿನಾಲಯ ಎಂದೂ ಸಹ ಕರೆಯುತ್ತಾರೆ. ಇದರ ಅರ್ಧಭಾಗ ನೈಸರ್ಗಿಕ ಗುಹೆ, ಇಲ್ಲಿ ಗರ್ಭಗುಡಿಗಳಿವೆ. ಆದರೆ ಮುಂದೆ ಮಂಟಪ ಮತ್ತು ಕಂಬಗಳ ತೆರೆದ ಅಂಗಳಗಳಿವೆ. ಇವುಗಳನ್ನು ನಯಗೊಳಿಸಿದ ಕಲ್ಲಿನಿಂದ ಕಟ್ಟಲಾಗಿದೆ. ಈ ಅಂಗಳಕ್ಕೆ ಹೊಂದಿಕೊಂಡ 4 ಚೌಕಾಕಾರದ ಕಂಬಗಳು 2 ಅರೆಗಂಬಗಳು ಇವೆ. ಒಳಗೆ 3 ಕೋಣೆಗಳಿದ್ದು ಮಧ್ಯದ್ದು ಗರ್ಭಗುಡಿ. ಇದರ ಎರಡೂ ಕಡೆಗಳಿರುವ ಕೋಣೆಗಳಲ್ಲಿ ಏನೂ ಇಲ್ಲ. ಇದರ ಮೇಲಿನ ಅಂತಸ್ತಿನಲ್ಲೂ ಕೆಳಗೆ ಇದ್ದಂತೆ ಒಂದು ಅಂಗಳ ಇದೆ. ಇದರ ಹಿಂದೆ ಒಂದೇ ಒಂದು

ಗರ್ಭಗುಡಿಯಿದೆ. ಮೇಲಂತಸ್ತಿಗೆ ಹೋಗಲು ಮೆಟ್ಟಿಲುಗಳು ಇಲ್ಲ. ಗುಹೆಯ ಹೊರಬದಿಯಿಂದಲೇ ಇಲ್ಲಿಗೆ ಹೋಗಬೇಕು. ಕೆಳಭಾಗದಲ್ಲಿನ ಅಂಗಳ ಮತ್ತು ಮಂಟಪವನ್ನು ಒಂದು ಗೋಡೆ ಬೇರ್ಪಡಿಸಿದ್ದು ಇದರ ದ್ವಾರದ ಚೌಕಟ್ಟು ಅಲಂಕೃತವಾಗಿದೆ.

ಸುರುಳಿಗಳ, ಕುದುರೆಯ, ಮಿಥುನದ, ಶಂಖ ಊದುತ್ತಿರುವ ಕುಬ್ಜನ ಚಿತ್ರಗಳಲ್ಲದೆ ಪದ್ಮಪಾಣಿಯ ವಿಗ್ರಹವನ್ನು ಕೆತ್ತಿದೆ. ಈ ದ್ವಾರದ ಎರಡೂ ಕಡೆಗಳಲ್ಲಿ ಕಿರಿದಾದ ಗೂಡುಗಳಿದ್ದು ಅದರೊಳಗೆ ಅಲ್ಪಪ್ರಮಾಣದ ವಿಗ್ರಹಗಳನ್ನು ಕೆತ್ತಲಾಗಿದೆ. ಮೂಲತಃ ಇದು ಜಿನಾಲಯವೆಂದು ಭಾವಿಸಿದ್ದು ಈಗ ಬೌದ್ಧರ ಚೈತ್ಯವಾಗಿದ್ದಿರಬಹುದೆಂದು ಗುರುತಿಸಬಹುದಾಗಿದೆ. ಈ ಶಾಖೆಗಳ ಗೂಡುಗಳಲ್ಲಿರುವ ಚಿತ್ರಗಳು ಬುದ್ಧನ ಜನನ, ಸಿದ್ಧಾರ್ಥನನ್ನು ಮಾರನ ಮನವೊಲಿಸಿಕೊಳ್ಳಲು ಪ್ರಯತ್ನಿಸಿದುದು, ಬುದ್ಧನ ಉಪದೇಶ ಬುದ್ಧನು ತನ್ನ ಶಿಷ್ಯಂದಿರಾದ ಆನಂದ ಮುಂತಾದವರೊಂದಿಗೆ ಇರುವ ಚಿತ್ರಗಳು ಬುದ್ಧನಿಗೆ ಸಂಬಂಧಿಸಿದವುಗಳೆಂದು ಇತ್ತೀಚಿಗೆ ತಿಳಿಯಲಾಗಿದೆ.[63]

ಇದರ ಗರ್ಭಗುಡಿಯಲ್ಲಿ ಈಗ ಪೀಠ ಮಾತ್ರವಿದ್ದು ಇಲ್ಲಿ ಪ್ರತಿಷ್ಠಾಪಿಸಿರಬಹುದಾದ ವಿಗ್ರಹ ಕಾಣೆಯಾಗಿದೆ. ಆದರೆ ದೇವಾಲಯದ ಹೊರಗೆ ಒಂದು ಬುದ್ದನ ವಿಗ್ರಹವಿದ್ದು ಈತ ದ್ಯಾನಮುದ್ರೆಯಲ್ಲಿರುವುದು ಕಂಡುಬರುತ್ತದೆ. ಎದೆಯ ಮೇಲೂ ಮತ್ತು ಎಡಭುಜದ ಮೇಲು ಮಡಿಕೆಗಳ ಮೇಲೂ, ಮೇಲು ಹೊದಿಕೆಯನ್ನು ಕಾಣಬಹುದು. ಆದರೆ ಈ ವಿಗ್ರಹಕ್ಕೆ ರುಂಡ ಇಲ್ಲ. ಈ ಗರ್ಭಗುಡಿಯ ಎರಡೂ ಬದಿಗಳ ಕಿರುಕೋಣೆಗಳು, ಬೌದ್ಧ ಸನ್ಯಾಸಿಗಳು ಮಲಗುವ ಸ್ಥಳವೆಂದು ಅಲ್ಲಿ ಅವರಿಗಾಗಿ ಕಲ್ಲಿನ ಮಂಚವನ್ನು ಕೊರೆಯಲಾಗಿದೆ ಎಂದು ಎಸ್. ಶೆಟ್ಟರ್‌ರು ಸೂಚಿಸಿದ್ದಾರೆ. ಇದನ್ನು ಅವರು ಬೌದ್ಧರ ವಿಹಾರವಾಗಿತ್ತೆಂದೂ ಸಹ ವಾದ ಮಾಡುತ್ತಾರೆ. ಅ. ಸುಂದರರವರು ಇದು ಭಿಕ್ಷುಕರ ವಿಶ್ರಾಂತಿ ಸ್ಥಳ ಎಂದು ತಿಳಿಸಿದ್ದಾರೆ. ದ್ವಾರದ ಚೌಕಟ್ಟಿನ ಚಿತ್ರಗಳು ಬುದ್ಧನ ಜೀವನ ಘಟನೆಗಳನ್ನು ನಿರೂಪಿಸುತ್ತವೆಂದು ಅವರು ಸೂಚಿಸಿದ್ದಾರೆ. ಇದನ್ನು ಬುದ್ದರ ಚೈತ್ಯಾಲಯ ಎಂದು ಗುರುತಿಸಿದುದು, ಈ ವಿಗ್ರಹಗಳನ್ನು ಬೌದ್ದ ವಿಗ್ರಹಗಳೆಂದು ಗುರುತಿಸುವುದಕ್ಕೆ ಕಾರಣವಾಯಿತು.[64]

---

63 ಭಾ.ರಾ. ಗೋಪಾಲ್, ಕರ್ನಾಟಕದ ಕಲೆಗಳು, ಪು.49.

64 Percy Brown, Indian Architecture Buddhist and Hindu, Mumbai, 1971.

ಒಳಮಳಿಗೆಯ ಮಧ್ಯದ ಅಂಕಣದಲ್ಲಿ ಮುಕ್ಕೆಡೆಯ ಕೆಳಗೆ ಕುಳಿತಿರುವ ಒಂದು ವಿಗ್ರಹವನ್ನು ಚಿತ್ರಿಸಲಾಗಿದೆ. ಈ ವಿಗ್ರಹ ವಸ್ತ್ರವನ್ನು ಧರಿಸಿದ್ದು ಇದನ್ನಾಧರಿಸಿ ಕಸಿನ್ಸ್‌ರವರು ಇದನ್ನು ಜಿನನ ವಿಗ್ರಹವೆಂದು ಭಾವಿಸಿದರು.[65] ಆದರೆ ಕರ್ನಾಟಕದಲ್ಲಿ ಜೈನಧರ್ಮದ ದಿಗಂಬರ ಪಂತವಾಗಿದ್ದು ಅವರು ನಿರ್ವಸ್ತ್ರಧಾರಿಗಳಾಗಿದ್ದು ಇದು ಬೌದ್ಧರ ವಿಗ್ರಹಗಳಾಗಿರಬಹುದೆಂದು ಎಸ್. ಶೆಟ್ಟರ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇಲ್ಲಿನ ವಿಗ್ರಹದ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಅಂಗೈ ಎದೆಯ ಮೇಲೆ ಹೊರಮುಖವಾಗಿದ್ದು ಹೆಬ್ಬೆರಳು ಮತ್ತು ತೋರುಬೆರಳುಗಳು ಕೂಡಿಕೊಂಡಿವೆ. ಕಿರುಬೆರಳು ಮೇಲುಗಡೆ ಇದೆ. ಎಡಗೈ ಬಲಗಾಲಿನ ಹಿಮ್ಮಡಿಯ ಮೇಲಿದೆ. ಇದು ಸ್ಪಷ್ಟವಾಗಿ ಬೌದ್ಧವಿಗ್ರಹಗಳಲ್ಲಿ ಬುದ್ದನಿಗೆ ಸಂಬಂಧಿಸಿದಂತೆ ಕಂಡುಬರುವ ಮುದ್ರೆ. ಹಣೆಯಲ್ಲಿ 2 ಹುಬ್ಬುಗಳ ನಡುವೆ ಉಬ್ಬು ಚಿಹ್ನೆಯಿದೆ. ಇದೂ ಸಹ ಬುದ್ಧನಲ್ಲಿ ಕಂಡುಬಂದ 32 ಮಹಾಪುರುಷ ಲಕ್ಷಣಗಳಲ್ಲಿ ಒಂದು.[66] ಆದುದರಿಂದ ಇದು ಬೌದ್ಧಧರ್ಮಕ್ಕೆ ಸಂಬಂಧಿಸಿದ ಚೈತ್ಯಾಲಯ ಎಂದು ಅ. ಸುಂದರವರು ಅಭಿಪ್ರಾಯಪಟ್ಟಿದ್ದಾರೆ.

ಈ ಗುಹೆಯ ಮುಂಭಾಗದ ಮೇಲೆ ಕೆತ್ತಲ್ಪಟ್ಟಿರುವ ವ್ಯಕ್ತಿಗಳ ಹೆಸರುಗಳ ಲಿಪಿಯ ಆಧಾರದ ಮೇಲೆ ಇವು 6 ರಿಂದ 7ನೇ ಶತಮಾನವು ಎನ್ನಬಹುದು. ಬಹುಶಃ ಇದು ಶೈವ, ಜೈನ ಗುಹೆಗಳ ನಂತರ ಅಸ್ತಿತ್ವಕ್ಕೆ ಬಂದಿರಬಹುದು.

5. ಶೈವ ಗುಹಾಲಯ :

ಇದು ಗಾತ್ರದಲ್ಲಿ ಚಿಕ್ಕದಾಗಿದ್ದು ಒಂದು ಶಿವಲಿಂಗ ಮಾತ್ರ ಇದ್ದು, ಗರ್ಭಗೃಹ ಮತ್ತು ಸುಖನಾಸಿಗಳನ್ನು ಹೊಂದಿದೆ.

ಬಿ. ನಿರ್ಮಿತ ವಾಸ್ತುಶಿಲ್ಪ :

ಕರ್ನಾಟಕದಲ್ಲಿ ಮೌರ್ಯರು ಆಳ್ವಿಕೆಯನ್ನು ನಡೆಸಿದರೂ ಶಿಲ್ಪಕಲೆಯ ನಿರ್ಮಾಣಕಾರ್ಯ ಶಾತವಾಹನರ ಆಳ್ವಿಕೆಯ ಕೊನೆಯ ಹಂತದಲ್ಲಿ ಪ್ರಾರಂಭವಾಯಿತು ಎಂಬುದಕ್ಕೆ ಸಂಗಮೇಶ್ವರ ಗುಡಿಯ ಮುಂಭಾಗದಲ್ಲಿ ದೊರಕಿರುವ ಆಯತಾಕಾರದ ಇದ್ದಿಗೆಯ ಸಭಾಮಂಟಪವು ಗುರುತಾಗಿದೆ.

---

65 ಭಾರಾ ಗೋಪಾಲ್, ಕರ್ನಾಟಕದ ಕಲೆಗಳು, ಪು.49.

66 ಅ.ಸುಂದರ ಕರ್ನಾಟಕ ಚರಿತ್ರೆ.

ಇವರ ಮಾದರಿಯಲ್ಲಿಯೇ ಚಾಲುಕ್ಯರೂ ಸಹ ಅಯತಾಕಾರದ ತಲ ವಿನ್ಯಾಸವಿರುವ ರಾಚನಿಕ ಮಂದಿರಗಳನ್ನು ನಿರ್ಮಿಸಿರಬಹುದು.[67] ಇದಕ್ಕೆ ಉದಾಹರಣೆಯಾಗಿ ಮಹಾಕೂಟದಲ್ಲಿರುವ ವಿಷ್ಣು ಪುಷ್ಕರಣಿಯಲ್ಲಿರುವ ಚೌಕಾಕಾರದ ಮಂಟಪ ಮತ್ತು ಐಹೊಳೆಯಲ್ಲಿನ ಅತೀ ಪ್ರಾಚೀನ ದೇವಾಲಯಗಳಲ್ಲಿ ಒಂದು ಎನಿಸಿರುವ ಗೌಡರ ಗುಡಿಯು ಆಯತಾಕಾರದ ರಚನೆಯಾಗಿದೆ. ಇಂತಹ ಸರಳ ದೇವಾಲಯಗಳನ್ನು ರಚಿಸಲು ಪ್ರಾರಂಭಿಸಿದ ಚಾಲುಕ್ಯರು ತಮ್ಮ ಪ್ರಯೋಗಶೀಲ ಗುಣದಿಂದ ಹೊಸ ವಾಸ್ತುರಚನೆಗಳನ್ನು ಜೋಡಿಸುತ್ತಾ ಸುಂದರ ದೇವಾಲಯಗಳನ್ನು ನಿರ್ಮಿಸಲು ಶಕ್ತರಾದುದಲ್ಲದೆ ಪೂರ್ವದ ಗುಪ್ತರ ವಾಸ್ತುಶೈಲಿಯಿಂದ ಪ್ರೇರಣೆ ಪಡೆದಿದ್ದರೂ, ತಮ್ಮದೇ ಆದ ವಾಸ್ತುಶೈಲಿಯನ್ನು ಆವಿಷ್ಕಾರಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರು ಪ್ರಾರಂಭದಲ್ಲಿ ಗುಹಾಲಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದು, ನಂತರದ ದಿನಗಳಲ್ಲಿ ರಚನಾ ದೇವಾಲಯಗಳಿಗೆ ಮನ್ನಣೆ ನೀಡಿದರು. ಇವರ ಕಾಲದ ದೇವಾಲಯದ ಗರ್ಭಗೃಹ, ಮುಖಮಂಟಪ, ದ್ವಾರ, ಶಿಖರ, ಸುಖನಾಸಿ, ಅಂತರಾಳಗಳಲ್ಲಿ ವಿಭಿನ್ನತೆಯನ್ನು ಕಾಣಬಹುದು. ಹಾಗೆಯೇ ಒಂದು ದೇವಾಲಯದ ವಾಸ್ತುಶಿಲ್ಪಕ್ಕೂ ಮತ್ತೊಂದು ದೇವಾಲಯದ ವಾಸ್ತುಶಿಲ್ಪಕ್ಕೂ ವಿಭಿನ್ನತೆಯನ್ನು ಮೆರೆದಿರುವುದನ್ನು ಕಾಣಬಹುದು.

ಇವರು ಸಂಧಾರ ಮತ್ತು ನಿರಂಧಾರ ಎರಡೂ ಬಗೆಯ ದೇವಾಲಯಗಳಿಗೂ ನಿರ್ಮಿಸಿದ್ದಾರೆ. ಮೇಗುತಿ ಹುಚ್ಚೀಮಲ್ಲಿಗುಡಿ, ದುರ್ಗಾ, ಭಗವತಿ ಮತ್ತು ಚಿಕ್ಕ ಗುಡಿಗಳು ಸಂಧಾರ ಮಾದರಿಯಾವಾದರೆ, ತಾರಪ್ಪ, ಹುಚ್ಚಪ್ಪಯ್ಯ ಗುಡಿ, ಗಳಗನಾಥ, ಸೂರ್ಯ, ಚಕ್ರಗುಡಿ, ಮಲ್ಲಿಕಾರ್ಜುನ ದೇವಾಲಯ, ಹುಚ್ಚಪ್ಪಯ್ಯನ ಮಠ ನಿರಂಧಾರ ಮಾದರಿಯವು.

ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ನಾಗರಶೈಲಿಯ ದೇವಾಲಯಗಳೆಂದರೆ ಹುಚ್ಚಿಮಲ್ಲಿ, ದುರ್ಗಾ, ಚಕ್ರಗುಡಿ, ಸೂರ್ಯ ಮತ್ತು ಹುಚ್ಚಪ್ಪಯ್ಯ ಗುಡಿ ಇವರ ಕಾಲದ ದ್ರಾವಿಡ ಶೈಲಿಯ ದೇವಾಲಯಗಳೆಂದರೆ ರಾವಳಫಡಿಯಿರುವ ಸಣ್ಣ ಗುಡಿ, ಮಲ್ಲಿಕಾರ್ಜುನ ಮತ್ತು ಗಳಗನಾಥ ಮೊದಲು ಇವರು ಲೌಕಿಕ ಉಪಯೋಗಕ್ಕಾಗಿ ವಿಶಾಲವಾದ ಸಭಾಭವನಗಳನ್ನು ನಿರ್ಮಿಸಿದ್ದು ನಂತರದ ದಿನಗಳಲ್ಲಿ ದೇವಾಲಯಗಳಾಗಿ ಪರಿವರ್ತಿಸಿದರು. ದೇವಾಲಯದ ಯೋಜನೆಗೆ ಸಂಬಂಧಿಸಿದಂತೆ ಹೇಳುವುದಾದರೆ

---

67 ಡಾ. ತಿಪ್ಪೇರುದ್ರಸ್ವಾಮಿ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು.247.

ವಾಸ್ತುಶಿಲ್ಪದ ತೊಟ್ಟಿಲಾದ ಐಹೊಳೆಯೇ ಎಲ್ಲಾ ದೇವಾಲಯಗಳೂ ಏಕಕೂಟವೇ ಆಗಿದ್ದರೂ ವಿಭಿನ್ನ ರೀತಿಯ ಕಲಾಶೈಲಿಯನ್ನು ಬಳಸಿರುವುದನ್ನು ನೋಡಬಹುದು. ಅದರಲ್ಲಿ ಪ್ರಮುಖವಾಗಿ 2 ರೀತಿಯ ದೇವಾಲಯಗಳನ್ನು ಕಾಣಬಹುದು.

1. ಸರಳ ರಚನೆಯ ಪುಟ್ಟಗುಡಿಗಳು :

ಇವುಗಳ ಸಂಖ್ಯೆ 30ಕ್ಕಿಂತ ಹೆಚ್ಚು. ಇವು ಸಾಮಾನ್ಯ ವಿನ್ಯಾಸದ ರಚನೆಗಳಾಗಿದ್ದು ವಿಶಾಲವಾದ ಗುಡಿಗಳಿಗೆ ಪೂರ್ವಯೋಜನೆಗಳಂತೆ ಕಂಡುಬರುತ್ತವೆ. ಈ ಗುಡಿಗಳಲ್ಲಿ ಪ್ರಮುಖವಾಗಿ 2 ಭಾಗಗಳಿವೆ. 1. ಗರ್ಭಗುಡಿ– ಇದು ಚೌಕಾಕಾರದ ಕಟ್ಟಡ, 2. ಮುಖಮಂಟಪ – ಇದು ಸಾಮಾನ್ಯವಾಗಿ ಚೌಕ ಅಥವಾ ಆಯತಾಕಾರವಾಗಿರುತ್ತವೆ. ಇವುಗಳ ರಚನೆ ಸಾಮಾನ್ಯವಾಗಿದ್ದು, ಸರಳವಾಗಿವೆ. ಮೇಲ್ಛಾವಣಿ ಹಾಸುಗಲ್ಲಿನ ಮಾಳಿಗೆಯನ್ನು ಹೊಂದಿದ್ದು, ಚೌಕಾಕಾರದ ಕಂಬಗಳ ಆಧಾರವಿರುತ್ತದೆ. ಇಂತಹ ಗುಡಿಗಳಲ್ಲಿ ಯಾವುದೇ ಶಿಲ್ಪ ಉಬ್ಬು, ತಗ್ಗು, ಕೆತ್ತನೆ ಅಲಂಕಾರವೇ ಇರುವುದಿಲ್ಲ. ಗರ್ಭಗುಡಿಯಲ್ಲಿ ಶಿವಲಿಂಗವಿರುತ್ತದೆ. ಆದರೆ ಇದರ ನಿರ್ಮಾತೃಗಳು ಯಾರು, ಯಾವ ಉದ್ದೇಶಕ್ಕಾಗಿ ಕಟ್ಟಿಸಿದರೆಂದು ತಿಳಿದುಬರುವುದಿಲ್ಲ. ಒಂದು ಅಭಿಪ್ರಾಯದ ಪ್ರಕಾರ ಪ್ರಾಚೀನ ಕಾಲದಲ್ಲಿ ಸತ್ತವರನ್ನು ಹೂಳಿಟ್ಟ ನಂತರ ಪುಟ್ಟಶಿವಾಲಯಗಳನ್ನು ಕಟ್ಟುವ ಪರಿಪಾಠವಿದ್ದುದರಿಂದ ಇವುಗಳನ್ನು ಸತ್ತವರ ಸಮಾಧಿಗಳ ಮೇಲೆ ಕಟ್ಟಿರಬಹುದು ಅಥವಾ ಅವರ ಹೆಸರಿನಲ್ಲಿ ಬೇರೆ ಎಲ್ಲಾದರೂ ಕಟ್ಟಿರಬಹುದೆಂಬ ಊಹೆ ಇದೆ.

ಐಹೊಳೆಯಲ್ಲಿ ಸುಮಾರು 80ಕ್ಕೂ ಹೆಚ್ಚು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಹೆಚ್ಚು ಅಲಂಕಾರವಾಗಿಯೂ ಮತ್ತೆ ಕೆಲವು ಸರಳವಾಗಿಯೂ ಇವೆ. ಕೆಲವು ದೇವಾಲಯಗಳಿಗೆ ಪ್ರದಕ್ಷಿಣ ಪಥವಿದ್ದು, ಮತ್ತೆ ಕೆಲವು ದೇವಾಲಯಗಳಿಗೆ ಗರ್ಭಗೃಹವಿರುವುದರಿಂದ ತೆರೆದ ಪ್ರದಕ್ಷಿಣಾ ಪಥವು ನಿರ್ಮಾಣವಾಗಿದೆ. ಇವರ ಕಾಲದ ದೇವಾಲಯಗಳನ್ನು ಪ್ರಮುಖವಾಗಿ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಇಟ್ಟಗಿ, ಆಲಂಪುರ, ಕುಡವೇಲ, ಸತ್ಯವೋಲು ಮುಂತಾದ ಸ್ಥಳಗಳಲ್ಲಿ ಕಂಡುಬರುತ್ತವೆ.

ಇವರ ಕಾಲದ ಪ್ರಮುಖ ದೇವಾಲಯಗಳೆಂದರೆ, ಬಾದಾಮಿಯಲ್ಲಿನ ಮೇಲುಶಿವಾಲಯ, ಮಾಳಗಿತ್ತಿ ಶಿವಾಲಯ, ಜಂಬುಲಿಂಗ ದೇವಾಲಯ, ಐಹೊಳೆಯಲ್ಲಿ ಲಾಡ್‌ಖಾನ್, ಮೇಗುತಿ, ಹುಚ್ಚಿಮಲ್ಲಿ, ದುರ್ಗಾ, ಮಲ್ಲಿಕಾರ್ಜುನ, ಹುಚ್ಚಪ್ಪಯ್ಯನ ಗುಡಿ, ಆಲಂಪುರದಲ್ಲಿ ಸ್ವರ್ಗಬ್ರಹ್ಮ ದೇವಾಲಯ, ವಿಶ್ವಬ್ರಹ್ಮ ದೇವಾಲಯ, ಮಹಾಕೂಟದ ಮಹಾಕೂಟೇಶ್ವರ ಬಾಣಂತಿ ಗುಡಿ

ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಪಾಪನಾಥ, ಗಳಗನಾಥ ದೇವಾಲಯವನ್ನು ಕಾಣಬಹುದು.

ಐಹೊಳೆಯ ದೇವಾಲಯಗಳು :

ಐಹೊಳೆ ಎಂಬುದು ಇಂದು ಸಣ್ಣ ಗ್ರಾಮ ಎಂದು ಗುರುತಿಸುವ ಸ್ಥಳ. ಆದರೆ ಒಂದು ಕಾಲದಲ್ಲಿ ಇದು ಕಲೆಯ ತವರೂರು ಮತ್ತು ಕಲಾಪ್ರೇಮಿಗಳ ಸ್ವರ್ಗ ಎಂದು ಗುರುತಿಸಲ್ಪಡುತ್ತಿತ್ತು. ಇದು ಪ್ರತಿಯೊಬ್ಬ ಇತಿಹಾಸಕಾರನ ಅದರಲ್ಲೂ ಕಲಾತಜ್ಞರ ಪ್ರಯೋಗ ಶಾಲೆಯೇ ಎನ್ನಬಹುದು. ಇಲ್ಲಿರುವ ದೇವಾಲಯಗಳು ತಮ್ಮ ಸೂಕ್ಷ್ಮ ಕುಸುರಿಯ ಕಾರಣದಿಂದ ದೇಶ-ವಿದೇಶದ ವಾಸ್ತುಶಿಲ್ಪ ತಜ್ಞರನ್ನು ಕೈಬೀಸಿ ಕರೆಯುತ್ತಿವೆ. ಇಲ್ಲಿರುವ ಎಲ್ಲಾ ದೇವಾಲಯಗಳು ಏಕಕೂಟವಾಗಿದ್ದು ವಿವಿಧ ರೀತಿಯ ಯೋಜನೆಗಳನ್ನು ಹೊಂದಿದೆ. ಪ್ರತಿಯೊಬ್ಬ ವಾಸ್ತುಶಾಸ್ತ್ರಜ್ಞನು ಒಂದಲ್ಲಾ ಒಂದು ಹೊಸತನವನ್ನು ಹೊಸ ವಿಚಾರವನ್ನು ಇಲ್ಲಿನ ಕಲಾಕೃತಿಗಳಲ್ಲಿ ಗುರುತಿಸಿದ್ದಾನೆ. ಅಂತಹ ಕಲಾಕೃತಿಗಳು ಇವರ ಕಾಲದ ದೇವಾಲಯಗಳಲ್ಲಿಯೂ ಕಂಡುಬಂದವು. ಐಹೊಳೆಯನ್ನು ಕುರಿತು ಕಲಾತಜ್ಞರು ತಮ್ಮದೇ ಆದ ವ್ಯಾಖ್ಯಾನವನ್ನು ನೀಡಿದ್ದಾರೆ.

ಪರ್ಸಿ ಬ್ರೌನ್, "ಭಾರತೀಯ ದೇವಾಲಯ ವಾಸ್ತುಶಿಲ್ಪದ ತೊಟ್ಟಿಲು" ಎಂದಿದ್ದಾರೆ.

ಜಿ.ಸಿ. ಹಾರ್ಲೆ, "ಉತ್ತರ ಮತ್ತು ದಕ್ಷಿಣದ ವಾಸ್ತುಶಿಲ್ಪದ ಸಂಗಮ ಕ್ಷೇತ್ರ" ಎಂದು ಗುರುತಿಸಿದ್ದಾರೆ.

ಇಲ್ಲಿ 6ನೇ ಶತಮಾನದ ಮಧ್ಯಭಾಗದಿಂದ ಚಾಲುಕ್ಯ ಆಳ್ವಿಕೆಯ ಕೊನೆಯವರೆಗೆ ನಿರ್ಮಿಸಿದ 70ಕ್ಕಿಂತಲೂ ಅಧಿಕ ದೇವಾಲಯಗಳಿವೆ. ಈ ದೇವಾಲಯಗಳ ನಿರ್ಮಾಣಕ್ಕೆ ಆ ಸ್ಥಳದ ಸುತ್ತ-ಮುತ್ತಲೂ ಹೇರಳವಾಗಿ ದೊರೆಯುವ ಮರಳುಗಲ್ಲನ್ನು ಬಳಸಲಾಗಿದೆ. ಅವು ಬೌದ್ಧ, ಜೈನ, ಶೈವ ಮತ್ತು ವೈಷ್ಣವ ಮತಕ್ಕೆ ಸೇರಿದವುಗಳಾಗಿವೆ. ಅವುಗಳಲ್ಲಿ ಗೌಡರ ಗುಡಿ, ಲಾಡ್‌ಖಾನ್, ಸೂರ್ಯನಾರಾಯಣ ದೇವಾಲಯ, ದುರ್ಗ ದೇವಾಲಯ, ಕೊಂತಿ ಗುಡಿ, ತ್ರಯಂಬಕೇಶ್ವರ ದೇವಾಲಯ, ಗೌರೀ ಗುಡಿ, ತಾರಬಸಪ್ಪ ದೇವಾಲಯ, ಹುಚ್ಚಿಮಲ್ಲಿ ದೇವಾಲಯ, ಚಿಕ್ಕಗುಡಿಗಳ ಸಮೂಹ, ರಾವಳ ಫಡಿ, ಜ್ಯೋತಿರ್ಲಿಂಗ ದೇವಾಲಯ, ಹುಚ್ಚಪ್ಪಯ್ಯ ಮಲ್ಲಿಕಾರ್ಜುನ ದೇವಾಲಯ, ಗಳಗನಾಥ ದೇವಾಲಯ, ರಾಮಲಿಂಗ ದೇವಾಲಯ ವಿಷ್ಣು ದೇವಾಲಯ, ಸಂಗಮೇಶ್ವರ ದೇವಾಲಯ,

ಬ್ರಹ್ಮ ದೇವಾಲಯ, ಹಾಲಿ ಬಸಪ್ಪನ ದೇವಾಲಯ, ಹುಚ್ಚಪ್ಪಯ್ಯನ ಮಯು, ಅಂಬಿಗೇರ ದೇವಾಲಯಗಳು, ಬೌದ್ಧ ಚೈತ್ಯಾಲಯ ಮತ್ತು ಮೇಗುತಿ ದೇವಾಲಯ.

1. ಲಾಡ್‌ಖಾನ್ ದೇವಾಲಯ :

ವಿದ್ವಾಂಸರು ಇದರ ನಿರ್ಮಾಣ ಕಾಲವನ್ನು ಕ್ರಿ.ಶ. 450ರ ಸುಮಾರು ಎಂದು ಗುರುತಿಸಿದ್ದಾರೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇದಕ್ಕೆ ಮೊದಲೇ ಐಹೊಳೆಯಲ್ಲಿ ಇತರ ದೇವಾಲಯಗಳು ಅಸ್ತಿತ್ವದಲ್ಲಿ ಇದ್ದವು ಎಂದು ತಿಳಿದುಬರುತ್ತದೆ. ಆದುದರಿಂದ ಇದು ಸುಮಾರು 600–700 ಕಾಲದ್ದೆನ್ನಬಹುದು.[68]

ಲಾಡ್‌ಖಾನ್ ಎಂಬುದು ಸ್ಥಳೀಯರು ಕೊಟ್ಟ ಹೆಸರು. ಮೇಲ್ನೋಟಕ್ಕೆ ಇದು ಒಂದು ದೇವಾಲಯ ಎಂಬ ಭಾವನೆ ಎಂದು ಮೂಡುವುದಿಲ್ಲ. ಅದರ ಮುಖಮಂಟಪದ ಸ್ತಂಭಗಳಿಂದ ಮಾತ್ರ ಅದನ್ನು ದೇವಾಲಯವೆಂದು ಗುರುತಿಸಬಹುದು. ಬಹುಶಃ ಅದು ಒಂದು ಸಭಾಮಂಟಪವಿರಬಹುದೆಂದು ಕಾಣುತ್ತದೆ. ಅದರ ಒಳಗೆ ಹೋದವರಿಗೆ ಒಂದು ಗುಹಾಲಯವನ್ನು ಪ್ರವೇಶಿಸಿದಂತೆ ಭಾಸವಾಗುತ್ತದೆ. ಅಲ್ಲಿನ ಕಲ್ಲುಕಂಬಗಳು, ಗೋಡೆಗಳು, ಸದೃಢವಾಗಿದ್ದು ಸ್ಥೂಲವಾಗಿವೆ.[69]

ಇವುಗಳನ್ನು ಮರದ ಮಾದರಿಯನ್ನು ನೋಡಿ ನಿರ್ಮಿಸಲಾಗಿರುವಂತೆ ಭಾಸವಾಗುತ್ತದೆ. ದೇವಾಲಯದ ಹೊರಗೋಡೆಗಳು ಕಂಬಗಳನ್ನು ಹೊಂದಿದ್ದು, ಅವುಗಳ ನಡುವೆ ಜಾಲಾಂದರಗಳನ್ನು ರೂಪಿಸಲಾಗಿದೆ. ಕಂಬಗಳು ಅದರ ಚಾಚುಪೀಠದ ಬೋದುಗೆಗಳು ಗಟ್ಟಿಮುಟ್ಟಾಗಿವೆ. ಗರ್ಭಗೃಹವು ಆಯತಾಕಾರವಾಗಿದ್ದು ದೊಡ್ಡ ಪಡಸಾಲೆಯ ಹಿಂದಿನ ಗೋಡೆಗೆ ಹೊಂದಿಕೊಂಡು ನಿರಂಧಾರವಾಗಿವೆ.

ಗರ್ಭಗೃಹದ ಮುಂದಕ್ಕೆ 3 ಅಡಿ ಅಗಲ ಮತ್ತು ಉದ್ದದ 9 ಅಂಕಣ ಜಾಗದ ಮಂಟಪವಿದೆ. ಮಂಟಪದ ಮಧ್ಯಭಾಗದಲ್ಲಿ 4 ಕಂಬಗಳ ಮೇಲೆ ಬೋದಿಗೆಯ ತೊಲೆಗಳಿವೆ. ಈ ಕಂಬಗಳ ಪಕ್ಕದ ಪಡಸಾಲೆಯಿಂದ ಒಳಹಜಾರಕ್ಕೆ ಬೆಳಕು ಬರುತ್ತದೆ. ಆ ಬೆಳಕನ್ನು ಜಾಲಾಂದರಗಳು ಒದಗಿಸುತ್ತವೆ. ಇಲ್ಲಿನ ಪ್ರವೇಶದ್ವಾರದ ಬಳಿ 2 ಜಾಲಾಂದರಗಳಿವೆ. ಆದರೆ ಹಿಂದಿನ ಭಾಗದಲ್ಲಿ ಜಾಲಾಂದರಗಳಿಲ್ಲ. ಆ ಕಡೆ ಈ ಕಡೆ 3–3 ಜಾಲಾಂಧ್ರಗಳಿವೆ. ಮಂಟಪದಲ್ಲಿ 16 ಕಂಬಗಳನ್ನು ಕಾಣಬಹುದು. 4 ಕಂಬಗಳು 4 ಸಾಲಿನಲ್ಲಿವೆ. ಮುಖಪರ ಮಧ್ಯಭಾಗದಲ್ಲಿ ನಂದಿವಿಗ್ರಹ ಇರುವುದನ್ನು ಕಾಣಬಹುದು. ಇದು ಶೈವ ದೇವಾಲಯವಾಗಿರುವುದರಿಂದ ನಂದಿ ವಿಗ್ರಹವನ್ನು ನಂತರದ ದಿನಗಳಲ್ಲಿ ಇರಿಸಿದ್ದಾರೆ.

---

68 ಬಿ.ಆರ್. ಗೋಪಾಲ್, ಕನ್ನಡದ ಕಲೆಗಳು, ಪು.71.

69 O.C. Ganguly, Indian Architecture.

ಮುಖಮಂಟಪ ಬಿಟ್ಟರೆ ಎಲ್ಲಿಯೂ ಹೆಚ್ಚು ಅಲಂಕಾರವಿಲ್ಲ. ಮುಖಮಂಟಪದಲ್ಲಿ ಆಸನಗಳನ್ನು ಕಾಣುತ್ತೇವೆ. ಮಂಟಪದ ಎಡಕ್ಕೆ ಕಂಬಗಳು ಮತ್ತು ತೊಲೆಗಳಿಂದ ಪ್ರತ್ಯೇಕಿಸಲ್ಪಟ್ಟ ಭಾಗದಲ್ಲಿ ಮಾಳಿಗೆಯ ಮೇಲೆ ಹೋಗಲು ಕಲ್ಲಿನ ಏಣಿಯನ್ನು ಕಡೆದು ಮೇಲೆ ರಂಧ್ರವನ್ನು ಕೊರೆದಿದೆ.[70]

ಗರ್ಭಗುಡಿಗೆ ಸರಿಯಾಗಿ ಮೇಲಿನ ಮಾಳಿಗೆಯಲ್ಲೂ ಒಂದು ಗರ್ಭಗೃಹ ಇದೆ. ಕೆಳಗಿನ ಗರ್ಭಗುಡಿಯ ಮೇಲೆ ಪುರುಷನ ಆಕಾರದ ಗರುಡ ವಿಗ್ರಹವಿದೆ. ಆದರೆ ಇದು ಶಿವಾಲಯವಾಗಿದ್ದು ಒಳಗೆ ಲಿಂಗವಿದೆ. ಮುಂದಿನ 3 ಚೌಕ ಅಂಕಣಗಳ ಛಾವಣಿಗಳು ಬೇರೆ ಬೇರೆ ಮಟ್ಟದಲ್ಲಿವೆ. ಮಧ್ಯದಲ್ಲಿ ಚಪ್ಪಟೆಯ ಛಾವಣಿ. ಉಳಿದೆಲ್ಲಾ ಇಳಿಜಾರುಗಳು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಬೃಹದಾಕಾರವಾಗಿಯೂ, ಚಚ್ಚೌಕಕಾರವಾಗಿಯೂ ಕಲ್ಲುಕಂಬಗಳು ಅವುಗಳಿಗೆ ಸುರುಳಿಯಾಕಾರದ ಚಾಚುಪೀಠಗಳಿಂದ ಕೂಡಿದ ಬೋದಿಗೆಗಳಿವೆ. ಕಂಬವನ್ನು ದೇಹಕ್ಕೆ ಹೋಲಿಸಿ 'ಜಂಘ', 'ಕಟಿ', 'ಗ್ರೀವ' ಮತ್ತು 'ಶಿರಾ' ಎಂಬ ವಿಭಾಗವನ್ನು ಮಾಡಿದೆ. ಕಂಬಗಳಲ್ಲಿ ಚಚ್ಚೌಕವಾದ, ದುಂಡಾದ ಇಲ್ಲವೆ ಅಷ್ಟಕೋನಾಕೃತಿಯಾಕಾರಗಳಿವೆ.

ಕೆಲವು ಕಂಬಗಳು ಸಲ್ಪ ಎತ್ತರವಾದ ಪೀಠದ ಮೇಲೆ ನಿಂತಿದ್ದು ಇವುಗಳನ್ನು 'ಕಂಬಪೀಠಗಳು' ಎನ್ನಬಹುದು.[71] ಹಾಗೆಯೇ ಕಂಬದ ತುದಿಯನ್ನು ಬೋದಿಗೆ ಎನ್ನುತ್ತಾರೆ. ಲಾಡ್‌ಖಾನ್ ದೇವಾಲಯದ ಕಂಬಗಳು ಸುರುಳಿಯಾಕಾರದ ಅಂದರೆ ದಿಂಬಿನಂತೆ ಗುಂಡಾದ ಚಾಚುಪೀಠಗಳಿಂದ ಕೂಡಿದ ಬೋದಿಗೆಯನ್ನು ಹೊಂದಿವೆ. ಇವು ಬಾದಾಮಿಯ 3ನೇ ಗುಹೆಯ ಕಂಬಗಳನ್ನು ಹೋಲಿಸಿದರೂ ಅವುಗಳಿಗಿಂತ ಹೆಚ್ಚು ಒರಟಾಗಿವೆ. ಈ ದೇವಾಲಯದ ಗೋಡೆಗಳು ಹೆಚ್ಚು ಅಲಂಕೃತವಾಗಿಲ್ಲದೆ, ಅಲ್ಪಸ್ವಲ್ಪ ಕೆತ್ತನೆಯನ್ನು ಮಾಡಲಾಗಿದೆ. ಕಿಂಡಿಗಳುಳ್ಳ ಅಡ್ಡಪಟ್ಟಿಗಳ ಕಿಟಕಿಗಳು ಸುಂದರವಾಗಿವೆ.

ಇಲ್ಲಿ ಒಂದು ಗರ್ಭಗೃಹದ ಮೇಲೆ ಇನ್ನೊಂದು ಗರ್ಭಗೃಹವಿದ್ದು ಈ ದೇವಾಲಯಕ್ಕೆ ಅದೇ ಶಿಖರದಂತಿದೆ. ಆದರೆ ಅದು ಇತ್ತೀಚಿಗೆ ತಂದು ಸೇರಿಸಿರುವಂತೆ ಕಾಣುತ್ತದೆ. ಮುಖಮಂಟಪದಲ್ಲಿ ಪೂರ್ಣಕುಂಭದ ಅಲಂಕಾರವಿದೆ. ಗರ್ಭಗೃಹದ ಮೇಲೆ ಗರುಡನ ಚಿತ್ರವಿರುವುದರಿಂದ ಕಸಿನ್ಸ್‌ರವರು ಇದು ವೈಷ್ಣವ ದೇವಾಲಯವೆಂದು ಅಭಿಪ್ರಾಯಪಟ್ಟಿದ್ದಾರೆ.[72] ಆದರೆ ಗರ್ಭಗೃಹದಲ್ಲಿದ್ದ ಮೂರ್ತಿಲಿಂಗವೆಂದು ಸಮರ್ಥಿಸಲು ನಂದಿಯ ವಿಗ್ರಹವನ್ನು ಕಾಣಬಹುದು. ಚಾಲುಕ್ಯರು ಸರ್ವಧರ್ಮ


---

70 ಹೆಚ್.ಎಸ್.ಕೆ. ಅವಲೋಕನ.

71 ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.542.

72 ಕಸಿನ್ಸ್, ಚಾಲುಕ್ಯನ್ ಆರ್ಟಿಕಲ್ಚರ್.

ಸಮನ್ವಯರಾದ್ದರಿಂದ ಗರುಡನ ಮೂರ್ತಿಯಿರುವುದು ಸಾಧ್ಯ. ಇಲ್ಲಿ ನಾವು ಆನೆಗಳು, ಸವಾರರೊಂದಿಗೆ ಕುದುರೆಗಳು, ಎತ್ತುಗಳು, ನವಿಲು ಮತ್ತಿತರ ಪ್ರಾಣಿ–ಪಕ್ಷಿಗಳನ್ನು ಒಳಗೊಂಡ ಪಟ್ಟಿಕೆಗಳನ್ನು ಒಳಗೊಂಡಿದೆ. ಮೂಲತಃ ಲಾಡ್‌ಖಾನ್ ಒಂದು ಲೌಕಿಕ ರಚನೆ, ಇದಕ್ಕೆ ಲಾಡ್‌ಖಾನ್ ಎಂಬ ಹೆಸರು ಆ ಹೆಸರಿನ ಒಬ್ಬ ಮುಸ್ಲಿಂ ಸಾಧು. ಈ ದೇವಾಲಯದಲ್ಲಿ ವಾಸಿಸುತ್ತಿದ್ದರಿಂದ ಆ ಹೆಸರು ಬಂದಿರಬಹುದೆಂದು ಅವರು ಅಭಿಪ್ರಾಯಪಡುತ್ತಾರೆ.[73] ಇಲ್ಲಿರುವ ಕಂಬ ಹಾಗೂ ಕೋಷ್ಠಗಳಲ್ಲಿ ಅನೇಕ ಶಿಲ್ಪಗಳಿವೆ. ಇಲ್ಲಿನ ಮಿಥುನ ಶಿಲ್ಪಗಳು ಮತ್ತು ಜಾಲಾಂಧ್ರಗಳು ಸುಂದರವಾಗಿದೆ. ಮಂಟಪದ ಛಾವಣಿಯಲ್ಲಿ ಕಮಲಪುಷ್ಪವನ್ನು ಹಿಡಿದಿರುವ ನಾಗಶಿಲ್ಪವಿದೆ. ಮೇಲಿರುವ ಗರ್ಭಗೃಹದ ಗೂಡುಗಳಲ್ಲಿ ವಿಷ್ಣು, ಸೂರ್ಯ, ಮತ್ತು ಈಶ್ವರನ ಶಿಲ್ಪಗಳಿವೆ. ಇವುಗಳನ್ನು ಗಮನಿಸಿದರೆ ಲಾಡ್‌ಖಾನ್ ಒಂದು ಪ್ರಾಚೀನ ವಾಸ್ತುಶಿಲ್ಪದ ಪ್ರಮುಖ ಘಟ್ಟ ಎಂದು ಹೇಳಿದರೆ ತಪ್ಪಾಗಲಾರದು.



73 ಪರ್ಸಿಬ್ರೌನ್, ಇಂಡಿಯನ್ ಆರ್ಕಿಟೆಕ್ಚರ್.

2. ಹುಚ್ಚೀಮಲ್ಲಿ ದೇವಾಲಯ :

ಐಹೊಳೆಯ ಪ್ರಾಚೀನ ದೇವಾಲಯಗಳಲ್ಲಿ ಇದೂ ಒಂದು ದೇವಾಲಯದ ಮುಖ್ಯ ಭಾಗವಾದ ಗರ್ಭಗೃಹವನ್ನು ಅಳವಡಿಸುವ ರೀತಿ ವಿಶಿಷ್ಟವಾಗಿದೆ. ದುರ್ಗಾ ದೇವಾಲಯಕ್ಕಿರುವಂತೆ ಅರ್ಧವೃತ್ತಾಕಾರದ ಹಿಂಭಾಗವಾಗಲೀ, ಹೊರಭಾಗದಲ್ಲಿ ಇನ್ನೊಂದು ಸುತ್ತು ಮಂಟಪವಾಗಲೀ ಇದಕ್ಕಿಲ್ಲ. ಇದೊಂದು ಸರಳವಾದ ರಚನೆ ಮತ್ತು ಆಕಾರದಲ್ಲಿ ದುರ್ಗಾ ದೇವಾಲಯಕ್ಕಿಂತ ಚಿಕ್ಕದು. ಇಲ್ಲಿ ಗರ್ಭಗೃಹ ಸಭಾಮಂಟಪ, ಕೈಸಾಲೆಯಿದ್ದು ಇದು ರೇಖಾನಾಗರ ಶಿಖರವನ್ನು ಹೊಂದಿದೆ. ಅದರ ಸುಖನಾಸದಲ್ಲಿ ಒಂದು ಸಣ್ಣ ನಟರಾಜ ಮೂರ್ತಿಯನ್ನು ಕೆತ್ತಲಾಗಿದೆ. ಸಭಾಮಂಟಪದಲ್ಲಿ ಮಧ್ಯಾಂಗಣದ ಛಾವಣಿಯು 9 ಭಾಗಗಳಾಗಿ ವಿಭಾಗಿತವಾಗಿದೆ. ಇಲ್ಲಿ ಪದ್ಮಗಳು, ಪುಷ್ಪವಿನ್ಯಾಸ, ಶಿವ, ವಿಷ್ಣು ಮತ್ತು ಇಂದ್ರರ ಶಿಲ್ಪಗಳ ಉಬ್ಬು ಕೆತ್ತನೆಗಳು ಕಂಡುಬರುತ್ತವೆ. ಬಹುಶಃ ಇದು 2ನೇ ಪುಲಿಕೇಶಿಯಿಂದ ನಿರ್ಮಿತವಾಗಿರಬಹುದು.[74]


ಈ ದೇವಾಲಯದ ಒಂದು ವಿಶೇಷತೆಯೆಂದರೆ ಇದರ ಗರ್ಭಗುಡಿಯಲ್ಲಿ ಯಾವುದೇ ಮೂರ್ತಿ ಇಲ್ಲ. ಯಾವಾಗಲೊಮ್ಮೆ ಹುಚ್ಚಿಯೊಬ್ಬಳು ವಾಸವಾಗಿದ್ದಳಂತೆ. ಆದ್ದರಿಂದ ಈ ದೇವಾಲಯಕ್ಕೆ ಹುಚ್ಚಿಮಲ್ಲಿ ಎಂಬ ಹೆಸರು ಬಂದಿದೆ.[75]

---

74 ಡಾ. ತಿಪ್ಪೇರುದ್ರಸ್ವಾಮಿ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.126.

75 ಚಾಲುಕ್ಯ ಶಿಲ್ಪಕಲೆ, ಪು.84.

ಹುಚ್ಚಿಮಲ್ಲಿ ದೇವಾಲಯ



ಈ ಗುಡಿಯು ಪಶ್ಚಿಮಾಭಿಮುಖವಾಗಿದ್ದು ದುರ್ಗಾ ದೇವಾಲಯಕ್ಕೆ ಎದುರಾಗಿದೆ. ಇಲ್ಲಿ ಸಭಾಮಂಟಪ ಮತ್ತು ಗರ್ಭಗುಡಿಯ ಮಧ್ಯೆ ಅಂತರವೊದಗಿಸಲಾಗಿದೆ. ಈ ಗುಡಿಯು ಒಂದು ವೇದಿಕೆಯ ಮೇಲೆ ನಿಂತಿರುವಂತೆ ಭಾಸವಾಗುತ್ತದೆ. ಈ ದೇವಾಲಯವು ಮುಖಮಂಟಪ ನವರಂಗ, ಮಧ್ಯಮಂಟಪ, ಸುಖನಾಸಿ, ಪ್ರದಕ್ಷಿಣಾ ಪಥ ಮತ್ತು ಗರ್ಭಗುಡಿಗಳನ್ನು ಒಳಗೊಂಡಿದೆ. ದೇವಾಲಯದ ಒಳಭಾಗದಲ್ಲಿ ಯಾವುದೇ ಶಿಲ್ಪಕೃತಿಗಳಾಗಲೀ, ಅಲಂಕಾರವಾಗಲೀ ಇಲ್ಲ. ಆದರೆ ಬಾಗಿಲುಗಳ ಮೇಲೆ ಸ್ವಲ್ಪ ಮಟ್ಟಿಗೆ ಅಲಂಕಾರ ಕಂಡುಬಂದಿದೆ. ಕಂಬಗಳು ದೇವಾಲಯದ ಚೌಕಾಕಾರದ ಸರಳ ರಚನೆಗಳು

ಕೋನಾಕೃತಿಯ ಬೋಧಿಗೆಗಳಿಂದ ಕೂಡಿದೆ. ಇದು ಔತರ್ಯ ಶಿಖರವನ್ನು ಹೊಂದಿದ್ದು, ಭುವನೇಶ್ವರದ ಪರಶುರಾಮೇಶ್ವರ ದೇವಾಲಯದ ಶಿಖರವನ್ನು ಇದು ಬಹುಮಟ್ಟಿಗೆ ಹೋಲುತ್ತದೆಂಬುದು ಕಸಿನ್ಸ್‌ರವರ ಅಭಿಪ್ರಾಯ.[76] ಈ ಶಿಖರದ ಮುಂದಿನ ಚೈತ್ಯದಲ್ಲಿರುವ ಶಿವತಾಂಡವ ಮೂರ್ತಿ ಮತ್ತು ಒಳಮಾಳಿಗೆಯಲ್ಲಿರುವ ಕಾರ್ತಿಕೆಯರನ್ನು ತಾರಾಕಾಸುರನನ್ನು ವಧಿಸುತ್ತಿರುವ ದೃಶ್ಯವನ್ನು ಕೆತ್ತಿರುವ ಫಲಕವಿದೆ. ವಿಗ್ರಹಗಳು ಮನಸೂರೆಗೊಳ್ಳುತ್ತವೆ. ಈ ಗುಡಿಯ ಪಶ್ಚಿಮ ಗೋಡೆಯ ಮೇಲೆ ವಿಜಯಾದಿತ್ಯನ ದಾನಶಾಸನ ಇದೆ. ರೇಖಾನಾಗರ ಶಿಖರವು ಕುಳ್ಳಾಗಿದ್ದು ಇದು ರೇಖಾನಾಗರ ಶೈಲಿಯಲ್ಲಿದ್ದು ಅತ್ಯಂತ ಹಿಂದಿನ ರೇಖಾನಾಗರ ದೇವಾಲಯವಾಗಿದೆ.

ಹುಚ್ಚಪ್ಪಯ್ಯ ಗುಡಿ :

ರೇಖಾನಾಗರ ಶಿಖರದೊಂದಿಗೆ ಕ್ರಿ.ಶ. 8ನೇ ಶತಮಾನದ ಪ್ರಾರಂಭದಲ್ಲಿ ಶಿಲ್ಪಿ ನರಸಬ್ಬನಿಂದ ನಿರ್ಮಿತವಾದ ಈ ದೇವಾಲಯವು ಗರ್ಭಗೃಹ, ಸಭಾಮಂಟಪ ಮತ್ತು ಒಂದು ಕೈಸಾಲೆಯಿದೆ.[77]

ಹುಚ್ಚಪ್ಪಯ್ಯ ಎಂಬುದನ್ನು ಪೂಜೆಗೆಂದು ನಿತ್ಯ ಹೋಗುತ್ತಿದ್ದ ದೇವಾಲಯಕ್ಕೆ ಈ ಹೆಸರು ಬಂದಿದೆ. ಕೈಸಾಲೆಗೆ ಪ್ರವೇಶ ಮಾಡುವ ಜಾಗದಲ್ಲಿ ಶಂಖನಿಧಿ, ಪದ್ಮನಿಧಿಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಹೊರಗೋಡೆಗಳ ಎರಡೂ ಕೋಷ್ಠಗಳಲ್ಲಿ ಕ್ರಮವಾಗಿ ಹಿರಣ್ಯಕಶ್ಯಪನನ್ನು ನರಸಿಂಹನು ಸಂಹರಿಸುತ್ತಿರುವ ಮತ್ತು ಗಜಾಸುರ ಸಂಹಾರ ಶಿವನ ಮೂರ್ತಿಗಳಿವೆ.[78] ಸಭಾಮಂಟಪದ ತೊಲೆಗಳ ಮೇಲೆ ಯಕ್ಷ, ಯಕ್ಷಿಣಿಯರ ಉಬ್ಬುಶಿಲ್ಪಗಳಿವೆ. ಶಿಲ್ಪಿಯ ಅಪಾರ ಸೌಂದರ್ಯಪ್ರಜ್ಞೆಗೆ ಇವುಗಳು ಸಾಕ್ಷಿಯಾಗಿವೆ. ಇಲ್ಲಿರುವ ಯಕ್ಷರು ಯಾವ-ಯಾವ ಬಗೆಯ ಆಟಗಳಲ್ಲಿ ಮುಳುಗಿರುವರೆಂದು ಬಿಡಿಸಲಾಗಿದೆ. ಇವುಗಳ ಜೊತೆಗೆ ತ್ರಿವಿಕ್ರಮ, ವರಾಹ, ನರಸಿಂಹ ಮತ್ತು ಅಷ್ಟದಿಕ್ಪಾಲರ ಶಿಲ್ಪಗಳಿವೆ. ಸಭಾಮಂಟಪದಲ್ಲಿ ಕೈಸಾಲೆಯ ಛಾವಣಿಯಲ್ಲಿ ಪಾರ್ವತಿ, ನಂದಿ, ವಾಮನಕ ಮತ್ತು ಭೃಂಗಿ,

---

76 H. Cousins, Chalukyan Architecture.

77 ಅ.ಸುಂದರ ಕರ್ನಾಟಕ ಚರಿತ್ರೆ, ಪು.509.

78 ಡಾ. ತಿಪ್ಪೇರುದ್ರಸ್ವಾಮಿ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.127.

ತನ್ಮಯರಾಗಿ ನೋಡುತ್ತಿದ್ದಾರೆ. ಇದರ ನಿರ್ಮಾತೃ ನರಸನೊಬ್ಬ ಎಂದು ತಿಳಿಸುವುದಕ್ಕೆ ಒಂದು ಶಾಸನವೂ ಇಲ್ಲಿದೆ.[79]

ಕೊಂತಿಗುಡಿ :

ಕೊಂತಿ ಅಥವಾ ಕೊಂಟಿ ಎಂದರೆ ತ್ರಿಶೂಲ. ಇದನ್ನು ಧರಿಸಿದ್ದ ಸಾಧಕನೊಬ್ಬ ಈ ದೇವಾಲಯದಲ್ಲಿ ವಾಸಮಾಡುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂದಿದೆ ಎಂದು ಭಾವಿಸಲಾಗಿದೆ.[80] ರಚನೆಯಲ್ಲಿ ಇದು ಲಾಡ್‌ಖಾನ್ ಮಾದರಿಯಲ್ಲಿಯೇ ಇದ್ದರೂ ಆಕಾರದಲ್ಲಿ ಅದಕ್ಕಿಂತಲೂ ಕಿರಿದಾಗಿದೆ. ಕಂಬಗಳ ರಚನೆ ಮತ್ತು ಕೆತ್ತನೆಯ ದೃಷ್ಟಿಯಿಂದಲೂ ಇದು ಅದಕ್ಕಿಂತ ಹೆಚ್ಚು ಪರಿಷ್ಕೃತವಾಗಿದೆ. ಇದರ ರಚನಾಕಾಲ ಕ್ರಿ.ಶ. ಸುಮಾರು 750 ಇಲ್ಲಿ ಸುಮಾರು ಐದಡಿ ಎತ್ತರ ಇರುವ ಈ ಶಿಖರ ಈಚೆಗೆ ಸೇರಿದುದೆಂಬಂತೆ ಕಾಣುತ್ತದೆ.[81] ಇದು ಮೂರು ಗುಡಿಗಳ ಒಂದು. ಮೊದಲನೆಯದು ಆಯಾಕಾರದ ಮಟ್ಟವಾದ ಛಾವಣಿಯ ಮಂಟಪ. ಆರು ಕಂಬಗಳ ಎರಡು ಕಂಬಗಳ ಸಾಲುಗಳಿಗಿರುವ ಹಿಂಬದಿಯ ಗೋಡೆಗೆ ಸೇರಿದಂತೆ ಗರ್ಭಗೃಹವಿದೆ. ಇದರ ಎರಡೂ ಬದಿಯ ಕಂಬಗಳನ್ನು ಗಣಿಸಿದರೆ ಹಿಂದಿನ ಸಾಲಿನಲ್ಲಿ ಎಂಟು ಕಂಬಗಳಿವೆ. ಗರ್ಭಗೃಹ ಆಯಾಕಾರವಾಗಿದೆ. ಕಂಬಗಳಲ್ಲಿ ಬಣ್ಣಗಳ ಮನೆಗಳ ಮಾಲೆಗಳನ್ನು ಬಿಡಿಸಲಾಗಿದೆ. ಗರ್ಭಗೃಹಕ್ಕೆ ಹೊಂದಿದ ಎರಡು ಕಂಬಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ರಂಗಮಂಟಪದಲ್ಲಿರುವ ನಾಲ್ಕು ಕಂಬಗಳು ಒಂದು ಬಗೆಯಾದರೆ, ಉಳಿದ ಕಂಬಗಳು ಇನ್ನೊಂದು ರೀತಿಯಲ್ಲಿದೆ.[82] ನರಸಿಂಹಾವತಾರದ ವಿಷ್ಣು ನಿಲುವಿನ ಭಂಗಿಯಲ್ಲಿ ತೊಡೆಗಳ ಮೇಲೆ ಹಿರಣ್ಯಕಶಿಪುವನ್ನು ಮಲಗಿಸಿಕೊಂಡು ಅವನ ಹೊಟ್ಟೆಯನ್ನು ತನ್ನ ಕೈಗಳಿಂದ ಬಗೆಯುತ್ತಿದ್ದಾನೆ. ಇತರ ಕಂಬಗಳಲ್ಲಿ ತ್ರಿಪುರಾಂತಕ ಶಿವ, ಅರ್ಧನಾರೀಶ್ವರ, ಗಜಸಂಹಾರಮೂರ್ತಿ ಮುಂತಾದ ವಿಗ್ರಹಗಳನ್ನು ಕಾಣುತ್ತೇವೆ. ಗರ್ಭಗುಡಿಯ ದ್ವಾರಬಂಧದಲ್ಲಿ ಗರುಡನ ವಿಗ್ರಹವಿದೆ. ಹೊರಗೋಡೆಗಳ ಗೂಡುಗಳಲ್ಲಿ ವಿಷ್ಣು ಮತ್ತು ನೃತ್ಯ ಶಿವನ ಮೂರ್ತಿಗಳಿವೆ. ಗರ್ಭಗೃಹದ ಒಳಮಾಳಿಗೆಯಲ್ಲಿ ಬ್ರಹ್ಮ, ಮಹೇಶ್ವರ

---

79 H. Counsins, Chalukyan Architecture.

80 H. Cousins, Chalukyan Architecture.

81 ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.544.

82 ಎಸ್. ರಾಜಶೇಖರ್, ಚಾಲುಕ್ಯ ದೇವಾಲಯ–1982, ಚಾಲುಕ್ಯ ಶ್ರೀಬಾದಾಮಿ.

ಹಾಗೂ ಅನಂತಾಸೀನ ವಿಷ್ಣುವಿನ ವಿಗ್ರಹಗಳನ್ನು ಅಡ್ಡತೊಲೆಗಳ ಮೇಲೆ ಬಿಡಿಸಲಾಗಿದೆ. ಇಷ್ಟು ಭವ್ಯವಾಗಿದ್ದರೂ ಇವುಗಳಲ್ಲಿ ನಂತರದ ಕಾಲದ ಲಾಲಿತ್ಯವಿಲ್ಲ.

ಪಶ್ಚಿಮಾಭಿಮುಖವಾಗಿರುವ ಎರಡನೆಯ ಗುಡಿಯನ್ನು ದ್ವಾರಮಂಟಪವೊಂದು ಮೊದಲಿನ ಗುಡಿಗೆ ಸೇರಿಸಿದೆ. ಇಲ್ಲಿ ಸಿಂಹಮುಖದ ಯಾಳಿ ಕೆಳಗೊಬ್ಬ ಕುಬ್ಜ. ಇಲ್ಲಿಯೂ ಪ್ರದಕ್ಷಿಣ ಪಥ ಅಥವಾ ಸಭಾಮಂಟಪಗಳಿಲ್ಲ. ಆದರೆ ದೇವಾಲಯದಲ್ಲಿನ ಮಂಟಪದ ಮೇಲೆ ಚೌಕಾಕಾರದ ಕಟ್ಟಡ ಎದ್ದಿದೆ. ಐದಡಿ ಎತ್ತರದ ಇದರ ನಾಲ್ಕು ಕಡೆಗಲಲ್ಲಿಯೂ ಶೈವ-ವೈಷ್ಣವ ವಿಗ್ರಹಗಳನ್ನು ಕೆತ್ತಿವೆ. ದೇವಾಲಯದ ಡ್ವಾಹರಬಂಧದ ಲಾಲಾಟಬಿಂಬದಲ್ಲಿ ಸರ್ಪಗಳ ಬಾಲಗಳನ್ನು ಹಿಡಿದಿರುವ ಗರುಡನ ವಿಗ್ರಹವಿದೆ. ಗರ್ಭಗುಡಿಯ ದಕ್ಷಿಣದ ಗೋಡೆಗಂಬದಲ್ಲಿ ನಾಲ್ಕು ಹಸ್ತಗಳ ಮಹೀಷಮರ್ಧಿನಿಯ ಚಿಗ್ರಹವಿದೆ.[83] ಬಲಗೈಯಲ್ಲಿ ಚಕ್ರ ಇನ್ನೊಂದರಿಂದ ಅಸುರನನ್ನು ಇರಿಯುತ್ತಿದ್ದಾಳೆ. ಎಡ ಮೇಲುಗೈಯಲ್ಲಿ ಶಂಖ, ಇನ್ನೊಂದು ಕೈ ಸಿಂಹ ಮೇಲಿದೆ. ಇಲ್ಲಿ 4 ಜಾಲಾಂದರಗಳಿವೆ. ಗರ್ಭಗುಡಿಯ ದ್ವಾರದ ಎರಡೂ ಕಡೆ ಶಂಖನಿಧಿ, ಪದ್ಮನಿಧಿಗಳನ್ನು ಬಿಡಿಸಲಾಗಿದೆ. ದೂರದಿಂದ ನೋಡಿದರೆ ಈ ದೇವಾಲಯಗಳ ರಚನೆಯಲ್ಲಿ ಒರಟುತನ, ಕಂಬ ಮತ್ತು ಕಟ್ಟಡಗಳು ಕುಬ್ಜತೆಯನ್ನು ನೋಡಿದರೆ ಇವು ಪ್ರಾಚೀನ ಗುಡಿಗಳೆಂದು ಕಂಡುಬರುತ್ತದೆ.[84]

ಗೌಡರ ಗುಡಿ :

ಇದು ಲಾಡ್‌ಖಾನ್ ದೇವಾಲಯದ ಸಮೀಪದಲ್ಲಿ ಮಂಟಪದಂತೆಯೇ ಇರುವ ಇದು ಆಕರ್ಷಕವಾಗಿದೆ. ಇದಕ್ಕೆ ಗೌಡರ ಗುಡಿ ಎಂಬ ಹೆಸರು ಎಕೆ ಬಂದಿತು ಎಂದು ತಿಳಿದಿಲ್ಲ. ಇದರಲ್ಲಿ ಗರ್ಭಗುಡಿ ಸಭಾಮಂಟಪದಿಂದ ಪ್ರತ್ಯೇಕಿಸಲ್ಪಟ್ಟಿದೆ. ಆದರೆ ಇದಕ್ಕೆ ಪ್ರದಕ್ಷಿಣಾ ಪಥವೂ ಇದೆ.. ಇತ್ತೀಚೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಇದು ತಳಪಾಯದಲ್ಲಿ ಉತ್ಕನನ ನಡೆಸಿದಾಗ ಇದು ಲಾಡ್‌ಖಾನ್ ದೇವಾಲಯಕ್ಕಿಂತ ಹಿರಿದಾದುದು ಎಂದು ತಿಳಿದುಬಂದಿದ್ದು ಇದಕ್ಕೆ ಪುರಾವೆಗಳಿಲ್ಲ.[85]

---

83 Nagarajarao, The Chalukyas of Badami.

84 ಬಿ.ಆರ್. ಗೋಪಾಲ್, ಕರ್ನಾಟಕದ ಶಿಲ್ಪಕಲೆ.

85 ಬಿ.ಆರ್. ಗೋಪಾಲ್, ಕರ್ನಾಟಕದಲ್ಲಿ ಶಿಲ್ಪಕಲೆ, ಪು.74.

ಇದು ಒಂದು ವಿಶಿಷ್ಟ ಶೈಲಿಯ ದೇವಾಲಯ ದಪ್ಪನಾದ ದಿಂಡುಗಳನ್ನು ಹೊಂದಿರುವ ನಾಲ್ಕುವರೆ ಅಡಿ ಎತ್ತರದ ಅಧಿಷ್ಠಾನದ ಮೇಲೆ ಈ ದೇವಾಲಯ ನಿರ್ಮಿತವಾಗಿದೆ. ಛಾವಣಿಯಲ್ಲಿ ಒಂದರ ಮೇಲೆ ಮತ್ತೊಂದರಂತೆ ಎರಡು ಸ್ತರಗಳಿವೆ. ಇದು ಇಳಿಜಾರಾಗಿ ನಿಲ್ಲಿಸಿರುವ ಚಪ್ಪಡಿಕಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದು ಇದರ ಮಳಿಗೆಯೂ ಇಳಿಜಾರಾಗಿದ್ದು ಮಾಳಿಗೆಯನ್ನು 16 ಚೌಕಾಕಾರದ ದಪ್ಪಕಂಬಗಳು ಆಧಾರವಾಗಿವೆ. ಸುತ್ತಲೂ ಕಕ್ಷಾಸನಗಳು, ಒಳ ಹಜಾರದಲ್ಲಿ 4 ಕಂಬಗಳಿದ್ದು ಇವು ಸಭಾಮಂಟಪದ ಮಧ್ಯಭಾಗವನ್ನು ಎರಡೂ ಕಡೆಯ ಹಜಾರಗಳಿಂದ ಪ್ರತ್ಯೇಕಗೊಳಿಸಿದಂತಿವೆ.[86] ಗರ್ಭಗೃಹದ ದ್ವಾರ–ಚಿತ್ರಸಲ್ಪಟ್ಟಿದೆ. ಬಾಗಿಲುವಾಡದ ಹಾಸುಗಲ್ಲಿನಲ್ಲಿ ಮಾನವನ ಆಕೃತಿಯ ಗರುಡ, ಗರುಡನ ಮೇಲೆ ಲಕ್ಷ್ಮೀಯ ಶಿಲ್ಪ ಇದೆ. ಅಲಂಕೃತಳಾಗಿ ಕುಳಿತಿರುವ ಲಕ್ಷ್ಮಿ ತನ್ನ ಎರಡೂ ಕೈಗಳಲ್ಲಿ ತಾವರೆ ಹಿಡಿದಿದ್ದಾಳೆ. ಪಕ್ಕದ ಗೋಡೆಗಂಬಗಳ ಕಂಟದಲ್ಲಿ ಪೂರ್ಣ ಕಲಶಗಳು ಇದರ ಮೇಲಿನ ಬೋದಿಗೆಗಳು ದ್ರಾವಿಡ ಶೈಲಿಯ ಶಿಖರಗಳನ್ನು ಹೊತ್ತಿದೆ. ಇವುಗಳ ನಡುವೆ ಇರುವ ಚೈತ್ಯದಲ್ಲಿ ಕಮಲದ ಮೇಲೆ ಪದ್ಮಾಸನದಲ್ಲಿ ಕುಳಿತ ಲಕ್ಷ್ಮಿಯ ವಿಗ್ರಹ ಎರಡೂ ಬದಿಗಳಲ್ಲಿ ಒಂದೊಂದು ಆನೆ ತನ್ನ ಸೊಂಡಿಲಿನಿಂದ ಜಲವನ್ನು ಆಕೆಯ ಮೇಲೆ ಸಿಂಪಡಿಸುತ್ತಿವೆ. ಗರ್ಭಗೃಹದಲ್ಲಿ ಈಗ ವಿಗ್ರಹವಿಲ್ಲ. ಸುಮಾರು 8ನೇ ಶತಮಾನಹ ಶಾಸನ ಇದು ಭಗವತಿ ಗುಡಿಯಾಗಿದ್ದಿರಬಹುದೆಂದು ಸೂಚಿಸುತ್ತಾರೆ. ಹಾಗಾದರೆ ಇದು ಕರ್ನಾಟಕದಲ್ಲಿ ಪ್ರಾಚೀನವಾದ ಲಕ್ಷ್ಮಿ ದೇವಾಲಯ ಎನಿಸುತ್ತದೆ.[87] ಇದರ ಹೊರಗೋಡೆಯಲ್ಲಿ ಮೂರು ಕೋಷ್ಟಗಳಿದ್ದು ಬಹುಶಃ ಇವುಗಳಲ್ಲಿ ಶಿಲ್ಪಗಳಿದ್ದವೆಂದು ತಿಳಿದುಬರುತ್ತದೆ. ಈಗ ಅವು ಖಾಲಿಯಾಗಿವೆ. ದ್ವಾರಬಂದದ ಎರಡೂ ಕಡೆಗಳಲ್ಲಿ ಪುಷ್ಪಾಲಂಕಾರದ ವಿನ್ಯಾಸಗಳಿವೆ.

ಮಂಟಪದ ಮಧ್ಯಭಾಗದಲ್ಲಿ ಮೇಲಕ್ಕೆ ಹೋಗಲು ಮೆಟ್ಟಿಲುಗಳಿವೆ. ಇಲ್ಲಿರುವ ಚೌಕಾಕಾರದ ಕಂಬಗಳಲ್ಲಿ ಪೂರ್ಣಕುಂಭಗಳ ಅಲಂಕಾರವಿದೆ. ಅದರ ಹಿಂಭಾಗದಲ್ಲಿ ಕಕ್ಷಾಸನಗಳಿವೆ. ಒಳಗಿನ ಜಂತಿಗಳ ಮೇಲೆ ಪುಷ್ಪಾಲಂಕಾರ, ಪ್ರಾಣಿಗಳು, ಮಾನವರು ಮುಂತಾದವರ ತಗ್ಗು ಉಬ್ಬಿನ ಶಿಲ್ಪ ವಿನ್ಯಾಸಗಳಿದ್ದು ಅದರಲ್ಲಿ ಚೈತ್ಯ ಗವಾಕ್ಷಗಳೂ ಕಂಡುಬರುತ್ತವೆ.

---

86 Percy Brown, Indian Architecture.

87 ಬಿ.ಆರ್. ಗೋಪಾಲ, ಕರ್ನಾಟಕದಲ್ಲಿ ಶಿಲ್ಪಕಲೆ, ಪು.74.


ದುರ್ಗಾ ದೇವಾಲಯ :

ಪೂರ್ವದ ಕಡೆಗೆ ಮುಖ ಮಾಡಿರುವ ಈ ದೇವಾಲಯದ ಸುತ್ತ ಕೋಟೆಯಂತಹ ಗೋಡೆ ಬಳಸಿ ನಿಂತಿರುವುದರಿಂದ ಇದಕ್ಕೆ ಕೋಟೆ ದೇವಾಲಯ ಎನ್ನುತ್ತಾರೆ. ಇದು ಐಹೊಳೆಯ ದೇವಾಲಯಗಳಲ್ಲೆಲ್ಲಾ ದೊಡ್ಡದು ಮತ್ತು ಹೆಚ್ಚು ಸುಂದರವಾದುದು ದುರ್ಗಾ ದೇವಾಲಯ ಎಂಬ ಹೆಸರಿದ್ದರೂ ಅದಕ್ಕೂ ಮತ್ತು ದೇವಿ ದುರ್ಗಿಗೂ ಯಾವುದೋ ಸಂಬಂಧವಿದೆ. ಇಲ್ಲಿ ದುರ್ಗ ಎಂದರೆ ಕೋಟೆ ಎಂಬ ಅರ್ಥವಿರಬೇಕು. ಏಕೆಂದರೆ ಈ ದೇವಾಲಯ ಕೋಟೆಗೆ ಸಮೀಪವಾಗಿದೆ. ಆದ್ದರಿಂದ ಇದನ್ನು ದುರ್ಗಾ ಎಂಬ ಹೆಸರಿನಿಂದ ಕರೆದಿರಬಹುದು.

ಇದು ಲಾಳಾಕಾರದ ಹಿಂಭಾಗವನ್ನು ಹೊಂದಿದೆ. ಇದನ್ನು ಗಜಪೃಷ್ಠಾಕಾರ ಅಥವಾ ಬೃಹದ್ವ್ಯಾಸ ಎನ್ನುವರು. ಈ ರೀತಿಯ ವಿನ್ಯಾಸ ಸಾಮಾನ್ಯವಾಗಿ ಬೌದ್ಧದೇವಾಲಯಗಳಲ್ಲಿ ಕಂಡುಬರುತ್ತದೆ. ಆದರೆ ಇದು ಬೌದ್ಧದೇವಾಲಯವಲ್ಲದಿದ್ದರೂ ಈ ರೀತಿಯ ವಿನ್ಯಾಸ ಹೊಂದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಕಾರಣ ತಿಳಿದುಬಂದಿಲ್ಲ. ಈ ರೀತಿಯ ವಿನ್ಯಾಸವನ್ನು ವಾಸ್ತುಶಿಲ್ಪಿಯು ಹಿಂದೂ ದೇವಾಲಯದಲ್ಲಿ ಅಳವಡಿಸಿರುವುದು ಜನರಿಗೆ ಇಷ್ಟವಾಗಲಿಲ್ಲವೆಂದು ತೋರುತ್ತದೆ. ಆದ್ದರಿಂದ ಈ ರೀತಿಯ ಪ್ರಯತ್ನವನ್ನು ತಮ್ಮ ಮುಂದಿನ ದೇವಾಲಯಗಳ ನಿರ್ಮಾಣದಲ್ಲಿ ಶಿಲ್ಪಿಗಳು ಬಳಸಿಲ್ಲ.[88] ಇದರ ನೆಲಪಾಯವು ವಿಶೇಷವಾಗಿದೆ. ಇದರ ಪಾಯ ನೆಲಮಟ್ಟಕ್ಕಿಂತ ಐದಾರು ಅಡಿ ಎತ್ತರವಾಗಿದೆ. ಗರ್ಭಗುಡಿಯ ಹಿಮ್ಮಗ್ಗಲು ಅರ್ಧ ವೃತ್ತಾಕಾರವಾಗಿದ್ದು ಅದನ್ನು ಸುತ್ತುವರಿದಿರುವ ಪ್ರದಕ್ಷಿಣಾ ಪಥವು ಮುಂದಿನ ಮಂಟಪವನ್ನು ಸುತ್ತುವರಿಯುತ್ತದೆ. ಮಂಟಪಕ್ಕೆ ಎರಡು ಸಾಲು ಸ್ತಂಭಗಳಿವೆ. ಇವೆಲ್ಲವನ್ನೂ ಸುತ್ತುವರಿದಿರುವ ಎರಡನೆಯ ಪ್ರದಕ್ಷಿಣಾ ಪಥದ ಹೊರಭಾಗ ತೆರೆದಿದ್ದು ಅದರ ಮಾಡು ಅಲ್ಲಲ್ಲಿ ನಿಲ್ಲಿಸಿದ ಆಯತ ಛೇದದ ಸ್ತಂಭಗಳ ಮೇಲೆ ವಿರಮಿಸುತ್ತದೆ. ಇಲ್ಲಿರುವ ಹೆಚ್ಚಿನ ಸಂಖ್ಯೆಯ ಕಂಬಗಳಲ್ಲಿ ಕಲಾಕಾರರು ಪೌರಾಣಿಕ ಕಥೆಗಳು ಹಾಗೂ ಶಿಲ್ಪಗಳನ್ನು ಕಾಣಬಹುದು.

---

88 Master, M.W., Encyclopedia of Indian Temple Architecture South India, Lower Devidedesa, Delhi, 1983.



ಸಭಾಮಂಟಪದ ದ್ವಾರವು ಪುಷ್ಪಗಳು, ಬಳ್ಳಿಗಳು ಪೂರ್ಣ ಕಲಶಗಳಿಂದ ಅಲಂಕೃತವಾಗಿದೆ. ಸಭಾಮಂಟಪವನ್ನು ನಾಲ್ಕು ಕಂಬಗಳ ಹೊರಗಿನ ಸಭಾಮಂಟಪದಿಂದ ಬೇರ್ಪಡಿಸಿವೆ. ಹೊರ ಪಾಗಾರದ ಮೇಲಿರುವ 33 ಕಂಬಗಳು ಈ ಮೊಗಸಾಲೆಯ ಹೊರಭಾಗಕ್ಕೆ ಆಸರೆಯಾಗಿವೆ. ಮೊಗಸಾಲೆಯ ಒಳಗೋಡೆಯಲ್ಲಿ ಸಭಾಮಂಟಪ ಹಾಗೂ ಗರ್ಭಗೃಹದ ಗೋಡೆಗೆ ಸೇರಿದಂತೆ ಮಾಡುಗಳನ್ನು ಕೊರೆಯಲಾಗಿದೆ. ಮೊಗಸಾಲೆಯ ಮಾಳಿಗೆ ಇಳಿಜಾರಾಗಿದೆ. ಗರ್ಭಗೃಹ ಮತ್ತು ಸಭಾಮಂಟಪವನ್ನು ಸೇರಿಸಿದಂತೆ ಇನ್ನೊಂದು ಮಾಳಿಗೆ ಇದೆ. ಈ ಗರ್ಭಗೃಹದ ಮೇಲೆ ಶಿಖರ ಇದೆ. ಇದು ಚತುರಸ್ರಾಕಾರದಲ್ಲಿದ್ದು ರೇಖಾನಾಗರ ಶೈಲಿಯಲ್ಲಿದೆ. ಈ ಕಂಬದ ಬೋದಿಗೆಗಳು ಸುಮಾರು 4 ಅಡಿ ಎತ್ತರವಾಗಿದ್ದು ಅಲಂಕಾರ ಪಟ್ಟಿಕೆಗಳಿಂದ ಕೂಡಿವೆ. ಅಜಂತದಲ್ಲಿರುವ 29ನೇ ಗುಹೆಯನ್ನು ಇದು

ಹೋಲುತ್ತದೆಂದು ಕಸಿನ್ಸ್ ಅಭಿಪ್ರಾಯ ಪಟ್ಟಿದ್ದಾರೆ.[89] ಕಂಬ ರಚನೆಯು ಸರಳವಾಗಿದ್ದು ಚಚ್ಚೌಕವಾದ ಆಕಾರದಲ್ಲಿ ಕತ್ತರಿಸಿದ ಉದ್ದನೆಯ ಈ ಕಂಬಗಳು ಲಾಡ್‌ಖಾನ್ ದೇವಾಲಯದ ಕಂಬಗಳಷ್ಟು ಸ್ಥೂಲವಾಗಿಲ್ಲ. ಕಂಬಗಳ ಕೆಳಗೆ ಇತರ ದೇವಾಲಯಗಳಲ್ಲಿ ಕಂಡುಬರುವಂತೆ ಕಂಬಪೀಠಗಳಾಗಲೀ, ಅಲಂಕಾರವಾಗಲೀ ಇಲ್ಲ. ದೇವಾಲಯದ ಹೊರಗೆ ಕೆತ್ತನೆಯಿದೆ. ಗರ್ಭಗೃಹದ ಬಾಗಿಲಿನ ಮೇಲೆ ನಾಗಗಳ ಬಾಲವನ್ನು ಹಿಡಿದಿರುವ ಗರುಡನ ಚಿಗ್ರಹವಿದೆ. ಮುಖಮಂಟಪದ ಕಂಬಗಳ ಮೇಲೆ ಶೃಂಗಾರದ ಭಂಗಿಯಲ್ಲಿರುವ ಮಿಥುನ ಶಿಲ್ಪಗಳಿವೆ. ರಂಗಮಂಟಪದ ಹೊರಭಾಗದ ಗೋಡೆಗಳ ಮೇಲಿರುವ ವಿಗ್ರಹಗಳು ಶೈವ ಮತ್ತು ವೈಷ್ಣವ ಸಮನ್ವಯವನ್ನು ತೋರಿಸುತ್ತವೆ. ಐಹೊಳೆಯ ಇತರ ಯಾವ ದೇವಾಲಯಗಳಲ್ಲಿಯೂ ಇಷ್ಟು ಶಿಲ್ಪಗಳ ಅಲಂಕಾರ ಕಂಡುಬರುವುದಿಲ್ಲ. ನರಸಿಂಹ, ಹರಿಹರ, ಮಹಿಷಾಸುರ ಮರ್ಧಿನಿ, ಅರ್ಧನಾರೀಶ್ವರ, ವರಾಹ, ಹಿರಣ್ಯಕಶ್ಯಪುವನ್ನು ಕೊಲ್ಲುತ್ತಿರುವ ಉಗ್ರನರಸಿಂಹ ಇತ್ಯಾದಿ ಶಿಲ್ಪಗಳಿವೆ. ಮಂಟಪದ ದ್ವಾರಬಂಧವು ದ್ವಾರಪಾಲಕರ ವಿಗ್ರಹ, ಗಂಗಾ, ಯಮುನಾ ಶಿಲ್ಪಗಳನ್ನೊಂದಿಗೆ ಕಸಿನ್ಸ್ ಗರ್ಭಗೃಹದ ಬಾಗಿಲಿನ ಮೇಲಿರುವ ಗರುಡನನ್ನು ಗಮನಿಸಿ ವೈಷ್ಣವ ದೇವಾಲಯವಾಗಿದ್ದಿರಬಹುದು ಎಂದು ಅಭಿಪ್ರಾಯ ಪಟಿದ್ದರೂ ಇದೊಂದು ಶಿವ ದೇವಾಲಯವಾಗಿದೆ.

ಈ ದೇವಾಲಯದ ಇನ್ನೊಂದು ಮುಖ್ಯ ಅಂಶವೆಂದರೆ ಇದು ಔತರೇಯ ಶಿಖರವನ್ನು ಹೊಂದಿದ್ದು ಇದು ಒರಿಸ್ಸಾದಲ್ಲಿನ ಪ್ರಾಚೀನ ದೇವಾಲಯಗಳ ಶಿಖರವನ್ನು ಹೋಲುತ್ತದೆಂದು ಕಸಿನ್ಸ್ ತಿಳಿಸಿದ್ದಾರೆ. ಇದು ಕದಂಬ ಶೈಲಿಯ ಪ್ರಭಾವವನ್ನು ತೋರಿಸುತ್ತದೆಂದು ಮೊರ್‍ಯಾಸ್ ಅಭಿಪ್ರಾಯ ಪಡುತ್ತಾರೆ.[90] ಈ ಶಿಖರದ ತುದಿಯ ಭಾಗ ಈಗ ಮುರಿದು ಅಲ್ಲಿಯೇ ಕೆಳಗೆ ಬಿದ್ದಿದೆ.

ಈ ದೇವಾಲಯವನ್ನು ಎರಡನೇ ವಿಕ್ರಮಾಧಿತ್ಯನ ಆಳ್ವಿಕೆಯಲ್ಲಿ ಆಟದ ಅಲೆಕೊಮಾರಸಿಂಗನು ಕಟ್ಟಿಸಿದನು. ಆದಿತ್ಯ ಭಟಾಟರಿಗೆ ಅಂದರೆ ಸೂರ್ಯನಿಗೆ ಈ ದೇವಾಲಯವು ಮೀಸಲಾಗಿದೆ.[91] ಇಲ್ಲಿ ಜಾಲಾಂದ್ರಗಳನ್ನು ನಿರ್ಮಿಸಿದ್ದು ಅವುಗಳ ಕೆಳಗೆ ಹಂಸಗಳ ಸಾಲನ್ನು ಕೆತ್ತಲಾಗಿದೆ. ಇಲ್ಲಿ ಹಂಸಗಳು ಮತ್ತು ಆಮೆಯ ಕಥೆಯನ್ನು ನಿರೂಪಿಸುವ 3 ಶಿಲ್ಪಗಳಿಗೆ ಡಾ. ಪಂಚಮುಖಿಯವರು ದುರ್ಗಾಗುಡಿಯು

---

89 H. Counsins, Chalukyan Architecture

90 G.M. Moraes, Kadamba Kula.

91 ಅ.ಸುಂದರ ಕರ್ನಾಟಕ ಚರಿತ್ರೆ–1, ಪು.509.

ಪ್ರಥಮದಲ್ಲಿ ಬೌದ್ಧವಿಹಾರವಾಗಿದ್ದು ಜೈನಯುಗದಲ್ಲಿ ಜಿನಾಲಯವಾಗಿ ಮಾರ್ಪಟ್ಟು ವೈದಿಕ ಪುನರುಜ್ಜೀವನ ಕಾಲದಲ್ಲಿ ಹರಿಹರ ದೇವಾಲಯವಾಗಿ ಬೆಳಗಿತೆಂದು ಆರ್.ಎಸ್. ಪಂಚಮುಖಿಯವರು ತಿಳಿಸಿದ್ದಾರೆ.[92]

ತಾರಬಸಪ್ಪನ ಗುಡಿ :

ಸುಮಾರು 8ನೇ ಶತಮಾನದ್ದಾದ ಇದು ಊರ ಹೊರಗೆ ಪೂರ್ವಾಭಿಮುಖವಾಗಿದೆ. ಈ ಗುಡಿಯು ಎತ್ತರದಲ್ಲಿರುವುದರಿಂದ ಮುಖಮಂಟಪಕ್ಕೆ ಹೋಗಲು ಮೆಟ್ಟಿಲುಗಳಿವೆ. ಸಭಾಮಂಟಪ ಮತ್ತು ಗರ್ಭಗುಡಿಯ ದ್ವಾರದ ಮೇಲೆ ಸುಂದರವಾದ ಚಿತ್ರಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗ, ಮಹಿಷಮರ್ಧಿನಿ, ಗಣೇಶ ಇವರ ವಿಗ್ರಹಗಳಿದ್ದು ರೇಖಾನಾಗರ ಶಿಖರವನ್ನು ಹೊಂದಿದೆ.[93]

ಹುಚ್ಚಪ್ಪಯ್ಯ ಮಠ :

ಅನೇಕ ವರ್ಷಗಳ ಹಿಂದೆ ಹುಚ್ಚಪ್ಪಯ್ಯ ಎಂಬ ವೀರಶೈವ ಸ್ವಾಮಿಯೊಬ್ಬ ವಾಸಮಾಡುತ್ತಿದ್ದ ಕಾರಣಕ್ಕಾಗಿ ಈ ದೇವಾಲಯವನ್ನು ಹುಚ್ಚಪ್ಪಯ್ಯಮಠ ಎಂದು ಕರೆಯಲಾಗಿದೆ. ಇದಕ್ಕೆ ಪುರಾವೆಯಾಗಿ ಇದರ ಆವರಣದಲ್ಲಿ ಆ ಸ್ವಾಮಿಯ ಸಮಾಧಿಯೂ ಇದೆ. ಈ ದೇಗುಲದ ಆಕರ್ಷಣೆ ಎಂದರೆ ಮಧ್ಯಭಾಗದ ಒಳಮಾಳಿಗೆಯ ಮೂರು ಅಂಕಣಗಳಲ್ಲಿರುವ ಮೂರ್ತಿಗಳು ಇಲ್ಲಿನ ಶಿವ ಮತ್ತು ನಂದಿ ಸುಂದರವಾಗಿವೆ. ಎದುರು ದ್ವಾರದ ಬಳಿಯ ಅನಂತಾಸನ ನಾರಾಯಣ ಮತ್ತು ನಾಗ-ನಾಗಿಣಿಯರ ಚಿತ್ರಗಳಿವೆ. ಇದು ಸುಮಾರು 725ರಲ್ಲಿ ರಚನೆಯಾಗಿದೆ.

ಮೇಗುತಿ ದೇವಾಲಯ :

ಐಹೊಳೆಯ ಗುಡ್ಡೆಯ ಮೇಲಿರುವ ಈ ದೇವಾಲಯ ನೋಡುಗರ ಮನಸೂರೆಗೊಳ್ಳುತ್ತದೆ. ಐಹೊಳೆಗೆ ಹೊದೋಡನೆ ಪ್ರಮುಖವಾಗಿ ಕಣ್ಣಿಗೆ ಬೀಳುವ ದೇವಾಲಯವಿದೆ. ಇದು ಒಂದು ಜೈನ ದೇವಾಲಯ ಅವನಿಂದ ನಿರ್ಮಿತವಾದ ಒಂದು ಶಾಸನ. ಈ ದೇವಾಲಯದ ಪೂರ್ವದ ಗೋಡೆಯ

---

92 ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ.

93 ಡಾ. ಎಸ್. ರಾಜಶೇಖರ್, ಐಹೊಳೆಯ ದೇವಾಲಯಗಳು.

ಮೇಲಿದೆ. ಇದನ್ನು 'ಐಹೊಳೆ ಶಾಸನ' ಎನ್ನುತ್ತಾರೆ. ಇದರಿಂದ ಈ ದೇವಾಲಯದ ಕಾಲ ಕ್ರಿ.ಶ. 634 ಎಂದು ತಿಳಿಯುತ್ತದೆ.

ಇದು ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ಕಟ್ಟಲ್ಪಟ್ಟಿದೆ. ಇದು ಉತ್ತರಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಪ್ರದಕ್ಷಿಣ ಪಥ ಮತ್ತು ಮಂಟಪಗಳನ್ನೊಂದಿದೆ. ದೇವಾಲಯದ ಹೊರಗೋಡೆಯ ಕೆಳಭಾಗದಲ್ಲಿ ಅಲಂಕೃತ ದಿಂಡುಗಳಿವೆ. ತೆರೆದ ಮಂಟಪದ ಮೇಲೆ ನಾಲ್ಕು ಸ್ತಂಭಗಳಿರುವ ನಾಲ್ಕು ಸಾಲುಗಳಿವೆ. ಅದಕ್ಕೆ ಹೊರಗೋಡೆಗಳಿಲ್ಲ. ಈ ಹದಿನಾರು ಸ್ತಂಬಗಳೇ ಮೇಲಣ ಮಾಡನ್ನು ಎತ್ತಿ ಹಿಡಿಯುತ್ತದೆ. ದಿಂಡುಗಳ ಮೇಲೆ ಚೈತ್ಯ ರೀತಿಯ ಗೂಡುಗಳು, ಮಿಥುನ ಶಿಲ್ಪಗಳು ವಾದ್ಯಗಳನ್ನು ನುಡಿಸುತ್ತಿರುವ ಸಂಗೀತಗಾರರು ಮತ್ತು ಕುಸ್ತಿಪಟುಗಳಿದ್ದಾರೆ.[94]

ಇದು ದ್ರಾವಿಡ ಶೈಲಿಯಲ್ಲಿದೆ. ಇದು ಮುಖ್ಯವಾದ ಅಂಶಗಳು ಅದ್ರ ಕಂಬಗಳಲ್ಲಿ, ಗೋಡೆಗಳನ್ನು ಹೊತ್ತಿರುವ ಚಾಚುಪೀಠಗಳಲ್ಲಿ ಗೋಡೆಯ ಹೊರಬಾಗದ ರಚನೆಗಳಲ್ಲಿ ವ್ಯಕ್ತವಾಗುತ್ತದೆ. ಈ ದೇವಾಲಯದ ಮುಖ್ಯವಾದ ಅಂಶವೆಂದರೆ ಗರ್ಭಗೃಹದ ಮೇಲಿರುವ ಇನ್ನೊಂದು ಗರ್ಭಗೃಹ ಕೆಳಗಿನ ಗರ್ಭಗೃಹದ ಗೋಡೆಗಳೇ ಮೇಲೆ ಚಾಚಿ ಇದನ್ನು ನಿರ್ಮಿಸಿವೆ. ಇದು ದ್ರಾವಿಡ ಗೋಪುರದ ಮೊದಲನೆಯ ಅಂತಸ್ತನ್ನು ಹೋಲುತ್ತವೆ. ಮೇಲಿನ ಗರ್ಭಗೃಹ ಈಗ ಮೇಲ್ಹಾವಣಿಯನ್ನು ಕಳೆದುಕೊಂಡು ಶಿಥಿಲವಾಗಿವೆ. ಪಶ್ಚಿಮಭಾಗದ ಗೋಡೆಯ ಮೇಲೆ ಒಂದು ಸ್ತ್ರೀ ವಿಗ್ರಹವಿದೆ. ಇದನ್ನು ಅಂಬಿಕಾ ಅಥವಾ ಸಿದ್ಧಾಯಿಕಾ ಅಥವಾ ಸುಜಾತ ಎಂದು ಭಾವಿಸಲಾಗಿದೆ. ಈ ಶಿಲ್ಪದ ಎರಡೂ ಕಡೆಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಇದರ ಕೆಳಭಾಗದಲ್ಲಿ ಕಫಿ ಮತ್ತು ಹಂಸಗಳಿವೆ. ಮೇಲು ಅಂತಸ್ತಿನ ಗರ್ಭಗೃಹದ ಮೇಲೆ ಶಿಖರವಿಲ್ಲ. ಅದರ ಗೊಡೆಗಳೂ ಸರಳವಾಗಿದ್ದು ಈಗ ಖಾಲಿಯಾಗಿರುವ ಗೂಡುಗಳಿವೆ.[95]

ಅಲಂಕಾರ ಮತ್ತು ವಿನ್ಯಾಸ ವಿಶೇಷಗಳಿಂದ ಈ ದೇವಾಲಯವು ಹೆಚ್ಚು ಪ್ರಮುಖವಾಗಿಲ್ಲದಿದ್ದರೂ ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪದ ವಿಕಾಸದ ದೃಷ್ಟಿಯಿಂದ ಇದು ಮಹತ್ವ ಪಡೆದಿದೆ. ಏಕೆಂದರೆ ಇದೊಂದು ಕಾಲಮಾನವಿರುವ ದೇವಾಲಯವಿದೆ. ಇದು ಬಾದಾಮಿ ಚಾಲುಕ್ಯರ

---

94 Percey Brown, Indian Architecture.

95 The praise of B.A.P.M., Margi Publications.

ತೇದಿಯಿರುವ ಪ್ರಾಚೀನವಾದ ದೇವಾಲಯ. ಚಾಲುಕ್ಯ ಶಿಲ್ಪಗಳು ಉತ್ತಮ ದೇವಾಲಯವನ್ನು ನಿರ್ಮಾಣ ಮಾಡುವ ಹಂತದಲ್ಲಿ ಈ ದೇವಾಲಯದ ಪ್ರಯೋಗ ನಡೆಸಿದರು ಎಂಬುದು ಗಮನಿಸಬೇಕಾದ ಅಂಶ.[96]

ಹಲವು ಅಡ್ಡಪಟ್ಟಿಗಳಿಂದ ಕೂಡಿರುವ ಎತ್ತರದ ಅಧಿಷ್ಠಾನದ ಮೇಲಿನ ಪಟ್ಟಿಯಲ್ಲಿ ಮನುಷ್ಯಮುಖವಿರುವ ಚೈತ್ಯಗಳು. ಕೆಳಗಿನ ಪಟ್ಟಿಗಳಲ್ಲಿ ವಾದ್ಯಗಾರರು, ಮಲ್ಲರು, ಹಾವಾಡಿಗರು ಚಿತ್ರಸಲ್ಪಟ್ಟಿದ್ದಾರೆ. ಭಿತ್ತಿಯ ಮೇಲೆ ಕೋಷ್ಠಗಳಿದ್ದು ಕಲ್ಲಿನ ಜಾಲಾಂಧ್ರಗಳನ್ನು ಅಳವಡಿಸಲಾಗಿದೆ. ಜಾಲಾಂದ್ರಗಳು ಸರಳವಾಗಿವೆ. ದೇವಾಲಯದ ಒಳಭಾಗ ಸ್ವಲ್ಪಮಟ್ಟಿಗೆ ಕೆತ್ತಲಾಗಿದೆ. ಮುಖಮಂಟಪವನ್ನು ದಾಟಿ ಒಳಗೆ ಬರುತ್ತಿದ್ದಂತೆಯೇ ಯಾವುದೋ ಲೋಕವನ್ನು ಹೊಕ್ಕಂತಾಗುತ್ತದೆ. ಗರ್ಭಗೃಹದ ಎದುರು ಗೋಡೆಯ ಮೇಲೆಯೇ ದೊಡ್ಡ ಆಕಾರದ ಜಿನಮೂರ್ತಿ ನಿರ್ಮಿತವಾಗಿದೆ. ಜಿನನ ಮೂರ್ತಿಯನ್ನು ಕಂಡರಿಸಿ ತಂದು ಪ್ರತಿಷ್ಠಾಪಿಸುವುದರ ಬದಲು ಇಲ್ಲಿ ಗೋಡೆಯ ಮೇಲೆಯೇ ಚಿತ್ರಿತವಾದಂತೆ ಜಿನಮೂರ್ತಿಯನ್ನು ಬಿಡಿಸಿರುವುದು ಗಮನಾರ್ಹವಾಗಿದೆ.[97] ಪ್ರದಕ್ಷಿಣಪಥದ ಪಶ್ಚಿಮ ಭಾಗದಲ್ಲಿ ದೇವಿಯ ಆಕಾರವನ್ನುಳ್ಳ ಒಂದು ದೊಡ್ಡ ಕಲ್ಲುಚಪ್ಪಡಿಯಿದೆ. ದೇವಾಲಯದ ಹೊರಭಾಗದ ಗೋಡೆಗಳು ಬಹುಮಟ್ಟಿಗೆ ಶಿಲ್ಪರಹಿತವಾಗಿವೆ. ಆದರೆ ಒಂದಾದ ಮೇಲೊಂದರಂತೆ ಚಚ್ಚೌಕವಾದ ಚಾಚುಕಲ್ಲುಗಳಿಂದ ಸುಂದರವಾಗಿದೆ. ಇದು ಗುಡ್ಡದ ಮೇಲಿರುವುದರಿಂದ ಮೇಲುಗುಡಿ ಎಂದು ಹೆಸರು ಬಂದು ಕ್ರಮೇಣ ಅದು ಜನರ ಬಾಯಲ್ಲಿ 'ಮೇಗುಡಿ' ಮತ್ತು 'ಮೇಗುತಿ' ಆಗಿರಬಹುದು.[98]

ಭೂತನಾಥ ದೇವಾಲಯ :

ಐಹೊಳೆಯ ನದಿಯ ಒಳಾಂತರದ ತುದಿಯಲ್ಲಿ ದೈತ್ಯಾಕಾರದ ಬಂಡೆಗಳಿಂದ ಕೂಡಿದ ದೇವಾಲಯಗಳ ಸಮುಚ್ಚಯವನ್ನೇ ಭೂತನಾಥ ದೇವಾಲಯ ಎಂದು ಕರೆಯಲಾಗಿದೆ. ಐಹೊಳೆಯ

---

96 ನಾಗರಾಜ, ಎಸ್., Buddhist Architecture of Western India.

97 Banergy- Reliefs of Badami, Calcutta, 1928.

98 Moraes, Kadamba Kula.

[illegible]

[illegible]

[illegible]

[illegible]

ಶಿಲ್ಪಿಗಳು ಇಲ್ಲಿ ಸ್ವಲ್ಪಕಾಲ ತಂಗಿದ್ದರಿಂದ ತಾವು ಕೃತಜ್ಞತೆಯಾಗಿ ದೈತ್ಯಾಕಾರದ ಬಂಡೆಯ ದೇವತೆಗೆ ಹೀಗೆ ಸಲ್ಲಿಸಿದ್ದಾರೆ. ಇದರ ಮುಖ್ಯ ದೇವಾಲಯ ಅಯತಾಕಾರದಲ್ಲಿದೆ.[99]

ರಾಮಲಿಂಗ ದೇವಾಲಯ :

ಇದು ಮಲಪ್ರಭಾ ನದಿಯ ದಡದಲ್ಲಿದ್ದು ಇಲ್ಲಿ ನಿತ್ಯ ಪೂಜೆ ನಡೆಯುತ್ತದೆ. ಈ ದೇವಾಲಯದ ವಿಶೇಷವೆಂದರೆ ಇಲ್ಲಿರುವ ಹಲವಾರು ದೇವಾಲಯಗಳಲ್ಲಿ ಈಗ ಪೂಜೆ ನಡೆಯುತ್ತಿರುವ ದೇವಾಲಯವೆಂದರೆ ಇದೊಂದೇ. ನಿತ್ಯವೂ ವೈಭವಯುತವಾದ ಪುಜೆ ನಡೆಯುತ್ತದೆ. ಇಲ್ಲಿ 3 ಗರ್ಭಗುಡಿಗಳಿವೆ. ಈ ದೇವಾಲಯದ ರಚನೆ ಸರಳವಾಗಿದೆ. ಮಧ್ಯದಲ್ಲಿ ಒಂದು ದೊಡ್ಡ ಮಂಟಪವಿದ್ದು ಅದಕ್ಕೆ ಮೂರು ಕಡೆಗಳಿಂದಲೂ ಮೂರು ಗರ್ಭಗೃಹಗಳು ಜೋಡಿಸಲ್ಪಟ್ಟಿವೆ. ಮಧ್ಯದಲ್ಲಿರುವ ಪ್ರವೇಶದ್ವಾರದ ಎದುರಿನಲ್ಲಿರುವ ಮುಖ್ಯವಾದ ಗರ್ಭಗೃಹದಲ್ಲಿರುವುದೇ ರಾಮಲಿಂಗೇಶ್ವರ. ಪಶ್ಚಿಮದ ಕಡೆಗೆ ಮುಖವಾಗಿರುವ ಈ ಗರ್ಭಗೃಹ ಎತ್ತರದ ದಂಡೆಯ ಮೇಲೆ ನಿಂತು ಎದುರಿಗೆ ಹರಿಯುತ್ತಿರುವ ಮಲಪ್ರಭೆಯನ್ನು ನೋಡುತ್ತಿರುವಂತಿದೆ. ಇದು ಒಂದು ಚಿಕ್ಕ ಸುಖನಾಸಿಯನ್ನೊಳಗೊಂಡಿದೆ. ಉಳಿದೆರಡು ಗರ್ಭಗೃಹಗಳಿಗೆ ಸುಖನಾಸಿಯಿಲ್ಲ. ಇದರ ಬಲಭಾಗದಲ್ಲಿ ದಕ್ಷಿಣದ ಕಡೆಗೆ ಮುಖ ಮಾಡಿರುವಂತೆ ಇರುವ ಗರ್ಭಗೃಹ ಸಿದ್ಧೇಶ್ವರನದು ಅದರ ಎದುರಿಗೆ ಉತ್ತರದ ಕಡೆಗೆ ಮುಖ ಮಾಡಿರುವ ಮೂರನೆಯ ಗರ್ಭಗೃಹ ಪಾರ್ವತಿ ದೇವಿಯದು. ಈ ಮೂರು ಗರ್ಭಗೃಹಗಳಿಗೂ ಎದುರಾಗಿರುವಂತೆ ನಾಲ್ಕು ದೊಡ್ಡ ಕಂಬಗಳು ಮುಖಮಂಟಪದಲ್ಲಿವೆ. ಅವುಗಳ ಮಧ್ಯದಲ್ಲಿ ರಾಮಲಿಂಗನ ಕಡೆಗೆ ಮುಖಮಾಡಿರುವ ನಂದಿ ವಿಗ್ರಹವಿದೆ. ಈ ಪಾರ್ವತಿಯ ಗರ್ಭಗೃಹದ ಮೇಲಿರುವ ಶಿಖರ ನಾಶವಾಗಿವೆ. ಉಳಿದೆರಡು ಗರ್ಭಗೃಹಗಳ ಮೇಲೂ ದ್ರಾವಿಡ ಶಿಖರಗಳಿವೆ.[100] ತ್ರಿಕೂಟ ದೇವಾಲಯಗಳ ಪ್ರಾರಂಭದ ರೂಪ ಇಲ್ಲಿ ಕಂಡುಬರುತ್ತದೆನ್ನಬಹುದು.[101]

ಇವುಗಳಲ್ಲದೆ ಐಹೊಳೆಯಲ್ಲಿ ಹದಿನಾರು ಜ್ಯೋತಿರ್ಲಿಂಗ ದೇವಾಲಯಗಳ ಗುಂಪು, ಮದ್ದಿನ ದೇವಾಲಯ, ಗೌರೀ ದೇವಾಲಯ, ಕರೇ ದೇವಾಲಯ, ಬಿಳೀ ದೇವಾಲಯ, ಹಾಲಿಬಸಪ್ಪನ

---

99 Encyclopedia of History, The Art and Architecture of South India, Delhi Publication.

100 Moraes, Kadamba Kula.

101 ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.552.

ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಗಳಗನಾಥ ದೇವಾಲಯು, ರಾಚೀಗುಡಿ, ಅಂಬಿಗೇರ ಗುಡಿಗಳ ಗುಂಪು, ಚರಂತಿಮಠ ಮೊದಲಾದ ದೇವಾಲಯಗಳಿವೆ. ಅದಕ್ಕಾಗಿಯೇ ಐಹೊಳೆಯನ್ನು ವಿದ್ವಾಂಸರು ಮುಂದೆ ಬೆಳೆದು ಬಂದ ಚಾಲುಕ್ಯ ಶೈಲಿಯ ಪ್ರಯೋಗಶಾಲೆ, ಪ್ರದರ್ಶನ ಶಾಲೆ, ವಾಸ್ತು ಶಿಲ್ಪದ ತೊಟ್ಟಿಲು ದೇಗುಲಗಳ ಊರು ಎಂದೆಲ್ಲಾ ಬಣ್ಣಿಸಿದ್ದಾರೆ.

ಬಾದಾಮಿಕ ರಾಚನಿಕ ದೇವಾಲಯಗಳು :

ಬಾಗಲಕೋಟೆ ಜಿಲ್ಲೆಯ ಒಂದು ತಾಲ್ಲೂಕಾಗಿರುವ ಬಾದಾಮಿಯ ಪ್ರಾಚೀನ ಹೆಸರು ವಾತಾತಿ. ಇಲ್ಲಿ ಗುಹಾಂತರ ದೇವಾಲಯಗಳಲ್ಲದೆ ರಾಚನಿಕ ದೇವಾಲಯಗಳು ನಿರ್ಮಾಣಗೊಂಡವು. ಅವುಗಳಲ್ಲಿ ಕೆಳಗಿನ ಶಿವಾಲಯ, ಮೇಲಿನ ಶಿವಾಲಯ ಮತ್ತು ಮಾಲೆಗಿತ್ತಿ ಶಿವಾಲಯಗಳನ್ನು ಬೆಟ್ಟದ ಮೇಲೆ ನಿರ್ಮಿಸಲಾಗಿದೆ. ಭೂತನಾಥ ಗುಡಿಯನ್ನು ಅಗಸ್ತ್ಯತೀರ್ಥದ ಪೂರ್ವದ ದಂಡೆಯ ಮೇಲೆ ಜಂಬುಲಿಂಗ ಗುಡಿಯನ್ನು ಮತ್ತು ಪಶ್ಚಿಮದ ದಂಡೆಯಿಂದ ಸ್ವಲ್ಪ ದೂರದಲ್ಲಿ ರಚಿಸಲಾಗಿದೆ. ಮರಗಳನ್ನು ಬಳಸಿ ಕಟ್ಟಡ ಕಟ್ಟುತ್ತಿದ್ದ ಕಾಲದಲ್ಲಿ ದೈತ್ಯಾಕಾರದ ಚಪ್ಪಡಿಗಳನ್ನು ಬಳಸಿ ಒಂದರ ಮೇಲೊಂದರಂತೆ ಜೋಡಿಸಿದ್ದಾರೆ. ಸುಂದರ ಮೂರ್ತಿಗಳನ್ನಾಗಿ ಮಾಡಿ ದೇವಾಲಯಗಳ ನಿರ್ಮಾಣ ಮಾಡಿರುವ ಒಂದು ಪ್ರಯೋಗವೇ ಸರಿ. ಬಹುಶಃ ಇವರಿಗೆ ಶಿಲಾಯುಗದ ಸಮಾಧಿಗಳು ಸ್ಫೂರ್ತಿಯಾಗಿರಬಹುದು. ಇಲ್ಲಿನ ಬಹುತೇಕ ದೇವಾಲಯಗಳಲ್ಲಿ ಗಚ್ಚುಗಾರೆಯಂತಹ ಯಾವ ಬಂಧಕ ವಸ್ತುವನ್ನು ಬಳಸದೇ ಇರುವುದೊಂದು ಆಶ್ಚರ್ಯದ ಸಂಗತಿ. ಕಲ್ಲುಗಳು ಸರಿದಾಡದಂತೆ ಕಬ್ಬಿಣದ ಮೊಳೆಗಳನ್ನು ಮತ್ತು ಇಂಗ್ಲಿಷ್ ‘U’ ಅಕ್ಷರದಂತಿರುವ ಕಬ್ಬಿಣದ ಕೊಂಡಿಗಳನ್ನು ಬಳಸಲಾಗಿದೆ. ಗುಡಿ ನಿರ್ಮಾಣದಲ್ಲಿ ಚಾಲುಕ್ಯರು ತೋರಿಸಿದ ಆಸಕ್ತಿ ಉತ್ಸಾಹಗಳು, ವಾಸ್ತುಶಾಸ್ತ್ರಜ್ಞರು ಸಾಧಿಸಿದ ವಾಸ್ತುವಿದ್ಯೆ ಮತ್ತು ಶಿಲ್ಪಗಳು ಪ್ರದರ್ಶಿಸಿದ ಕಲಾಪ್ರೌಢಿಮೆ ಪ್ರಶಂಸನೀಯವಾಗಿದೆ.

ಇವರ ಕಾಲದಲ್ಲಿ ನಿರ್ಮಿತವಾದ ಕೆಲವು ದೇವಾಲಯಗಳ ಬಗೆಗೆ ತಿಳಿಯೋಣ.

ಇಲ್ಲಿ 20 ದೇವಾಲಯಗಳಿದ್ದು ಅವುಗಳಲ್ಲಿ ಮೇಲು ಶಿವಾಲಯ, ಮಾಲಗಿತ್ತಿ, ಜಂಬುಲಿಂಗ ದೇವಾಲಯ, ಪ್ರಮುಖವಾದವು.

ಕೆಳಗಿನ ಶಿವಾಲಯ :

ಬಾದಾಮಿಯ ಉತ್ತರ ಗುಡ್ಡದ ಅರ್ಧ ಎತ್ತರದಲ್ಲಿ ಗರ್ಭಗೃಹ ಮತ್ತು ಶಿಖರ ಭಾಗಗಳನ್ನು ಮಾತ್ರ ಉಳಿಸಿಕೊಂಡು ನಿಂತಿರುವ ದ್ರಾವಿಡ ವಿಮಾನ ಮಾದರಿಯ ದೇವಾಲಯ ಇದು ಪ್ರಾಚೀನ ಮತ್ತು ಬಾದಾಮಿಯ ಚಾಲುಕ್ಯರು ನಿರ್ಮಿಸಿದ ಮೊಟ್ಟ ಮೊದಲ ದೇವಾಲಯ. ಇದನ್ನು ಶಿವಾಲಯವೆಂದು ಕರೆದರೂ ಮೂಲತಃ ಇದು ಶಿವಾಲಯವಲ್ಲ. ಇದು ಮಂಗಳೇಶನ ಕಾಲದಲ್ಲಿ ನಿರ್ಮಿತವಾಗಿದೆ. ಕೆಲವು ವಿದ್ವಾಂಸರು ವಿಷ್ಣು ದೇವಾಲಯವೆಂದಎ ಗರ್ಭಗೃಹದಲ್ಲಿನ ಪೀಠವು ದೀರ್ಘ ವೃತ್ತಾಕಾರವಾಗಿರುವುದರಿಂದ ಅ. ಸುಂದರರವರು ಇದನ್ನು ಮೂಲತಃ ವಾತಾಪಿ ಗಣಪತಿಯ ಮಂದಿರವಾಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ.[102]

ಈ ದೇವಾಲಯದ ಬಾಗಿಲುವಾಡಗಳು ಸೊಗಸಾದ ಕೆತ್ತನೆಗಳಿಂದ ಅಲಂಕರಿಸಿವೆ. ಬಾಗಿಲಿನ ಬಳಿ ಇಬ್ಬರು ದ್ವಾರಪಾಲಕರಿದ್ದಾರೆ. ತೊಲೆಗಳ ಮೇಲೆ ಕುಬ್ಜ ಗಣವಿದೆ. ಗರ್ಭಗುಡಿಯ ಮೇಲೆ ಗೋಲಾಕಾರದ ಗುಮ್ಮಟ ಇದೆ. ಪ್ರದಕ್ಷಿಣಾ ಪಥದ ಹೊರಗೋಡೆ ಸಭಾಮಂಟಪ ಮತ್ತು ಮುಖಮಂಟಪಗಳು ಬಿದ್ದು ಹೋಗಿವೆ. ಪುಲಿಕೇಶಿಯನ್ನು ಸೋಲಿಸಿದ ಪಲ್ಲವರ ನರಸಿಂಹವರ್ಮನು ಆ ಮೂರ್ತಿಯ ಸೊಗಸಿಗೆ ಮಾರು ಹೋಗಿ ಅದನ್ನು ಕಂಚಿಗೆ ಕೊಂಡೊಯ್ದು ಕೈಲಾಸ ದೇವಾಲಯ ನಿರ್ಮಿಸಿದನು. ಕರ್ನಾಟಕ ಸಂಗೀತದ ವಾತಾಪಿ ಗಣಪತಿಂಭಜೆ ಬಂದಿತೆಂದು ಹೇಳಿದರು, ಸರಿಯಾದ ಪುರಾವೆಗಳಿಲ್ಲ.[103]

ಮೇನಣ ಶಿವಾಲಯ :

ಇದು ಸಹ ಪ್ರಾಚೀನವಾದ ದೇವಾಲಯ ಬೆಟ್ಟದ ತುದಿಯಲ್ಲಿರುವುದರಿಂದ ಮೇಗಣ ಶಿವಾಲಯ ಎಂದು ಇದಕ್ಕೆ ಹೆಸರು. ಕೆಳಗಿನ ಶಿವಾಲಯದಿಂದ ಈ ದೇವಾಲಯಕ್ಕೆ ಹೋಗಲು ಉತ್ತರಕ್ಕೆ ಮೆಟ್ಟಿಲು ಇವೆ. ಈ ಗುಡಿಯ ಬಹುಭಾಗ ಬಿದ್ದುಹೋಗಿದೆ. ನೋಡುಗನ ಮನಸೂರೆಗೊಳಿಸುತ್ತದೆ. ಇದು ಶಿವಾಲಯವಾಗಿರದೆ ಮೂಲತಃ ವಿಷ್ಣುಮಂದಿರವಾಗಿತ್ತೆಂಬುದು ಸ್ಪಷ್ಟ. ಗರ್ಭಗುಡಿ

---

102 ಅ. ಸುಂದರ, ಬಾದಾಮಿಯ ಕೆಳಗಣ ಶಿವಾಲಯವು ಮೂಲತಃ ಗಣೇಶ ದೇವಾಲಯವೇ? ಮಾನವಿಕ ಭಾರತಿ, ಸಂ.6.

103 ಶಿಲ್ಪಕಲೆಗಳು, ಪು.68.

ಸಭಾಮಂಟಪದ ದಕ್ಷಿಣ ಗೋಡೆ, ಪ್ರದಕ್ಷಿಣಾ ಪಥ, ಹೊರಗೊಡೆ ಮಾತ್ರ ಉಳಿದಿವೆ. ಇಲ್ಲಿ ದ್ರಾವಿಡ ಶೈಲಿಯ ಶಿಖರವಾಗಿವೆ. ಇಲ್ಲಿ ವೈಷ್ಣವ ಶಿಲ್ಪಗಳು ಹೇರಳವಾಗಿ ದೊರೆಯುತ್ತವೆ. ಪ್ರದಕ್ಷಿಣಾ ಪಥದ ಹೊರಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಹಿರಣ್ಯಕಶ್ಯಪುವನ್ನು ವಧಿಸುತ್ತಿರುವ ನರಸಿಂಹ, ಗೋವರ್ಧನಧಾರಿ ಕೃಷ್ಣ ಮತ್ತು ಕಾಳಿಂಗಮರ್ಧನ ಕೃಷ್ಣನ ಮೂರ್ತಿಗಳಿವೆ. ಅಧಿಷ್ಠಾನಕ್ಕೆ ಆಳವಾದ ಗಳವಿದ್ದು ಅದರಲ್ಲಿ ರಾಮಾಯಣ ಮತ್ತು ಭಾಗವತರ ದೃಶ್ಯಗಳನ್ನು ಕೆತ್ತಿದೆ. ಇದು ವೈಷ್ಣವ ದೇವಾಲಯವಾದರೂ ಸಜ್ಜದ ಮೇಲೆ ಗರ್ಭಗೃಹದ ಮೂರು ಹೊರಗೋಡೆಗಳಲ್ಲೂ ಒಂದೊಂದು ಕೋಷ್ಟವಿದ್ದು ಗೋವರ್ಧನಧಾರಿ ಕೃಷ್ಣ, ಕಾಳಿಂಗಮರ್ಧನ ಕೃಷ್ಣ ಹಾಗೂ ಷಡ್ಬಾಹು ನರಸಿಂಹನಮೂರ್ತಿ ಶಿಲ್ಪಗಳನ್ನು ಅಳವಡಿಸಲಾಗಿದೆ.[104]

ಬಾಣಂತಿ ದೇವಾಲಯ :

ಯಾವುದೇ ಅಲಂಕಾರ ಮತ್ತು ಸೂಕ್ಷ್ಮ ಕೆತ್ತನೆಗಳಿಲ್ಲದ ಬಾದಾಮಿಯಲ್ಲಿರುವ ದೇವಾಲಯ ಚಿಕ್ಕದಾಗಿದ್ದು ತನ್ನ ಅಪ್ರತಿಮ ರಚನೆಯಿಂದಾಗಿ ಹೊಗಳಿಕೆಗೆ ಪಾತ್ರವಾಗಿದೆ. ಬಾದಾಮಿಯ ಮೇಲು ಶಿವಾಲಯವನ್ನು ಹೋಲುವುದರಿಂದ ಇದು ಅದೇ ಕಾಲಕ್ಕೆ ಸೇರಿದುದಾಗಿರಬಹುದು ಎನ್ನಲಾಗಿದೆ.[105]

ಜಂಬುಲಿಂಗ ದೇವಾಲಯ :

ಕ್ರಿ.ಶ. 698-99 ರಷ್ಟು ಹಳೆಯದಾದ ದಕ್ಷಿಣ ಭಾರತದ ಪ್ರಥಮ ತ್ರಿಕೂಟೇಶ್ವರ ದೇವಾಲಯ ಅಂದರೆ ಇದು ಬ್ರಹ್ಮ, ವಿಷ್ಣು, ಮಹೇಶ್ವರರಿಗೂ ಒಂದೇ ದೇಗುಲದಲ್ಲಿ ಮೂರು ಪ್ರತ್ಯೇಕ ಗರ್ಭಗುಡಿಗಳಿವೆ. ಹಿಂದೆ ಈ ದೇವಾಲಯ ತೆರಿಗೆ ಪಡೆದಿತ್ತೆಂದು ತಿಳಿದುಬರುತ್ತದೆ.[106] ಇದು ಬಾದಾಮಿಯ ಹೃದಯ ಭಾಗದಲ್ಲಿದೆ ಇದನ್ನು ಕುರಿತು ದೊರೆತಿರುವ ಶಾಸನವು ತ್ರಿಪುರಾಸುರ ದೇವಯಾತನದ ಬಗೆಗೆ ತಿಳಿಸಿದೆ. ಈ ಶಾಸನವು ಈ ತ್ರಿಪುರಾಸುರ ದೇವನ ಬಗೆಗೆ ತಿಳಿಸುತ್ತದೆ. ಆದರೆ ಆಯತದ ನಿರ್ಮಾಣದ ಬಗೆಗೆ ಮಾಹಿತಿ ಇಲ್ಲದಿದ್ದರೂ ಅದು ಸೂಚಿಸಲ್ಪಡುವಂತಿದೆ. ಈ ದೇವಾಲಯವು ದೊಡ್ಡದಾದ ಆಯಾತಾಕಾರದ ಗುದಮಂಟಪವನ್ನೊಂದಿದ್ದು ಇಲ್ಲಿನ 3 ಗೋಪುರಗಳು

---

104 Percy Brown, Indian Architecture.

105 Mallikarjuna Kalmata, Badami Guidence.

106 Master, M.W., Encyclopedia of Indian Temple Architecture South India, Lower Devidedesa, Delhi, 1983.

ಉತ್ತರ, ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿವೆ. ಆಯತಾಕಾರದ ಮುಖಮಂಟಪ ದೇವಾಲಯದ ಪೂರ್ವಭಾಗದಲ್ಲಿದೆ. ಈ ಶಿವಾಲಯವು ಪ್ರತಿಬಂಧ ಅಧಿಷ್ಠಾನವೊಂದಿದ್ದು ಜೊತೆಗೆ ನಾರ, ಕುಂಬ, ದಾರಾವೃತ, ಕುಮುದಗಳನ್ನೊಂದಿವೆ. ಮುಂಭಾಗದಲ್ಲಿ ಕಂಬಗಳಿರುವ ತೆರೆದ ಕೈಸಾಲೆಯಿದೆ. ಸಭಾಮಂಟಪವನ್ನು ಒಂದು ಮಧ್ಯಾಂಗಣ ಛಾವಣಿಯ ತುಂಬಾ ಶಿವ, ಬ್ರಹ್ಮ, ವಿಷ್ಣು ಇವರ ಶಿಲ್ಪಗಳಿವೆ. ಎರಡೂ ಗರ್ಭಗೃಹ ಎದುರಿಗಿರುವ ಛಾವಣಿಯಲ್ಲಿ ಮತ್ಸಚಕ್ರ ಮತ್ತು ನಂದ್ಯಾವರ್ತ, ಸ್ವಸ್ತಿಕಗಳೂ, ಗಂಧರವರ ಶಿಲ್ಪಗಳಿವೆ. ಈ ಅಲಂಕಾರ ಪಟ್ಟಿಕೆಗಳೂ ಮುಖಭಾಗದ ಮಂಟಪ ಚೌಕಾಕಾರವಾಗಿದ್ದು, ಅದರ ಛಾವಣಿಯಲ್ಲಿರುವ ನಾಗರಾಜ ಶಿಲ್ಪವಿದೆ. ಸಭಾಮಂಟಪ ಮತ್ತು ಮುಖಮಂಟಪಗಳಲ್ಲಿರುವ ಸ್ತಂಭಗಳು ಪಟ್ಟಿ ಮತ್ತು ಪದಕ ಅಲಂಕಾರದಿಂದ ತುಂಬಿವೆ. ನೆತ್ತಿಯ ಮೇಲೆ ತರಂಗ ಚಾಚುಗಳಿವೆ.[107] ಗುದಮಂಟಪದ ಮೂಲೆಯಲ್ಲಿ ಗೂಡುಗಳಿದ್ದು ಜಾಲಾಂದ್ರಗಳನ್ನೊಂದಿವೆ. ಈ ದೇವಾಲಯವು ಕೆಲವೇ ಕೆಲವು ಜಾಲಾಂದ್ರಗಳನ್ನೊಂದಿದ್ದು ಅವುಗಳು ಗರ್ಭಗೃಹ ಮತ್ತು ಗುದಮಂಟಪದ ಗೋಡೆಗಳಲ್ಲಿ ಕಂಡುತ್ತದೆ.

ಪ್ರಸಾರದ ಕಪೋಟ ಕೆಳಭಾಗದಲ್ಲಿ ಹಂಸಮಾಲೆಯಿದೆ. ಅದರ ಮೇಲ್ಛಾವಣಿಯ ಬ್ಯಾಲವೇಲದ ರೀತಿಯಲ್ಲಿದೆ. ಇದರ ಆಧಾರಕಂಬಗಳು ಅಲಂಕೃತವಾದ ಸಮತಲವಾದ ವಿಭಾಗದ ಒಂದು ಭಾಗವು ನಾಗರಾಜ ಶಿಲ್ಪವು ಶೈವ ಗುಹಾಲಯದ ನಾಗರಾಜನನ್ನು ನೆನಪಿಸುತ್ತದೆ. ತೋರಿಸಿದರೆ ಮತ್ತೊಂದು ಭಾಗವು ಹನ್ನೆರಡು ಭಾಗಗಳಿಂದ ವಿಭಾಗಿಸಿದ್ದು ಅವುಗಳಲ್ಲಿ ತಾವರೆಗಳು, ಯಕ್ಷರು, ವಿದ್ಯಾಧರ, ಮಿಥುನ ಶಿಲ್ಪಗಳಿಂದ ಕೂಡಿವೆ. ಗುದ ಮಂಟಪದ ಪ್ರವೇಶದ್ವಾರವು ಅಲಂಕೃತವಾಗಿ ಜೋಡಿಸಲ್ಪಟ್ಟಂತಹ ಬೃಹಕಾಂಡ ಚೌಕಾಕಾರದ ಕಂಬದಿಂದ ಕೂಡಿದೆ. ಗರ್ಭಗೃಹದ ಮೇಲಿನ ಶಿಖರಗಳು ಇಲ್ಲವಾಗಿವೆ. ಉತ್ತರ ಗರ್ಭಗೃಹದ ಮೇಲಿನ ಇಟ್ಟಿಗೆಯ ಶಿಖರವು ಬಹುಶಃ ವಿಜಯನಗರದ ಸೇರ್ಪಡೆ.[108]

---

107 Percy Brown, Indian Architecture.

108 Master, M.W., Encyclopedia of Indian Temple Architecture South India, Lower Devidedesa, Delhi, 1983.

[illegible]

ಮಾಲಗಿತ್ತಿ ದೇವಾಲಯ :

ಇದರ ನಿರ್ಮಾತೃ ಆರ್ಯಮಿಂಚಿ ಉಪಾಧ್ಯಾಯ. ಇದು ಏಳನೇ ಶತಮಾನದ ದ್ವಿತೀಯಾರ್ಧದ ಒಂದು ದೊಡ್ಡ ದೇವಾಲಯ, ಇದು ನಿಸರ್ಗಪ್ರಾಯವಾಗಿದೆ. ಇದು ಒಂದು ವಿಶಿಷ್ಟವಾದ ದೇವಾಲಯ. ಒಬ್ಬ ಹೂವು ಮಾರುವ ಹೆಂಗಸಿನ ದೆಸೆಯಿಂದಾಗಿ ಈ ದೇವಾಲಯಕ್ಕೆ ಮಾಲೆಗಿತ್ತಿ ಶಿವಾಲಯ ಎಂಬ ಹೆಸರು ಬಂದಿದೆ. ಕ್ರಿ.ಶ. 655ರಲ್ಲಿ ಚಾಲುಕ್ಯ ಆಳ್ವಿಕೆಯ ಮರುಸ್ಥಾಪನೆಗೊಂಡೊಡನೆಯೇ ಈ ದೇವಾಲಯವನ್ನು ಒಂದು ಭಾರೀ ಬಂಡೆಯ ಮೇಲೆ ನಿಂತಿದೆ. ಇದು ಮೂಲತಃ ಸೂರ್ಯ ದೇವಾಲಯ[109] ಚೌಕಕಾರದ ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗುಡಿಗಳಿಂದ ಕೂಡಿದ ನಿರಂಧಾರ ದೇವಾಲಯವಿದು. ಶುದ್ಧ ದ್ರಾವಿಡ ಶೈಲಿಯ ಶಿಖರ ಇದರದು. ಇದು ಸುಂದರವಾಗಿದೆ. ಈ ಗುಡಿಗೆ ಪ್ರದಕ್ಷಿಣಾ ಪಥವಿಲ್ಲ. ಅಧಿಷ್ಠಾನದಲ್ಲಿ ಅನೇಕ ದಿಂಡುಗಳಿವೆ. ಅವುಗಳಲ್ಲಿ ಒಂದು ತುಂಬಾ ದಪ್ಪನಾಗಿದ್ದು, ಅವುಗಳ ಮೇಲೆ ಗಣಗಳ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಗೋಡೆಯ ಮೇಲೆ ಸಮಾನಾಂತರದಲ್ಲಿ ಅರೆಗಂಬಗಳಿವೆ. ಸಭಾಮಂಟಪದ ಕೋಷ್ಠವೊಂದರಲ್ಲಿ ವಿಷ್ಣುವಿನ ಶಿಲ್ಪವಿದ್ದು ಎರಡೂ ಕಡೆಗಳಲ್ಲಿ ಜಾಲಾಂಧ್ರಗಳಿವೆ. ಮೇಲ್ಭಾಗದಲ್ಲಿ ಮಂಜೂರು ಇದ್ದು ಅದರ ಮೇಲೆ ಮತ್ತೆ ಕೆಲವು ದಿಂಡುಗಳಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಛಾವಣಿಗೆ ಆಸರೆಯಾಗಿವೆ. ಇಲ್ಲಿರುವ ಎರಡು ದ್ವಾರಪಾಲಕ ಶಿಲ್ಪಗಳು ಕಲಾತ್ಮಕವಾಗಿದ್ದು ಸುಂದರ ಮುಖಭಾವ ಹಾಗೂ ಚಟುವಟಿಕೆಯ ಭಂಗಿಯಲ್ಲಿವೆ.

ದೇವಕೋಷ್ಟಗಳ ಆಚೀಚೆ ಮಕರ ತೋರಣಗಳ ಕೆಳಗೆ ಜಾಲಾಂಧ್ರಗಳು ಮತ್ತು ಗೋಡೆಗಂಬಗಳ ಸಾಲು ಕಂಡುಬರುತ್ತದೆ. ಬಾಗಿಲುವಾಡದ ಲಲಾಟದಲ್ಲಿ ಗರುಡಶಿಲ್ಪ, ಸಭಾಮಂಟಪದ ಛತ್ತಿನಲ್ಲಿ ವಿಷ್ಣುಮೂರ್ತಿ ಇರುವುದನ್ನು ಕಂಡು ಹೆನ್ರಿ ಕಸಿನ್ಸ್‌ರು ಇದನ್ನು ವೈಷ್ಣವ ಗುಡಿ ಎಂದಿದ್ದಾರೆ.[110]

ಗರುಡನ ಮೇಲೆ ಛತ್ತಿಗೆ ಸಮೀಪವಾಗಿ ಏಳು ಕುದುರೆಗಳ ರಥದಲ್ಲಿ ಸೂರ್ಯನ ಮೂರ್ತಿ ಇದೆ. ಪೂರ್ವದ ಗೋಡೆಯ ಮೇಲಿರುವ ಪ್ರತಿಮೆಗಳು ಸೂರ್ಯನ ದ್ವಾರಪಾಲಕರಾದ ದಂಡ ಮತ್ತು

---

109 ಡಾ. ಶೀಲಾಕಾಂತ ಪತ್ತಾರ, ಬಾದಾಮಿ, ಪು.41.

110 H. Cousins, Chalukyan Architecture.

[illegible]

ತಿಂಗಳರವು ಗರ್ಭಗುಡಿಯ ಬಾಗಿಲುವಾಡದ ಹತ್ತಿರ ಭಾಗಶಃ ಕುದುರೆಯ ದೇಹವಿರುವ ಸ್ತ್ರೀ ಕಿನ್ನರಿಯೊಬ್ಬಳ ತಲೆಗೂದಲನ್ನು ಹಿಡಿದು ಆಕೆಯ ಬೆನ್ನನ್ನು ತನ್ನ ಎಡಗಾಲಿನಿಂದ ತುಳಿಯುತ್ತಿರುವ ಒಂದು ಮೂರ್ತಿ ಇದೆ. ಇದನ್ನು ಕೆಲವರು ಸೂರ್ಯಛಾಯೆಯರ ಚಿತ್ರ ಎನ್ನುತ್ತಾರೆ. ಕೆಲವರಿಗೆ ಸೂರ್ಯ ದೇವಾಲಯವಾದರೆ ಇನ್ನೂ ಕೆಲವರಿಗೆ ಇದು ಮೂಲತಃ ವಿಷ್ಣು ದೇಗುಲವಾಗಿದ್ದು ತರುವಾಯದಲ್ಲಿ ಶಿವಾಲಯವಾಯಿತು.[111] ಈ ದೇವಾಲಯದ ದಕ್ಷಿಣ ಭಾಗದ ಗೋಡೆಯಲ್ಲಿ ತ್ರಿಶೂಲ ಮತ್ತು ಸರ್ಪವನ್ನು ಹಿಡಿದಿರುವ ಶಿವನ ಶಿಲ್ಪವಿದೆ. ಸಭಾಮಂಟಪದ ಒಳಗಿನ ಛಾವಣಿಯಲ್ಲಿ ಕಮಲ ವಿನ್ಯಾಸದಲ್ಲಿ ಗರುಡನ ಮೇಲೆ ಕುಳಿತಿರುವ ವಿಷ್ಣುವಿನ ಶಿಲ್ಪವಿದೆ. ಶಿವನು ಫಲ, ಸರ್ಪ, ತ್ರಿಶೂಲಗಳನ್ನು ಹಿಡಿದುಕೊಂಡು ಕಟ್ಯಾವಲಂಬಿತ ಹಸ್ತನಾಗಿ ನಿಂತಿದ್ದಾನೆ. ವಿಷ್ಣುವು ವಿಷ್ಣು ಫಲ, ಚಕ್ರ, ಶಂಖ ಹಿಡಿದು ಕಟ್ಯಾವಲಂಬಿತ ಹಸ್ತವಾಗಿ ನಿಂತಿದ್ದಾನೆ. ಚಕ್ರ, ಶಂಖಗಳ ಹತ್ತಿರ ಒಬ್ಬೊಬ್ಬ ಗಣರಿದ್ದಾರೆ. ಇವರು ಯೋಧರು, ಗರ್ಭಗೃಹದ ದ್ವಾರಬಂಧ ವಿಶೇಷವಾಗಿ ಅಲಂಕೃತವಾಗಿದ್ದು ಅದರ ಮೇಲೆ ಲತೆ, ಪುಷ್ಪ, ಅರೆಗಂಬ ವಿನ್ಯಾಸಗಳು ನಾಗ, ಮಿಥುನ ಶಿಲ್ಪಗಳಿವೆ. ಲಲಾಟ ಬಿಂಬದಲ್ಲಿ ನಟರಾಜನ ಶಿಲ್ಪವಿದೆ, ಗರ್ಭದಲ್ಲಿ ಶಿವಲಿಂಗವಿದೆ.

ಭೂತನಾಥ ದೇವಾಲಯ :

ಅಗಸ್ತ್ಯತೀರ್ಥರ ಪೂರ್ವರ ದಂಡೆಯ ಮೇಲಿರುವ ಗುಡಿ ಸಮುಚ್ಚಯದ ಪ್ರಧಾನ ದೇವಾಲಯವಿದು. ಇದು ಚಾಲುಕ್ಯರು ನಿರ್ಮಿಸಿದ ಕೊನೆಯ ದೇವಾಲಯ. ಇದನ್ನು ಮರಳುಕಲ್ಲಿನಿಂದ ನಿರ್ಮಿಸಲಾಗಿದೆ.

ನಿರಂಧಾರ ಮಾದರಿಯ ಈ ಗುಡಿಯು ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗೃಹ ಮುಖಮಂಟಪಕ್ಕೆ ಕೆಲವು ಕಂಬಗಳನ್ನು ಸೇರಿಸಿ ಅದನ್ನು ನಂತರ ವಿಸ್ತರಿಸಲಾಗಿದೆ. ಮೇಲ್ಛಾವಣಿಯಲ್ಲಿ ಕಮಲಗಳ ಕೆತ್ತನೆ ಇದೆ. ಸಭಾಗೃಹಕ್ಕೆ ನಾಲ್ಕು ಜಾಲಾಂದ್ರಗಳಿವೆ. ಸಭಾಮಂಟಪದ ಮೂರ್ತಿಗಳನ್ನು ಉದ್ದೇಶಪೂರ್ವಕವಾಗಿ ಹಾಳು ಮಾಡಲಾಗಿದೆ. ಗರ್ಭಗೃಹದ ಬಾಗಿಲುವಾಡವು ತೀರ ಸರಳವಾಗಿದ್ದು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪವಿಲ್ಲ. ಆದರೆ ಅಡಿಭಾಗದಲ್ಲಿ ಎಡಭಾಗದಲ್ಲಿ ಗಂಗೆ

---

111 Nagaraja Rao, The Chalukyas of Badami.

ಮಕರದ ಮೇಲೆ ಭಾಗದಲ್ಲಿ ಯಮುನಾ ಆಮೆಯ ಮೇಲೆ ನಿಂತಿದ್ದಾರೆ. ಗರ್ಭಗುಡಿಯ ಲಿಂಗವು ಮೂಲ ಲಿಂಗವೆನಿಸುವುದಿಲ್ಲ.[112]

ಬನಶಂಕರಿ ದೇವಾಲಯ :

ಈ ದೇವಾಲಯವು ಬಾದಾಮಿಯಿಂದ 5 ಕಿ.ಮೀ. ದೂರದಲ್ಲಿದ್ದು ಮುಖ್ಯ ಹೆದ್ದಾರಿಯಲ್ಲಿದೆ. ಈ ದೇವಾಲಯವು ಕೆಂಬಂಡೆಗಳು ಮತ್ತು ಹಸಿರುತೋಪುಗಳ ನಡುವೆ ಇವೆ. ಅಂತೆಯೇ ಪ್ರಾಚೀನವಾದ ಈ ಕ್ಷೇತ್ರ ದೇವತೆಗೆ ದೇಶದುದ್ದಕ್ಕೂ ಭಕ್ತಾದಿಗಳಿದ್ದಾರೆ. ದೇವಿಗೆ ಶಾಖಾಂಬರಿ ಎಂಬ ಇನ್ನೊಂದು ಹೆಸರು ಇದೆ. ಸ್ಥಳ ಪುರಾಣದ ಪ್ರಕಾರ ಈ ಪ್ರದೇಶವು ಬರಗಾಲಕ್ಕೀಡಾದ ಸಂದರ್ಭದಲ್ಲಿ ದೇವಿಯು ತನ್ನ ದೇಹದಿಂದ ತರಕಾರಿಯನ್ನು ಸೃಷ್ಟಿಸಿ ಭಕ್ತರಿಗೆ ನೀಡಿದಳು. ಅಂದಿನಿಂದ ಅವಳು ಶಾಖಾಂಬರಿಯಾದಳು.

ಈ ದೇವಾಲಯದ ನಿರ್ಮಾಣ ಕಾಲದ ಬಗೆಗೆ ಗೊಂದಲಗಳಿದ್ದು ಕೆಲವರ ಪ್ರಕಾರ ಇದು ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ಈಗಿರುವ ಗುಡಿಯು ಹೊಸ ನಿರ್ಮಾಣವಾಗಿದ್ದು ಆದರೆ ಹಿಂದೆ ಈ ಜಾಗದಲ್ಲಿದ್ದ ದೇವಾಲಯದ ಮೂರ್ತಿಗಳನ್ನೇ ಇಲ್ಲಿ ತಂದು ಸ್ಥಾಪಿಸಲಾಗಿದೆ.[113]

ಪಟ್ಟದ ಕಲ್ಲು :

ಪಟ್ಟದಕಲ್ಲು ಎಂಬುದೇ ಈ ಊರ ಮೊದಲಿನ ಹೆಸರೆಂದೇ ತೋರುವುದು. ಕ್ರಿ.ಶ. 150ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಗ್ರೀಸ್ ದೇಶದ ಟಾಲೆಮಿಯ ವರದಿಯಲ್ಲಿ ಇದನ್ನು ಪೆರ್ತಗಲ್ ಎಂದು ಹೆಸರಿಸಲಾಗಿದೆ.[114] ಬಾದಾಮಿ ಚಾಲುಕ್ಯರ ಕಾಲದಲ್ಲಿ ಇದಕ್ಕೆ ಕಿಸುವೊಳಲ್ ಅಥವಾ ಪಟ್ಟದ ಕಿಸುವೊಳಲ್ ಎಂಬ ಹೆಸರು ರೂಢಿಯಲ್ಲಿ ಬಂದಿತೆಂದು ಚಾಲುಕ್ಯ ಶಾಸನಗಳು ತಿಳಿಸುತ್ತವೆ. ಮಲಪ್ರಭಾ ನದಿಯ ಎಡದಂಡೆಯ ಮೇಲಿರುವ ಇದು ದೇವಾಲಯಗಳ ನಿರ್ಮಾಣಕ್ಕೆ ಅತೀ ಪ್ರಶಸ್ತವಾದ ಪ್ರದೇಶವಾದುದರಿಂದ ಇಲ್ಲಿ ಹೆಚ್ಚು ದೇವಾಲಯಗಳು ನಿರ್ಮಾಣವಾದವು. ಇಲ್ಲಿರುವ ಪ್ರಮುಖ ದೇವಾಲಯಗಳೆಂದರೆ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಗಳಗನಾಥ,

---

112 ಡಾ ಶೀಲಕಾಂತ ಪತ್ತಾರ, ಬಾದಾಮಿ.

113 ಮಲ್ಲಿಕಾರ್ಜುನ ಕಲ್ಮಠ, ಬಾದಾಮಿ ಮಾರ್ಗದರ್ಶಿ.

114 ಕೆ.ಪಿ. ಈರಣ್ಣ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಪು.126.

ಕಾಶಿವಿಶ್ವೇಶ್ವರ, ಕಾಡಸಿದ್ದೇಶ್ವರ, ಚಂದ್ರಶೇಖರ, ಜಂಬುಲಿಂಗ ಮತ್ತು ಪಾಪನಾಥ ದೇವಾಲಯಗಳಿವೆ. ಇವುಗಳೆಲ್ಲವೂ ಎಂಟನೇ ಶತಮಾನದ ವಾಸ್ತುಶಿಲ್ಪವನ್ನು ಪ್ರತಿನಿಧಿಸುತ್ತವೆ. ಇಲ್ಲಿರುವ ದೇವಾಲಯಗಳಲ್ಲಿ ಕೆಲವನ್ನು ಔತ್ತರೇಯವೆಂದು ಮತ್ತೆ ಕೆಲವನ್ನು ದ್ರಾವಿಡ ರೀತಿಯವುಗಳೆಂದು ವಿಭಾಗಿಸಲಾಗಿದೆ. ಇಲ್ಲಿ 10 ದೇವಾಲಯಗಳಿವೆ. ಜೈನದೇವಾಲಯವೊಂದನ್ನು ಬಿಟ್ಟರೆ ಉಳಿದೆಲ್ಲವೂ ಶೈವ ದೇವಾಲಯಗಳು. ಇವುಗಳ ನಿರ್ಮಾಣ ಕಾರ್ಯ ಕ್ರಿ.ಶ. 7ನೇ ಶತಮಾನದಿಂದ ಆರಂಭವಾಗಿ ಕ್ರಿ.ಶ. 9ನೇಯ ಶತಮಾನದ ಮಧ್ಯಭಾಗದವರೆಗೆ ಮುಂದುವರಿದ್ದಿತು. ಇದರಲ್ಲಿ ಖ್ಯಾತ ವಾಸ್ತುಶಿಲ್ಪಿಗಳಾದ ರೇವಡಿ ಓವಜ್ಜ, ಅನಿವಾರಿತ ಗುಂಡ ಮತ್ತು ಅವರಿಗೆ ಸಹಾಯಕರಾಗಿ ಚಂಗಮ್ಮ, ಪುಲ್ಲಪ್ಪನ್, ಬಲದೇವ ಮತ್ತು ಇತರರು ಕಾರ್ಯನಿರ್ವಹಿಸಿದ್ದರು. ಚಾಲುಕ್ಯ ದೊರೆಗಳು ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯಂತಹ ರಾಣಿಯರು, ಅಧಿಕಾರಿಗಳು, ಮಂತ್ರಿಗಳು ಮುಂತಾದವರು ಈ ದೇವಾಲಯಗಳನ್ನು ನಿರ್ಮಾಣ ಮಾಡಿದುದಲ್ಲದೆ ಭೂದಾನ ಮತ್ತು ಧನ ದಾನಗಳನ್ನು ಮಾಡಿ ಇವುಗಳ ಸಂರಕ್ಷಣೆ ಮತ್ತು ಪೂಜಾಕೈಂಕರ್ಯಗಳಿಗೆ ಅನುವು ಮಾಡಿಕೊಟ್ಟಿದ್ದಾರೆ. ಈ ಸೊಬಗಿಗೆ ಮಾರುಹೋಗಿಯೇ ಯುನೆಸ್ಕೋ ಪಟ್ಟದಕಲ್ಲನ್ನು ವಿಶ್ವಪಾರಂಪಾರಿಕ ನೆಲೆ ಎಂಬುದಾಗಿ ಗುರುತಿಸಿರುವುದು ಒಂದು ಹೆಮ್ಮೆಯ ವಿಚಾರ. ಅಂತಹ ದೇವಾಲಯಗಳ ಕುರಿತು ಅರಿಯೋಣ.

1. ಜೈನ ನಾರಾಯಣ ಗುಡಿ :

ಬಾದಾಮಿ ಚಾಲುಕ್ಯರು ಸರ್ವಧರ್ಮ ಸಮನ್ವಯದವರಾಗಿದ್ದರೆಂಬುದಕ್ಕೆ ಇದು ಒಂದು ಜ್ವಲಂತ ಸಾಕ್ಷಿಯಾಗಿದೆ. ಪಟ್ಟದಕಲ್ಲಿನಲ್ಲಿ ಜೈನಧರ್ಮಕ್ಕೆ ಸೇರಿದ್ದು ಎನ್ನಬಹುದಾದ ಒಂದೇ ಒಂದು ದೇವಾಲಯ ಇದಾಗಿದೆ. ಇದರ ರಚನೆಯ ದೃಷ್ಟಿಯಿಂದ ಮತ್ತು ಆ ಕಂಬಗಳಲ್ಲಿ ಕಾಣುವ ವೈವಿಧ್ಯದ ದೃಷ್ಟಿಯಿಂದ ಈ ಗುಡಿ ಗಮನಾರ್ಹವಾಗಿದೆ.

ಪಟ್ಟದಕಲ್ಲಿನಿಂದ ಅರ್ಧ ಕಿ.ಮೀ. ದೂರದಲ್ಲಿ ಈ ಜೈನ ದೇವಾಲಯವಿದೆ. ಇದೂ ಕೂಡ ಕೆಂಪು ಮರಳುಗಲ್ಲಿನಲ್ಲಿ ಕಟ್ಟಲಾದ ದೇಗುಲ, ದೇವಾಲಯದಲ್ಲಿ ಗರ್ಭಗೃಹ ಅರ್ಧಮಂಟಪ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಇದು ಪೂರ್ವಾಭಿಮುಖವಾಗಿವೆ. ಇದರಲ್ಲಿ ಹಿಂದೆ ಪ್ರದಕ್ಷಿಣಾ ಪಥವು ಇದ್ದು ಈಗ ಇದರ ಗೋಡೆಗಳು ಬಿದ್ದು ಹೋಗಿವೆ. ಈ ದೇವಾಲಯ ಮೊದಲು ಕಟ್ಟುವ ಮೊದಲು ಇಲ್ಲಿ ಇಟ್ಟಿಗೆಯ ಮಂದಿರ ಇದ್ದಿತೆಂದು ತಿಳಿದುಬರುತ್ತದೆ. ಇಲ್ಲಿ ಪ್ರತ್ಯೇಕವಾಗಿ

[illegible]

ಅರ್ಧಮಂಟಪವನ್ನು ನಿರ್ಮಿಸಿರುವುದನ್ನು ಕಾಣಬಹುದು. ಇದರ ಹಿಂದೆ ಮತ್ತು ಮುಂದೆ ಕಂಬಗಳಿವೆ. ಇದರಿಂದ ಅರ್ಧಮಂಟಪವು ಇನ್ನೂ ಹೆಚ್ಚಿನ ವಿಕಾಸವನ್ನು ತೋರಿಸುತ್ತದೆ. ಎರಡು ಕಡೆಗಳಲ್ಲಿಯೂ ಗೂಡುಗಳಿದ್ದು ಅವುಗಳಲ್ಲಿ ಜೈನ ಶಿಲ್ಪಗಳಿದ್ದವು. ಸಭಾಮಂಟಪ ಮತ್ತು ಮುಖಮಂಟಪಗಳ ಕಂಬವೂ ಭಿನ್ನ ರೀತಿಯಲ್ಲಿದ್ದು ಅವುಗಳಲ್ಲಿ ಸೂಕ್ಷ್ಮ ಕೆತ್ತನೆಗಳಿವೆ. ಸಭಾಮಂಟಪದಲ್ಲಿ ನಾಲ್ಕು ಸಾಲುಗಳ ಕಂಬಗಳಿವೆ.[115]

ವಿಮಾನವು ದ್ರಾವಿಡ ಶೈಲಿಯ ಅಷ್ಟಕೋನಾಕೃತಿಯಲ್ಲಿದೆ. ಇಷ್ಟೊಂದು ಎತ್ತರವಾದ ದೇವಾಯಲಕ್ಕೆ ಈ ನಿರ್ಮಾಣವು ಸ್ವಲ್ಪ ಸಣ್ಣದೆನಿಸುತ್ತದೆ. ಗರ್ಭಗೃಹದ ಮೇಲಿನ ಅಂತಸ್ತಿನಲ್ಲಿ ಮೇಗುತಿ, ಲಾಡ್‌ಖಾನ್ ಮುಂತಾದ ದೇವಾಲಯಗಳಲ್ಲಿರುವಂತೆ ಇನ್ನೊಂದು ಗರ್ಭಗೃಹವಿದೆ. ಹೊರಗೋಡೆಯ ಉತ್ತರ ದಕ್ಷಿಣ ಭಾಗಗಳಲ್ಲಿ ಜೈನಶಿಲ್ಪಗಳಿವೆ. ಗರ್ಭಗೃಹದಲ್ಲಿ ಈಗ ಶಿವಲಿಂಗವಿದೆ. ಮುಖಮಂಟಪ ಸುಂದರವಾಗಿದ್ದು ಅದಕ್ಕೆ ಪೂರ್ವದಲ್ಲಿ ಪ್ರವೇಶದ ಮೆಟ್ಟಿಲುಗಳಿವೆ. ಇದರಲ್ಲಿ ಕಕ್ಷಾಸನವಿದೆ. ಈ ಕಕ್ಷಾಸನದ ಹೊರಗೋಡೆಯಲ್ಲಿ ಪದ್ಮನಿಧಿ, ನರ್ತಕಿ, ನಾಗಗಳೊಡನೆ ಆಡುತ್ತಿರುವ ಗಣಗಳು ಮತ್ತು ಪೂರ್ಣಕುಂಭ ಮುಂತಾದ ಶಿಲ್ಪಗಳಿವೆ. ಸಮಾನ ಅಂತರದಲ್ಲಿ ಅರೆಗಂಬಗಳಿವೆ. ಇಲ್ಲಿ ಕಂಡುಬರುವ ಇತರ ಶಿಲ್ಪಗಳೆಂದರೆ ಪ್ರಣಯಾಸಕ್ತ ದಂಪತಿಗಳು, ಹಾರಾಡುತ್ತಿರುವ ಗಂಧರ್ವರು, ಆನೆಯ ಮೇಲಿನ ಸವಾರರು, ಹೂವನ್ನು ಕೈಯಲ್ಲಿ ಹಿಡಿದಿರುವ ದೇವತೆಯ ಚಿತ್ರವಿದೆ.

ಕಾಡುಸಿದ್ದೇಶ್ವರ :

ಇದೊಂದು ಪುಟ್ಟಗುಡಿ. ಉತ್ತರದ ಕೊನೆಗಿರುವ ಈ ದೇವಾಲಯದಲ್ಲಿ ಗರ್ಭಗುಡಿ ಮತ್ತು ಮುಖಮಂಟಪ ಮಾತ್ರ ಇವೆ. ದ್ವಾರಮಂಟಪದ ಎರಡೂ ಮಗ್ಗುಲಿಗೆ ದ್ವಾರಪಾಲಕರಿದ್ದಾರೆ. ಅವು ಕೆಲವು ಕಡೆ ಒಡೆದು ಹೋಗಿವೆ. ಗರ್ಭಗುಡಿಯ ಹೊರಗೋಡೆಯ ದೇವಕೋಷ್ಟಗಳಲ್ಲಿ ಲಕುಲೀಶ, ಹರಿಹರ ಮತ್ತು ಅರ್ಧನಾರೀಶ್ವರರನ್ನು ಕೆತ್ತಲಾಗಿದೆ. ಉತ್ತರದ ಪ್ರಾಕಾರದ ಬಳಿ ಇರುವ ಕಾಶೀವಿಶ್ವೇಶ್ವರದ ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಈಗ ಉಳಿದಿವೆ. ರೇಖಾನಾಗರ ಶಿಖರದ ಅಮಲಕ, ಕಲಶಗಳು ಬಿದ್ದು ಹೋಗಿವೆ. ಸುಖನಾಸಿಯ ಮುಖಪಟ್ಟಿಯಲ್ಲಿನ ಚೈತ್ಯಗೂಡಿನಲ್ಲಿ ನಟರಾಜನ ಉಬ್ಬುಶಿಲ್ಪ, ಅಂತರಾಳದ ನಾಲ್ಕು ಕಂಬಗಳು ಕೆಲವು ಸ್ತ್ರೀಯರ ಉಬ್ಬುಶಿಲ್ಪಗಳಿಂದ ಹಾಗೂ

---

115 ಕೆ.ಪಿ. ಈರಣ್ಣ, ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ.

ಪೌರಾಣಿಕ ಮತ್ತು ಹರಿವಂಶದಲ್ಲಿ ವಿವರಿಸಿದ ಕೃಷ್ಣಲೀಲೆಯ ಸನ್ನಿವೇಶಗಳುಳ್ಳ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿದೆ. ಛಾವಣಿಯಲ್ಲಿ ಸೋಮಸ್ಕಂದನ ವಿಗ್ರಹವಿದೆ.[116]

ಜಂಬುಲಿಂಗ ಗುಡಿ :

ರೇಖಾನಾಗರ ಶೈಲಿಯ ಈ ಗುಡಿಯೂ ಚಿಕ್ಕದೇ. ಗಳಗನಾಥ ದೇವಾಲಯದ ಹಿಂದೆ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ ಮತ್ತು ಸಣ್ಣಮಂಟಪವನ್ನು ಹೊಂದಿದ್ದು ಮುಂದಿನ ದೊಡ್ಡ ಮಂಟಪ ಬಿದ್ದು ಹೋಗಿದೆ. ಮೇಲೆ ಗಳಗನಾಥರ ಗುಡಿಯ ವಿಮಾನವನ್ನು ಹೋಲುವ ಗೋಪುರವಿದೆ. ಇದರ ಮೇಲೆ ಅಮಲಕ ಮತ್ತು ಕಲಶವಿಲ್ಲ. ಗರ್ಭಗುಡಿಯ ವಿಮಾನದ ಮೇಲೆ ಪೂರ್ವದಿಕ್ಕಿನಲ್ಲಿ ಪಾರ್ವತಿ ಮತ್ತು ನಂದಿ ಸಹಿತವಾಗಿರುವ ನಟರಾಜನ ಸುಂದರಮೂರ್ತಿ ಇದೆ. ಪಶ್ಚಿಮದ ಹೊರಗೋಡೆಯ ಮೇಲಿದ್ದ ವಿಗ್ರಹಗಳು ಒಡೆದಿವೆ. ದೇಗುಲದ ಮಂಜೂರಿನ ಕೆಳಗೆ ಗೋಡೆಯ ಮೇಲ್ಬಾಗಕ್ಕೆ ಹತ್ತಿಕೊಂಡಂತೆ ಸಾಲಾಗಿ ಹಂಸಗಳ ಕೆತ್ತನೆ ಇದೆ. ಗರ್ಭಗುಡಿಯ ಬಾಗಿಲುಗಳ ಅಕ್ಕಪಕ್ಕದಲ್ಲಿ ದ್ವಾರಪಾಲಕರಿದ್ದಾರೆ. ಒಟ್ಟಿನಲ್ಲಿ ಚಾಲುಕ್ಯ ಶಿಲ್ಪದ ಎರಡನೆಯ ಹಂತದ ಬೆಳವಣಿಗೆಯನ್ನು ದೇವಾಲಯದಲ್ಲಿ ಕಾಣಬಹುದು.[117]

ಗಳಗನಾಥ ದೇವಾಲಯ :

ಇದರ ವಾಸ್ತುಶೈಲಿಯನ್ನಾಧರಿಸಿ ಇದನ್ನು ಇದು ಕ್ರಿ.ಶ. 8ನೇ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಾಣವಾಗಿರಬೇಕೆಂದು ತಿಳಿಯಬಹುದು. ಇದು ಪಟ್ಟದಕಲ್ಲಿನ ಒಂದು ಸುಂದರ ದೇವಾಲಯ ಇದು ಪೂರ್ವಾಭಿಮುಖವಾಗಿದೆ. ಎತ್ತರದ ನಾಗರ ರೀತಿಯ ಶಿಖರದಿಂದಾದ ಇದು ದೂರದಿಂದಲೇ ಜನರನ್ನು ಆಕರ್ಷಿಸುತ್ತದೆ. ಇದನ್ನು ರೇಖಾನಾಗರವೆಂದು ಬಣ್ಣಿಸಲಾಗಿದೆ.[118] ಇದರ ಸಭಾಮಂಟಪ 129 ಮೀ. ವಿಸ್ತಾರವಾದುದು ಅಂತರಾಳ ಮತ್ತು ಗರ್ಭಗುಡಿಗಳನ್ನು ಸೇರಿಸಿದಂತೆ ಪ್ರದಕ್ಷಿಣಾ ಪಥ ಇದರ ಹೊರಗೋಡೆಯ ಸುತ್ತಲೂ ಜಾಲರಿಯುಳ್ಳ ಗೋಡೆ. ಸಭಾಮಂಟಪ ಹಾಳಾಗಿದ್ದು ಅಧಿಷ್ಠಾನ ಮಾತ್ರ

---

116 Master, M.W., Encyclopedia of Indian Temple Architecture South India, Lower Davidedesa, Delhi, 1983.

117 ಶಿವರಾಮ ಕಾರಂತ, ಚಾಲುಕ್ಯ ಕಲೆ ಮತ್ತು ವಾಸ್ತುಶಿಲ್ಪ.

118 ಬಿ.ಆರ್. ಗೋಪಾಲ್, ಕರ್ನಾಟಕದ ಕಲೆಗಳು.

ಉಳಿದಿದೆ. ಅಂತರಾಳದ ನಾಲ್ಕು ಶಾಖೆಗಳ ದ್ವಾರಬಂಧ ಸೂಕ್ಷ್ಮ ಕೆತ್ತನೆಯಿಂದ ಅಲಂಕೃತವಾಗಿವೆ. ಸಭಾಮಂಟಪದ ದಕ್ಷಿಣದಲ್ಲಿ ಒಂದು ಚಿಕ್ಕ ಅರ್ಧಮಂಟಪ ಅದರಲ್ಲಿ ಎಂಟು ಕೈಗಳುಳ್ಳ ಅಂಧಕಾಸುರನ ಭಗ್ನ ವಿಗ್ರಹ, ರೇಖಾನಗರ ಶಿಖರದಲ್ಲಿ ಚೈತ್ಯಗೂಡುಗಳ ಅಡ್ಡಸಾಲುಗಳಿಂದ ಚಿತ್ರಿತವಾದ ಉದ್ದ ಪಟ್ಟಿಕೆಗಳು ನಾಲ್ಕು ಮೂಲೆಯಲ್ಲಿಯೂ ಅಮಲಕಗಳು ಅದರ ಮೇಲೆ ಸಾದಾ ಮೆಟ್ಟಿಲು ಮತ್ತೆ ಅದರ ಮೇಲೆ ಅಮಲಕ ಹೀಗೆ ಮೇಲೆ ಹೋದಂತೆಲ್ಲಾ ಕ್ರಮೇಣ ಕಿರಿದಾಗುತ್ತಾ ಹೋಗುತ್ತದೆ. ಇದರ ಮೇಲೆ ತುದಿಯಲ್ಲಿ ಒಂದು ದೊಡ್ಡರಾಯನೆಲ್ಲಿ ಆಕಾರದ ಕಲ್ಲು ಅದರ ಮೇಲೆ ನಾರಿಕೇಳ ಕಳಸ. ಗರ್ಭಗುಡಿಯಲ್ಲಿ ಕರಿಯಕಲ್ಲಿನ ಲಿಂಗವಿದೆ. ಸುಖನಾಸಿ ಮಂಟಪವನ್ನು ಇದು ಒಳಗೊಂಡಿದೆ. ದೇವಾಲಯದ ದಕ್ಷಿಣ ಭಾಗದಲ್ಲಿರುವ ಮುಖಮಂಟಪದಲ್ಲಿ ಅಂಧಕಾಸುರಾಂತಕ ಶಿವನಮೂರ್ತಿ ಬಹಳ ಸುಂದರವಾಗಿದೆ. ಈ ಮೂರ್ತಿಯ ಹತ್ತಿರದ ಕಂಬಗಳಲ್ಲಿ ಸಿಂಹಗಳ ಆಕೃತಿಗಳನ್ನು ಬಿಡಿಸಲಾಗಿದೆ. ದೇವಾಲಯದ ಹತ್ತಿರ ಭಿನ್ನವಾದ ಎಂಟು ಕೈಗಳ ಅಂಧಕಾಸುರ ಸಂಹಾರಮೂರ್ತಿಯ ಶಿಲ್ಪ ದೊರಕಿದೆ ಭಿನ್ನವಾಗಿದ್ದರೂ ಇದೊಂದು ಒಳ್ಳೆಯ ವಿಗ್ರಹ. ಶಿವನು ಅಂಧಕಾಸುರನನ್ನು ಭರ್ಜಿಯಿಂದ ಸಂಹರಿಸುವಂತೆ ಕೆತ್ತಲಾಗಿದೆ. ಶಿವನ ಇತರ ಕೈಗಳಲ್ಲಿ ಖಡ್ಗ, ತ್ರಿಶೂಲ ಇತ್ಯಾದಿ ಆಯುಧಗಳಿವೆ. ಸುಖನಾಸಿಯ ದ್ವಾರಬಂಧದಲ್ಲಿ ಪತ್ರ ಶಾಖೆಯಿದ್ದು ಕೆಳಭಾಗದಲ್ಲಿ ಗಂಗಾ ಯಮುನೆಯರ ಹಾಗೂ ದ್ವಾರಪಾಲಕ ದಂಪತಿಗಳ ಕೆತ್ತನೆಗಳಿವೆ. ಲಲಾಟದಲ್ಲಿ ಶಿವ ನಟರಾಜನ ಶಿಲ್ಪವಿರುವುದರಿಂದ ಮೂಲತಃ ಇದು ಶೈವ ದೇವಾಲಯವಾಗಿದ್ದಿತ್ತೆಂದು ಸ್ಪಷ್ಟವಾಗುತ್ತದೆ.[119] ಇಲ್ಲಿಯ ಪ್ರದಕ್ಷಿಣವನ್ನು ಸುತ್ತುವರಿದಿರುವ ಗೋಡೆಯ ಅಧಿಷ್ಠಾನದ ಒಂದು ಭಾಗದಲ್ಲಿ ಮುಂದೆ ಚಾಚಿಕೊಂಡಿರುವ ಕಲ್ಲುಗಳ ಮೇಲೆ ಚಿಕ್ಕ ಶಿಲ್ಪಗಳಿವೆ. ಇವುಗಳಲ್ಲಿ 1. ಕೀಲುನುಚ್ಚಿದ ಕಪಿ, 2. ಭೇರುಂಡ ಪಕ್ಷಿಗಳು.[120]

ಚಂದ್ರಶೇಖರ ದೇವಾಲಯ :

ಇದು ಒಂದು ಚಿಕ್ಕ ದೇವಾಲಯ. ಈಗ ಇದು ಅಳಿವಿನ ಅಂಚಿನಲ್ಲಿದ್ದು, ಗರ್ಭಗುಡಿ ಮತ್ತು ಮುಖಮಂಟಪವನ್ನೊಂದಿದೆ.

---

119 ಅ. ಸುಂದರ ಕರ್ನಾಟಕ ಚರಿತ್ರೆ, ಸಂ–1.

120 ಡಾ. ವರದರಾಜ ಹುಯಿಲಗೊಳ, ಕರ್ನಾಟಕ ಹಾಗೂ ಜಾನಾದ್ವೀಪಗಳ ಶಿಲ್ಪದಲ್ಲಿ ಪಂಚತಂತ್ರ ಕಥೆಗಳು.

ಸಂಗಮೇಶ್ವರ ದೇವಾಲಯ :

ಇದರ ನಿರ್ಮಾತೃ ವಿಜಯಾದಿತ್ಯ. ಇದು ಮುಖಮಂಟಪ, ಮುಖ್ಯ ಗರ್ಭಗೃಹ, ನವರಂಗ ಮತ್ತು ಪ್ರದಕ್ಷಿಣಾ ಪಥಗಳನ್ನು ಒಳಗೊಂಡಿದೆ. ಇಲ್ಲಿ ಅಪೂರ್ಣವಾಗಿರುವ ಶಿಲ್ಪಗಳನ್ನು ನೋಡಿದರೆ ಈ ದೇವಾಲಯದ ನಿರ್ಮಾಣ ಕಾರ್ಯ ವಿಜಯಾದಿತ್ಯನ ಕಾಲಕ್ಕೆ ಪೂರ್ಣವಾಗಿರಲಾಯಿತು. ಮಂಟಪದಲ್ಲಿ 20 ದೊಡ್ಡ ಪಾದ ಮತ್ತು ಚಚ್ಚೌಕಕಂಬಗಳ ಮತ್ತು ಅರ್ಧಗಂಬಗಳಿವೆ. ಗರ್ಭಗುಡಿ ಮತ್ತು ದೇವಾಲಯಗಳ ಹೊರಗೋಡೆಯ ಮೇಲೆ ಕೆಲವು ಮೂರ್ತಿಗಳನ್ನು ಕೆತ್ತಲಾಗಿದ್ದು ಅವುಗಳಲ್ಲಿ ಉತ್ತರದ ಗೋಡೆಯ ಮೇಲೆ ವಿಷ್ಣು ಮತ್ತು ವರಾಹ ಮತ್ತು ದಕ್ಷಿಣದಲ್ಲಿ ಭೃಂಗಿ ಸಹಿತ ಶಿವ ಮತ್ತು ನಂದಿ ಮೂರ್ತಿಗಳಿವೆ. ಇವೆಲ್ಲವೂ ಅಪೂರ್ಣವಾಗಿವೆ. ಈ ದೇವಾಲಯದ ಕಂಬಗಳು ಅಲಂಕೃತವಾಗಿಲ್ಲ. ಇದು ದ್ರಾವಿಡ ಶೈಲಿಯ ಶಿಖರವನ್ನೊಂದಿದೆ. ಇಲ್ಲಿ ಕುಬ್ಜ ದೇವಗಣಗಳ ಶಿಲ್ಪಗಳನ್ನು ಕೆತ್ತಲಾಗಿದೆ.[121]

ಪಾಪನಾಥ ದೇವಾಲಯ :

ಇದರ ನಿರ್ಮಾತೃ ರೇವಡಿ ಓವಜ್ಜ. ಇದನ್ನು ಕೆಲವರು ದ್ರಾವಿಡ ಶಿಖರವೆಂದು, ಮತ್ತೆ ಕೆಲವರು ವೇಸರ ಶಿಖರವೆಂದು ಕರೆಯುತ್ತಾರೆ. ಇಲ್ಲಿನ ಶಾಲಾ, ಕೂಟ, ಹಾರ ಮುಂತಾದವು ದ್ರಾವಿಡ ಶೈಲಿಯನ್ನು ಮತ್ತು ಶಿಖರವು ರೇಖಾ ನಾಗರ ಶೈಲಿಯನ್ನು ಸೂಚಿಸುತ್ತದೆ. ಇದರ ನಿರ್ಮಾಣ ಕಾರ್ಯ ತಿಳಿದುಬಂದಿಲ್ಲ. ಇಲ್ಲಿ ಒಂದು ಗರ್ಭಗೃಹ, ಸುಖನಾಸಿ, ಪ್ರದಕ್ಷಿಣ ಪಥ, ಅರ್ಧಮಂಟಪ, ಸಭಾಮಂಟಪ, ಮುಖಮಂಟಪಗಳಿವೆ. ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ನುಣುಪು ಮತ್ತು ಕೈಚಳಕಗಳು ಈ ದೇವಾಲಯದಲ್ಲಿ ಕಂಡುಬರುವುದಿಲ್ಲ. ಇದರ ಪ್ರದಕ್ಷಿಣ ಪಥ ಮುಚ್ಚಿಹೋಗಿವೆ. ಇಲ್ಲಿನ ಅಂತರಾಳದ ದ್ವಾರಶಾಖೆಗಳಲ್ಲಿ ಕೋಡುಗಳುಳ್ಳ ಮಾನವನ ಆಕಾರದ ನಂದಿ ಮತ್ತು ವೀರಭದ್ರನ ವಿಗ್ರಹಗಳು ಲಲಾಟಗಂಬದಲ್ಲಿ ಸರ್ಪಗಳ ಬಾಲಗಳನ್ನು ಹಿಡಿದ ಗರುಡ, ಅವನ ಮೇಲೆ ಗಜಲಕ್ಷ್ಮಿ ಮುಂದಿನ ಮಹಾಮಂಟಪದ ಮಧ್ಯದಲ್ಲಿ ನಾಲ್ಕು ಸಾಲುಗಳ ನಾಲ್ಕು ಕಂಬಗಳಿವೆ.

---

121 ಹೆಚ್.ಎಸ್.ಕೆ. ಅವಲೋಕನ.

ಸಭಾಮಂಟಪದ ಛಾವಣಿಯಲ್ಲಿ ಗಜಲಕ್ಷ್ಮಿ, ಅನಂತಶೈಲಿಯ ಶಿಲ್ಪಗಳಿವೆ.[122] ಇದರ ಹೊರಗೋಡೆಯಲ್ಲಿ ಶಿವ ಪಾರ್ವತಿ, ರಾವಣ ಕೈಲಾಸವನ್ನು ಮೇಲೆತ್ತಿರುವುದು, ಮಹಿಷಾಸುರ ಮರ್ಧಿನಿ, ತ್ರಿವಿಕ್ರಮ, ಗಜೇಂದ್ರ, ಮೋಕ್ಷ, ವಿಷ್ಣು ಮೊದಲಾದ ಶಿಲ್ಪಗಳಿವೆ.

ಕಾಶಿ ವಿಶ್ವೇಶ್ವರ ದೇವಾಲಯ :

ಇದು ಪೂರ್ವಕ್ಕೆ ಮುಖಮಾಡಿ ಮಲ್ಲಿಕಾರ್ಜುನ ದೇವಾಲಯದ ಉತ್ತರಕ್ಕಿದೆ. ಇದರ ಮುಂದೆ ನಂದಿ ಮಂಟಪವಿದ್ದು ರೇಖಾನಾಗರ ಶೈಲಿಯಲ್ಲಿದೆ. ಇದಕ್ಕೆ ಕಳಶವಿಲ್ಲ. ಈ ದೇವಾಲಯವು ಮಂಟಪ, ಸುಖನಾಸಿ, ಗರ್ಭಗುಡಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಎರಡು ಅರ್ಧಗಂಬಗಳು ಸುಖನಾಸಿಯನ್ನು ಗರ್ಭಗುಡಿಯಿಂದ ಬೇರ್ಪಡಿಸಿದೆ. ಗರ್ಭಗುಡಿಯ ದ್ವಾರದ ಮೇಲೆ ಪರಸುಧಾರಿಯಾದ ಗಣಪತಿ, ವರಾಹ ಇತ್ಯಾದಿ ಮೂರ್ತಿಗಳಿವೆ. ಮಂಟಪದ ಛತ್ತಿಯೊಳಗೆ ಶಿವ ಪಾರ್ವತಿ, ನಂದಿ ಮೂರ್ತಿಗಳಿದ್ದು ಇಲ್ಲಿರುವ ನಾಲ್ಕು ಕಂಬಗಳ ನಾಲ್ಕು ಮಗ್ಗುಲಲ್ಲಿ ಪೌರಾಣಿಕ ದೃಶ್ಯಗಳನ್ನು ಕೆತ್ತಲಾಗಿದೆ.[123]

ವಿರೂಪಾಕ್ಷ ದೇವಾಲಯ :

ಬಾದಾಮಿ ಚಾಲುಕ್ಯರ ಚಾಸ್ತುಶಿಲ್ಪ ಕಲೆಯು ಕೆನೆಗಟ್ಟಿರುವುದು ಈ ದೇವಾಲಯದಲ್ಲಿ ಎಂದರೆ ತಪ್ಪಾಗಲಾರದು. ಎರಡನೇ ವಿಕ್ರಮಾದಿತ್ಯನು ಪಲ್ಲವರ ಮೇಲೆ ಸಾಧಿಸಿದ ದಿಗ್ವಿಜಯದ ಪ್ರತೀಕವಾಗಿ ಆತನ ಪಟ್ಟದ ರಾಣಿ ಲೋಕಮಹಾದೇವಿಯು ಕ್ರಿ.ಶ. 740ರಲ್ಲಿ ಈ ದೇವಾಲಯವನ್ನು ಕಟ್ಟಿಸಿದನು. ಇದರ ಶಿಲ್ಪಿ ಅನಿವಾರಿತ ಗುಂಡ. ಇದು ವಾಸ್ತುಶಿಲ್ಪ ಶೈಲಿಯ ಎಲ್ಲಾ ಅಂಶಗಳನ್ನು ಮೈಗೂಡಿಸಿಕೊಂಡಿದೆ. ಈ ದೇವಾಲಯವನ್ನು ನಿರ್ಮಿಸಲು ಪ್ರಮುಖ ಕಾರಣ ಕಂಚಿಯ ಕೈಲಾಸ ದೇವಾಲಯದ ಸೌಂದರ್ಯಕ್ಕೆ ಎರಡನೇ ವಿಕ್ರಮಾದಿತ್ಯ ಮಾರುಹೋಗಿದ್ದು.

ಇದು ಆಯತಾಕಾರದ 60 ಮೀಟರ್ ಉದ್ದ 32 ಮೀಟರ್ ಅಗಲದ ಅಂಗಳದಲ್ಲಿದೆ. ಸುತ್ತಲೂ ಪ್ರಾಕಾರಗಳನ್ನೊಂದಿದ್ದು, ಅದರ ಒಳಗೆ ಹೋದಾಗ ಮೊದಲು ಕಾಣುವುದು ನಂದಿಮಂಟಪ. ನಾಲ್ಕು ದೊಡ್ಡ ವೃತ್ತಾಕಾರದ ಕಂಬಗಳು ಜಗಲಿಯ ಮಂಟಪವನ್ನು ಹೊತ್ತಿವೆ. ಸುತ್ತಲೂ ಆನೆಗಳ, ಕುಬ್ಜರ,

---

122 ಎಸ್. ರಾಜಶೇಖರ್, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ.

123 ಡಾ. ವರದರಾಜ ಹುಯಿಲಗೋಳ, ಕರ್ನಾಟಕ ಹಾಗೂ ಜಾವಾದ್ವೀಪಗಳ ಶಿಲ್ಪದಲ್ಲಿ ಪಂಚತಂತ್ರ ಕಥೆಗಳು.

ಮಿಥುನರ, ಕಿನ್ನರರ, ಇಂದ್ರಾಣಿ, ಶುಕಭಾಷಿಣಿ, ಮುಂತಾದ ಉಬ್ಬುಶಿಲ್ಪಗಳಿವೆ. ಬಗೆಬಗೆಯ ಜಾಲಾಂಧ್ರ ಕಿಟಕಿಗಳಿವೆ. ಭಾಗವತ, ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನು ನಿರೂಪಿಸುವ ಶಿಲ್ಪಗಳಿವೆ. ಅವುಗಳಲ್ಲಿ ಪಂಚತಂತ್ರದ ಟಿಟ್ಟಿಬಾ ಮತ್ತು ಸಮುದ್ರ ಕಥೆಯನ್ನು ಇಲ್ಲಿ ಕೆತ್ತಲಾಗಿದೆ. ಅವುಗಳಲ್ಲಿ, 1. ಮಂಗ ಮೊಸಳೆಯ ಕಥೆ, 2. ಮಂಗ ಉಲಗೋಜಿತನದಿಂದ ಬೆಣೆ ಕಿತ್ತ ಕಥೆ.[124]

ದೇವಾಲಯದಲ್ಲಿ ಹೊರಗೋಡೆಗಳ ಮೇಲೆ ಮತ್ತು ಕೆಳಭಾಗದಲ್ಲಿ ದೊಡ್ಡ ಅಲಂಕಾರ ಪಟ್ಟಿಗಳಿವೆ. ಅವುಗಳ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಅರ್ಧಗಂಬಗಳು, ಕುಟಿಗಳು, ನಾಸಿಕಗಳು, ಹೂಗಳು ಮೊದಲಾದ ಅಲಂಕಾರಗಳಿವೆ. ಇಡೀ ಕಟ್ಟಡವನ್ನು ಸಿಂಹಗಳು ಹೊತ್ತುಕೊಂಡಿರುವಂತೆ ಅವುಗಳನ್ನು ತಳಭಾಗದಲ್ಲಿ ಇರಿಸಲಾಗಿದೆ. ಕಟ್ಟಡದ ಒಳಭಾಗದಲ್ಲಿರುವ ತೊಲೆಗಳನ್ನು ಆನೆಗಳು ಹೊತ್ತುಕೊಂಡಂತೆ ನಿರ್ಮಿಸಲಾಗಿದೆ. ಇದು ಶಿಲ್ಪಿಗಳ ಕಲ್ಪನ ಕುಶಲತೆಯನ್ನು ತೋರಿಸುತ್ತದೆ.[125]

ದೇವಾಲಯದ ಹೊರಗೋಡೆಗಳ ಸುತ್ತಲೂ ಸುಂದರ ಕಲಾಕೃತಿಗಳಿವೆ. ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಗಳು ಎರಡು ಹಾಸುಹೊಕ್ಕಾಗಿವೆ. ಈ ದೇವಾಲಯದ ಗೋಡೆ ಪೂರ್ವ ಪಶ್ಚಿಮವಾಗಿ 214 ಅಡಿ ಉದ್ದ, ಉತ್ತರ ದಕ್ಷಿಣವಾಗಿ 102 ಅಡಿ ಅಗಲವಿದೆ. ಇದಕ್ಕೆ ಪೂರ್ವ ಮತ್ತು ಪಶ್ಚಿಮದ ಎರಡೂ ಕಡೆ ಎರಡು ಮಹಾದ್ವಾರಗಳಿವೆ. ಈ ದೇವಾಲಯದ ಮುಂದಿರುವ ನಂದಿಮಂಟಪ ಅದರಲ್ಲಿರುವ ಬೃಹದಾಕಾರದ ನಂದಿವಿಗ್ರಹ, ಅದಾದೊಡನೆ ದೇವಾಲಯದ ಮುಖಮಂಟಪ, ಅದಾದ ನಂತರ ವಿಸ್ತಾರವಾದ ಮಹಾಮಂಟಪಗಳು ಕಂಡುಬರುತ್ತವೆ. ಅದಕ್ಕೆ ಉತ್ತರ ದಕ್ಷಿಣಗಳಲ್ಲಿ ಬಾಗಿಲುಗಳಿದ್ದು ಅಲ್ಲಿಯೂ ಮುಖಮಂಟಪಗಳಿವೆ.

ಪೂರ್ವಕ್ಕೆ ಮುಖ ಮಾಡಿರುವ ಮುಖ್ಯ ಗರ್ಭಗೃಹವಿದ್ದು, ಉತ್ತರ ದಕ್ಷಿಣಕ್ಕೆ ಮುಖ ಮಾಡಿರುವ ಎರಡು ಚಿಕ್ಕ ಗರ್ಭಗೃಹಗಳಿವೆ. ಮುಖ್ಯ ಗರ್ಭಗೃಹದ ಮೇಲೆ ದ್ರಾವಿಡ ರೀತಿಯ ಗೋಪುರ ಮತ್ತು ಒಳಗೆ ಅದರ ಸುತ್ತ ಪ್ರದಕ್ಷಿಣ ಪಥವಿದೆ.[126]

---

124 ಅದೇ.

125 ಡಾ. ತಿಪ್ಪೇರುದ್ರಸ್ವಾಮಿ, ಚಾಲುಕ್ಯ ಸಾಮ್ರಾಜ್ಯದ ಸಾಂಸ್ಕೃತಿಕ ಪರಂಪರೆ.

126 ಹೆಚ್.ಕಸಿನ್ಸ್, ಚಾಲುಕ್ಯ ಆರ್ಕಿಟೆಕ್ಚರ್.

ಗರ್ಭಗೃಹದಲ್ಲಿ 12 ಅಡಿ ಉದ್ದ, 12 ಅಡಿ ಅಗಲವಿರುವ ಈ ಗರ್ಭಗೃಹದಲ್ಲಿ ಒಂದು ಸುಂದರವಾದ ಶಿವಲಿಂಗವಿದೆ. ಮತ್ತು ಮುಂದೆ ಒಂದು ಚಿಕ್ಕ ಸುಖನಾಸಿಯಿದೆ. ಗರ್ಭಗುಡಿ ಮತ್ತು ಸುಖನಾಸಿಗಳ ನಡುವೆ ಇರುವ ತೊಲೆಯ ಮೇಲೂ ಲಿಂಗವನ್ನು ಇರಿಸಲಾಗಿದೆ. ಇವುಗಳ ಸುತ್ತಲೂ ಸುಮಾರು 4 ಅಡಿ ಅಗಲದಷ್ಟು ಪ್ರದಕ್ಷಿಣ ಪಥವಿದೆ. ಗರ್ಭಗುಡಿಯ ಹೊರಗೋಡೆಯ ಮೇಲೆ ಮೂರು ಮಾಡುಗಳಿವೆ. ಅವುಗಳ ಹಿಂದೆ ಇದ್ದ ವಿಗ್ರಹಗಳು ಈಗ ಖಾಲಿಯಾಗಿವೆ.

ಗರ್ಭಗುಡಿಯಲ್ಲಿ ಎರಡು ಭಾಗದಲ್ಲಿ ಮಹಿಷಾಸುರ ಮರ್ಧಿನಿಯ ಸುಂದರ ವಿಗ್ರಹವಿದೆ. ಬಲಗಡೆ ಗರ್ಭಗೃಹದಲ್ಲಿ ಈಗ ಯಾವ ಮೂರ್ತಿಯೂ ಇಲ್ಲ. ಈ ಗರ್ಭಗುಡಿಯ ಮುಖಮಂಟಪವು ಸುಮಾರು 50 ಅಡಿ ಉದ್ದದ ಕಂಬಗಳನ್ನು ಪೂರ್ವ ಪಶ್ಚಿಮವಾಗಿ ಸುಮಾರು 45 ಅಡಿ ಅಗಲದ ಕಂಬಗಳನ್ನು ದಕ್ಷಿಣ ಉತ್ತರವಾಗಿ ಹೊಂದಿದ್ದು ಒಂದೇ ಕಲ್ಲಿನಿಂದ ನಿರ್ಮಿತವಾಗಿವೆ. ಒಂದೊಂದು ಸಾಲಿನಲ್ಲೂ ನಾಲ್ಕರಂತೆ ನಾಲ್ಕು ಕಂಬಗಳಿವೆ. ಈ ಕಂಬಗಳ ಮೇಲೆ ಸುಂದರವಾದ ಕೆತ್ತನೆ ಮತ್ತು ಅಲಂಕಾರವೂ ಇದೆ.[127]

ಐದು ಹೆಡೆಯ ನಾಗಮೂರ್ತಿ, ಮೂರು ಹೆಡೆಯ ನಾಗಿನಿಯರು ಗಜಲಕ್ಷ್ಮಿ, ಶಿವಪಾರ್ವತಿಯ ಶಿಲ್ಪಗಳು ಇಲ್ಲಿವೆ. ಗರ್ಭಗೃಹದ ಬಾಗಿಲ ಚೌಕಟ್ಟಿನಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಪ್ರದಕ್ಷಿಣ ಪಥದಲ್ಲಿ 6 ಕಿಟಕಿಗಳಿವೆ. ಇದರ ರಂಗಮಂಟಪದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೂರು ಬಾಗಿಲುಗಳಿವೆ. ಮುಖಮಂಟಪದ ಮೇಲ್ಭಾಗದಲ್ಲಿ ಸೂರ್ಯನ ಸುಂದರವಾದ ವಿಗ್ರಹವಿದೆ. ಇದರ ಕೆಳಗೆ ಅರುಣ ರಥವನ್ನು ಹೊಡೆಯುತ್ತಿದ್ದಾನೆ. ಎಲ್ಲೋರದ ಕೈಲಾಸದ ಮುಖಮಂಟಪದಲ್ಲಿಯೂ ಇಂತಹದೇ ಸೂರ್ಯ ವಿಗ್ರಹವಿದೆ. ಈ ಮುಖಮಂಟಪವನ್ನು ಆನೆಗಳು ಹೊತ್ತುಕೊಂಡಂತೆ ಶಿಲ್ಪಿಗಳು ನಿರ್ಮಿಸಿದ್ದಾರೆ. ಇದರ ಮಂಟಪದ ಹೊರಭಾಗದಲ್ಲಿ ಅಕ್ಕಪಕ್ಕಗಳಲ್ಲಿ ನಾಲ್ಕು ಅಡಿ ಎತ್ತರದ ಗಂಡು ಹೆಣ್ಣುಗಳ ಜೋಡಿ ವಿಗ್ರಹಗಳಿವೆ. ಅವು ಒಬ್ಬರನ್ನೊಬ್ಬರು ಅಪ್ಪಿಕೊಂಡು ನಿಂತಿವೆ.[128]

---

127 ಪರ್ಸಿಬ್ರೌನ್, The Temple Architecture of South India.

128 Master, M.W., Encyclopedia of Indian Temple Architecture South India, Lower Devidedesa, Delhi, 1983.

ಈ ದೇವಾಲಯದ ಪೂರ್ವದಲ್ಲಿ ನಂದಿಮಂಟಪವು ಇದ್ದು, ಇದು 25 ಅಡಿ ಉದ್ದವಿದ್ದು ಚಚ್ಚೌಕಾರವಾಗಿದೆ. ಇಲ್ಲಿ ವೇದಿಕೆಯ ಮೇಲೆ ಬೃಹದಾಕಾರದ ನಂದಿ ವಿಗ್ರಹವಿದೆ. ಇದರ ಸುತ್ತಲೂ ಸುಂದರವಾದ ಶಿಲ್ಪಗಳಿದ್ದು ಅನೇಕ ಭಂಗಿಗಳಲ್ಲಿ ನಿಂತಿರುವ ರಸಿಕ ದಂಪತಿಗಳು ನಮ್ಮನ್ನು ಆಕರ್ಷಿಸುತ್ತವೆ. ಪೌರಾಣಿಕ ಘಟನೆಗಳಿಗೆ ಸಂಬಂಧಿಸಿದ ಇತರ ಶಿಲ್ಪಗಳು ಇಲ್ಲಿವೆ.

ಇಡೀ ಮಂಟಪವನ್ನು ಆನೆಗಳು ಮತ್ತು ಕುಬ್ಜರು ಹೊತ್ತುಕೊಂಡಂತೆ ಮಂಟಪದ ಬುಡದಲ್ಲಿ ಅವುಗಳನ್ನು ನಿರ್ಮಿಸಲಾಗಿದೆ.[129] ದೇವಾಲಯದ ಹೊರಗೋಡೆಯ ಪಾದದಲ್ಲಿ ಅಲಂಕಾರಿಕ ಪಟ್ಟಿಕೆಗಳು, ಶೈವ ವೈಷ್ಣವ ದೇವತೆಗಳ ಸಾಲು ಇದೆ. ರಾಮಾಯಣ ಮತ್ತು ಮಹಾಭಾರತ ಮೊದಲಾದ ಗ್ರಂಥಗಳ ಸನ್ನಿವೇಶಗಳನ್ನು ಇಲ್ಲಿ ಕಾಣಬಹುದು.[130] ಇದರ ಶಿಲ್ಪಿಗಳೆಂದರೆ ಬಲದೇವ, ಕೆಂಗಮ್ಮ, ದಾವೋದರ, ಮತ್ತು ಆದಿತ್ಯದೇವ ಒಟ್ಟಾರೆ ಯಾವುದೇ ಅತಿರೇಕವಿಲ್ಲದ ಹಿತಮಿತವಾದ ವಾಸ್ತುಶಿಲ್ಪ ಇಲ್ಲಿ ನಿರ್ಮಿತವಾಗಿದೆ.

ಮಲ್ಲಿಕಾರ್ಜುನ ದೇವಾಲಯ :

ಇದು ಸುಂದರವಾದ ದ್ರಾವಿಡ ಶೈಲಿಯ ದೇವಾಲಯ. ಇಲ್ಲಿ ದೊರಕಿರುವ ಶಾಸನದಿಂದ ಇದರ ನಿರ್ಮಾತೃ ಇಮ್ಮಡಿ ವಿಕ್ರಮಾದಿತ್ಯನ ತ್ರೈಲೋಕ್ಯದೇವಿ. ಇದರ ನಿರ್ಮಾಣ ಕ್ರಿ.ಶ. 740ರಲ್ಲೇ ಆಯಿತು. ಈಗ ಇದನ್ನು ಮಲ್ಲಿಕಾರ್ಜುನ ದೇವಾಲಯವೆಂದು ಕರೆಯುತ್ತಿದ್ದರು. ಹಿಂದೆ ಇದನ್ನು ತ್ರೈಲೋಕೇಶ್ವರ ದೇವಾಲಯವೆಂದು ಕರೆಯುತ್ತಿದ್ದರು.[131] ಇದು ವಿರೂಪಾಕ್ಷ ದೇವಾಲಯಕ್ಕಿಂತ ಸ್ವಲ್ಪ ಚಿಕ್ಕದು. ತ್ರೈಲೋಕ್ಯ ಮಹಾದೇವಿಯು ತನ್ನ ಪತಿಯು ಪಲ್ಲವರ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಈ ದೇವಾಲಯವನ್ನು ಕಟ್ಟಿಸಿದಳು. ಇಲ್ಲಿಯ ಸಭಾಮಂಟಪದ 16 ಕಂಬಗಳೂ ರಾಮಾಯಣ, ಮಹಾಭಾರತ, ಹರಿವಂಶ ಮತ್ತು ಪಂಚತಂತ್ರ ಕಥೆಗಳ ಶಿಲ್ಪಗಳಿಂದ ಅಲಂಕೃತವಾಗಿವೆ.

---

129 ಹೆಚ್.ಎಸ್.ಕೆ. ಅವಲೋಕನ.

130 ಡಾ. ವರದರಾಜು ಉಯಿಲಗೋಳ, ಕರ್ನಾಟಕ ಹಾಗೂ ಜಾವಾದ್ವೀಪಗಳ ಶಿಲ್ಪಗಳಲ್ಲಿ ಪಂಚತಂತ್ರ ಕಥೆಗಳು.

131 ಬಿ.ಆರ್. ಗೋಪಾಲ್, ಕರ್ನಾಟಕದ ಕಲೆಗಳು.

ಇಲ್ಲಿ ಪಂಚತಂತ್ರದ ಕೆಳಗಿನ ನಾಲ್ಕು ಕಥೆಗಳಿವೆ. 1. ಕೀಲು ನುಚ್ಚಿದ ಕಪಿ, 2. ಟಿಟ್ಟಿಬಾ ಮತ್ತು ಸಮುದ್ರ, 3. ಮೊಸಳೆ ಮತ್ತು ಕಪಿ ಮತ್ತು 4. ಬ್ರಾಹ್ಮಿಣಿಯ ಮುಂಗೂಸಿಯನ್ನು ಕೊಂದಿದ್ದು.[132]

ಈ ದೇವಾಲಯ ಪೂರ್ವ ಪಶ್ಚಿಮವಾಗಿ 84 ಅಡಿಗಳು, ಉತ್ತರ ದಕ್ಷಿಣವಾಗಿ 50 ಅಡಿಯನ್ನು ಹೊಂದಿದೆ. ಇದರ ಕಳಶ ವಿರೂಪಾಕ್ಷ ದೇವಾಲಯಕ್ಕಿಂತ ಭಿನ್ನವಾಗಿವೆ. ಇದರಲ್ಲಿ ಸುಖನಾಸಿ ಮುಂಚಾಚಿದ್ದು ಅದರಲ್ಲಿ ನಟರಾಜನ ಶಿಲ್ಪವಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ಮುಖಮಂಟಪ, ಸಭಾಮಂಟಪ, ಮತ್ತು ನಂದಿಮಂಟಪಗಳಿವೆ. ಈ ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಅನೇಕ ರೀತಿಯ ದಿಂಡುಗಳಿವೆ. ಇದರ ಮೇಲಿನ ಗೋಡೆಗಳ ಮೇಲೆ ಸಣ್ಣಪ್ರಮಾಣದ ಶಿಖರಗಳು, ಅರೆಗಂಬಗಳು ಮತ್ತು ಗೂಡುಗಳಿವೆ. ಗೂಡುಗಳಲ್ಲಿ ದೇವ ದೇವತೆಯರ ಶಿಲ್ಪಗಳಿವೆ. ಪಶ್ಚಿಮದಲ್ಲಿ ಮೂರು ತಲೆಗಳ ವಿಮಾನಗಳಿದ್ದು ಅದರ ಮೇಲುತುದಿಯಲ್ಲಿ ಶಿಖರವಿದೆ. ಇಲ್ಲಿರುವ ಶಿಲ್ಪಗಳೆಂದರೆ ಗಂಧರ್ವರು, ಪ್ರಣಯಾಸಕ್ತ ದಂಪತಿಗಳು, ಕೃಷ್ಣಲೀಲೆಗಳು, ಶಿವಪಾರ್ವತಿ, ಮಹಿಷಾಸುರ ಮರ್ಧಿನಿ ಇತ್ಯಾದಿ.[133]

ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಪಾಣಿಪೀಠದ ಮೇಲೆ ರಾಮಬಾಣಲಿಂಗ ಎಂದು ಕರೆಯಲಾಗುವ ಶಿವಲಿಂಗವಿದೆ. ಛಾವಣಿಯಲ್ಲಿ ಕಮಲದ ಹೂವಿನ ಶಿಲ್ಪವಿದೆ. ಸುಖನಾಸಿಯ ಛಾವಣಿಯಲ್ಲಿ ಶಿವಪಾರ್ವತಿಯರ ವಿಗ್ರಹಗಳಿವೆ. ಗರ್ಭಗೃಹದ ಎಡ ಮತ್ತು ಬಲ ಭಾಗಗಳಲ್ಲಿ ಎರಡು ಸಣ್ಣ ಗುಡಿಗಳಿವೆ. ಅವುಗಳಲ್ಲಿ ಈಗ ವಿಗ್ರಹಗಳಿಲ್ಲ. ಗರ್ಭಗೃಹದ ಸುತ್ತ ಪ್ರದಕ್ಷಿಣ ಪಥವಿದೆ. ಹೊರಭಾಗದಲ್ಲಿ ನಂದಿಯ ಮೇಲೆ ಶಿವಪಾರ್ವತಿಯರು ಸಂಚಾರ ಮಾಡುತ್ತಿದ್ದು ದ್ವಾರಬಂಧದಲ್ಲಿ ಶೈವ ದ್ವಾರಪಾಲಕರಿದ್ದಾರೆ.[134]

ಕಾಶಿ ವಿಶ್ವನಾಥ ದೇವಾಲಯ :

ಇದು ಮಲ್ಲಿಕಾರ್ಜುನ ಗುಡಿಯ ಪಕ್ಕದಲ್ಲಿ ಉತ್ತರಕ್ಕಿದೆ. ರಚನೆಯ ದೃಷ್ಟಿಯಿಂದ ಇದರ ಗರ್ಭಗೃಹ ಮತ್ತು ರಂಗಮಂಟಪವು ಮುಖ್ಯವಾಗಿವೆ. ಇದು ಔತರೇಯ ಶಿಖರವನ್ನೊಂದಿದೆ. ಇದರ

---

132 ಡಾ. ವರದರಾಜು ಉಯಿಲಗೋಳ, ಕರ್ನಾಟಕ ಹಾಗೂ ಜಾವಾದ್ವೀಪಗಳ ಶಿಲ್ಪಗಳಲ್ಲಿ ಪಂಚತಂತ್ರ ಕಥೆಗಳು.

133 ಹೆಚ್.ಎಸ್.ಕೆ. ಅವಲೋಕನ.

134 Master, M.W., Encyclopedia of Indian Temple Architecture South India, Lower Devidedesa, Delhi, 1983.

ಗರ್ಭಗೃಹದಲ್ಲಿ ಎರಡು ಗೋಡೆಗಳು ಮುಂದಕ್ಕೆ ಚಾಚಿ ಸುಖನಾಸಿಯಂತಹ ರಚನೆಗೆ ಕಾರಣವಾಗಿವೆ. ಇಲ್ಲಿ ಪ್ರದಕ್ಷಿಣ ಪಥವಿಲ್ಲ, ಗರ್ಭಗೃಹದ ಮುಂದಿನ ಮಂಟಪದಲ್ಲಿ ಅರ್ಧ ಗಂಬಗಳನ್ನು ಬಿಟ್ಟರೆ ಮಧ್ಯದಲ್ಲಿ ನಾಲ್ಕು ಕಂಬಗಳು ಮಾತ್ರ ಪ್ರಧಾನವಾಗಿವೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಇದರ ಮುಂಭಾಗದಲ್ಲಿ ನಂದಿಯಿದೆ. ದೇವಾಲಯದ ಒಳ ಮತ್ತು ಹೊರ ಭಾಗದಲ್ಲಿ ಶಿವ ಪಾರ್ವತಿ ಮತ್ತು ದಿಕ್ಪಾಲಕರ ಶಿಲ್ಪಗಳಿವೆ. ಒಂದಾದ ಮೇಲೊಂದರಂತೆ ಅಮಲಕ ಮತ್ತು ಗವಾಕ್ಷಿಗಳಿಂದ ಮೇಲೇರುತ್ತ ಹೋಗುವ ಶಿಖರವು ಕ್ರಮೇಣ ಕಿರಿದಾಗುತ್ತವೆ.[135]

ಮಹಾಕೂಟ :

ಇದು ಬನಶಂಕರಿಯಿಂದ 10 ಕೀ.ಮೀ. ದೂರದಲ್ಲಿದ್ದು ಅಗಸ್ತ್ಯಮುನಿಯು ಇಲ್ಲಿಯೇ ವಾತಾಪಿ ಇಲ್ವಲರನ್ನು ಹೊಂದರೆಂದು ಸ್ಥಳ ಪುರಾಣವಿದೆ. ಬಾದಾಮಿ ಚಾಲುಕ್ಯರ ಕಲೆಯ ಬಗ್ಗೆ ಸಂಪೂರ್ಣ ಅರಿವನ್ನು ಪಡೆಯಬೇಕಾದರೆ ಮಹಾಕೂಟಕ್ಕೆ ಪ್ರತಿಯೊಬ್ಬರೂ ಹೋಗಲೇಬೇಕು. ಇಲ್ಲಿನ ದೇವಾಲಯಗಳನ್ನು ವಿಷ್ಣು ಪುಷ್ಕರಣೆಯ ಸುತ್ತಲೂ ನಿರ್ಮಿಸಲಾಗಿದೆ. ಐಹೊಳೆ ಪಟ್ಟದಕಲ್ಲುಗಳಂತೆ ಇಲ್ಲಿಯೂ ನಾಗರ ಮತ್ತು ದ್ರಾವಿಡ ಶೈಲಿಯ ದೇವಾಲಯಗಳಿದ್ದು ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ದ್ರಾವಿಡ ಶಿಖರವನ್ನೊಂದಿದ್ದರೆ, ಸಂಗಮೇಶ್ವರ ಮತ್ತು ಹರಿಕೇಶ್ವರ ದೇವಾಲಯವು ರೇಖಾನಾಗರ ಶಿಖರಗಳನ್ನು ಹೊಂದಿದೆ. ಇಲ್ಲಿ ಲಕುಲೀಶ, ಚಂದ್ರಶೇಖರ, ಬಸವಲಿಂಗ ಮೊದಲಾದ ಕದಂಬ ನಾಗರ ಶಿಖರಗಳುಳ್ಳ ದೇವಾಲಯಗಳಿವೆ. ಇಲ್ಲಿ ಭವ್ಯವಾದ ವಿಷ್ಣು ಪುಷ್ಕರಣಿ ಇದೆ.

ಮಹಾಕೂಟೇಶ್ವರ ದೇವಾಲಯ :

ಇದನ್ನು ಸುಮಾರು ಕ್ರಿ.ಶ. 600ರ ಸುಮಾರಿನಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದ ಎದುರಿಗಿದ್ದ ವಿಜಯಸ್ತಂಭ ಶಾಸನದ ಪ್ರಕಾರ ಮಂಗಳೇಶನು ಕಲಚೂರಿ ವಂಶದ ಬುಧವರ್ಮ ಎಂಬುವವನ್ನು ಸೋಲಿಸಿದ ಮೇಲೆ ಅಲ್ಲಿಂದ ತೆಗೆದುಕೊಂಡು ಬಂದ ಸಂಪತ್ತನ್ನು ರಾಣಿ ದುರ್ಲಭದೇವಿಯ ಮನವಿಯಂತೆ ತನ್ನ ಕುಲದೇವರ ಪೂಜಾದಿ ಉತ್ಸವಕ್ಕೆ ವಿನಿಯೋಗಿಸಿದನು ಎಂದು

135 ಡಾ. ಎಸ್. ರಾಜಶೇಖರ್, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.

ತಿಳಿಯುತ್ತದೆ. ರಾಣಿ ದುರ್ಲಭದೇವಿ ಈ ದೇಗುಲಕ್ಕೆ 10 ಗ್ರಾಮಗಳನ್ನು ದತ್ತಿ ಬಿಟ್ಟಿರುವ ವಿವರಗಳೂ ಈ ಶಾಸನದಲ್ಲಿದೆ.[136]

ಇದು ದ್ರಾವಿಡ ಶೈಲಿಯಲ್ಲಿದ್ದು ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಸಭಾಮಂಟಪ, ಪ್ರದಕ್ಷಿಣ ಪಥ, ಮುಖಮಂಟಪ ದೇವಾಲಯದ ಎದುರು ಪ್ರತ್ಯೇಕವಾದ ನಂದಿ ಮಂಟಪವಿದೆ. ಈ ಮಂಟಪದ ಹಿಂದೆ ಗಣೇಶ ವಿಗ್ರಹ, ದೇಗುಲದ ಹೊರಗೋಡೆಯಲ್ಲಿ ಶಿವ, ಅರ್ಧನಾರೀಶ್ವರ ಲಕುಲೀಶ ಮುಂತಾದ ವಿಗ್ರಹಗಳಿವೆ.[137]

ಇದು ಚೌಕಕಾರದ ಸಾಂಧರ ಗರ್ಭಗೃಹವನ್ನೊಂದಿದ್ದು ಮುಖಮಂಟಪ ಕಿರಿದಾಗಿದ್ದು ಸಭಾಮಂಟಪ ಅದಕ್ಕಿಂತ ಅಗಲವಿದ್ದು, ಎತ್ತರವಾದ ಅಧಿಷ್ಠಾನದ ಅಡ್ಡಪಟ್ಟಿಗಳಲ್ಲಿ ಶೈವಪುರಾಣಗಳಿಂದ ಆಯ್ದ ಕಥಾನಕ ಶಿಲ್ಪಗಳು, ಲೌಕಿಕ ವಿಷಯಗಳ ಶಿಲ್ಪಗಳು ಇದ್ದು ಗೋಡೆಯ ಹೊರಮುಖದ ಗೂಡುಗಳಲ್ಲಿ ಶೈವ ದ್ವಾರಪಾಲಕರು, ಶಿವಗಣಗಳು, ಅರ್ಧನಾರೀಶ್ವರ, ವಿಷ್ಣು, ಶಿವ ಮುಂತಾದ ದೇವತಾ ವಿಗ್ರಹಗಳಿವೆ.[138]

ಮಲ್ಲಿಕಾರ್ಜುನ ದೇವಾಲಯ :

ಇದು ವಿಷ್ಣು ಪುಷ್ಕರಣಿಯ ದಕ್ಷಿಣ ಭಾಗದ ದ್ರಾವಿಡ ಶೈಲಿಯಲ್ಲಿದೆ. ಇದು ಸಣ್ಣ ಪ್ರಮಾಣದ ಗರ್ಭಗೃಹ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಕದಂಬ ನಾಗರಶೈಲಿಯ ಶಿಖರಗಳನ್ನು ಹೊಂದಿದ್ದು, ಹೊರಗೋಡೆಗಳ ಹೊರಕೋಷ್ಠದಲ್ಲಿ ಲಕುಲೀಶ, ಶಿವ, ಅರ್ಧನಾರೀಶ್ವರ, ನರಸಿಂಹ, ಭೂವರಾಹ, ಹರಿಹರರ ಶಿಲ್ಪಗಳಿವೆ.[139]

ಶಿವಾಲಯ :

ಇದು ಸರಳ ವಿನ್ಯಾಸವನ್ನು ಹೊಂದಿದ್ದು, ಗಜಾಪೃಷ್ಠಾಕೃತಿಯಲ್ಲಿದೆ. ಇದು ಮಾದರಿಯಲ್ಲಿ ಮಲ್ಲಿಕಾರ್ಜುನ ದೇವಾಲಯದಂತೆಯೇ ಕಾಣುತ್ತದೆ. ಇದರ ಗರ್ಭಗೃಹದ ಮುಂದಿನ ಸಭಾಮಂಟಪದ

---

136 ಚಿದಾನಂದಮೂರ್ತಿ, ಎಂ., 1979, ಪೂರ್ವೋಕ್ತ.

137 ಡಾ. ರಾಜಶೇಖರ್, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.

138 ಶ್ರೀನಿವಾಸ್ ವಿ. ಪಾಡಿಗಾರ್, Vishnu Cult in Karnataka

139 ಡಾ. ಎಂ.ಎಸ್. ನಾಗರಾಜ್, The Chalukyas of Badami.

ಮಧ್ಯದಲ್ಲಿ ನಾಲ್ಕು ಕಂಬಗಳು, ಸಾಂಧಾರವನ್ನು ಹೊಂದಿದ್ದು, ಗರ್ಭಗುಡಿಯಲ್ಲಿ ವರ್ತುಲಾಕಾರದ ಜಲಾಧಾರೆಯುಳ್ಳ ಪೀಠದಲ್ಲಿ ಹಿರಿದಾದ ಲಿಂಗವಿದೆ. ದ್ವಾರಬಂಧದ ಮೇಲೆ ಪುರುಷನ ಆಕಾರದ ಗರುಡನ ಉಬ್ಬುಶಿಲ್ಪವಿದೆ. ಇದರ ಎದುರಿಗೆ ಪಂಚಲಿಂಗ ಗುಡಿಯೂ ಇದೆ.

ಚಾಲುಕ್ಯರ ಇತರ ದೇವಾಲಯಗಳು :

1. ನಾಗರಾಳದ ನಾಗನಾಥ ದೇವಾಲಯ :

ಇದು ಬಾದಾಮಿ ಹತ್ತಿರದ ನಾಗರಾಳದಲ್ಲಿದೆ. ಇದು ಚೌಕಕಾರದ ವಿಮಾನವನ್ನು ಹೊಂದಿದ್ದು ವಿದೇಶಿಯರ ದಾಳಿಗೆ ಒಳಗಾಗಿದೆ. ಇದರ ಗುದಮಂಟಪವು ವಿಮಾನಕ್ಕಿಂತ ದೊಡ್ಡದಿದೆ. ಇದರ ಮುಖಕಟುಸ್ಕಿಯು ಸುಂದರವಾಗಿದ್ದು, ಹಿರಿದಾಗಿದೆ. ಕೆಳಗಿನ ಅಧಿಷ್ಠಾನವು ಕುಂಭವನ್ನು ಒಳಗೊಂಡಿದ್ದು ಸುಂದರವಾದ ಕೆತ್ತನೆಗಳಿಂದ ಕೂಡಿದೆ. ವೇದಿಕೆಯು ಕಂಠ, ಮಾನವನ ಅರ್ಧ ದೇಹವನ್ನು, ಕಮಲವನ್ನು ಹೊಂದಿದೆ.[140]

ಉತ್ತರ ಮತ್ತು ದಕ್ಷಿಣದ ಭಾಗಗಳು ಜಾಲಾಂಧ್ರಗಳನ್ನು ಹೊಂದಿದೆ. ಇದರ ಕೇಂದ್ರಭಾಗದಲ್ಲಿ ಸುಂದರವಾಗಿ ಕೆತ್ತಿರುವ ತ್ರಿಕೋನಾಕೃತಿಯ ಕಮಾನುಗಳಿವೆ. ಕೇಂದ್ರಗೋಡೆಯು ಪಾಲಕಗಳ ಮೇಲೆ ವ್ಯಾಲಕೆತ್ತನೆಗಳನ್ನು ಸೂಚಿಸುತ್ತಿದ್ದು, ಪೋಟಿಕಾಗಳು ತರಂಗ ಮಾದರಿಯಲ್ಲಿವೆ. ಕಪೋಟದ ಕೆಳಸ್ತರದಲ್ಲಿ ಹಂಸಮಾಲೆಯನ್ನು ಹೊತ್ತ ಹಂಸಮಾಲೆಗಳು, ಮುತ್ತಿನ ಹಾರವನ್ನು ಎರಡೂ ಕಡೆಯಿಂದಲೂ ಹಿಡಿದಿರುವ ಜೋಡಿ ಹಂಸಗಳನ್ನು ಕಾಣಬಹುದು. ಇದರ ಎತ್ತರವಾದ ಗೋಡೆಗಳು ಮತ್ತು ಶಿಖರದ ಪಾದದ ತುಣುಕುಗಳು ಮತ್ತು ಕರ್ಣಕುಟ ಸಂಹರಕ್ಷಿಸಲ್ಪಟ್ಟಿದೆ. ಇದರ ಶಿಖರವು ಅಷ್ಟಭುಜಾಕೃತಿಯನ್ನು ಹೊಂದಿದೆ. ಆದರೆ ಬೇರೆ ದೇವಾಲಯಗಳಿಗೆ ಹೋಲಿಸಿದರೆ ಇದು ಹಿರಿದಾಗಿದೆ.[141]

ಇದರ ಜಾಲಾಂದ್ರಗಳು ರೇಖಾಕೃತಿಯ ಮಾದರಿಯಲ್ಲಿದ್ದು, ನಂದ್ಯವರ್ತಗಳನ್ನು ಸೂಚಿಸುತ್ತವೆ. ಚಾಲುಕ್ಯರ ಕಾಲದ ಎಲ್ಲಾ ಮೇಲ್ಹಾವಣಿಗಳು ಉಬ್ಬು ತಗ್ಗಾದ ಭಾರವಾದ ಚಪ್ಪಡಿಗಳಿಂದ

140 Master, M.W., Encyclopedia of Indian Temple Architecture South India, Lower Devidedesa, Delhi, 1983.

141 ಎಂ.ಎಸ್. ನಾಗರಾಜರಾವ್, The Chalukyas of Badami.

[illegible]

ನಿರ್ಮಿಸಲ್ಪಟ್ಟಿವೆ. ಗೋಡೆಯ ಸ್ತಂಭಗಳನ್ನು ಸ್ವಲ್ಪ ಮಟ್ಟಿಗೆ ಅಲಂಕರಿಸಲಾಗಿದೆ. ಮುಖಕಟುಸ್ಕಿ ಸ್ತಂಭಗಳು ಬಿತ್ತರಿಸುವ ಚಿತ್ರಗಳು ವಿಭಿನ್ನ ಶೈಲಿಗಳಿಂದ ಕೂಡಿವೆ.

ಮುಖ ಕಟುಸ್ಕಿಯು ನಾಗರಾಜ ಶೈಲಿಯ ಮೇಲ್ಚಾವಣಿ, ಮಂಟಪ ಮತ್ತು ಗರ್ಭಗೃಹಗಳ ದ್ವಾರಗಳ ಚಿತ್ರಗಳು ಚಾಲುಕ್ಯರ ಕಾಲದ ಸಂಪ್ರದಾಯವನ್ನು ಸೂಚಿಸಿದರೂ ಸಹ ಕೆತ್ತನೆಯಲ್ಲಿ ನೈಪುಣ್ಯತೆಯ ಕೊರತೆಯನ್ನು ಕಾಣಬಹುದು.[142]

ಇಲ್ಲಿನ ರುಕಾಕ ಸ್ತಂಭಗಳು ಪಟ್ಟಿಗಳನ್ನು ಹೊಂದಿಲ್ಲ. ಮೂರ್ತಿಗಳ ಹಿಡಿಕೆಯ ಪದಕ ಭಾಗವು ಕೆತ್ತನೆಗಳಿಂದ ಕೂಡಿಲ್ಲ. ಆದರೆ ಇಲ್ಲಿನ ತರಂಗ ಪೋಟಿಕಗಳು ಸುಂದರವಾಗಿ ರಚಿತವಾಗಿವೆ. ಗರ್ಭಗೃಹದ ದ್ವಾರದ ಮೇಲಿನ ಪೀಠವು ಸದ್ವರ್ಗ ಕೂಟದೇವ ಮತ್ತು ಸರಳ ಚಿತ್ರಗಳನ್ನು ತೋರಿಸುತ್ತವೆ. ಇವು ಬಾದಾಮಿಯ ಜಂಬುಲಿಂಗ ದೇವಾಲಯವನ್ನು ಪ್ರತಿಬಿಂಬಿಸುತ್ತವೆ. ಪೀಠದ ಮೇಲ್ಚಾವಣಿಯು ತ್ರಿಪುರಾಸುರ ಮತ್ತು ಸೆರೆಯಾಳುಗಳ ಚಿತ್ರವನ್ನು ತೋರಿಸುತ್ತದೆ. ಗರ್ಭಗೃಹದ ಸುತ್ತಲಿನ ಪ್ರದಕ್ಷಿಣ ಪಥವು ಕಿರಿದಾಗಿದ್ದು, ಕಿಟಕಿಗಳಿಲ್ಲ.[143]

ಕಲ್ಲೇಶ್ವರ ದೇವಾಲಯ :

ಇದು ಸುಂದರವಾದ ತಳಪಾಯವನ್ನು ಹೊಂದಿದೆ. ಇದರ ಗರ್ಭಗೃಹ, ಮಂಟಪಗಳ ನೆಲಪಾಯ ಸರಳ ಚೌಕಾಕೃತಿಯನ್ನು ಹೊಂದಿವೆ. ಗೋಡೆಗಳ ಒಳಮಗ್ಗಿಲು ಒಂದೇ ಮೈಯುಳ್ಳದ್ದಾಗಿದ್ದರೂ ಹೊರಮೈಯಲ್ಲಿ ಒಂದರ ಬಳಿಕ ಮತ್ತೊಂದರಂತೆ ಹಲವು ಮುಂಬಣೆಗಳು ಕಾಣಿಸುತ್ತವೆ. ಇದು ಚಾಲುಕ್ಯರ ಉತ್ತರ ಮತ್ತು ಪೂರ್ವ ಕಾಲದ ಕಲೆಯ ಮಾರ್ಪಾಟನ್ನು ತೋರಿಸುತ್ತದೆ. ಇದು ಗರ್ಭಗೃಹ ಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದೆ.[144]

---

142 Master, M.W., Encyclopedia of Indian Temple Architecture South India, Lower Devidedesa, Delhi, 1983.

143 ಡಾ. ಶಿವರಾಮ ಕಾರಂತ ಚಾಲುಕ್ಯ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳು.

144 ಅದೇ.

ಗೌಡದಾನಪುರದ ಮುತ್ತೇಶ್ವರ :

ಇದು ನಾಗರಶೈಲಿಯಲ್ಲಿದ್ದು ಒಂದು ಮರಳುಗಲ್ಲಿನ ರಚನೆಯಾಗಿದೆ. ಈ ದೇವಾಲಯ ಕಿರಿದಾಗಿದ್ದು, ಗರ್ಭಗೃಹ ಮತ್ತು ಪ್ರದಕ್ಷಿಣ ಪಥವನ್ನು ಹೊಂದಿಲ್ಲ. ಇದು ನಕ್ಷತ್ರಾಕಾರದ ಗೋಡೆಗಳನ್ನು ಹೊಂದಿದೆ.[145]

ಗಳಗನಾಥ ದೇವಾಲಯ :

ಇದು ಹರಳಿಹಳ್ಳಿಯಲ್ಲಿದೆ, ಈ ದೇವಾಲಯದ ಪಾಯ ನಕ್ಷತ್ರಾಕಾರವಾಗಿದ್ದು ಮುಂದಿನ ಮಂಟಪ ಚೌಕಕಾರವಾಗಿದೆ. ಇದರ ಗರ್ಭಗೃಹದ ಪಾಯವು ನಕ್ಷತ್ರದಂತೆ ಏರುತ್ತ ಕಿರಿದಾಗುವ ಪಿರಮಿಡ್ಡಿನಂತಹ ರಚನೆಯನ್ನು ಹೊಂದಿದ್ದು, ಅದರ ಮೇಲೆ ಸಾಕಷ್ಟು ಎತ್ತರಕ್ಕೆ ಮಂದಿರದ ಗೋಡೆಗಳಿದ್ದು ಅವು ಮೇಲೆ ಹೋದಂತೆಲ್ಲಾ ಕಿರಿದಾಗಿವೆ. ಇದರ ಮಂಟಪವು ಗರ್ಭಗೃಹಕ್ಕಿಂತ ಚಿಕ್ಕದಾಗಿದೆ.[146]

ಲಕ್ಕುಂಡಿಯ ಕಾಶಿವಿಶ್ವೇಶ್ವರ :

ಇದು ಸಾಮಾನ್ಯ ಉದ್ದಗಲದ ದೇವಾಲಯ. ಇದರ ಗರ್ಭಗ್ರುಹ ಚೌಕಕಾರವಾಗಿದೆ. ಅದರ ಗೋಡೆಗಳು ಲಂಭ ತಲವನ್ನು ಹೊಂದಿದೆ. ಅವುಗಳ ಮೇಲೆ ಸ್ತಂಭಗಳು ಸರಳವಾದ ಪಟ್ಟಿಗಳನ್ನು ಹೊಂದಿವೆ. ಗೋಪುರ, ಕೀರ್ತಿಮುಖಗಳು ಐದಾರು ಅಂತಸ್ತುಗಳನ್ನು ತೋರಿಸುತ್ತವೆ. ಗೋಪುರದ ಶಿಖರದಲ್ಲಿ ಕವು ಚು ಬೋಗುಣಿಯಿಲ್ಲ. ಇದರ ಗರ್ಭಗೃಹದ ಮುಂದೆ ಒಂದು ಸಣ್ಣ ಮಂಟಪವಿದೆ.[147]

ಇಟ್ಟಗಿಯ ಮಹಾದೇವ ದೇವಾಲಯ :

ಚಾಲುಕ್ಯ ಶೈಲಿಯ ಸೂಕ್ಷ್ಮ ವೈಖರಿಗೆ ತವರು ಮನೆಯಾದ ಈ ದೇವಾಲಯ ಇಟ್ಟಗಿಯಲ್ಲಿದೆ. ಇದು ಸುಮಾರು ಇಪ್ಪತ್ತು ಅಡಿ ಅಗಲವಿದೆ. ಇದು ಚೌಕಾಕೃತಿಯ ಗರ್ಭಗೃಹ, ಚೌಕಾಕೃತಿಯ ಮುಖಮಂಟಪವನ್ನು ಹೊಂದಿದೆ. ಇದರ ಮಗ್ಗುಲಿಗೆ ಮೊಗಸಾಲೆಗಳಿವೆ. ಇದರ ಗೋಡೆಗಳು ಮತ್ತು

---

145 ಅದೇ.

146 ಅದೇ.

147 ಅದೇ.

ಮೇಲ್ಛಾವಣಿಗಳು ವಿವಿಧ ಕೆತ್ತನೆಗಳಿಂದ ಕೂಡಿದೆ. ಇದರ ಗರ್ಭಗೃಹ ಕೆಳಭಾಗಕ್ಕಿಂತ ಉನ್ನತವಾಗಿವೆ. ಗರ್ಭಗೃಹದ ಎದುರಿನಲ್ಲಿ ಕೀರ್ತಿಮುಖವಿದೆ. ಕೆಳಗೋಡೆಗಳಿಂದ ಮೇಲ್ಛಾವಣಿಯವರೆಗೆ ವಿವಿಧ ಶಿಲ್ಪಕಲಾಕೃತಿಗಳನ್ನು ಬಿಡಿಸಿದ್ದು ನಯನ ಮನೋಹರವಾಗಿದೆ. ದೇವಾಲಯದ ಗೋಪುರವು ಅಪೂರ್ಣವಾಗಿದೆ.

ದೇವಾಲಯದ ಒಳಗೆ ಒಂದು ಮಂಟಪವಿದೆ. ಅದರ ಎದುರಿಗೆ ವಿಶಾಲವಾದ ನಕ್ಷತ್ರಾಕೃತಿಯ ಪಾಯದ ಮೇಲೆ ಕರಿಗಲ್ಲಿನ ಸ್ತಂಬಗಳ ಸಾಲು ಇದೆ. ಈ ಸಾಲುಗಳು ಮನಸೂರೆಗೊಳ್ಳುತ್ತವೆ. ಇದರ ಮಾಡುಗಳಿಗೆ ಯಾವುದೇ ಕೆತ್ತನೆಯಿಲ್ಲ. ದ್ವಾರಬಾಗಿಲು ಅಗಲವಾದ ಚೌಕಟ್ಟಿನ ಪಟ್ಟಿಗಳನ್ನು ಹೊಂದಿದೆ. ಅದರ ಮೇಲೆ ಸಾಲುಸಾಲಾಗಿ ಸೂಕ್ಷ್ಮ ಕೆತ್ತನೆಯಿದೆ. ಒಳಮಂಟಪ, ಗರ್ಭಗೃಹಗಳು ಕತ್ತಲೆಯಿಂದ ಕೂಡಿದ್ದರೆ ಎದುರಿಗೆ ನಕ್ಷತ್ರಾಕಾರದ ತೆರೆದ ಮಂಟಪವಿದೆ.[148]

ಬನವಾಸಿಯ ಮಧುಕೇಶ್ವರ ದೇವಾಲಯ :

ಈ ದೇವಾಲಯದ ಗರ್ಭಗೃಹ ಸುಖನಾಸಿ, ನವರಂಗ ಮತ್ತು ಪ್ರದಕ್ಷಿಣ ಪಥ ಇವುಗಳನ್ನು ಚಾಲುಕ್ಯರು ನಿರ್ಮಿಸಿದ್ದಾರೆ. ಇಲ್ಲಿ ಆದಿಮಾನವ ಅಥವಾ ವಿಷ್ಣುವಿನ ಶಿಲ್ಪಗಳಿದ್ದು ಗರ್ಭಗೃಹದಲ್ಲಿ ಮಧುಕೇಶ್ವರ ಲಿಂಗವಿದೆ. ಇದರ ನವರಂಗದ ಕೋಷ್ಠದಲ್ಲಿ ಆದಿಮಾನವ ಮತ್ತು ಕಾರ್ತೀಕೆಯ ಶಿಲ್ಪಗಳಿವೆ. ನಾಲ್ಕು ಸಾಲಿನ 12 ಸುಂದರವಾದ ಕಂಬಗಳು ನವರಂಗದಲ್ಲಿವೆ.

ಸಂಡೂರಿನ ಪಾರ್ವತಿ ಮತ್ತು ಕಾರ್ತೀಕೆಯ ದೇವಾಲಯ :

ಇದು ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿದ್ದು ಶಿವನಿಗೆ ಈ ದೇವಾಲಯವನ್ನು ಅರ್ಪಿಸಲಾಗಿದೆ. ಈ ದೇವಾಲಯದ ಗರ್ಭಗೃಹ ಮತ್ತು ನವರಂಗ ಚಾಲುಕ್ಯರ ಕಾಲದ 6 ಕಂಬಗಳನ್ನು ಹೊಂದಿದೆ.[149]

ಕಾರ್ತೀಕೇಯ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳಿದ್ದು, ಗರ್ಭಗೃಹದಲ್ಲಿ ನಿಂತಿರುವ ಕಾರ್ತೀಕೇಯರ ಶಿಲ್ಪವಿದೆ. ಇವನು ಒಂದು ಕೈಯಲ್ಲಿ ರುಂಡವನ್ನು ಇನ್ನೊಂದು ಕೈಯ ಅಭಯಮುದ್ರೆಯಲ್ಲಿದೆ. ದೇವಾಲಯದ ಹೊರಭಾಗದಲ್ಲಿ ವಿವಿಧ ರೀತಿಯ

---

148 ಅದೇ.

149 Master, M.W., Encyclopedia of Indian Temple Architecture South India, Lower Devidedesa, Delhi, 1983.

ಅಲಂಕೃತವಾದ ದಿಂಡುಗಳನ್ನು ಕಾಣಬಹುದು. ಈ ದೇವಾಲಯದ ಗರ್ಭಗೃಹದ ಮೇಲಿನ ಶಿಖರ ದ್ರಾವಿಡ ಶೈಲಿಯಲ್ಲಿದೆ.

ಇತರ ದೇವಾಲಯಗಳೆಂದರೆ ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯ, ಹಾನಗಲ್ಲಿನ ತಾರಕೇಶ್ವರ ದೇವಾಲಯ, ಹಾವೇರಿಯ ಸೂರ್ಯದೇವಾಲಯ, ಬಂಕಾಪುರದ ನಖರೇಶ್ವರ ದೇವಾಲಯ, ಹುಲಿಗೇರಿಯ ಸೋಮದೇವ ದೇವಾಲಯ ಮತ್ತು ಬನವಾಸಿಯ ಮಧುಕೇಶ್ವರ ದೇವಾಲಯ.

ಚಾಲುಕ್ಯರು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ ಬೇರೆ ಪ್ರದೇಶಗಳಲ್ಲಿಯೂ ಸಹ ಕಲೆಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಅವುಗಳಲ್ಲಿ ಆಂಧ್ರಪ್ರದೇಶದಲ್ಲಿರುವ ಕರ್ನೂಲು ಜಿಲ್ಲೆ ಮತ್ತು ಮೆಹಬೂಬು ನಗರದಲ್ಲಿ ಇವರು ನಿರ್ಮಿಸಿದ ಶಿಲ್ಪಗಳಿವೆ. ಇಲ್ಲಿನ ಕೆಲವು ದೇವಾಲಯಗಳೆಂದರೆ,

1. ಸ್ವರ್ಗಬ್ರಹ್ಮ ದೇವಾಲಯ :

ಈ ದೇವಾಲಯವು ಸಹ ಏಳನೇ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾಗಿದೆ. ಇಲ್ಲಿ ರೇಖಾನಾಗರ ಶಿಖರವುಳ್ಳ ಗರ್ಭಗೃಹ, ಅಂತರಾಳ, ಪ್ರದಕ್ಷಿಣ ಪಥ, ಮಂಟಪ ಮತ್ತು ಮುಖಮಂಟಪಗಳು ಈ ದೇವಾಲಯದ ಹೊರ ಅಧಿಷ್ಠಾನದಲ್ಲಿ ಮುಂದೆ ಚಾಚಿಕೊಂಡಿರುವ ತುದಿಗಳ ಮೇಲೆ ನಾರಾಯಣ ಕಥೆಯ ಶಿಲ್ಪಗಳಿವೆ. ಮಂಟಪದಲ್ಲಿರುವ ಒಂದು ಕಂಬದ ಮೇಲೆ ಹಂಸಗಳು ಮತ್ತು ಆಮೆಯ ಕಥೆಗಳ ಎರಡು ಶಿಲ್ಪಗಳಿವೆ.[150]

2. ವಿಶ್ವಬ್ರಹ್ಮ ದೇವಾಲಯ :

ಇದು ಮೆಹಬೂಬು ನಗರ ಜಿಲ್ಲೆಯ ಆಲಂಪುರದಲ್ಲಿದೆ. ಇದನ್ನು 7ನೇ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾಯಿತು. ರೇಖಾನಾಗರ ಶೈಲಿಯಲ್ಲಿರುವ ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಪ್ರದಕ್ಷಿಣ ಪಥ ಮತ್ತು ಮಂಟಪದ ದೇವಾಲಯದ ಬಳಿ ಅಧಿಷ್ಠಾನದ ಮುಂದೆ ಚಾಚಿಕೊಂಡಿರುವ ದಿಂಡುಗಳ ತುದಿಯ ಮೇಲೆ ಬಕ, ಏಡಿ ಮತ್ತು ಬೇರುಂಡ ಪಕ್ಷಿಗಳ ಕಥೆಗಳನ್ನು

---

150 ಡಾ. ವರದರಾಜು ಹುಯಿಲಗೊಳ, ಕರ್ನಾಟಕದ ಮತ್ತು ಜಾವಾದ್ವೀಪದ ಶಿಲ್ಪಗಳಲ್ಲಿ ಪಂಚತಂತ್ರ ಕಥೆಗಳು.

[illegible]

ನಿರೂಪಿಸುವ ಶಿಲ್ಪಗಳಿವೆ. ಹೊರಗೆ ದಕ್ಷಿಣ ಗೋಡೆಯ ಅರೆಗಂಬದ ಮೇಲೆ ಹಂಸಗಳು ಮತ್ತು ಆಮೆಯ ಕಥೆಯ ಒಂದು ಶಿಲ್ಪವಿದೆ. ಈ ದೇವಾಲಯದ ಕೆಳಗೆ ಮೂರು ಕಥೆಗಳ ಶಿಲ್ಪಗಳಿದ್ದು ಅವುಗಳೆಂದರೆ,

1. ಬಕ ಮತ್ತು ಏಡಿ, 2. ಹಂಸಗಳು ಮತ್ತು ಏಡಿ, 3. ಭೇರುಂಡ ಪಕ್ಷಿಗಳ ಮತ್ತು ನಾಲ್ಕು ಶಿಲ್ಪಗಳು.

ಸತ್ಯವೋಲು ಅಪ್ಪಿದಲ ದೇವಾಲಯ :

ಇದು ಚಿಕ್ಕದಾಗಿದ್ದು ಪಶ್ಚಿಮಕ್ಕೆ ಮುಖಮಾಡಿಕೊಂಡಿರುವ, ಅಪೂರ್ಣಗೊಂಡಿರುವ ದೇವಾಲಯವಾಗಿದೆ. ಈ ದೇವಾಲಯದ ಅಂಚಿನ ಕಪೋಟವನ್ನು ಬಿಟ್ಟರೆ ಉಳಿದೆಲ್ಲವು ಮರಳಿನಿಂದ ಮುಚ್ಚಿಹೋಗಿವೆ. ಗೋಡೆಗೆ ಯಾವುದೇ ಅಲಂಕಾರಗಳಿಲ್ಲ. ಪ್ರಸ್ತಾನದ ಮೂಲಕ್ಕೆ ಪಟ್ಟಿ ಇಲ್ಲ. ಸಭಾಂಗಣವು ಸಾದಾವಾಗಿದೆ. ವಿಮಾನವು ಅರ್ಧಗೋಳಾಕಾರವಾಗಿದ್ದು, ಯಾವುದೇ ಕೆತ್ತನೆಯಿಲ್ಲ ಮತ್ತು ಗಾಳಿಪಾದಗಳಲ್ಲಿ ಒಂದು ಚಿಕ್ಕ ಗುರುತು ಇಡಲಾಗಿದೆ. ಗಜಪ್ರಸ್ತ ಶಿಖರವು ಅರ್ಧಚಂದ್ರಾಕಾರದ ಲಲಾಟ ನಾಸಿಗಳನ್ನು ಹೊಂದಿದೆ. ಇದರ ಮೇಲ್ಬಾಗ ಮತ್ತು ಕಳಸಗಳು ಕಾಣೆಯಾಗಿವೆ. ಗಂಥವು ಒಂದು ಉದ್ದವಾದ ಗುಂಬದ ಜೊತೆಗೆ ಪ್ರಾಂಗಣದ ಒಂದು ಅಡ್ಡಭಾಗದಲ್ಲಿ ಮತ್ತು ಎರಡು ಪಕ್ಕಕ್ಕಿರುವ ಮೇಲ್ಛಾವಣೆಯಲ್ಲಿ ಆವರಿಸಿಕೊಂಡಿದೆ. ದ್ವಾರದ ಪಟ್ಟಿಯು ಸಾದವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಕೆತ್ತಲಾಗಿದ್ದು ಇದು ಬಹುಶಃ ಎಂಟನೇಯ ಶತಮಾನದ್ದಿರಬಹುದೆಂದು ಭಾವಿಸಲಾಗಿದೆ.[151]

ಕೋಟೆಗಳು :

ಬಾದಾಮಿಯ ಚಾಲುಕ್ಯರ ವಾಸ್ತುಶಿಲ್ಪ ನಿರ್ಮಾಣ ಪ್ರಾರಂಭವಾದುದು ಕೋಟಿಗಳ ಮೂಲಕವಾಗಿ ಇದನ್ನು ಮೊದಲು ಪ್ರಾರಂಭಿಸಿದವನು ಒಂದನೇ ಪುಲಕೇಶಿ. ಬಾದಾಮಿಯಲ್ಲಿ ಕೋಟೆಗಳ ನಿರ್ಮಾಣ ಕಾರ್ಯವು 6ನೆಯ ಶತಮಾನದಿಂದ ಪ್ರಾರಂಭವಾಗಿ ಕಾಲಕಾಲಕ್ಕೆ

---

151 Master, M.W., Encyclopedia of Indian Temple Architecture South India, Lower Devidedesa, Delhi, 1983. P.53.

ಅವಶ್ಯಕತೆಗಳಿಗೆ ಅನುಗುಣವಾಗಿ ಬೇರೆ ಜಾಗಗಳಲ್ಲಿ ನಡೆದದ್ದು ತಿಳಿದುಬರುತ್ತದೆ. ಅಷ್ಟು ಮಾತ್ರವಲ್ಲದೆ ಕೋಟೆಗಳು ಶಿಥಿಲಗೊಂಡರೆ ಅದನ್ನು ಬಲಪಡಿಸುವ ಕಾರ್ಯವೂ ನಡೆಯುತ್ತಿತ್ತು.[152]

ಇವರ ಕಾಲದಲ್ಲಿ ರಾಜ್ಯದ ಸಪ್ತಾಂಗಗಳಲ್ಲಿ ಕೋಟೆಯೂ ಒಂದಾಗಿದ್ದುದರಿಂದ ರಾಜ್ಯದ ರಕ್ಷಣೆಯ ದೃಷ್ಟಿಯಿಂದ ಪ್ರತಿಯೊಬ್ಬ ರಾಜನು ಸುಭದ್ರವಾದ ಕೋಟೆಯನ್ನು ಹೊಂದಿರಬೇಕೆಂಬ ಅರಿವು ಎಲ್ಲಾ ಅರಸರಿಗೂ ಇದ್ದಿತು.

ಮೂಲತಃ ಬಾದಾಮಿಯು ನಿಸರ್ಗದತ್ತವಾದ ಬಂಡೆಗಲ್ಲುಗಳಿಂದ ಕೂಡಿದ್ದು, ಈ ಬಂಡೆಗಲ್ಲುಗಳು ಕೋಟೆಯಂತೆ ಚಾಚಿಕೊಂಡಿವೆ. ಆದ್ದರಿಂದ ದುರ್ಗಕ್ರಿಯಗಳಲ್ಲಿ ಬಾದಾಮಿಯದು ಗಿರಿದುರ್ಗ. ಕ್ರಿ.ಶ.542ರಲ್ಲಿ ತನ್ನ ರಾಜಧಾನಿಯಾದ ವಚಾಸಿಯನ್ನು ಅಭೇದ್ಯ ಕೋಟೆಯಿಂದ ಒಂದನೇ ಪುಲಕೇಶಿಯು ಭದ್ರಪಡಿಸಿದುದನ್ನು ಅವನ ಶಾಸನವು ತಿಳಿಸುತ್ತದೆ.

ದೈತ್ಯಾಕಾರದ ಬಂಡೆಗಲ್ಲುಗಳ ನಡುವಿನ ಸಂದುಗಳನ್ನು ಕಲ್ಲುಗಳಿಂದ ಭದ್ರಪಡಿಸಿದುದಷ್ಟೇ ಮನುಷ್ಯ ಪ್ರಯತ್ನ, ಕೋಟೆ ನಿರ್ಮಾಣವು ಆರ್ಥಿಕ ಹೊರೆಯಾಗಲಿಲ್ಲ ಹೆಚ್ಚು ಸಮಯ ವ್ಯಯವಾಗಲಿಲ್ಲ.

ಈ ಕೋಟೆಯು ಉತ್ತರ ಬೆಟ್ಟದಿಂದ ಅಗಸ್ತ್ಯ ತೀರ್ಥದ ಪಶ್ಚಿಮ ದಂಡೆಯ ಮಧ್ಯದವರೆಗೆ ಚಾರ್ಚಿಕೊಂಡಿದೆ. ಜಂಬುಲಿಂಗ ಮತ್ತು ಮಾಲೆಗಿತ್ತಿ ಶಿವಾಲಯಗಳು ಈ ಸ್ಥಲದುರ್ಗದ ಹೊರಗೆ ಉಳಿದುಕೊಂಡಿವೆ. ರಕ್ಷಣಾಗೋಡೆಯು ಸುಮಾರು ಆರು ಮೀಟರು ಎತ್ತರವಾಗಿದೆ. ಕೆಳಭಾಗದಲ್ಲಿ ಹೆಚ್ಚು ದೊಡ್ಡದಾದ ಕಲ್ಲುಗಳಿಂದ ರಚಿತವಾಗಿದ್ದು ಮೇಲೆ ಹೋದಂತೆ ಮಧ್ಯಮ ಗಾತ್ರದ ಕಲ್ಲುಗಳನ್ನು ಜೋಡಿಸಲಾಗಿದೆ. ತಳಭಾಗದಲ್ಲಿ ಗೋಡೆಯ ದಪ್ಪ ನಾಲ್ಕು ಮೀಟರ್ ಇದ್ದರೆ ತುದಿಯಲ್ಲಿ ಎರಡು ಮೀಟರ್ ಇದೆ.

ಬಾದಾಮಿಯಲ್ಲಿ ಭಾವನ್ ಬಂಡೆ ಕೋಟೆ ಎಂದು ಕರೆಯಲಾದ ಉತ್ತರ ದಿಕ್ಕಿನ ಕೋಟೆ ಪ್ರಾಚೀನವಾದುದು.

ಐಹೊಳೆಯ ಕೋಟೆಯು ಈಗ ಇಲ್ಲವಾದರೂ ಅಳಿದುಳಿದ ಅವಶೇಷಗಳಿಂದ ಅದರ ವಿನ್ಯಾಸದ ಬಗೆಗೆ ಊಹಿಸಬಹುದಾಗಿದೆ. ಯಾವುದೇ ವಿಧವಾದ ಬಂಧಕಗಳನ್ನು ಉಪಯೋಗಿಸದೆ ದೊಡ್ಡ

[152] ಡಾ. ಶೀಲಕಾಂತ ಪತ್ತಾರ, ಬಾದಾಮಿ, ಪು.47

ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಿ ಕಟ್ಟಲಾದ ವೃತ್ತಾಕಾರದ ತಳವಿನ್ಯಾಸದ ಕೋಟೆಯ ಸುತ್ತಲು ಕಂದಕವಿದ್ದು ನಾಲ್ಕು ಮಹಾಧ್ವಾರಗಳಲ್ಲಿ ಅಲ್ಲಲ್ಲಿ ಚೌಕಾಕಾರದ ಅಟ್ಟಾಣೆದ್ದಂತೆ ತೋರುತ್ತದೆ.

ಒಟ್ಟಾರೆ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳು ಕಲಾರಸಿತರಿಗೂ ಮತ್ತು ಎಲ್ಲಾ ಧರ್ಮದವರೂ ತಮ್ಮ ಆರಾಧ್ಯ ದೈವಗಳನ್ನು ಪೂಜಿಸುವುದರ ಜೊತೆಗೆ ಇಲ್ಲಿನ ವಾಸ್ತುಶಿಲ್ಪವನ್ನು ಮನಸಾರೆ ನೋಡಿ ಕಣಿಯಬಹುದು. ಹಾಗೂ ಈ ದೇವಾಲಯದ ಮೂರ್ತಿಗಳ ಕೆತ್ತನೆಯ ನೋಡುಗರನ್ನು ಮೂಕವಿಸ್ಮಿತರನ್ನಾಗಿ ಮಾಡಿ ತಮ್ಮನ್ನು ತಾವು ಮೈಮರೆಯುವಂತೆ ಮಾಡುತ್ತದೆ. ಇಲ್ಲಿನ ದೇವಾಲಯಗಳು ನಯನ ಮನೋಹರವಾಗಿದ್ದು ಒಂದು ದೇವಾಲಯದ ನಿರ್ಮಾಣಕ್ಕೂ ಮತ್ತೊಂದು ದೇವಾಲಯದ ನಿರ್ಮಾಣಕ್ಕೂ ಹೊಸ ಪ್ರಯೋಗಗಳನ್ನು ಸುಧಾರಣೆಗಳನ್ನು ಕಾಣಬಹುದು. ಇಲ್ಲಿ ಮೂರು ಶೈಲಿಗಳ ಸಂಗಮಗಳನ್ನು ಕಾಣಬಹುದು.

ಎಲ್ಲಾ ದೇವಾಲಯಗಳು ವಾಸ್ತು ಮತ್ತು ಶಿಲ್ಪಗಳು ಅದ್ಭುತವಾಗಿದ್ದು ಕಲೆಯ ದೃಷ್ಟಿಯಿಂದ ನೋಡಿದರೆ ಪಟ್ಟದಕಲ್ಲು, ಶಿಲ್ಪಕಲೆಯು ಸರ್ವಶ್ರೇಷ್ಠ ಎಂಬುದಾಗಿ ಶಿಲ್ಪಕಲಾ ತಜ್ಞ ಡಾ. ಹರ್ಮನ್ ಗೊಯೇಜ್ ಹೇಳಿದ್ದಾರೆ. ಪರ್ಸಿಬ್ರೌನ್‌ರವರು ಪ್ರತಿಯೊಬ್ಬ ಕಲಾರಸಿಕನೂ ಕಲೆಯ ಬಗೆಗೆ ತರಬೇತಿ ಪಡೆಯಬೇಕಿದ್ದರೆ ಮೊದಲು ಬಾದಾಮಿ, ಐಹೊಳೆ ಪಟ್ಟದಕಲ್ಲಿಗೆ ಭೇಟಿ ನೀಡಬೇಕು ಎಂದಿದ್ದಾರೆ.

ಜವಾಹರಲಾಲ್ ನೆಹರೂರವರು ಇದನ್ನು ಕಲೆಯ ಮೂಸೆಯಿದ್ದಂತೆ ಎಂದು ಹೊಗಳಿದ್ದಾರೆ.

ಹಾಗೆಯೇ ಇವರ ಕಾಲದಲ್ಲಿದ್ದ ಇತರೆ ಕಲೆಗಳೆಂದರೆ

1. ವರ್ಣ ಚಿತ್ರಕಲೆ

2. ಲಲಿತ ಕಲೆ

ಈ ವಾಸ್ತುಶಿಲ್ಪಗಳನ್ನು ಬಿಡಿಸಬೇಕಾದರೆ ಕಲಾಕ್ಷೇತ್ರದಲ್ಲಿ ನುರಿತರು ಮತ್ತು ನೈಪುಣ್ಯತೆ ಹೊಂದಿರುವ ಬೆಳಕು ಅಂತಹವರನ್ನೇ ಶಿಲ್ಪಿಗಳು ಎನ್ನುತ್ತಾರೆ. ಇವರನ್ನು ಸ್ಥಾಪತಿಗಳೂ ಎಂದೂ ಸಹ ಕರೆಯುತ್ತಾರೆ.

ವರ್ಣಚಿತ್ರಕಲೆ :

ಚಾಲುಕ್ಯರು ಚಿತ್ರಕಲೆಗೂ ವಿಶೇಷ ಬೆಂಬಲ ನೀಡಿದ್ದರು. ಅಜಂತಾದ ಒಂದನೇ ಗುಹೆಯಲ್ಲಿ ಎರಡನೆಯ ಪುಲಕೇಶಿಯ ಪರ್ಶಿಯಾದ ರಾಯಭಾರಿಯನ್ನು ಸ್ವಾಗತಿಸುತ್ತಿರುವ ಚಿತ್ರವಿದೆ. ಬಾದಾಮಿಯ ಮೂರನೆಯ ಗುಹೆಯು ಹಿಂದೆ ಚಿತ್ರಾಲಂಕೃತವಾಗಿದ್ದು ಈಗ ಅದರ ಛಾಯೆ ಮಾತ್ರ ಉಳಿದಿದೆ. ಈ

ಭಿತ್ತಿಚಿತ್ರಗಳು ಅಜಂತಾದ ಚಿತ್ರ ಪರಂಪರೆಯನ್ನು ಹೋಲುತ್ತವೆ. ಇಂದ್ರನ ಒಡ್ಡೋಲಗ, ಅಪ್ಸರೆಯರು, ಸಿದ್ಧಚಾರಣರು, ವಿದ್ಯಾಧರ ದಂಪತಿಗಳು ಆಗಸದಲ್ಲಿ ತೇಲಿಹೋಗುತ್ತಿರುವುದು ಈ ಚಿತ್ರಗಳಲ್ಲಿ ಕಾಣಸಿಗುತ್ತದೆ. ಆದರೆ ಇವು ಬಹುಮಟ್ಟಿಗೆ ಮಾಸಿಹೋಗಿವೆ. ಬಾದಾಮಿಯ ಮಾಲಗಿತ್ತಿ ಶಿವಾಲಯ ಅದರ ಎತ್ತರಕ್ಕೆ ಇರುವ ಬೆಟ್ಟದ ಸಾಲಿನಲ್ಲಿ ಬಂಡೆಗಳ ಮೇಲೆ ಮಸುಕಾದ ವರ್ಣಚಿತ್ರಗಳನ್ನು ಡಾ. ಸುಂದರ ಅವರು ಪತ್ತೆ ಹಚ್ಚಿದ್ದಾರೆ. ಸಿಡಿಲತಡಿ, ಸತಿಡೋಣಿ, ಮಹಾಕೂಟ ಮೊದಲಾದ ಕಡೆ ರೇಖಾಚಿತ್ರಗಳನ್ನು ಕಾಣಬಹುದಾಗಿದೆ. ಆದರೆ ಬಿಸಿಲು ಮಳೆಯಿಂದ ರಕ್ಷಣೆ ಇಲ್ಲದೆ ಮಸುಕಾಗಿವೆ. ಇಲ್ಲಿ ಮರದ ಮೇಲಿನ ಮಗಗಳು, ಪಕ್ಷಿಗಳನ್ನು ಚಿತ್ರಿಸಲಾಗಿದೆ. ಬಾದಾಮಿಯ ಮಹಾಕೂಟದಬಳಿಯ ಮಹಿಷಮರ್ಧಿನಿ ದೇವಾಲಯದ ಪಕ್ಕದ ಬಂಡೆಯ ಮಾನವಾಕೃತಿ, ಕಾಡೆಮ್ಮೆ, ಗೂಳಿ ಮೊದಲಾದ ಚಿತ್ರಗಳು ಕಂಡುಬರುತ್ತವೆ. ಬಾದಾಮಿಯ ಸಿಡಲಪಡಿ ಎಂಬಲ್ಲಿ ಬಂಡೆಗಳ ಮೇಲೆ ತಂಡ ನೃತ್ಯ, ಹಾವು, ನಾಯಿ, ಪಕ್ಷಿ, ಗೂಳಿ ಮೊದಲಾದ ಚಿತ್ರಗಳು ಕಂಡುಬರುತ್ತವೆ. ಇಲ್ಲಿನ ಗುಹಾಂತರ ದೇವಾಲಯಗಳಲ್ಲಿ ಮಹೀಷಾಸುರಮರ್ಧಿನಿ, ಗಣೇಶ, ಶಿವಲಿಂಗ, ಗರುಡ ಮೊದಲಾದ ಚಿತ್ರಗಳನ್ನು ಬಿಡಿಸಲಾಗಿದೆ. ಬಾದಾಮಿಯ ಮತ್ತೊಂದು ಗುಹೆಯಲ್ಲಿ ರಾಜನ ಆಸ್ಥಾನದ ದೃಶ್ಯವನ್ನು ಚಿತ್ರಿಸಲಾಗಿದೆ. ಅದರಲ್ಲಿ ಸಂಗೀತ ಮತ್ತು ನೃತ್ಯೋತ್ಸವ ದೃಶ್ಯವನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಅದರಲ್ಲಿ ಸಭಾಸದರು, ಚಾಮರ ಬೀಸುವವರು, ಕೊಳಲು, ಮೃದಂಗ, ತಾಳವಾದ್ಯಗಾರರು ಕಂಡುಬರುತ್ತಾರೆ. ಮತ್ತೊಂದು ಚಿತ್ರದಲ್ಲಿ ಗದೆಯನ್ನು ಹಿಡಿದ ವೀರನೋರ್ವನನ್ನು ವೀಕ್ಷಿಸುತ್ತಿರುವ ಅಪ್ಸರೆಯರು ವೀಕ್ಷಿಸುತ್ತಿದ್ದಾರೆ. ಈ ಚಿತ್ರಗಳಲ್ಲಿ ವ್ಯಕ್ತಿಗಳಿಗೆ ಅನುಗುಣವಾದ ಅಂಗಸೌಷ್ಠವವಿಲ್ಲ. ಆದರೂ ಒಟ್ಟಾರೆ ಅವರ ಮುಖಗಳಲ್ಲಿನ ಭಾವನೆಗಳನ್ನು ಗ್ರಹಿಸಬಹುದಾಗಿದೆ. ರಾಣಿವರ್ಗದವರು ನಸುಗೆಂಪು ಬಣ್ಣದಲ್ಲಿ, ಸೇವಕಿಯರು ನಸುಕಪ್ಪು ಬಣ್ಣದಲ್ಲಿ ಕಾಣಿಸುತ್ತಾರೆ. ರಾಜರಾಣಿಯರನ್ನು ದೊಡ್ಡ ಆಕೃತಿಯಲ್ಲೂ, ಸೇವಕಿಯರನ್ನು ಸಣ್ಣ ಆಕೃತಿಯಲ್ಲೂ ಚಿತ್ರಿಸಲಾಗಿದೆ. ಚಿತ್ರಕ್ಕಾಗಿ ಮೊದಲು ಒಳ್ಳೆ ಜೇಡಿಮಣ್ಣು, ಭತ್ತದ ಹೊಟ್ಟು, ಕತ್ತರಿಸಿದ ಹುಲ್ಲು ಮುಂತಾದ ಮಿಶ್ರಣವನ್ನು ಕಲ್ಲಿನ ಮೇಲೆ ಗಟ್ಟಿಯಾಗಿ ಅಂಟಿಕೊಳ್ಳುವಂತೆ ಮೆತ್ತಲಾಗಿದೆ. ಇದರ ಮೇಲ್ಮೈಯನ್ನು ಸಮತಲ ಮಾಡಿ ಸುಣ್ಣದ ತಿಳಿಯನ್ನು ಬಳಿಯಲಾಗಿದೆ. ಅದು ಪೂರ್ಣವಾಗಿ ಒಣಗುವುದಕ್ಕಿಂತ ಮುಂಚೆ ಚಿತ್ರಗಳನ್ನು ಬಿಡಿಸಲಾಗಿದೆ.

ಲಲಿತ ಕಲೆ :

ಈ ಕಾಲದಲ್ಲಿ ಸಂಗೀತ ಮತ್ತು ನರ್ತನ ಕಲೆ ಸಾಕಷ್ಟು ಪ್ರಚಾರದಲ್ಲಿದ್ದಿತು. ವಿಜಯಾಧಿತ್ಯ ಮಹಾರಾಜನ ಪ್ರಾಣವಲ್ಲಭೆಯಾದ ವಿನಾಪೋಟಿ ಆಸ್ಥಾನ ನರ್ತಕಿಯಾಗಿದ್ದಳು. ಅಂದಿನ ಶಾಸನಗಳಲ್ಲಿ

[illegible]

ಅಂತಹ ಅನೇಕ ನರ್ತಕಿಯರ ಬಗ್ಗೆ ಉಲ್ಲೇಖಗಳಿವೆ. ನಾಟ್ಯದಲ್ಲಿ ಪುರುಷರೂ ಪರಿಣತರಾಗಿದ್ದರು. ಪಟ್ಟದಕಲ್ಲಿನ ಶಾಸನವೊಂದರಲ್ಲಿ ನಾಟ್ಯಶಾಸ್ತ್ರದಲ್ಲಿ ಪ್ರವೀಣನಾದ ನೃತ್ಯಪಟುವನ್ನು ಹೊಗಳಿರುವ ಸಂಗತಿಯಿದೆ. ಇವನ ನರ್ತನವನ್ನು ನೋಡಿದ ಅನೇಕ ನಾಟ್ಯ ಪ್ರವೀಣರು ತಮ್ಮ ಅಹಂಕಾರದಿಂದ ಇಳಿದು ತಲೆತಗ್ಗಿಸುತ್ತಿದ್ದರೆಂಬ ಅಂಶ ಅದೇ ಶಾಸನದಿಂದ ವೇದ್ಯವಾಗುತ್ತದೆ. ನೃತ್ಯ ಪ್ರವೀಣೆಯರಾದ ಅನೇಕ ಮಹಾರಾಣಿಯರನ್ನು ಶಾಸನಗಳು ವರ್ಣಿಸಿವೆ. ಶಿಕಾರಿಪುರದ ಶಾಸನದಲ್ಲಿ ಲಚ್ಚಲದೇವಿಯ ನರ್ತನದ ವೈಖರಿಯನ್ನು ವರ್ಣಿಸಲಾಗಿದೆ. ನೃತ್ಯದಲ್ಲಿನ ಅವಳ ಅದ್ಭುತ ಪ್ರೌಢಿಮೆಗಾಗಿ "ಶ್ರೀ ನೃತ್ಯ ವಿದ್ಯಾದರಿ" ಎಂಬ ಬಿರುದನ್ನು ನೀಡಲಾಗಿದ್ದಿತು. ಮತ್ತೊಂದು ಶಾಸನದಲ್ಲಿ ನರ್ತನಕಲೆಯಲ್ಲಿ ಹೆಸರುವಾಸಿಯಾದ ಸಾವಲದೇವಿಯ ವಿಚಾರವನ್ನು ತಿಳಿಯಬಹುದಾಗಿದೆ. ಪತಿಯಂದಿರನ್ನು ತಮ್ಮೆಡೆಗೆ ಆಕರ್ಷಿಸಲು ರಾಣಿಯರಿಗೆ ನೃತ್ಯವೂ ಒಂದು ಸಾಧನವಾಗಿತ್ತು.

ಶಿಲ್ಪಿಗಳು :

ಬಾದಾಮಿ ಚಾಲುಕ್ಯರ ಕಾಲದಲ್ಲಿ ಅಸಂಖ್ಯಾತ ದೇವಾಲಯಗಳನ್ನು ನಿರ್ಮಿಸಲಾಗಿದ್ದರೂ ಈ ಭವ್ಯ ಕಟ್ಟಡಗಳ ವಾಸ್ತುಶಿಲ್ಪಗಳು ಮತ್ತು ಶಿಲ್ಪಿಗಳನ್ನು ಕುರಿತ ಮಾಹಿತಿ ಹೆಚ್ಚಾಗಿ ತಿಳಿದುಬರುವುದಿಲ್ಲ. ಆದರೂ 8ನೇ ಶತಮಾನದಲ್ಲಿ ವಿಶೇಷವಾಗಿ ಪಟ್ಟದಕಲ್ಲಿನ ದೇವಾಲಯಗಳ ನಿರ್ಮಾಣದಲ್ಲಿ ಕೆಲಸ ಮಾಡಿದ ಶಿಲ್ಪಿಗಳು ಮತ್ತು ವಾಸ್ತುಶಿಲ್ಪಿಗಳನ್ನು ಕುರಿತು ಸ್ವಲ್ಪ ಮಾಹಿತಿ ತಿಳಿದಿದೆ. ತನ್ನ ಕಲಾಕೃತಿಯ ಮೇಲೆ ತನ್ನ ಹೆಸರನ್ನು ನಮೂದಿಸುವುದು ಕರ್ನಾಟಕದಲ್ಲಿ 7ನೇ ಶತಮಾನಕ್ಕಿಂತ ಮೊದಲು ರೂಢಿಯಲ್ಲಿರಲಿಲ್ಲ. ಚಾಲುಕ್ಯರ ಕೈಕೆಳಗೆ ವಿಶೇಷವಾಗಿ 8ನೇ ಶತಮಾನದಲ್ಲಿ ಈ ಅಭ್ಯಾಸವು ಮನ್ನಣೆ ಪಡೆಯಿತು. ಹೀಗೆ ಹೆಸರು ತಿಳಿದುಬಂದಿರುವ ಅನೇಕ ಕಲಾವಿದರು ಪಟ್ಟದಕಲ್ಲಿನಲ್ಲಿ ಎರಡನೇ ವಿಕ್ರಮಾಧಿತ್ಯನ ಕಾಲದಲ್ಲಿ ಕೆಲಸ ಮಾಡಿದರು. ವಾಸ್ತುಶಿಲ್ಪಿಗಳಲ್ಲಿ ನರಸನೊಬ್ಬನು ಐಹೊಳೆಯಲ್ಲಿ ಕೆಲಸ ಮಾಡಿದನು. ಅರ್ಯಮಿಂಚಿ ಉಪಾಧ್ಯಾಯನು ಬಾದಾಮಿಯಲ್ಲಿ ಗುಂಡ ಅನಿವಾರಿತ, ಸರ್ವಸಿದ್ಧ ಆಚಾರ್ಯ ಮತ್ತು ರೇವಡಿ ಓವಜ್ಜ ಇವರು ಪಟ್ಟದಕಲ್ಲಿನಲ್ಲಿ ಕೆಲಸ ಮಾಡಿದರು. ಮೊದಲನೇ ಮತ್ತು ಕೊನೆಯ ವಾಸ್ತುಶಿಲ್ಪಿಗಳು ರೇಖಾನಗರ ದೇವಾಲಯ ನಿರ್ಮಾಣದಲ್ಲಿ ಕುಶಲರಾಗಿದ್ದರೆ ಇತರರು ದ್ರಾವಿಡ ಶೈಲಿಯ ವಾಸ್ತುಶಿಲ್ಪದಲ್ಲಿ ತಜ್ಞರು.

ಮೇಲು ಮತ್ತು ಕೆಳ ಶಿವಾಲಯ ಮಹಾಕೂಟೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ಮಹಾಕೂಟದಲ್ಲೂ, ಲಾಡಖಾನ್, ಗೌಡರಗುಡಿ, ದುರ್ಗಾ ಮತ್ತು ಹುಚ್ಚಪ್ಪಯ್ಯ ಮಠಗಳನ್ನು ಐಹೊಳೆಯಲ್ಲೂ, ಗಳಗನಾಥ, ಕಾಶಿ ವಿಶ್ವೇಶ್ವರ ಮತ್ತು ಸಂಗಮೇಶ್ವರ ದೇವಾಲಯಗಳನ್ನು

ಪಟ್ಟದಕಲ್ಲಿನಲ್ಲೂ ನಿರ್ಮಿಸಿದ ಸ್ಥಪತಿಗಳು ಮತ್ತು ಶಿಲ್ಪಿಗಳ ಬಗೆಗೆ ಏನೂ ತಿಳಿದುಬರದಿರುವುದು ನಿಜವಾಗಿಯೂ ದುರದೃಷ್ಟಕರ ಸಂಗತಿ.

ಬಹುಶಃ 7ನೇ ಶತಮಾನದ ಮಧ್ಯಭಾಗದಲ್ಲಿದ್ದ ಆರ್ಯಮಿಂಚಿ ಉಪಾಧ್ಯಾಯನು ದ್ರಾವಿಡ ಶೈಲಿಯ ದೇವಾಲಯಗಳನ್ನು ನಿರ್ಮಿಸುವುದರಲ್ಲಿ ತಜ್ಞನಾಗಿದ್ದನು. ಐಹೊಳೆಯ ಹುಚ್ಚಪ್ಪಯ್ಯ ಗುಡಿಯು 8ನೇ ಶತಮಾನದ ಮೊದಲನೆಯ ಪಾದದಲ್ಲಿ ನರಸೊಬ್ಬನ ಉಸ್ತುವಾರಿಯಲ್ಲಿ ನಿರ್ಮಾಣಗೊಂಡಿತು. ಇವನು ಗುಹಾಲಯಗಳ ಉತ್ಖನನದಲ್ಲೂ ನಿಪುಣನಾಗಿದ್ದನು ಚಾಲುಕ್ಯರ ಯುಗದ ಅತ್ಯಂತ ಪ್ರಸಿದ್ಧ ವಾಸ್ತುಶಿಲ್ಪಿಗಳು ಗುಂಡ, ಅನಿವಾರಿತ ಮತ್ತು ಸರ್ವಸಿದ್ಧಿ ಆಚಾರ್ಯ ಅವರಿಬ್ಬರೂ ಸೇರಿ ವಿರೂಪಾಕ್ಷ ದೇವಾಲಯವನ್ನು ನಿರ್ಮಿಸಿದರು. ಈ ಅಮೋಘ ಸಾಧನೆಗಾಗಿ ಅವರಿಗೆ ಬಿರುದುಗಳನ್ನಿತ್ತು ಪೆಜ್ಜೆರಿಪು ಸಮಾರಂಭವನ್ನು ನಡೆಸಲಾಯಿತು. ಎರಡನೇ ವಿಕ್ರಮಾಧಿತ್ಯನು ಕಾಂಚಿಯಲ್ಲಿ ರಾಜಸಿಂಹೇಶ್ವರ ದೇವಾಲಯಕ್ಕೆ ಭೇಟಿಕೊಟ್ಟು ಅಲ್ಲಿದ್ದ ಸುಂದರವಾದ ಶಿಲ್ಪಗಳನ್ನು ನೋಡಿ ಮೆಚ್ಚಿಕೊಂಡು ಕಾಂಚಿಯ ಅತ್ಯುತ್ತಮ ಶಿಲ್ಪಿಗಳಲ್ಲಿ ಕೆಲವರನ್ನು ತನ್ನ ಜೊತೆಯಲ್ಲಿ ಪಟ್ಟದಕಲ್ಲಿಗೆ ಬರುವಂತೆ ಪ್ರಚೋದಿಸಿರಬೇಕು ಎಂದು ಕಸಿನ್ಸ್ ಊಹಿಸಿದ್ದಾನೆ. ವಿರೂಪಾಕ್ಷ ದೇವಾಲಯದಲ್ಲಿರುವ ಎರಡು ಶಾಸನಗಳು ಈ ಮಾತಿಗೆ ಪೂರಕವಾಗಿವೆ ಎಂದು ಅವರು ತಿಳಿಸುತ್ತಾರೆ. ಅವು ಸರ್ವಸಿದ್ಧಿಯನ್ನು ದಕ್ಷಿಣ ದೇಶದ ಅತ್ಯಂತ ಪರಿಣತನಾದ ಸೂತ್ರಧಾರಿ ಎಂದು ಕೊಂಡಾಡುತ್ತವೆ. ಬೆಂಜಮಿನ್ ರೋಲಾಂಡ್ ಈ ಅಭಿಪ್ರಾಯವನ್ನೇ ಅನುಮೋದಿಸಿದನು. ಆದರೆ ಪರ್ಸಿಬ್ರೌನ್ ಇದನ್ನು ಒಪ್ಪಲಿಲ್ಲ.

ಪಾಪನಾಥ ದೇವಾಲಯದ ದಕ್ಷಿಣ ಭಾಗವನ್ನು ರೇವಡಿ ಓವಜ್ಜನು ನಿರ್ಮಿಸಿದನು. ಬಲದೇವ ಮತ್ತು ಚೆಂಗಮ್ಮ ಇವನಿಗೆ ಸಹಾಯಕರಾಗಿದ್ದರು. ಪಟ್ಟದಕಲ್ಲಿನ ಇತರ ಸುಪ್ರಸಿದ್ಧ ಶಿಲ್ಪಗಳೆಂದರೆ ದಾಮೋದರ, ಪುಲ್ಲಪ್ಪ ಮತ್ತು ಆದಿತ್ಯ.

ಗುಹಾಂತರ ದೇವಾಲಯದ ಶಿಲ್ಪಗಳೆಂದರೆ ಅಯ್ಯಸ್ವಾಮಿ ಕಲ್ಕುಟ್ಟಿ, ದೋಣಸಾಮಿ, ನಾಕೆಯ್ದು ಮಾರುತಿಸಾಮಿ, ಶ್ರೀಶೋಪಕಾರಿ, ಉಮಾಭಟ, ಅಜ್ಕಿ ಗಣಸಾಮಿ, ಮಲ್ಲಿಸಾಮಿ, ಕೋಳಿಮಜ್ಜ ಮೊದಲ ಗುಹೆಯ ಶಿಲ್ಪಿಗಳು.

ಇನ್ನು ಎರಡನೆಯ ಗುಹೆಯ ಶಿಲ್ಪಗಳೆಂದರೆ ಶಾಂತಿಮೂರ್ತಿ, ದುಟ್ಬೋಜ ರೋಣ, ಗೊಟ್ಟಿಮೂರ್ಕ, ನಿದ್ದೆಗ, ಬುರು, ವಚ್ಯ, ಅಳಗೆರೆಯ, ಕೇಸವ ದ್ವಿತ, ಭೀಮ, ದುರ್ವಿಟ ಇತ್ಯಾದಿ ಇವರಲ್ಲದೆ ಭಾರತಚಂದ್ರ, ಶರಣಚಂದ್ರ, ಭ್ರಮಚಂದ್ರ, ಸಿವಪುತ್ರ, ಯಶದೇವ, ದೇವದಾಸ, ಗಂಗೋಸ್ವಾಮಿ, ಮಹಾರಟಿ.

3ನೆಯ ಗುಹೆಯ ಶಿಲ್ಪಿಗಳೆಂದರೆ ಕೊಣ್ಡಿಮಞ್ಜ, ವಸುದೇವ, ಶಕುಲ ಅಯ್ಯ, ಪಞ್ಜಣ, ಚೋಳ ದೇಸಿಯ, ಕಲ್ಕುಟಿಗ, ಗುಣಸಾಲ ಅಜ, ಆಚಾರಸಿದ್ಧಿ ರೂಪಶೇಖರ ಆರ್ಯಭಟ್ಟ, ಕೋಳಿಮಞ್ಜ, ಡೆಲಿಮಞ್ಜ, ವಿಮಲ, ದೋಣ, ಕೊಟ್ಟಲ, ಕಾನ್ತಿಮಞ್ಜ, ಸಾಮಿಚೆನ್ನ, ಬಿಜಯ, ಓವಜು.

4ನೇ ಗುಹೆಯ ಶಿಲ್ಪಿಗಳೆಂದರೆ ಹರಿಕೆ, ಭವಸ್ವಾಮಿ ಆರ್ಯ, ಉದಗ್ರ ಕೇಸವ, ವಿಜಾಮ್ಮ, ಪ್ರಸನ್ನಬುದ್ದಿ, ಆರಿಕ್ಕೆ ಕದೆಸ್ವಾಮಿ, ಮಾರ್ಗಜ ಶ್ರೀನಿಧಿದೇವ ಇತರರು.

ಟಿಪ್ಪಣಿಗಳು :

1. Indian Culture and Civilization, Rebellow - Publishers Prakasha Sahitya, 1978.
2. A.L. Basham - The Wonder that was India.
3. ದಕ್ಷಿಣ ಭಾರತದ ಇತಿಹಾಸ, ಮುದ್ದಾಚಾರಿ, ಪೃಥ್ವಿ ಉದ್ಯಮ ಕೇಂದ್ರ, 1974.
4. Haveli E.B., The Ancient and Medieval Architecture of India, London, 1915.
5. Master M.W., Encyclopedia of Indian Temple, Architecture South India - Lower Davidedesa, Delhi, 1983.
6. The Art and Architecture of Indian Buddist Hindu-Jain-(Reved) Harmond Worth, 1971.
7. John Musgrove - A History of Architecture, The Royal Institute of British Architects and The University of London, 1987.
8. H. Cousins, Chalukyas Architecture.
9. ಹರಿತಿಸಿರಿ, ನೆನಪಿನ ಸಂಪುಟ, ಪ್ರಕಟಣ ಸಮಿ.
10. History of Karnataka, H.V. Srinivasa Murthy.
11. ಡಾ. ಬಾ.ರಾ. ಗೋಪಾಲ್, ಐಹೊಳೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
12. ಡಾ. ಬಾರಾ. ಗೋಪಾಲ್, ಬಾದಾಮಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
13. ಡಾ. ಬಾರಾ. ಗೋಪಾಲ್, ಬನವಾಸಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
14. ಡಾ. ಬಾರಾ. ಗೋಪಾಲ್, ಕರ್ನಾಟಕದ ಕಲೆಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
15. K. V. Sundararajan, Karnataka Architecture and its Remifications, Karnataka University, Dharwad.
16. T.V. Mahalingam, South Indian Temple Complex, Karnataka University, Dharwad.

17. S. Nagaraja Rao, Buddhist Caves of Western India, Aqam Prakashana, New Delhi.

18. ಸುಂದರ, ಕರ್ನಾಟಕ ಚರಿತ್ರೆ, ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಲಯ, ಹಂಪಿ, 1997.

19. ಪಂಚಮುಖಿ ಆರ್.ಎಸ್., ಕರ್ನಾಟಕ ಇತಿಹಾಸ, ಕರ್ನಾಟಕ ಇತಿಹಾಸ, ಸಂಶೋಧನಾ ಮಂಡಲ, ಧಾರವಾಡ, 1967.

20. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1966.

21. ಕರ್ನಾಟಕ ಪರಂಪರೆ ಸಂಪುಟ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 1992.

22. ರಾಜಶೇಖರ ಎಸ್., ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ, ಸುಜಾತ ಪಬ್ಲಿಕೇಷನ್ಸ್, ಧಾರವಾಡ, 1988.

23. ಅಣ್ಣಿಗೇರಿ ಎ.ಎಸ್., ಪಟ್ಟದಕಲ್ಲು ಗುಡಿಗಳು, ಕರ್ನಾಟಕ ಸಂಶೋಧನಾ ಸಂಸ್ಥೆ, ಕ.ವಿ.ವಿ., ಧಾರವಾಡ.

24. Basavaraja K.R., History and Culture of Karnataka, Dharwad.

25. Desai P.B., Jainism in South India and Some Jain Inscriptions.

26. Paquesson James and Burgess James, Caves Temples of India.

27. Gangoly O.C., Indian Architecture.

28. ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ.

29. M. Moraes, Kadamba Kala

30. ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ, ಕೆ.ಪಿ. ಈರಣ್ಣ, ಸಾಹಿತ್ಯ ಪ್ರಕಾಶ, ಧಾರವಾಡ.

31. ಡಾ. ಶೀಲಕಾಂತ ಪತ್ತಾರ, ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ., ಹಂಪಿ.

32. ಡಾ. ಶೀಲಕಾಂತ ಪತ್ತಾರ, ಬಾದಾಮಿ, ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ., ಹಂಪಿ.

33. ಡಾ. ಶಿವರಾಮ ಕಾರಂತ, ಚಾಲುಕ್ಯರ ಕಲೆ ಮತ್ತು ವಾಸ್ತುಶಿಲ್;ಅ.

34. ಶ್ರೀಕಂಠಶಾಸ್ತ್ರಿ ಎಸ್., ಭಾರತೀಯ ಸಂಸ್ಕೃತಿ, ಹೊಯ್ಸಳ ವಾಸ್ತುಶಿಲ್ಪ.

ಅಧ್ಯಾಯ–4

ಶಿಲ್ಪಕಲೆ

ಅಧ್ಯಾಯ–4

ಶಿಲ್ಪಕಲೆ

ಕಲೆ ಎಂದರೆ ಒಂದು ವಿಶೇಷವಾದ ಒಳ್ಳೆಯ ಅಭಿರುಚಿಯಿಂದ ಕೂಡಿದ ರಚನಾತ್ಮಕ ಕ್ರಿಯೆ. ಇದನ್ನು ದೈವದತ್ತವಾದುದು ಎನ್ನುತ್ತಾರೆ. ಸೌಂದರ್ಯದ ಅನುಭವವನ್ನು ಉಂಟು ಮಾಡುವ ಕಾರ್ಯವೇ ಕಲೆ.

ಕಲೆಯ ವ್ಯವಸ್ಥಿತವಾದ ಹಾದಿಯು ಧರ್ಮಶಾಸ್ತ್ರ, ತತ್ವಶಾಸ್ತ್ರ ವಿಜ್ಞಾನಗಳಂತೆ ಅಭ್ಯಸಿಸಲು ಯೋಗ್ಯವಾದಾಗ ಶಾಸ್ತ್ರ ರೂಪವನ್ನು ಪಡೆಯುತ್ತಾರೆ. ಕಲೆ ಅನುಭವಿಸಲು ಹೆಚ್ಚು ಯೋಗ್ಯವೇ ಹೊರತು ಶಬ್ಧರೂಪದಲ್ಲಿ ಪೂರ್ಣವಾಗಿ ಹಿಡಿಯಲು ಸಾಧ್ಯವಿಲ್ಲ.

ಕಲೆಯಲ್ಲಿ 2 ಪ್ರಕಾರಗಳನ್ನು ಕಾಣುತ್ತೇವೆ (ಹರಿತಿ ಸಿರಿ).

1. ದೃಶ್ಯ

2. ಶ್ರಾವ್ಯ.

ಚಿತ್ರ, ವಾಸ್ತು, ಶಿಲ್ಪಕಲೆಗಳನ್ನು ದೃಶ್ಯ ಮಾಧ್ಯಮ ಎನ್ನುತ್ತೇವೆ. ಇದು ಬಣ್ಣವಾಗಬಹುದು, ಕಲ್ಲಾಗಬಹುದು. ಲೋಹವಾಗಬಹುದು. ಈ ನಿರ್ಜೀವ ವಸ್ತುವಿಗೆ ಚೈತನ್ಯವನ್ನು ನೀಡುವ ಕಾರ್ಯ ಕಲಾವಿದನದು. ಚಿತ್ರ, ವಾಸ್ತು, ಶಿಲ್ಪಕಲೆಗಳೊಂದಿಗೆ ನೃತ್ಯಕಲೆಯೂ ಸೇರಿ ದೃಶ್ಯ ಕಲೆಯೆನಿಸಿದೆ.

"ಶಿಲ್ಪಂ ಕರ್ನಕಳಾದಿಕಾ' ಎನ್ನುವುದು ಅಮರಕೋಶದೊಳಗಿನ ಅಮರಸಿಂಹನ ಉಕ್ತಿಯಾಗಿದೆ.

ಕರ್ಮ ಎಂಬುದು ಕಲಾವಿದನ ಕ್ರಿಯೆಗೆ ಸಂಬಂಧಿಸಿದೆ.

ಶಿಲ್ಪಿಪಿ ಸ್ಥಪತಿ ಎಂದೂ ಕರೆಯುತ್ತಾರೆ.[1]

ವಾಸ್ತುಶಿಲ್ಪವು ಪ್ರಮುಖವಾಗಿ ಧಾರ್ಮಿಕ ಕಟ್ಟಡಗಳ ನಿರ್ಮಾಣ ಘಟ್ಟವನ್ನು ತಲುಪಿದಾಗ ಆ ಕಟ್ಟಡಗಳಲ್ಲಿ ಪ್ರತಿಷ್ಠಾಪಿಸುವ ಮೂರ್ತಿಗಳ ನಿರ್ಮಾಣ ಶಿಲ್ಪಕಲೆ, ವಾಸ್ತುಶಿಲ್ಪಕ್ಕೆ ಅನಿವಾರ್ಯವಾದ

---

[1] ಡಾ. ಶ್ರೀಕಂಠಶಾಸ್ತ್ರಿ, ಕರ್ನಾಟಕ ದೇವಾಲಯ ಕೋಶ, ವಿಜಾಪುರ ಜಿಲ್ಲೆ

[illegible]

[illegible]

[illegible]

[illegible]

[illegible]

ಒಂದು ಅಂಶವಾಗಿದೆ. ವಾಸ್ತುಶಿಲ್ಪ ದೇವರುಗಳಿಗೆ ಆಲಯವನ್ನು ಗಮನಿಸಿದರೆ ಮೂರ್ತಿಶಿಲ್ಪ ಆ ದೇವರುಗಳ ಕಲ್ಪನೆಗೆ ಸಾಂಕೇತಿಕವಾದ ವ್ಯಕ್ತರೂಪವನ್ನು ಕೊಡುತ್ತದೆ. ಈ ಶಿಲ್ಪಕಲೆಯ ಉಗಮಕ್ಕೆ ಧಾರ್ಮಿಕ ಶ್ರದ್ಧೆಯೇ ಪ್ರಚೋಧನೆಯಾಗಿದೆ.

ಆದರೆ ಶಿಲ್ಪಕಲೆಗೆ ಬಂದಾಗ ವಾಸ್ತುಶಿಲ್ಪಕ್ಕಿಂತ ಮೊದಲೇ ಶಿಲ್ಪಕಲೆಯು ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಪುರಾವೆಯಾಗಿ ಕ್ರಿ.ಪೂ. 3000 ಕ್ಕಿಂತಲೂ ಹಿಂದಿನ ಶಿಲ್ಪಗಳು ನಮಗೆ ದೊರಕಿವೆ. ಅಲ್ಲಿ ದೊರಕಿರುವ ಲಿಂಗ, ವೃಷಭ, ಪಾಣಿಪಟ್ಟ ಮತ್ತು ಅನೇಕ ವಿಗ್ರಹಗಳು ಸಿಂಧು ಸಂಸ್ಕೃತಿಯಲ್ಲಿ ಕಂಡುಬರುತ್ತವೆ. ಹಾಗೆಯೇ ಗೂಳಿ, ಕಂಬವನ್ನು ಹತ್ತುತ್ತಿರುವ ಕಪಿ, ಅಳಿಲು, ನರ್ತನಾ ಭಂಗಿಯಲ್ಲಿರುವ ಸ್ತ್ರೀ ವಿಗ್ರಹ ಇತ್ಯಾದಿ ಶಿಲ್ಪಕಲಾ ಕೃತಿಗಳು ದೊರಕಿದ್ದು ಶಿಲ್ಪಗಳ ಹಿನ್ನೆಲೆಯನ್ನು ಸಾದರಪಡಿಸುತ್ತವೆ. ಪುರಾಣಗಳ ಕಾಲದಲ್ಲಿ ವಿಗ್ರಹಗಳ ಆರಾಧನೆಯಿದ್ದಿತೆಂದು ತಿಳಿದುಬರುತ್ತದೆ.

ಆದರೆ ಶಿಲ್ಪಕಲೆಗೆ ಚಾಲುಕ್ಯರು ಕೊಟ್ಟ ಕಾಣಿಕೆ ಗುಣದ ದೃಷ್ಟಿಯಿಂದ ವಿಶಿಷ್ಟವಾದುದು ಸಂಖ್ಯೆಯ ದೃಷ್ಟಿಯಿಂದ ಅದ್ಭುತವಾದುದು, ಆಶ್ಚರ್ಯಕರವಾದುದು. ಶಿಲ್ಪ ಕಲೆಯ ಸಂಪತ್ತು ಹೆಚ್ಚಿದಂತೆ ಅವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಇಂತಹ ಶಿಲ್ಪಗಳ ನಿರ್ಮಾಣದಲ್ಲಿ ಶಾಸ್ತ್ರವು ಬಹು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಶಿಲ್ಪಶಾಸ್ತ್ರಗಳು ವಿಗ್ರಹಗಳ ನಿರ್ಮಾಣ ಕ್ರಿಯೆಯನ್ನು ವಿಧಿವತ್ತಾಗಿ ನಿರ್ಣಯಿಸಿದೆ. ಈ ಶಿಲ್ಪಗಳು ಶಾಸ್ತ್ರ ರೀತಿಯಲ್ಲಿ ನಿರ್ಮಿಸಿದ ವಿಗ್ರಹಗಳಿಂದ ಅಭ್ಯುದಯ ಮತ್ತು ದೋಷ ಉಂಟಾಗುತ್ತದೆಂಬ ಶ್ರದ್ಧೆ ಶಿಲ್ಪಶಾಸ್ತ್ರಕ್ಕೆ ಬಹಳ ಪ್ರಾಮುಖ್ಯತೆಯನ್ನು ತಂದುಕೊಟ್ಟಿತು. ಮೂರ್ತಿಗಳಲ್ಲಿರಬೇಕಾದ ಸೌಂದರ್ಯ, ಕೇವಲ ಕಲಾತ್ಮಕವಾದ ಸೌಂದರ್ಯವಲ್ಲ. ದೈವಶಕ್ತಿಯ ಆಹ್ವಾನಕ್ಕೆ ಮತ್ತು ಅವಿರ್ಭಾವಕ್ಕೆ ಅವಶ್ಯಕವಾದ ದೈವೀಕಳೆ ಎಂಬ ಭಾವನೆಯಿಂದ ಶಿಲ್ಪಗಳು ತಮ್ಮ ಕೃತಿಗಳು ರಚಿಸಿದರು. ಅದಕ್ಕೆ ಅನುಗುಣವಾಗಿ ಶಿಲ್ಪಶಾಸ್ತ್ರಗಳು ಇಲ್ಲಿ ಮೂಡಿಬಂದಿವೆ. ಒಬ್ಬ ಶಿಲ್ಪಿಯ ಕೆತ್ತನೆಗೂ ಮತ್ತೊಬ್ಬ ಶಿಲ್ಪಿಯ ಕೆತ್ತನೆಗೂ ಹೋಲಿಕೆ ಕಂಡುಬರುವುದಿಲ್ಲ. ಶಿಲ್ಪಿಗೆ ತಾನು ಶಿಲ್ಪಗಳನ್ನು ಕೆತ್ತುವಾಗ ಅದರ ಗಾತ್ರ ಎತ್ತರ ಅಗಲ ಮುಂತಾದವುಗಳ ಪರಿಜ್ಞಾನ ಇರಬೇಕು.

ವಿಗ್ರಹಕ್ಕೆ ಆರು ವಿಧವಾದ ಅಳತೆಗಳನ್ನು ಶಿಲ್ಪ ಶಾಸ್ತ್ರಗಳು ಕಂಡುಕೊಂಡಿವೆ. ಅವುಗಳೆಂದರೆ ಮಾನ, ಪ್ರಮಾಣ, ಉನ್ಮಾನ, ಪರಿಮಾಣ, ಉಪಮಾನ, ಲಂಬಮಾನ. – ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಒಂದು ಜಡಕಲ್ಲಿನಲ್ಲಿ ಆತ ಶಾಂತಿ, ಅಶಾಂತಿ, ತಳಮಳ, ತತ್ತರಗಳನ್ನು

ಮೂಡಿಸುವ ಶಿಲ್ಪಗಳನ್ನು ಬಿಡಿಸಬೇಕು. ಚಾಲುಕ್ಯರ ಯುಗದಲ್ಲಿ ವಾಸ್ತುಶಿಲ್ಪದಂತೆಯೇ ಶಿಲ್ಪಕಲೆಯನ್ನು ಸಮೃದ್ಧಃವಾಗಿ ಬೆಳೆಯಿತು. ದೇವಾಲಯಗಳ ಜೊತೆಯಲ್ಲಿಯೇ ಮೂರ್ತಿಗಳ ನಿರ್ಮಾಣವೂ ಬೆಳೆಯಿತು. ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುವ ಮೂಲ ವಿಗ್ರಹದ ಜೊತೆ, ಗೋಡೆಗಳ ಮೇಲೆ ಕಂಬಗಳ ಮೇಲೆ ಮತ್ತು ಅಲಂಕಾರದ ಗೂಡುಗಳಲ್ಲಿ ಮೂರ್ತಿಗಳನ್ನು ನಿರ್ಮಿಸುವ ಕ್ರಮ ಬೆಳೆದುಬಂದಿತು. ಪೌರಾಣಿಕ ಸನ್ನಿವೇಶಗಳಾದ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಕಲ್ಲಿನಲ್ಲಿ ರೂಪುಗೊಂಡು ದೇವಾಲಯಗಳನ್ನು ಅಲಂಕರಿಸಿವೆ. ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬಾದಾಮಿ, ಬಳ್ಳಿಗಾವೆ, ಲಕ್ಕುಂಡಿಗಳೇ ಇಲ್ಲದೆ ಕರ್ನಾಟಕದ ಹೊರಗೂ ಸಹ ತಮ್ಮ ಕಲಾ ಸೊಬಗವು ಹೊರ ಹೊಮ್ಮಿಸಿವೆ. ಐಹೊಳೆಯ ನರಸಿಂಹ ಮಹಿಷಾಸುರ ಮರ್ದಿನಿ ವಿಷ್ಣು ಮೊದಲಾದವು ಚಾಲುಕ್ಯ ಶಿಲ್ಪಕಲೆಯ ಪ್ರಾರಂಭದ ಹಿನ್ನೆಲೆಯನ್ನು ತೋರಿಸಿದರೂ ಸುಂದರ ಕಲಾಕೃತಿಗಳಾಗಿವೆ. ಪಟ್ಟದಕಲ್ಲಿನ ದೇವಾಲಯಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಮಲ್ಲಿಕಾರ್ಜುನ, ವಿರೂಪಾಕ್ಷ, ಪಾಪನಾಥ, ಈ ಮೊದಲಾದ ದೇವಾಲಯಗಳಲ್ಲಿರುವ ಕಲಾಕೃತಿಗಳೂ ಮತ್ತು ಬಾದಾಮಿಯ ಗುಹಾಂತರದೇವಾಲಯಗಳ ಶಿಲ್ಪಗಳೂ ಚಾಲುಕ್ಯ ಶಿಲ್ಪಕಲೆಯ ಪರಿಣತ ಸ್ಥಿತಿಯನ್ನು ತೋರಿಸುತ್ತವೆ.

ಚಾಲುಕ್ಯರ ಶಿಲ್ಪವನ್ನು ಕಂಡು ಮೆಚ್ಚಿದ ಜಿಮ್ಮರ್ "ಅನುರಾವತಿಯ ಶಿಲ್ಪ ಗುಪ್ತರ ಕಾಲದಲ್ಲಿ ಉನ್ನತ ಸ್ಥಿತಿಗೇರಿ ಅದರ ಮುಂದಿನ ಬೆಳವಣಿಗೆ ಚಾಲುಕ್ಯ ಯುಗದಲ್ಲಿ ಪೂರ್ಣತೆಯನ್ನು ಮುಟ್ಟಿತು ಎಂದಿದ್ದಾರೆ." (Heinrich Zimmer - The Art of Indian Asia) ಇವರು ಗಂಗಾವತಾರ, ಅಹಲ್ಯೆ, ಇಂದ್ರ, ರಾಮಾಯಣದ ಕೆಲವು ಕಥಾನಕಗಳು ಅವರ ಗಮನವನ್ನು ಸೆಳೆದಿವೆ. ಈ ಪೌರಾಣಿಕ ಶಿಲ್ಪಗಳ ಜೊತೆಗೆ ರಸಿಕ ದಂಪತಿಗಳ ಶಿಲ್ಪ ಕಲಾ ಕೌಶಲ್ಯಕ್ಕೆ ಅವರು ಮಾರು ಹೋಗಿದ್ದರು. ಪಟ್ಟದಕಲ್ಲಿನ ಈ ರಸಿಕ ದಂಪತಿಗಳನ್ನು ನೋಡಿ ಜಿಮ್ಮರ್ "ಕಲ್ಲಿನ ಸ್ಥೂಲತ್ವ ಅಳಿದು, ಆಕಾಶದಲ್ಲಿ ತೇಲಾಡುತ್ತಿರುವ ದಿವ್ಯ ದೇಹ ಆ ಶಿಲ್ಪಗಳಿಗೆ ಪ್ರಾಪ್ತವಾದಂತಿವೆ. ಕೇವಲ ಈ ಲೋಕದ ಮರ್ತ್ಯಪ್ರಜ್ಞೆಗೆ ಅವು ಬಂಧಿತನಾದಯೆಲ್ಲ. ಅದಕ್ಕೆ ಅತೀವವಾದ ಇನ್ನಾವುದೆ ದರ್ಶನದಿಂದ ದೀಪ್ತನಾದ ಶಿಲ್ಪಿ ಅವುಗಳನ್ನು ಕಂಡರಿಸಿದಂತೆ ತೋರುತ್ತದೆ. ಕಲ್ಲಿನ ಸ್ಥೂಲಶರೀರದಿಂದ ಪಾರು ಮಾಡಿ ಕಲೆಯ ಸೂಕ್ಷ್ಮ ಶರೀರವನ್ನು ಅವುಗಳಿಗೆ ಕರುಣಿಸಿದ್ದಾನೆ. ಶಿಲ್ಪಿ ಇಷ್ಟೊಂದು ಉದಾತ್ತವಾದುದನ್ನು ಶಿಲ್ಪ ಕಲೆಯಿಂದ ಬಯಿಸಿದ ಮತ್ತು ಅದನ್ನು ಅಷ್ಟೇ ಸುಲಭವಾಗಿ ಸಾಧಿಸಿ ಸಿದ್ಧಿಯನ್ನು ಪಡೆದ ಕಲೆ ಇನ್ನೆಲ್ಲಿಯಾದರೂ ಸಿಕ್ಕುತ್ತದೆಯೋ ಎಂಬುದು ಸಂದೇಹ ಎಂದಿದ್ದಾರೆ.

ಇವರ ಕಾಲದ ಶಿಲ್ಪಗಳೆಲ್ಲವೂ ಸಹಜವಾಗಿ ಮೂಡಿಬಂದಿವೆ. ಇವರ ಶಿಲ್ಪಗಳ ಒಂದು ಮುಖ್ಯವಾದ ಅಂಶವೆಂದರೆ ಸ್ತ್ರೀ ಮತ್ತು ಪುರುಷ ದೇಹಗಳಲ್ಲಿ ಅತ್ಯಗತ್ಯವಾದ ಅಂಶಗಳಿಗಿಂತ ಹೆಚ್ಚಾಗಿ ವ್ಯತ್ಯಾಸ ಮಾಡದಿರುವುದು (ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ.631), ಎರಡೂ ಶಿಲ್ಪಗಳ ರಚನೆಗೂ ಸಮಾನ ಸ್ಥಾನ ನೀಡಿದ್ದಾನೆ.

ಗುಹಾಂತರ ದೇವಾಲಯಗಳಲ್ಲಿರುವ ಶಿಲ್ಪಗಳು ಅಲ್ಲಿನ ಗೋಡೆಗಳ ಮೇಲೆ ಬೃಹದಾಕಾರವಾಗಿದ್ದು ಮತ್ತು ಕಲಾತ್ಮಕ ಸಮತೋಲನ ಸಾಮರಸ್ಯದಿಂದಿದೆ. ಮೊದಲನೆಯ ಶೈವ ಗುಹೆಯಲ್ಲಿರುವ ನಟರಾಜ, ಅರ್ಧನಾರೀಶ್ವರ ಮೊದಲಾದ ವಿಗ್ರಹಗಳು ಎರಡು ಮತ್ತು ಮೂರನೇ ವೈಷ್ಣವ ಗುಹೆಗಳ ವಾಮನ, ವರಾಹ ವಿಷ್ಣು ವಿಗ್ರಹಗಳು, ನಾಲ್ಕನೆಯ ಜೈನ ಗುಹೆಯ ತೀರ್ಥಂತರ ವಿಗ್ರಹಗಳು ಗುಹೆಗಳ ಮುಖಮಂಟಪದ ಕಂಬಗಳ ಮೇಲಿರುವ ಚಿಕ್ಕ ಆಕಾರದ ದೇವತಾ ವಿಗ್ರಹಗಳು ಸುಂದರವಾಗಿವೆ. ಇಡೀ ಭಾರತದಲ್ಲಿಯೇ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟ ಕೆಲವು ಶಿಲ್ಪಗಳು ಅಲ್ಲಿವೆ. (E.B. Havell, Indian Architecture) ಸೌಂದರ್ಯದ ಹೊಸ ಸೃಷ್ಟಿ ನಮಗೆ ಈ ಗುಹಾಲಯಗಳಲ್ಲಿ ಗೋಚರಿಸುತ್ತವೆ. ನದಿ ದೇವತೆಗಳಾದ ಗಂಗಾಯಮುನೆಯರ ಚಿತ್ರಗಳು ಗುಪ್ತರ ಕಾಲದ ಕೆತ್ತನೆಗಳಿಗಿಂತಲೂ ಸುಂದರವಾಗಿವೆ. ಈ ಸ್ತ್ರೀ ಮೂರ್ತಿಗಳಿಗಿರುವ ಉದ್ದವಾದ ಕಾಲುಗಳು, ಅತಿ ಸ್ಥೂಲವಲ್ಲದ ನಿತಂಬ ಭಾಗ, ಬಳಕುವ ಕಟಿ, ಕಂಕುಳಿನಿಂದ ಕಾಲಿನವರೆಗೂ ಹರಡಿರುವ ಸೌಂದರ್ಯ ರೇಖೆ – ಇವು ಸ್ತ್ರೀಯರ ಸಹಜ ಸೌಂದರ್ಯವನ್ನು ಬಿಂಬಿಸುತ್ತವೆ. (ಡಾ. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.632).

ಶಿಲ್ಪಗಳ ಲಕ್ಷಣಗಳು :

1. ಗುಹಾಮಂದಿರದ ಬೃಹತ್ ಗಾತ್ರ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಸ್ಪುಟವಾದ ಕಣ್ಣಿನ ಹುಬ್ಬುಗಳು ತೆರೆದ ಕಣ್ಣುಗಳು ಎರಡು ಗೆರೆಗಳಿಂದ ನಿಚ್ಚಳವಾಗಿ ಮೀನಿನ ಆಕಾರದಲ್ಲಿ ಚಿತ್ರಿಸಿರುವ ಕಣ್ಣಿನ ರೆಪ್ಪೆಗಳಿವೆ.

2. ಬೃಹದಾಕಾರದ ಶಿಲ್ಪಗಳಲ್ಲಿ ರೂಪ ಸೌಂದರ್ಯದ ಜೊತೆಗೆ ತತ್ವಸೌಂದರ್ಯವು ಅಡಕವಾಗಿವೆ. ಅದರಲ್ಲಿ ಅರ್ಧನಾರೀಶ್ವರ ಶಿಲ್ಪವೂ ಸ್ತ್ರೀ ಪುರುಷ ಸಮಾನತೆಯನ್ನು ಸೂಚಿಸುತ್ತದೆ. ನಟರಾಜನ

ವಿಗ್ರಹವು ತಿರೋಭಾವ ಸೃಷ್ಟಿ, ಸ್ಥಿತಿ, ಲಯ ಮತ್ತು ಅನುಗ್ರಹ ಎಂಬ ಶಿವನ ಪಂಚಕೃತ್ಯಗಳನ್ನು ಸಂಕೇತಿಸುತ್ತದೆ.

3. ಮಧ್ಯಮ ಗಾತ್ರದ ಶಿಲ್ಪಗಳು ಇನ್ನೊಂದು ಬಗೆಯದ್ದಾಗಿವೆ. ಇವುಗಳಲ್ಲಿ ರಸಿಕ ದಂಪತಿಗಳು ಸಾಲಭಂಜಿಕೆ, ಗಂಧರ್ವ ದಂಪತಿಗಳು ಮೂಡಿಬಂದಿದ್ದು ಲೌಕಿಕ ಜೀವನದ ಅನುಭವಗಳನ್ನು ಪ್ರತಿನಿಧಿಸುತ್ತಿದ್ದಾರೆ.

4. ವೈವಿಧ್ಯ ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬರುವ ಇನ್ನೊಂದು ವೈಶಿಷ್ಟ್ಯವಾಗಿದೆ. ಒಂದೇ ಸನ್ನಿವೇಶವನ್ನು ವಿವಿಧ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ.

5. ಕಥಾನಕ ಶಿಲ್ಪಗಳು ಕತೆ ಹೇಳುವ ಶಿಲ್ಪಗಳು ದೇವಾಲಯಗಳು ಕೇವಲ ಧಾರ್ಮಿಕ ಆಚರಣೆಗಳ ಕೇಂದ್ರವಾಗಿರದೆ ಜನಸಾಮಾನ್ಯರಿಗೆ ಕಾವ್ಯ ಮತ್ತು ಪುರಾಣದ ಕತೆಗಳನ್ನು ಶಿಲ್ಪಗಳ ಮೂಲಕ ಮೂಡಿಸಿ ನೀತಿ ಲಕ್ಷಣ ನೀಡಿವೆ. ಈ ರೀತಿಯಾದ ಕಲ್ಲುಗಳಲ್ಲಿ ರಾಮಾಯಣ, ಮಹಾಭಾರತ ಹಾಗೂ ಹಿಂದೂ ಪುರಾಣ ಕತೆಗಳಲ್ಲಿ ಕೆತ್ತಿದವರಲ್ಲಿ ಚಾಲುಕ್ಯ ಶಿಲ್ಪಗಳೇ ಮೊದಲಿಗರು.

6. 'ಪ್ರಾಧಾನ್ಯ' ಚಾಲುಕ್ಯರು ಮುಖ್ಯ ವ್ಯಕ್ತಿಯ ದೇಹವನ್ನು ಗಾತ್ರದಲ್ಲಿ ಹಿರಿಯದಾಗಿಯೂ ಅವರ ಸೇವಕರು ಅಥವಾ ಕೆಳಗಿನ ಅಂತಸ್ತಿನ ವ್ಯಕ್ತಿಗಳನ್ನು ಕುಬ್ಜರಾಗಿ ಮತ್ತು ಗಾತ್ರದಲ್ಲಿ ಚಿಕ್ಕವರಾಗಿ ಬಿಡಿಸಿದ್ದಾರೆ.

7. ಪುಟ್ಟಗಣಗಳ ಶಿಲ್ಪಪಟ್ಟಿಕೆಗಳು ಚಾಲುಕ್ಯ ಶಿಲ್ಪಗಳ ಮತ್ತೊಂದು ವೈಶಿಷ್ಯ. ಇವು ಅಲೌಕಿಕ ಶಿಲ್ಪಗಳು.

8. ಸಂಯುಕ್ತ ಪ್ರತಿಮೆಗಳ ನಿರ್ಮಾಣದಲ್ಲಿ ಇವರು ಒಲವು ತೋರಿದ್ದಾರೆ. ಅರ್ಧನಾರೀಶ್ವರ ಮತ್ತು ಹರಿಹರ ಶಿಲ್ಪಗಳು ಒಂದಾಗಿರುವಂತೆ ತೋರಿಸಿದ್ದಾರೆ.

9. ಸಮಕಾಲೀನ, ಸಾಮಾಜಿಕ ಜೀವನದ ಚಿತ್ರಣ ಅಂದರೆ ಅವರ ಉಡುಗೆ, ತೊಡುಗೆ, ಕೇಶಾಲಂಕಾರ ವಿಧಗಳು, ಆಭರಣಗಳು, ಬಳಕೆ ವಸ್ತುಗಳು, ಶಯನ ಪೀಠೋಪಕರಣಗಳು, ಆಯುಧಗಳು ಮತ್ತು ನಿತ್ಯ ಜೀವನದ ಸುಖದುಃಖದ ಸನ್ನಿವೇಶಗಳು ಚಿತ್ರಿತವಾಗಿವೆ. (ಡಾ. ಶೀಲಕಾಂತ ಪತ್ತಾರ, ಬಾದಾಮಿ).

10. ತುಂಬಿದ ಗಲ್ಲಗಳ ದಂಡುಮುಖ, ಮೀನಿನ ಕಣ್ಣು, ಮುಗುಳ್ನಗೆ ಸೂಸುವ ದಪ್ಪ ತುಟಿಗಳು, ವಿಶಾಲವಾದಗಳನ್ನುಳ್ಳವುಗಳು.

ಇವರ ಶಿಲ್ಪಕಲೆಗಲ ಲಕ್ಷಣಗಳನ್ನು ವಿವರವಾಗಿ ನೋಡುವುದಾದರೆ ಇಲ್ಲಿನ ಗುಹೆಗಳ ಎತ್ತರದ ಗೋಡೆಗಳಲ್ಲಿ ಶೇಷಶಾಯಿಯಾದ ವಿಷ್ಣುವಿನ ಒಂದು ಮೂರ್ತಿಯಿದೆ. ಇವೆಲ್ಲ ಸುಮಾರು ಎಂಟು ಅಡಿ ಎತ್ತರದ ಕೆತ್ತನೆಗಳು, ಅವು ಗೋಡೆಗಳ ಮೇಲೆ ಕೆತ್ತಲಾಗಿದ್ದರೂ ಅವುಗಳಲ್ಲಿ ಉದ್ದ ಮತ್ತು ಅಗಲಗಳ ಜೊತೆಗೆ ಸಾಕಷ್ಟು ದಪ್ಪವನ್ನು ತೋರಿಸಿದ್ದಾರೆ. ಇಲ್ಲಿನ ವಿಷ್ಣು ವಿಗ್ರಹ ಇರಿಕೆ ಹಾಕಿಕೊಂಡ ಶೇಷನ ಮೇಲೆ ಗಂಭೀರವಾಗಿ ಕುಳಿತುಕೊಂಡ ಒಂದು ಮೂರ್ತಿಯಾಗಿದೆ. ಆತ ಎಷ್ಟೊಂದು ಸಮತೋಲನ ಬುದ್ಧಿಯವ, ಗಂಭೀರ ಭಾವದವ, ಸ್ವಸಂತುಷ್ಟ ಎಂಬ ಭಾವನೆ ನಮಗೆ ಉಂಟಾಗುತ್ತದೆ. ಇದಕ್ಕೆ ಪ್ರತಿಯಾಗಿ ಅದರ ಎದುರಿಗೆ ಕೆತ್ತಿರುವ ಇನ್ನೊಂದು ಶಿಲ್ಪ ಬಹುಭುಜಧಾರಿಯಾದ ತ್ರಿವಿಕ್ರಮನ ಮೂರ್ತಿ. ಬಲಿಚಕ್ರವರ್ತಿಯ ಅಹಂಕಾರವನ್ನು ತುಳಿದು ಗೆದ್ದಂತಹ ಭೀಷಣ ರೂಪ. ಆತ ನಿಂತ ಭಂಗಿ, ನಾಲ್ದೆಸೆಗೆ ಚಾಚಿದ ಅವನ ತೋಳುಗಳು ಅವನ ಉಗ್ರಸ್ವರೂಪವನ್ನು ತೋರಿಸುತ್ತವೆ. ಅವನ ಮಗ್ಗುಲಲ್ಲೇ ಅವನ ಕೋಪವನ್ನು ತಣಿಸಲು ಬಂದ ಅವನಿಗಿಂತ ಕಡಿಮೆ ಗಾತ್ರದ ಇತರ ಸ್ತ್ರೀ ಪುರುಷರು ನಿಂತಿದ್ದಾರೆ. ಅವರ ಮುಖಗಳಲ್ಲಿರುವ ಬೆರಗು, ವಿನಯ, ಭಕ್ತಿ ತುಂಬಾ ಸೊಗಸಾಗಿ ಕಾಣಿಸುತ್ತವೆ. ಇಲ್ಲಿನ ಇನ್ನೊಂದು ದೊಡ್ಡ ಶಿಲ್ಪ ನಾರಸಿಂಹನದು. ಆತ ದೈತ್ಯಗಾತ್ರದಲ್ಲಿ ನಿಂತಿದ್ದಾನೆ. ಇನ್ನೇನು ಹಿರಣ್ಯಕಶ್ಯಪು ರಾಕ್ಷಸನನ್ನು ಈ ಕ್ಷಣ ಕೊಲ್ಲಲ್ಲಿದ್ದಾನೆ. ನರಸಿಂಹನ ಅಪಾರ ಶಕ್ತಿ, ಉಗ್ರಸಿಂಹ ಮುಖ ನಮ್ಮಲ್ಲಿ ಭಯವನ್ನು ಮೂಡಿಸುತ್ತವೆ. ಒಂದೇ ವಿಷಯವನ್ನು ಐಹೊಳೆ, ಬಾದಾಮಿ, ಪಟ್ಟದಕಲ್ಲು ಈ ಮೂರು ಕಡೆಗಳಲ್ಲೂ ಹಲವಾರು ಶಿಲ್ಪಿಗಳು ಕೆತ್ತಿದ್ದುಂಟು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನರಸಿಂಹನನ್ನು ಚಿತ್ರಿಸಿದ್ದಾರೆ. ಈ ಸ್ಥಳಗಳ ದೊಡ್ಡ ಶಿಲ್ಪಗಳಲ್ಲಾಗಲೀ, ಸಣ್ಣ ಶಿಲ್ಪಗಳಲ್ಲಾಗಲೀ ಆಭರಣಗಳ ಹೊರೆಯನ್ನು ಹೊರಿಸಿ ಯಾವ ಮೂರ್ತಿಯ ಅಂದವನ್ನು, ಭಾವಭಂಗಿಯನ್ನು ಕೆಡಿಸಿದ್ದು ಕಂಡುಬರುವುದಿಲ್ಲ. ದುರ್ಗೆ, ಕಾಳಿಯರನ್ನು ತೋರಿಸುವಾಗಲೂ ಅವರ ಅಂಗವಿನ್ಯಾಸದಿಂದ ಮುಖಭಾವಗಳಿಂದ ಅವರೆಷ್ಟು ಉಗ್ರ ಸ್ವರೂಪಿಗಳೆಂಬುದನ್ನು ತೋರಿಸಿದ್ದಾರೆ.

ಐಹೊಳೆಯಲ್ಲಿ ಶಿವನನ್ನು ಹಲವಾರು ರೀತಿಗಳಲ್ಲಿ ತೋರಿಸಿದ್ದಾರೆ. ದುರ್ಗಾ ದೇವಾಲಯದ ಒಂದು ಶಿಲ್ಪದಲ್ಲಿ ನಂದಿಯ ಹಿಂದೆ ನಿಂತ ಶಿವ ಅತ್ಯಂತ ಸುಂದರವಾದ ಮೋಹಕ ರೂಪದ ಶಿವ, ಅವರ ಆಕಾರ ಅಷ್ಟೇ ಸರಳ, ಅಷ್ಟೇ ಸುಂದರ ಅವನ ಅಂಗಾಂಗದ ರೇಖೆಗಳನ್ನೂ ಅವನು ತೊಟ್ಟ

ಆಭರಣಗಳಿಗೂ ಮೈಮೇಲೆ ಹರಿಯುವ ಸರ್ಪದ ರೇಖೆಗಳಿಗೂ ಅಷ್ಟೊಂದು ಲಿಖಿತವಾದ ಹೊಂದಾಣಿಕೆ ಕಾಣಿಸುತ್ತದೆ.

ಇನ್ನೆರಡು ಶಿಲ್ಪಗಳಲ್ಲಿ ಇದೇ ಶಿವನು ನಂದಿ, ಪಾರ್ವತಿ ಮತ್ತು ಗಣಗಳ ಸಹಿತವಾಗಿ ಮದುವೆಯ ದಿಬ್ಬಣಿಗನಂತೆ ಹೊರಟಿದ್ದು ಕಾಣಿಸುತ್ತದೆ. ಇವನೂ ಚೆಲುವ ಶಿವನೇ. ಅವನೂ ಅವನ ಪರಿವಾರದವರೂ ಅಷ್ಟೊಂದು ಪರಸ್ಪರ ಮೇಳದಿಂದಿದ್ದು ನಮ್ಮಲ್ಲಿ ಉತ್ಸಾಹ ಮತ್ತು ಆನಂದ ಮೂಡಿಸುತ್ತಾರೆ. ಶಿವನು ನಟರಾಜನಾಗಿ ಇಲ್ಲಿನ ದೇಗುಲಗಳಲ್ಲಿ ಹಲವು ಕಡೆಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಅವು ಕೂಡ ಒಂದೊಂದು ಒಂದೊಂದು ರೀತಿಯಾಗಿವೆ. ಶಿವನ ತಾಂಡವ ನೃತ್ಯ ಎಷ್ಟೊಂದು ಓಜಸ್ವಿಯಾದದ್ದು, ಶಕ್ತಿಯುತವಾದದ್ದು, ಭೀಕರವಾದದ್ದು ಎಂದು ತೋರಿಸುತ್ತವೆ.

ಬಾದಾಮಿ ಮತ್ತು ಐಹೊಳೆಯ ದೇಗುಲಗಳಲ್ಲಿ ಗೋಡೆಗಳ ಅಲಂಕಾರಕ್ಕಾಗಿಯೂ ದೇವರ ಮೂರ್ತಿಗಳು ಚಿತ್ರಿತವಾಗಿವೆ. ಅವುಗಳಲ್ಲಿ ಭಿನ್ನ ಶೈಲಿಗಳನ್ನು ಕಾಣುತ್ತೇವೆ. ಅನೇಕ ಶಿಲ್ಪಗಳು ಸರಳವಾಗಿರುವಷ್ಟೇ ಸುಂದರವಾಗಿಯೂ ಇವೆ. ಸಣ್ಣ ಆಕೃತಿಗಳಲ್ಲೂ ಕೂಡ ಶಿಲ್ಪಕ್ಕೆ ಉಚಿತವಾದ ಮೇಳ, ಲಾಲಿತ್ಯಗಳು ಸೊಗಸಾಗಿ ಕಾಣಿಸುತ್ತವೆ. ದೇಗುಲಗಳ ಕಂಬಗಳ ಮೇಲೆ ಪ್ರಣಯಿ ಗಂಡು ಹೆಣ್ಣುಗಳನ್ನು ರೂಪಿಸಿದ್ದಾರೆ. ಇವು ಲೌಕಿಕ ಚಿತ್ರಗಳು ಅಂದರೆ ದೇವರದ್ದಲ್ಲ. ಪ್ರೇಮದಲ್ಲಿ ಬೆರೆತ ಗಂಡು ಹೆಣ್ಣುಗಳದ್ದು. ಕೆಲವು ಕಡೆ ಅದಕ್ಕೆ ಶಿವಪಾರ್ವತಿಯರನ್ನು ಉದಾಹರಿಸಿದ್ದಾರೆ. ಇವುಗಳಲ್ಲಿ ಕೆಲವು ತೀರ ಮೋಹಕವಾಗಿವೆ. ಕೆಲವು ತೀರ ಸಾಮಾನ್ಯವಾಗಿದೆ. ಇಲ್ಲಿನ ಗಂಗಾಧರಮೂರ್ತಿ ಆಗಮಶಾಸ್ತ್ರಗಳಲ್ಲಿನ ವಿವರಣೆಗಳಿಗಿಂತ ಭಿನ್ನವಾಗಿದೆ. ಜಟಾಮುಕುಟಧಾರಿಯಾದ ಶಿವನ ಮೂರನೆಯ ಕಣ್ಣು ಸ್ಪಷ್ಟವಾಗಿದೆ. ಕಿರೀಟದ ಮೇಲೆ ಬಹುಷಃ ಗಂಗಾ ಯಮುನಾ ಮತ್ತು ಸರಸ್ವತಿಯರು ಅಂಜಲಿಬದ್ಧರಾಗಿದ್ದಾರೆ. ಇಲ್ಲಿ ಕಂಡರಿಸಿರುವ ಸರಸ್ವತಿಯ ಶಿಲ್ಪ ಈ ಪರಿಸರದಲ್ಲಿ ಅಪರೂಪವಾಗಿ ಕಾಣಿಸಿಕೊಂಡಿರುವಂತಹುದು.

ಮೇಗುತಿ ಗುಡಿಯ ಆಚೆ ಬೃಹತ್ ಶಿಲಾಯುಗದ ಸಮಾಧಿಗಳನ್ನು ದಾಟಿದರೆ ವಿಸ್ತಾರವಾದ ಬಂಡೆಯೊಂದನ್ನು ಕೊರೆದು ಮಾಡಿದ ಜೈನ ಗುಹೆ ಕಾಣಿಸುತ್ತದೆ. ಇದರಲ್ಲೂ ಉತ್ತಮವಾದ ಶಿಲ್ಪಗಳಿವೆ. ಪಡಸಾಲೆಯ ಒಳಮಾಳಿಗೆಯಲ್ಲಿ ಮೊಸಳೆಯು ತನ್ನ ಕೋರೆ ಹಲ್ಲುಗಳಿಂದ ಮನುಷ್ಯನೊಬ್ಬನನ್ನು ಹಿಡಿದು ನುಂಗುವಂತೆ ಹಾಗೂ ಅದರ ಹಲ್ಲುಗಳನ್ನು ಮೀಟಿಕೊಂಡು ಆತ ಹೊರಗೆ

[illegible]

ಬರಲು ಯತ್ನಿಸುತ್ತಿರುವಂತೆ ರೂಪಿಸಲಾದ ಶಿಲ್ಪವೊಂದಿದೆ. ಮೊಸಳೆಯ ಕ್ರೌರ್ಯ ಮತ್ತು ಮನುಷ್ಯನ ಛಲದ ನಿರೂಪಣೆ ನಮ್ಮ ದೃಷ್ಟಿಯನ್ನು ಸೆಳೆಯುತ್ತದೆ. ಎಡಗಡೆ ಆಳೆತ್ತರದ ಬಾಹುಬಲಿಯ ಕಾರೋತ್ಸರ್ಗ ಭಂಗಿಯ ಶಿಲ್ಪವಿದೆ. ಇದರ ಎದುರಿನ ಗೋಡೆಯಲ್ಲಿ ಸುಪಾರ್ಶ್ವನಾಥನ ವಿಗ್ರಹ, ಗರ್ಭಗುಡಿಯಲ್ಲಿ ಮಹಾವೀರನ ವಿಗ್ರಹ ಈ ಜೈನ ಶಿಲ್ಪಗಳು ಪ್ರಾಚೀನವಾದವುಗಳೆನ್ನಬಹುದು.

ಬಾದಾಮಿಯಲ್ಲಿನ 4 ಗುಹೆಗಳನ್ನು ಶಿಲ್ಪಗಳ ಸಂಗ್ರಹಾಲಯಗಳೆಂದೇ ವರ್ಣಿಸಬಹುದು. ಮೊದಲನೆಯ ಶೈವಗುಹೆಯಲ್ಲಿ ಎಡಬದಿಗೆ ಹದಿನೆಂಟು ಕೈಗಳ ಭವ್ಯವಾದ ನಟರಾಜನ ಮೂರ್ತಿ ಇದೆ. ಹಾವು, ಡಮರು, ತಂತಿವಾದ್ಯ, ತ್ರಿಶೂಲ, ಪರಶು ಮುಂತಾದವುಗಳನ್ನು ಒಂದೊಂದು ಕೈಯಲ್ಲಿ ಹಿಡಿದಿರುವ ಈತ ಪೀಠದ ಮೇಲೆ ಬಲಗಾಲನ್ನು ಊರಿ, ಎಡಗಾಲಿನ ಹಿಮ್ಮಡಿಯನ್ನು ಮೇಲೆತ್ತಿ ಮೈಮಣಿಸಿ ನರ್ತಿಸುತ್ತಿದ್ದಾನೆ. ಈತನ ಎಡಗಡೆ ಗಣಪತಿ ಸಂತೋಷದಿಂದ ಕುಣಿಯುತ್ತಿರುವಂತಿದೆ. ಗಣಪತಿಯ ಹಿಂದೆ ಒಬ್ಬ ಮೃದಂಗ ಬಾರಿಸುತ್ತಾನೆ. ಆದರೆ ನಟರಾಜನ ಕೈಯಲ್ಲಿ ಸಾಮರಸ್ಯವಿಲ್ಲದಿರುವುದೊಂದು ಈ ಶಿಲ್ಪದ ಕುಂದು. ವೈಷ್ಣವ ಗುಹೆಯಲ್ಲಿ ಪ್ರತ್ಯಾಲೀಢ ಭಂಗಿಯಲ್ಲಿ ವರಾಹವತಾರದ ನಿರೂಪಣೆಯ ವಿಗ್ರಹವಿದೆ. ಇದು ಒಂದು ಭವ್ಯ ವಿಗ್ರವಾಗಿದೆ. ಪದ್ಮದ ಮೇಲೆ ಭೂದೇವಿ ವರಾಹನ ಮುಖಕ್ಕೆ ಒರಗಿ ನಿಂತಿದ್ದಾಳೆ. ವರಾಹದ ಒಂದು ಕೋರೆಹಲ್ಲು ಎದ್ದು ತೋರುತ್ತದೆ. ನಮಗೆ ಕಾಣಿಸುವುದು ಒಂದೇ ಕಿವಿ. ತಲೆ ಮೇಲೆ ಆಭರಣ ಖಚಿತ ಕಿರೀಟ.

ಜೈನಗುಹೆಯ ಗರ್ಭಗುಡಿಯಲ್ಲಿ ಹಿಂದಿನ ಗೋಡೆಯ ಮೇಲೆಯೇ ಕೆತ್ತಿದ ಸಿಂಹಪೀಠದ ಮೇಲೆ ಕುಳಿತ ಮಹಾವೀರನ ವಿಗ್ರಹವಿದೆ. ಗಂಧರ್ವರು ಈತನಿಗೆ ಚಾಮರಗಳಿಂದ ಬೀಸುತ್ತಿದ್ದಾರೆ. ತೀರ್ಥಂಕರನ ಮೇಲೆ ಮುಕ್ಕೊಡೆ. ಆದರೆ ಎಲ್ಲಾ ತೀರ್ಥಂಕರರೂ ಐಹಿಕ ಸುಖಗಳನ್ನು ತ್ಯಜಿಸಿದವರಾದ ಕಾರಣ ಮಹಾವೀರನು ದಿಂಬಿಗೆ ಒರಗಿ ಕುಳಿತಂತೆ ತೋರಿಸಿರುವುದು ವಿಪರ್ಯಾಸವಾಗಿ ಕಾಣುತ್ತದೆ. ಇದು ಜಿನಭಕ್ತನಾದ ಶಿಲ್ಪಿಯ ಊಹೆಯ ಪರಿಣಾಮವೆನ್ನಬಹುದು.

ಮಾಲಗಿತ್ತಿ ದೇವಾಲಯದ ಹೊರಗೋಡೆಗಳಲ್ಲಿ ಶಿವ ಹಾಗೂ ವಿಷ್ಣುಮೂರ್ತಿಗಳು ಕುಬ್ಜಾಕಾರದ ವಿಚಿತ್ರ ಭಂಗಗಳಲ್ಲಿನ ಮೂರ್ತಿಗಳು ಉಲ್ಲೇಖಾರ್ಹ. ದೇವಕೋಷ್ಠಗಳಲ್ಲಿ ಗೋವರ್ಧನ ಕೃಷ್ಣ, ಕಾಳಿಂಗಮರ್ಧನ ಮತ್ತು ಆರು ಕೈಗಳ ಉಗ್ರನರಸಿಂಹನ ಚೆಲುವಾದ ಮೂರ್ತಿಗಳಿವೆ.

ಕೊಂತಿಗುಡಿಯಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳನ್ನು ಕೆತ್ತಲಾಗಿದೆ. ಇವರಲ್ಲಿ ಅಗ್ನಿ, ಕುಬೇರ, ಇಂದ್ರ, ಈಶಾನರ ವಿಗ್ರಹಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಇನ್ನೂ ಮೂವರು ದಿಕ್ಪಾಲಕರ ವಿಗ್ರಹಗಳು ಭಿನ್ನವಾಗಿವೆ. ಶಿಲ್ಪಶಾಸ್ತ್ರದಲ್ಲಿ ಈ ದೇವತೆಗಳ ನಿಗಧಿಗೊಳಿಸಿದ ಸ್ಥಾನಗಳಿವೆ. ಆದರೆ ಇಲ್ಲಿ ಆ ಸ್ಥಾನಗಳು ಪಲ್ಲಟಗೊಂಡಿವೆ. ಮಧ್ಯದಲ್ಲಿ ಶಿವ ಅಥವಾ ವಿಷ್ಣು ಇರಬೇಕು. ಆದರೆ ಇಲ್ಲಿ ಬ್ರಹ್ಮನ ವಿಗ್ರಹವಿದೆ. ಕುಬೇರನ ಸ್ಥಾನದಲ್ಲಿ ಯಮನನ್ನು, ಯಮನ ಸ್ಥಾನದಲ್ಲಿ ಅಗ್ನಿಯನ್ನು, ಅಗ್ನಿಯ ಸ್ಥಾನದಲ್ಲಿ ಈಶಾನ ಮತ್ತು ಈಶಾನನ ಸ್ಥಾನದಲ್ಲಿ ಕುಬೇರನನ್ನು ಚಿತ್ರಿಸಲಾಗಿದೆ. ಇದರಿಂದ ಈ ಭಿತ್ತಿಯನ್ನು ಕೊರೆಯುವ ವೇಳೆಗೆ ಶಾಸ್ತ್ರ ಸಂಪ್ರದಾಯಗಳು ಸ್ಪಷ್ಟವಾಗಿ ಬೇರೂರಿರಲಿಲ್ಲವೆಂಬ ಊಹೆಯನ್ನು ಮಾಡಬೇಕಾಗುತ್ತದೆ. ಹುಚ್ಚಿಮಲ್ಲಿ ಗುಡಿಯ ಮುಖಮಂಟಪದ ಮಾಳಿಕೆಯಲ್ಲಿ ಕೆತ್ತಲಾದ ಕಾರ್ತಿಕೇಯ ವಿಗ್ರಹ ಸಮಕಾಲೀನ ಶಿಲ್ಪಗಳ ಅತ್ಯುತ್ತಮ ಮಾದರಿ ಸರಳವಾಗಿರುವ ಈ ಮೂರ್ತಿಯಲ್ಲಿ ದೇಹಶಕ್ತಿಗಿಂತ ದೈವೀಶಕ್ತಿ ಮತ್ತು ಕಳೆ ಎದ್ದು ಕಾಣುತ್ತದೆ. ಸಮತೋಲನವನ್ನು ಕಾದುಕೊಳ್ಳಲು ಇದಕ್ಕೆ ಗಂಧರ್ವ ಶಿಲ್ಪಗಳನ್ನು ಜೋಡಿಸಲಾಗಿದ್ದು ಮೂಲ ವಿಗ್ರಹದ ಗಾತ್ರದಷ್ಟೇ ಇವೂ ಇರುವುದರಿಂದ ಇದು ಮುಂದೆ ಶಿಲ್ಪದಲ್ಲಿ ಬೆಳೆದ ತಂತ್ರ ಇನ್ನೂ ಸ್ಥಿರವಾಗಿಲ್ಲದಿದ್ದ ಕಾಲವನ್ನು ಸೂಚಿಸುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ. ನವಿಲಿನ ಮೇಲೆ ಆಕಾಶದಲ್ಲಿ ಅನಾಯಸವಾಗಿ ಹಾರುತ್ತಿರುವ ದೇವ ಗಂಧರ್ವಾಧಿಗಳು ಕೆಳಗೆ ಮೌನವಾಗಿ, ನಿಶ್ಚಲವಾಗಿ ಜಡವಾಗಿ ಬಿದ್ದಿರುವ ರಾಕ್ಷಸ ಇವುಗಳ ಪರಸ್ಪರ ವಿರೋಧ ಭಾವಗಳನ್ನು ಪರಿಣಾಮಕಾರಿಯಾಗಿ ಒಂದೆಡೆಯೇ ಮೂಡಿಸಿರುವುದು ಶಿಲ್ಪಿಯ ಜಾಣ್ಮೆಯನ್ನು ತೋರಿಸುತ್ತದೆ. ಐಹೊಳೆಯಲ್ಲಿಯೇ ಅತ್ಯುತ್ತಮವಾದ ಹಲವಾರು ಮೂರ್ತಿಶಿಲ್ಪಗಳನ್ನು ನಾವು ದುರ್ಗ ಗುಡಿಯಲ್ಲಿ ಕಾಣಬಹುದು.

ಪಟ್ಟದಕಲ್ಲಿನ ದೇವಾಲಯಗಳಲ್ಲೂ ಮೂರ್ತಿಶಿಲ್ಪಗಳಿವೆ. ಸಂಗಮೇಶ್ವರಾಲಯದಲ್ಲಿ ಶಿವನಿಗೆ ಸಂಬಂಧಿಸಿದ ಉಬ್ಬು ಚಿತ್ರಗಳು ಅಧಿಕವಾಗಿವೆ. ಗಜಾಸುರ ಅಂಧಕಾಸುರ ವಧೆಗಳಿಗೆ ಸಂಬಂಧಿಸಿದವು ಹೆಚ್ಚು. ವಿರೂಪಾಕ್ಷ ದೇವಾಲಯದ ನಂದಿ ಮಂಟಪದಲ್ಲಿ ಎತ್ತರವಾದ ನಂದಿಯ ಭವ್ಯ ವಿಗ್ರಹವಿದೆ. ಈ ವಿಗ್ರಹವಿರುವ ಕಟ್ಟೆಯ ಬದಿಯಲ್ಲಿ ಆನೆಗಳ, ಕುಬ್ಜರ ಕಿರುಗಾತ್ರದ ವಿಗ್ರಹಗಳಿದ್ದು ಅವು ಈ ಮಂಟಪವನ್ನು ಹೊತ್ತು ನಿಂತಂತೆ ಭಾಸವಾಗುತ್ತದೆ. ಗೋಡೆಗಳ ಮೇಲೆ ಪ್ರಣಯಾಸಕ್ತ ದಂಪತಿಗಳ ಸ್ತ್ರೀಯರ, ಮೇಲ್ಭಾಗ ಮಾತ್ರ ಮಾನವಾಕೃತಿಯಲ್ಲಿದ್ದು ಕೆಳಭಾಗದಲ್ಲಿ ಪ್ರಾಣಿ ಅಥವಾ ಹೂಬಳ್ಳಿಯನ್ನು ತೋರಿಸಲಾದ ಕಿನ್ನರರ ಚಿತ್ರಗಳಿವೆ. ವಿವಿಧ ಭಂಗಿಗಳಲ್ಲಿನ ಈ ಸ್ತ್ರೀಯರ ಕೇಶಾಲಂಕಾರ,

ಹಾವಭಾವಗಳು ಆಕರ್ಷಕವಾಗಿವೆ. ಈ ಆಲಯದ ಮೂರು ಮುಖಮಂಟಪಗಳಲ್ಲೂ ಕಂಬದ ಮೇಲೆ ಪ್ರಣಯಾಸಕ್ತ ದಂಪತಿಗಳ ವಿಗ್ರಹಗಳಿವೆ.

ಒಟ್ಟಾರೆ ಚಾಲುಕ್ಯ ಶಿಲ್ಪಗಳ ಕೆಲವು ವಿಶಿಷ್ಟ ಲಕ್ಷಣಗಳನ್ನು ಗಮನಿಸಬಹುದು. ಸಾಮಾನ್ಯವಾಗಿ ಇವು ತುಂಬಿದ ಗಲ್ಲಗಳ ದುಂಡುಮುಖ, ಮೀನಿನ ಕಣ್ಣು, ಮುಗುಳಗೆ ಸೂಸುವ ದಪ್ಪ ತುಟಿಗಳು, ವಿಶಾಲವಾದ ಎದೆಗಳನ್ನುಳ್ಳವುಗಳು. ಅಲಂಕರಣ ಬಹಳ ಕಡಿಮೆ. ಆದರೆ ಶಿಲ್ಪಗಳಲ್ಲಿ ಭಾವಪ್ರದರ್ಶನ ಆಕರ್ಷಕ. ಪ್ರಣಯಾಸಕ್ತ ದಂಪತಿಗಳ ಶಿಲ್ಪಗಳಲ್ಲಿ ಹೆಣ್ಣಿನ ಸಹಜ ಸ್ನಿಗ್ಧ ಸೌಂದರ್ಯ, ನಾಚಿಕೆ, ಕೊಂಕು, ಬಳುಕು, ಬೆಡಗುಗಳು ಗಮನಾರ್ಹ. ಇವುಗಳಲ್ಲಿ ಭಿನ್ನತೆಗಳಿಲ್ಲದಿಲ್ಲ. ಸಮಕಾಲೀನ ದ್ರಾವಿಡ ಹಾಗೂ ಉತ್ತರಭಾರತದ ಅರಸು ಮನೆತನಗಳೊಡನಾದ ಸಂಪರ್ಕಗಳ ಪರಿಣಾಮವಾಗಿ ಅಲ್ಲಿನ ವಾಸ್ತು ಹಾಗೂ ಮೂರ್ತಿಗಳ ಶಿಲ್ಪಗಳ ಪ್ರಭಾವವು ಇವುಗಳ ಮೇಲೆ ಆಗಿವೆ. ಜೊತೆಗೆ ಹಲವಾರು ಕಲ್ಪನೆ, ಜಾಣ್ಮೆಗಳೂ ಸಹ ಭಿನ್ನತೆಗಳಿಗೆ ಕಾರಣಗಳು. ಈ ಶಿಲ್ಪಗಳಲ್ಲಿ ಗುಪ್ತರ ಶೈಲಿಯ ಪ್ರಭಾವ ಹೆಚ್ಚಾಗಿದೆ. ಗುಹೆಗಳಲ್ಲಿನ ಉಬ್ಬುಶಿಲ್ಪಗಳ ಬೃಹತ್ಪ್ರಮಾಣಗಳು ಶಿಲ್ಪಿಯ ಸಾಮರ್ಥ್ಯಕ್ಕೆ ಆಹ್ವಾನಗಳಂತಿದ್ದು ಅವುಗಳನ್ನು ರುವಾರಿಗಳು ಯಶಸ್ವಿಯಾಗಿ ಎದುರಿಸಿದ್ದಾರೆ. ಮೂಲವಿಗ್ರಹದ ಪ್ರಮಾಣಕ್ಕೆ ಹೋಲಿಸಿದರೆ ಅದರ ಪಕ್ಕಗಳಲ್ಲಿನ ಇತರ ದೇವತೆಗಳು ಅಲ್ಪವಾಗಿ ತೋರುತ್ತವೆ. ಆದರೆ ಅವುಗಳಲ್ಲಿಯೂ ಸರಳತೆ, ಸೌಖ್ಯ, ಸಂತೋಷ, ಹಾಸ್ಯಗಳು ಹೊಮ್ಮಿವೆ. ಮೂರ್ತಿಗಳ ಚಲನ ರೂವಾರಿಗಳ ಜಾಣ್ಮೆಯ ಸಂಕೇತ ಇಲ್ಲಿ ಗಮನಿಸಬೇಕಾದರೆ ಪ್ರಮುಖ ಅಂಶವೆಂದರೆ ದ್ರಾವಿಡ ಶೈಲಿಯು ಉಗಮಹೊಂದಿದ್ದು ಐಹೊಳೆಯಲ್ಲಿಯೇ ನಂತರ ಇದನು ತಂಜಾವೂರಿನ ಬೃಹದೇಶ್ವರನ ದೇವಾಲಯದಲ್ಲಿ ಬಳಸಲಾಯಿತು. ಅಂದಿನಿಂದ ದ್ರಾವಿಡ ಶೈಲಿಯ ಉಗಮ ತಮಿಳುನಾಡಿನಲ್ಲಿ ಆಯಿತೆಂದು ಓದಲಾಗುತ್ತಿದೆ. ಆದರೆ ನಿಜವಾದ ಉಗಮಸ್ಥಾನ ಕರ್ನಾಟಕವೆಂಬುದನ್ನು ವಿದ್ವಾಂಸರು ಗಮನಿಸದಿರುವುದು ವಿಪರ್ಯಾಸಕರ ಸಂಗತಿ. ಹಾಗೆಯೇ ಇವರ ವಿಶಿಷ್ಟ ಶೈಲಿಯನ್ನು ಚಾಲುಕ್ಯ ಶೈಲಿಯೆಂದು ಕರೆಯುವುದು ಜಾರಿಗೆ ಬಂದಿತು.

ಈ ಶಿಲ್ಪ ಕಲೆಯನ್ನು ಪ್ರಮುಖವಾಗಿ 2 ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಅ) ಧಾರ್ಮಿಕ ಶಿಲ್ಪಗಳು ಮತ್ತು ಆ) ಲೌಕಿಕ ಶಿಲ್ಪಗಳು (Srinivas V. Padagar, Vishnu Cult in Karnataka)

ಅ) ಧಾರ್ಮಿಕ ಶಿಲ್ಪಗಳು :

ಧಾರ್ಮಿಕ ಶಿಲ್ಪಗಳು ಬಾದಾಮಿಯ ಶಿಲ್ಪಕಲೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಈ ಧಾರ್ಮಿಕ ಶಿಲ್ಪಗಳನ್ನು ಅವುಗಳ ಕೆಲವು ಲಕ್ಷಣಗಳಿಗನುಗುಣವಾಗಿ 5 ಭಾಗಗಳಾಗಿ ವಿಭಾಗಿಸಲಾಗಿದೆ. ಅವುಗಳನ್ನು ಒಂದೊಂದಾಗಿ ತಿಳಿಯೋಣ.

1. ವೈಷ್ಣವ ಶಿಲ್ಪಗಳು :

ವಿಷ್ಣು :

ಚಾಲುಕ್ಯರ ಕಾಲದ ಅತ್ಯಂತ ಭವ್ಯವಾದ ಮತ್ತು ಸುಂದರವಾದ ವಿಷ್ಣು ಶಿಲ್ಪವೆಂದರೆ ಮಹಾವಿಷ್ಣುಗೃಹ'ದ ಮೊಗಸಾಲೆಯಲ್ಲಿಯ ಶೇಷಾಸೀನ ವಿಷ್ಣು, ಸುತ್ತಿಕೊಂಡ ಸರ್ಪದ ದೇಹ ಆತನ ಪೀಠವಾದ ಸರ್ಪದ ಹೆಡೆಗೆ ಸುಖಾಸೀನ ಚತುರ್ಭುಜ ವಿಷ್ಣುವಿನ ಕೊಡೆಯಾಗಿದೆ. ವಿಷ್ಣು ಕುಳಿತಿರುವ ರೀತಿ ಬಹಳ ಅಪರೂಪದ್ದು. ಆತನ ಮುಖದಲ್ಲಿ ರಾಜಗಾಂಭೀರ್ಯವಿದೆ. ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರಗಳಿವೆ. ಕೆಳಗಿನ ಬಲಗೈಯಲ್ಲಿ ಫಲವಿದೆ. ಇನ್ನೊಂದು ಎಡಗೈ ತೊಡೆಯ ಮೇಲೂ ಇವೆ. ಆತನ ಎಡೆ, ಬಲಕ್ಕೆ ಇರುವ ಲಕ್ಷ್ಮಿ ಹಾಗೂ ಗರುಡನ ಶಿಲ್ಪಗಳು ಒಟ್ಟಾರೆ ಶಿಲ್ಪದ ಕಲಾ ಸಮತೋಲನವನ್ನು ಕಾಯುವಲ್ಲಿ ಹಾಗೂ ಶಿಲ್ಪವನ್ನು ಸಂಯೋಜಿಸುವಲ್ಲಿ ನೇರವಾಗಿದೆ.

ಮಾಲೆಗಿತ್ತಿ ಶಿವಾಲಯದ ಉತ್ತರ ಗೋಡೆಯಲ್ಲಿ ಚತುರ್ಭುಜ ವಿಷ್ಣುವಿನ ಶಿಲ್ಪವು ಉಲ್ಲೇಖಾರ್ಹವಾದುದು. ಕಿರೀಟದ ಆಭರಣಗಳಿಂದ ಭೂಷಿತವಾಗಿದ್ದು, ಹಿಂದೆ ಪ್ರಭಾಮಂಡಲವಿದೆ. ವಿಷ್ಣುವಿನ ಬಲಬದಿಯಲ್ಲಿ ಗದಾಕಾರ್ಮೊದಕಿ ನಿಂತಿದ್ದಾಳೆ. ಮಹಾವಿಷ್ಣುಗೃಹದ ಪೂರ್ವದ ಗೋಡೆಯ ಮೇಲೆ ಅಷ್ಟಭುಜ ವಿಷ್ಣು ಸಮಪಾದದಲ್ಲಿ ನಿಂತಿದ್ದು, ವಿವಿಧ ಬಗೆಯ ಆಯುಧಗಳನ್ನು ಹಿಡಿದುಕೊಂಡಿದ್ದಾನೆ. ಇದರ ಎತ್ತರ ಸುಮಾರು 12 ಅಡಿ. ಕಿರೀಟದ ಮೇಲೆ ನರಸಿಂಹ ಶಿಲ್ಪವಿರುವುದು ಒಂದು ವಿಶೇಷ ಲಕ್ಷಣ. ಇಲ್ಲಿನ ವಿಷ್ಣುವಿನ ಶಿಲ್ಪದಲ್ಲಿನ ಹುಬ್ಬು, ಗಲ್ಲ, ಗದ್ದಗಳು ಎದ್ದು ಕಾಣುತ್ತವೆ. ಇದು ತನ್ನ ಹಲವು ಲಕ್ಷಣಗಳಿಂದ ಉಳಿದ ಶಿಲ್ಪಗಳಿಗಿಂತ ವಿಭಿನ್ನವೆನಿಸುತ್ತದೆ. ಲಿಪ್ಪೆ ಎಂಬ ವಿಧ್ವಾಂಸರು ಈ ಶಿಲ್ಪವು ನಂತರದ ಸೇರ್ಪಡೆ ಎಂದು ತರ್ಕಿಸಿದ್ದಾರೆ. ಈ ಭವ್ಯ (Cave Temples of the Deccan, 1981) ಮೂರ್ತಿಯು ಯಾವುದೇ ಪೀಠವಿಲ್ಲದೇ ನಿಂತಿರುವುದೊಂದು ಇದರ ವಿಶೇಷ.

ವಿಷ್ಣು ಅಷ್ಟಭುಜಗಳನ್ನು ಹೊಂದಿರುವುದು ಚಾಲುಕ್ಯ ಶಿಲ್ಪ ಲಕ್ಷಣವಲ್ಲವೆಂದು ತಿಳಿದು ಇದು ಪಲ್ಲವ ಆಡಳಿತದಲ್ಲಿ ಆದ ಸೇರ್ಪಡೆ ಎಂದು ಸೌಂದರ ರಾಜನ್‌ರವರು ಭಾವಿಸುತ್ತಾರೆ. ಹೊಸ ಮಹಾಕೂಟದ ಅಡಕೇಶ್ವರ ದೇವಾಲಯದ ಸಭಾಮಂಟಪದಲ್ಲಿ ಇರಿಸಲಾದ ವಿಷ್ಣು ವಿಗ್ರಹವು ಈ ಅವಧಿಯದೇ. ವಿಷ್ಣುವಿನ ಪ್ರಭಾವಳಿಯ ಮೇಲೆ ನರಸಿಂಹ, ಭೂವರಾಹ ಮೊದಲಾದ ಶಿಲ್ಪಗಳಿವೆ. ದಶಾವತಾರ ಚಿತ್ರಣವು ರಾಷ್ಟ್ರಕೂಟರ ಕಾಲದಲ್ಲಿ ಹೆಚ್ಚು ಜನಪ್ರಿಯವಾಗಿರುವುದು ಕಂಡುಬರುತ್ತದೆ.[2]

ವೈಷ್ಣವ ಶಿಲ್ಪ

ಬ್ರಹ್ಮ :

ಮಹಾವಿಷ್ಣುಗೃಹದ ಮಂಟಪದ ಛತ್ತಿನಲ್ಲಿ ಮಧ್ಯಭಾಗದಲ್ಲಿ ಚತುರ್ಭುಜ ಬ್ರಹ್ಮನ ಶಿಲ್ಪವನ್ನು ಕಂಡರಿಸಲಾಗಿದೆ. ದೇವನು ಕಮಂಡಲ, ಅಕ್ಷಮಾಲಾ ಮತ್ತು ಯಜ್ಞದ ಉದ್ಧರಣೆಯನ್ನು ಹಿಡಿದುಕೊಂಡು ಹಂಸದ ಮೇಲೆ ಆಸೀನನಾಗಿದ್ದಾನೆ. ಇಂಥವೇ ಶಿಲ್ಪವಿನ್ಯಾಸವಿರುವ ಇನ್ನೊಂದು ಬ್ರಹ್ಮ ಶಿಲ್ಪವು ಮೊಗಸಾಲೆಯ ಛತ್ತಿನ ಮೇಲೆ ಕೆತ್ತನೆಗೊಂಡಿದೆ. ಇವೆರಡೂ ಉತ್ತಮ ಕಲಾಕೃತಿಗಳು, ಜಂಬುಲಿಂಗ ದೇವಾಲಯದ ಮಂಟಪದ ಮಧ್ಯದ ಅಂಕಣವನ್ನು ಬ್ರಹ್ಮನ ವೃತ್ತಾಕಾರದ ಉಬ್ಬು ಶಿಲ್ಪವಿದೆ.

ನಾಗನಾಥ ದೇವಾಲಯದಲ್ಲಿಯೂ ಛತ್ತಿನ ಮಧ್ಯೆ ಅಂಕಣದಲ್ಲಿ ಬ್ರಹ್ಮನ ಶಿಲ್ಪವನ್ನು ಕೆತ್ತಲಾಗಿದೆ. ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಛತ್ತಿನ ಮೇಲಿರುವ ಬ್ರಹ್ಮನು ಚತುರ್ಭುಜನಾಗಿದ್ದು, ಕಮಲದ ಮೇಲೆ ಆಸೀನನಾಗಿದ್ದಾನೆ. ಮೇಲಿನ ಬಲಗೈಯಲ್ಲಿ ಅಕ್ಷ ಮಾಲೆ ಇದೆ. ಒಂದು ಕೈ ಅಭಯ ಮುದ್ರೆಯಲ್ಲಿದೆ. ಸ್ಥಾನಕ ಬ್ರಹ್ಮನು ಮಹಾಕೂಟ ದೇವಾಲಯದ ಗೋಡೆಯ ಮೇಲೆ ಕಾಣಸಿಗುತ್ತಾನೆ. ಹೀಗೆ ಬ್ರಹ್ಮ ಶಿಲ್ಪಗಳ ಅಭಿವ್ಯಕ್ತಿಯಲ್ಲಿ ವೈವಿಧ್ಯವನ್ನು ಕಾಣುತ್ತೇವೆ.

ವರಾಹ :

ಎರಡು ಹಾಗೂ ಮೂರನೆಯ ಗುಹೆಗಳಲ್ಲಿ ವರಾಹ ಶಿಲ್ಪವನ್ನು ನಾವು ಕಾಣಬಹುದು. ಎರಡು ಶಿಲ್ಪಗಳಲ್ಲಿ ವರಾಹನು ಪ್ರತ್ಯಾಲೀಢ ಭಂಗಿಯಲ್ಲಿ ನಿಂತು ಭೂದೇವಿಯನ್ನು ಎತ್ತುತ್ತಿರುವಂತೆ ಕಂಡುಬರುತ್ತಾನೆ. ಆತನ ಕಾಲಿನ ಕೆಳಗೆ ನಾಗರಾಜ, ನಾಗರಾಣಿಯರನ್ನ ಹಾಗೂ ಮೇಲ್ಭಾಗದಲ್ಲಿ

[2] Srinivas Padegar, Vishnu Culture in Karnataka.

ಗಂಧರ್ವ ದಂಪತಿಗಳನ್ನು ಶಿಲ್ಪ ಸಂಯೋಜನೆ ಹಾಗೂ ಸಮತೋಲನಕ್ಕಾಗಿ ಬಳಸಲಾಗ್ಗಿದೆ. ಎರಡನೆಯ ಗುಹೆಯ ವಿರಾಹ ಹೆಚ್ಚು ಬಾಗಿದ್ದಾನೆ. ಆತನು ಹಿಡಿದ ಕಮಲದ ಮೇಲೆ ಭೂದೇವಿ ವರಾಹನ ಮುಖದ ಕಡೆಗೆ ಬಾಗಿದ್ದಾಳೆ. ಅವಳ ಬಲಗೈ ಕೋರೆಯ ಮೇಲಿದೆ. ಎರಡನೆಯ ಗುಹೆಯ ವರಾಹನು ಭೂದೇವಿಯನ್ನು ಎತ್ತುವ ಪ್ರಕ್ರಿಯೆಯಲ್ಲಿದ್ದಂತೆ ತೋರುತ್ತದೆ. ಮಹಾಕೂಟದ ಮಹಾಲಿಂಗ ದೇವಾಲಯದಲ್ಲಿಯ ವರಾಹನು ತನ್ನ ಮೊಳಕೈಯ ತುದಿಯ ಮೇಲೆ ಭೂದೇವಿಯನ್ನು ಕೂರಿಸಿಕೊಂಡು ಪಾತಾಳದಿಂದ ಹಾರಿ ಹೋಗುತ್ತಿರುವಂತೆ ಕೆತ್ತಲಾಗಿದೆ. 'ಮಹಾವಿಷ್ಣು ಗೃಹ'ದ ನಾಗರಾಜ ಸುತ್ತಿದ ಸುರುಳಿಯ ಮೇಲೆ ವರಾಹನ ಎಡಗಾಲಿನ ಮಹಾಕೂಟದ ಶಿಲ್ಪದಲ್ಲಿ ಆತನು ಅನೇಕ ಸುರುಳಿಗಳಾಗಿ ಮುದುಡಿಕೊಂಡು ಬಾಗಿದ್ದಾನೆ. ಆತನ ತಲೆಯ ಮೇಲೆ ವರಾಹ ಕಾಲಿರಿಸಿದ್ದಾನೆ.

ಮಹಾವಿಷ್ಣುವಿನ ವಿಗ್ರಹದ ಎಡಕ್ಕೆ ಉತ್ತರಾಭಿಮುಖವಾಗಿ ನರವರಾಹಮೂರ್ತಿ ಇದೆ. ಎರಡನೇ ಗುಹೆಯಲ್ಲಿರುವ ಮೂರ್ತಿಗಿಂತ ಇದ್ದು ದೊಡ್ಡದಾಗಿದೆ. ಇದರ ಎತ್ತರ 258 ಸೆಂ.ಮೀ. ಈ ಮೂರ್ತಿ ಕೂಡ ಪ್ರತ್ಯಾಲೀಢ ಭಂಗಿಯಲ್ಲಿದೆ. ಈ ವರಾಹನು ತನ್ನ ಬಲಗಾಲು ನೆಲದ ಮೇಲೂ, ಎಡಗಾಲನ್ನು ಸರ್ಪದ ಮೇಲೂ ಇರಿಸಿದ್ದಾನೆ. ಕೈಗಳಲ್ಲಿ ಶಂಖ-ಚಕ್ರ ಇವೆ. ಚಾಮರ ಬೀಸುವ ನಾಗಿಣಿಯರು ಐದು ಹೆಡೆಯ ನಾಗರ ಮತ್ತು ಗಂಧರ್ವ ಜೋಡಿಗಳು ಬದಿಗಿದ್ದಾರೆ. ಇದೊಂದು ಬಗೆಯ ಕಾಲಿಯಾ ವರ್ಮನ ''ವರಾಹ ರೂಪ' ಎನ್ನಬಹುದು. ಹೀಗೆ ವರಾಹ ಶಿಲ್ಪ ನಿರ್ಮಿತಿಯಲ್ಲಿ ಸಂಕೀರ್ಣತೆ, ಪಕ್ವತೆ ಹೆಚ್ಚುತ್ತಾ ಬಂದಿರುವುದನ್ನು ಕಾಣಬಹುದು. (ಶೀಲಕಾಂತ ಪತ್ತಾರ, ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ).

ನರಸಿಂಹ :

ಮೇಲಣ ಶಿವಾಲಯದ ಉತ್ತರ ಗೋಡೆಯ ಶಿಲ್ಪವೇ ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವುದು. ಅಷ್ಟಭುಜ ನರಸಿಂಹನು ತೊಡೆಯ ಮೇಲೆ ಅಸುರನನ್ನು ಇಟ್ಟುಕೊಂಡು ಆತನ ಹೊಟ್ಟೆಯನ್ನು ಸೀಳುತ್ತಿದ್ದಾನೆ. (ಪರ್ಸಿ ಫ್ರಾನ್, ಟೆಂಪಲ್ ಆರ್ಕಿಟೆಕ್ಚರ್).

ಮಹಾಕೂಟದ ಮಲ್ಲಿಕಾರ್ಜುನ ದೇವಾಲಯದ ಉತ್ತರ ಹೊರ ಕೋಷ್ಠಕದಲ್ಲಿರುವ ಅಷ್ಟಭುಜ ಉಗ್ರನರಸಿಂಹನು ನಿಂತುಕೊಂಡೆ ಅಸುರನನ್ನು ತೊಡೆಯ ಮಟ್ಟಕ್ಕೆ ಹಿಡಿದು ಹೊಟ್ಟೆಯಿಂದ ಕರುಳನ್ನು

ಇರಿಯುವ ದೃಶ್ಯ ಅಪರೂಪದ್ದಾಗಿದೆ. ಅದ್ಭುತವೂ ಆಗಿದೆ. ಪಕ್ಕದ ಮಹಾಲಿಂಗ ದೇವಾಲಯದ ಉತ್ತರ ಗೋಡೆಯ ಮೇಲೆ ನಾಲ್ಕು ಕೈಗಳ ಉಗ್ರನರಸಿಂಹನ ಕೆತ್ತನೆ ಇದೆ.

ಕೈಸಾಲೆಯ ಪಶ್ಚಿಮ ಗೋಡೆಯ ಬಳಿ ತುದಿಗೆ ಅದ್ಭುತಭಂಗಿಯ ವಿಜಯನರಸಿಂಹ ಇದ್ದಾನೆ. ವಿಗ್ರಹದ ಎತ್ತರ 330 ಸೆಂ.ಮಿ. ಈ ನರಸಿಂಹ ಮುರ್ತಿಯ ಕಲ್ಪನೆ ಸ್ವಲ್ಪ ಬೇರೆಯಾಗಿದೆ. ಏಕೆಂದರೆ ಇವನು ಉಗ್ರನರಸಿಂಹನಲ್ಲ. ಹಿರಣ್ಯ ಕಶಿಪುವಿನ ಸಂಹಾರದ ನಂತರ ಭಕ್ತರೆಲ್ಲರನ್ನೂ ಅನುಗ್ರಹಿಸಿದ ನರಸಿಂಹ. ಈ ಮುಗುಳ್ನಗೆಯಿಂದ ಕೂಡಿದೆ. ನರಸಿಂಹ ವಿಗ್ರಹಕ್ಕೆ ಚತುರ್ಭುಜಗಳಿದ್ದು, ಎಡಭಾಗದ ಕೆಳಗೈಯನ್ನು ಗದೆಯ ಮೇಲೆ ಊರಿದ್ದು ಈ ಗದೆ ನೀಲ ಮುಟ್ಟಿದ ಢಾಲು ಮತ್ತು ಕಮಲದ ಹೂ ಇತರ ಕೈಗಳಲ್ಲಿವೆ. ಈ ವಿಜಯ ನರಸಿಂಹನ ವಿಶೇಷತೆಯೆಂದರೆ, ತಲೆಯ ಸಿಂಹನ ಆಕಾರದಲ್ಲಿರುವುದು.

ಮಹಾವಿಷ್ಣು ಗುಹೆಯ ಪಶ್ಚಿಮ ಗೋಡೆಯ ಮೇಲೆ ಬೃಹದಾಕಾರದ ಚತುರ್ಭುಜ ನರಸಿಂಹನ ಶಿಲ್ಪವನ್ನು ಕೆತ್ತಲಾಗಿದೆ. ದೇವನು ವೀರಸಾನಕ ರೂಪದಲ್ಲಿದ್ದಾನೆ. ಮೇಲಿನ ಕೈಗಳಲ್ಲಿ ಆಯುಧ ದೇವತೆಗಳು ಶಿಲ್ಪಿತರಾಗಿದ್ದಾರೆ. ನರಸಿಂಹನ ತಲೆಯ ಮೇಲೆ ಅರಳಿದ ಕಮಲವಿರುವುದು ಒಂದು ವಿಶೇಷ ಲಕ್ಷಣವಾಗಿದೆ. ಯೋಗ ಚಕ್ರಗಳಲ್ಲಿ ಕೊನೆಯದು ಸಹಸ್ರಾರ ಕಮಲ ಅದರ ತಲೆಯ ಭಾಗದಲ್ಲಿದೆ. ನರಸಿಂಹನು ಸ್ಥಾನಿಕವಾಗಿರುವುದರಿಂದ ಗೋಡೆಯ ನಾಲ್ಕು ಮೂಲೆಗಳಲ್ಲಿ ಸ್ಥಳಾವಕಾಶವುಂಟಾಗಿದೆ. ಮೇಲ್ಭಾಗದಲ್ಲಿ ವಿದ್ಯಾಧರ ದಂಪತಿಗಳು, ಹಾಗೂ ಕೆಳಭಾಗದಲ್ಲಿ ಪ್ರಹ್ಲಾದ ಮತ್ತು ಮಾನವರೂಪಿ ಗರುಡನನ್ನು ಕಾಣಬಹುದು.

ತ್ರಿವಿಕ್ರಮ :'

ಮೂರನೆಯ ಗುಹೆಯ ಪಶ್ಚಿಮ ಗೋಡೆಯ ಮೇಲಿರುವುದು ಅತ್ಯುತ್ತಮ ಸ್ಥಿತಿಯನ್ನು ಮೆರೆಯುತ್ತಿರುವ ತ್ರಿವಿಕ್ರಮ. ಈ ಮೂರ್ತಿಯ ಎತ್ತರ 340 ಸೆಂ.ಮಿ. ಆಕಾರದಲ್ಲೂ, ಭಾವದಲ್ಲೂ ಭವ್ಯತೆಯಿಂದ ಕೂಡಿದ ವಿಗ್ರಹವಿದು. ಎರಡನೆಯ ಗುಹೆಯಲ್ಲಿ ರೂಪಿಸಲಾದ ವಾಮನವತಾರದ ಕಥೆಯನ್ನು ಇಲ್ಲಿ ಮತ್ತಷ್ಟು ಭಾವಪೂರ್ಣ ಮತ್ತು ವೈವಿಧ್ಯಮಯವಾಗಿ ರಚಿಸಲಾಗಿದೆ. ಬಾಣ, ಗದೆ, ಶಂಖ, ಚಕ್ರಗಳನ್ನು ಹಿಡಿದ ಮತ್ತು ಆಕಾಶದತ್ತ ಎಡಗೈಯನ್ನು ಚಾಚಿದ ತ್ರಿವಿಕ್ರಮನಿದ್ದಾನೆ. ಒಂದು ಪಾದದಿಂದ ಭೂಮಿಯನ್ನು, ಇನ್ನೊಂದು ಪಾದದಿಂದ ಆಕಾಶವನ್ನು ಆಕ್ರಮಿಸಿದ ನಿಲುವು ಈ

ಮೂರ್ತಿಯದು. ಒಂದು ಮೂಲೆಯಲ್ಲಿ ಸೂರ್ಯ ಚಂದ್ರರು ಇರುವರು. ಶುಕ್ರಾಚಾರ್ಯ, ಬಲಿಚಕ್ರವರ್ತಿ ಮತ್ತು ಅವನ ಹೆಂಡತಿ, ತ್ರಿವಿಕ್ರಮನನ್ನು ಎಳೆಯಲು ಪ್ರಯತ್ನಿಸುತ್ತಿರುವ ಒಬ್ಬ ರಾಕ್ಷಸ ಇವರೆಲ್ಲರ ಚಿತ್ರಣವಿದೆ. ಒಟ್ಟಾರೆ ತ್ರಿವಿಕ್ರಮನ ಮೂರ್ತಿಯ ಭವ್ಯ ಹಾಗೂ ನಯನ ಮನೋಹರವಾಗಿದೆ.

ವಿಷ್ಣುವು ಪುಟ್ಟ ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದು ಬಲಿ ಚಕ್ರವರ್ತಿಯನ್ನು ಸಂಹರಿಸಿದ ಕತೆ ಪ್ರಸಿದ್ಧಿ. ಎರಡು ಮತ್ತು ಮೂರನೆಯ ಗುಹಾಲಯಗಳಲ್ಲಿ ತ್ರಿವಿಕ್ರಮನ 2 ಶಿಲ್ಪಗಳಿವೆ. ಇವೆರಡರ ಕಥಾ ವಸ್ತು ಒಂದೇ ಆದರೂ ಅವುಗಳ ಲಕ್ಷಣಗಳಲ್ಲಿ ಭಿನ್ನತೆ ಇದೆ. ಈ ಶಿಲ್ಪಗಳು ವಾಮಸಿನ ಕಥೆಯ ಸ್ಪಷ್ಟವಾದ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಆ ಕಥೆಯ ಒಂದು ಸನ್ನಿವೇಶವಾದ ವಾಮನ ರೂಪಿ ವಿಷ್ಣುವಿಗೆ ಬಲಿಯು ಶುಕ್ರಾಚಾರ್ಯರ ಸಮ್ಮುಖದಲ್ಲಿ ಅರ್ಘ್ಯ ನೀಡುತ್ತಿರುವ ದೃಶ್ಯವನ್ನು ಮನವೋಹಕವಾಗಿ ಕೆತ್ತಲಾಗಿದೆ.

ರಾಮ :

ಚಾಲುಕ್ಯರ ಗುಹಾಲಯಗಳಲ್ಲಿ ಮತ್ತು ರಾಚನಿಕ ಮಂದಿರಗಲಲ್ಲಿ ರಾಮಾವತಾರದ ಪ್ರತ್ಯೇಕವಾದ ಬೃಹತ್ ಶಿಲ್ಪವಿಲ್ಲವಾದರೂ ರಾಮನು ಕಾಣಿಸಿಕೊಳ್ಳುವುದು ಕಥಾನಕ ಶಿಲ್ಪಗಲಲ್ಲಿ. ಮೇಲಣ ಶಿವಾಲಯದ ದಕ್ಷಿಣ ಭಾಗದ ಅಧಿಷ್ಠಾನ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಮಂಟಪದ ಕಂಬಗಳು, ಪಾಪನಾಥ ಗುಡಿಯ ಹೊರಗೋಡೆಗಳು ಮತ್ತು ಐಹೊಳೆಯ ದುರ್ಗ ದೇವಾಲಯದ ಒಳ ಅಧಿಷ್ಠಾನ ಇವುಗಳು ರಾಮಾಯಣದ ಕಥಾನಕ ಶಿಲ್ಪಗಳಿಂದ ಅಲಂಕೃತವಾಗಿವೆ.

ಕೃಷ್ಣ :

ಮೇಲಣ ಶಿವಾಲಯದ ಗೋವರ್ಧನ ಗಿರಿಧಾರಿಯ ಶಿಲ್ಪವು ಅತ್ಯಂತ ಗಮನಾರ್ಹ ಕೃಷ್ಣನ ಶಿಲ್ಪವಾಗಿದೆ. ಇದರ ಮೇಲ್ಭಾಗ ಹಾಗೂ ಕೆಳಭಾಗದ ಜಾಗವು ಶಿಲ್ಪವಿಲ್ಲದೆ ಖಾಲಿಯಾಗಿದೆ. ಕೃಷ್ಣನ ಎಡಗೈ ಬೆರಳುಗಳು ಪ್ರಮಾಣ ಮೀರಿ ದೊಡ್ಡದಾಗಿವೆ. ಎರಡು ಬಾಹುಗಳನ್ನೊಂದಿರುವ ಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿಹಿಡಿದಿದ್ದಾನೆ. ಆತನು ಸುಂದರವಾದ ಉಡುಪು ಹಾಗೂ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಪರ್ವತದ ಕೆಳಗೆ ಸ್ತ್ರಿಯೊಬ್ಬಳು ಬೆಣ್ಣೆ ಕಡೆಯುವ ದೃಶ್ಯವಿದೆ. ಇದರಿಂದ ಕೃಷ್ಣನು ಪರ್ವತವನ್ನು ಎತ್ತಿಹಿಡಿದು ಒಂದೆರಡು ದಿನಗಳಾದರೂ ಕಳೆದಿರಬಹುದೆಂದು

ತಿಳಿಯಬಹುದು. ಭಾಗವತ ಪುರಾಣದಲ್ಲಿ ಆತನು ವಾರವಿಡೀ ಗಿರಿಯನ್ನು ಎತ್ತಿ ಹಿಡಿದನೆಂದು ಹೇಳಲಾಗಿದೆ.

ಹೀಗೆ ಶಿಲ್ಪದಲ್ಲಿ ಕಲಾವಿದರು ಸಮಯವನ್ನು ಸೂಚಿಸಿದ ತಂತ್ರ ಗಮನಾರ್ಹವಾದುದು. ಈ ದೇವಾಲಯದ ಪಶ್ಚಿಮ ಗೋಡೆಯಲ್ಲಿ ಕಾಲೀಯ ದಮನ ಮಾಡುತ್ತಿರುವ ಕೃಷ್ಣನ ಶಿಲ್ಪವಿದೆ. ಮಹಾಕೂಟದಲ್ಲಿ ಮಧ್ಯಮಗಾತ್ರದ ಬಿಡಿಶಿಲ್ಪವೊಂದು ವೇಣುಗೋಪಾಲನದಾಗಿದ್ದು ಇದು ದುಂಡು ಶಿಲ್ಪವಾಗಿದೆ.

ಎರಡನೆಯ ಗುಹಾಲಯದ ತೊಲೆಯ ಮೇಲೆ ಮೂರು ಶಿಲ್ಪ ಪಟ್ಟಿಕೆಗಳು ಕೃಷ್ಣನ ಜನನ ಮತ್ತು ಕಂಸನ ಮರಣ ಕುರಿತು ಇವೆ. ಮೂರನೆಯ ಗುಹೆಯ ಹದಿನಾರು ಶಿಲ್ಪಪಟ್ಟಿಕೆಗಳಲ್ಲಿ ಏಳು ಪಟ್ಟಿಕೆಗಳು ಕೃಷ್ಣಚರಿತೆಗೆ ಸಂಬಂಧಿಸಿದವುಗಳು. ಈ ಶಿಲ್ಪಗಳಲ್ಲಿ ಬಿಂಬಿಸಲಾದ ಸನ್ನಿವೇಶಗಳು ಕಾಲಾನುಕ್ರಮದಲ್ಲಿಲ್ಲ. ಮೇಲಣ ಶಿವಾಲಯದ ಅಧಿಷ್ಠಾನದ ಗಳಭಾಗದಲ್ಲಿ ಪೆರೆಮನೆಯಲ್ಲಿ ವಾಸುದೇವ, ದೇವಕಿ, ಕೃಷ್ಣನ ಜನ, ಕಂಸ ಮತ್ತು ಕೃಷ್ಣ, ಬಕಾಸುರ ವಧೆ, ಪೂತನಾ, ಬೆಣ್ಣೆ ಕಳ್ಳ, ಈ ದೃಶ್ಯಗಳು ಕೆತ್ತನೆಗೊಂಡಿವೆ.

ಈ ಸನ್ನಿವೇಶಗಳನ್ನು ಬಾದಾಮಿಯ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿರುವ ಗಳ ಭಾಗದ ಶಿಲ್ಪಪೆಟ್ಟಿಕೆಗಳಲ್ಲಿಯೂ ಕಾಣುತ್ತೇವೆ. ಈ ಕಥಾನಕ ಶಿಲ್ಪಗಳಲ್ಲಿ ಕೃಷ್ಣ ರಾಧೆಯರ ಸರಸ ಸಲ್ಲಾಪಗಳ ಚಿತ್ರಣವಿಲ್ಲ. ಆದರೆ ಇಲ್ಲಿನ ಮುಖ್ಯವಾದ ಉದ್ದೇಶ. ರಕ್ಕಸರ ಸಂಹಾರವನ್ನು ಚಿತ್ರಿಸುವುದೇ ಆಗಿದೆ ಎಂಬುದು ತಿಳಿಯುತ್ತದೆ.

2. ಶೈವ ಶಿಲ್ಪ :

ಶಿವ :

ಮಾಲೆಗಿತ್ತಿ ಶಿವಾಲಯದ ದಕ್ಷಿಣ ಗೋಡೆಯಲ್ಲಿಯ ಶಿವನ ಶಿಲ್ಪವು ಶೈವ ಶಿಲ್ಪಕಲೆಗೊಂದು ಉತ್ತಮವಾದ ಕಲಾತ್ಮಕವಾದ ಶಿಲ್ಪವಾಗಿದೆ. ಅದು ವೈಶಿಷ್ಟ್ಯಪೂರ್ಣವೂ ಆಗಿದೆ. ಅದು ಚತುರ್ಭುಜ ಶಿವನ ಮೂರ್ತಿಯಾಗಿದೆ. ಶಿವನು ಸಮಭಾಗದಲ್ಲಿ ನಿಂತಿದ್ದಾನೆ. ಮೇಲಿನ ಬಲಗೈಯಲ್ಲಿ ಸರ್ಪವಿದೆ, ಕೆಳಗಿನ ಬಲಗೈ ಕಟ್ಯವಲಂಬಿತವಾಗಿದೆ. ಆತನ ಎಡಕ್ಕೆ ಮತ್ತು ಬಲಕ್ಕೆ ಒಬ್ಬೊಬ್ಬ ಋಷಿ ನಿಂತಿದ್ದಾರೆ.

[illegible]

ಶಿವನು ಹಿತಮಿತವಾದ ಆಭರಣಗಳಿಂದ ಶೋಭಿತನಾಗಿದ್ದಾನೆ. ರತ್ನ ಖಚಿತ ಕಿರೀಟದ ಹಿಂದೆ ತಲೆಗೂದಲು ಸುರುಳಿಯಾಗಿ ಆಕರ್ಷಕವಾಗಿದೆ.

ದೇವನು ಅಂತರ್ಮುಖಿಯಾಗಿರುವಂತೆ ಚಿತ್ರಿತನಾಗಿದ್ದಾನೆ. ಮೇಲಿನ ಮೂಲೆಗಳಲ್ಲಿ ಮಾಲಾವಾಹಕರು ಶಿಲ್ಪಿತರಾಗಿದ್ದಾರೆ. ಶಿಲ್ಪಿಯು ಕಣ್ಣು ಬಿಡಿಸಿದ ರೀತಿ, ರೂಪಿಸಿದ ಮುಖದ ಲಕ್ಷಣಗಳನ್ನು ಗಮನಿಸಿದಾಗ ಇದು ಗುಹಾ ಶಿಲ್ಪಗಳಿಗಿಂತ ಭಿನ್ನವಾಗಿರುವಂತೆ ತೋರುತ್ತದೆ.

ಶಿವನ ಶಿಲ್ಪಗಳನ್ನು ಸ್ಥೂಲವಾಗಿ 2 ಗುಂಪುಗಳಾಗಿ ವಿಂಗಡಿಸಬಹುದು. 1. ಶಾಂತ ಮೂರ್ತಿಗಳು, 2. ಸಂಹಾರ ಮೂರ್ತಿಗಳು, ಚಾಲುಕ್ಯರ ಕಾಲದ ಮೊದಲ ಸಾಂಸ್ಕೃತಿಕ ಹಂತದಲ್ಲಿ ಶಾಂತಮೂರ್ತಿಗಳು ಹೆಚ್ಚು ಜನಪ್ರಿಯವಾಗಿರುವುದನ್ನು ಗುರುತಿಸಬಹುದು. 2ನೇ ಹಂತದಲ್ಲಿ ಹೆಚ್ಚಾಗಿ ಸಂಹಾರಮೂರ್ತಿಗಳು ಕೆತ್ತನೆಗೊಂಡಿದ್ದು ಕಂಡುಬರುತ್ತದೆ.

ಉಮಾ ಸಹಿತೆ ಮೂರ್ತಿ :

ಚಂದ್ರನಾದ ಅಲಂಕಾರಗೊಂಡ ಜಟಾಧಾರಿಯ ಶಿಲ್ಪವು ಚಂದ್ರಶೇಖರಮೂರ್ತಿ ಎನಿಸುತ್ತದೆ. ಚಂದ್ರಶೇಖರನು ಉಮೆಯೊಂದಿಗೆ ಒಂದೇ ಪೀಠದ ಮೇಲೆ ಇಲ್ಲವೆ ಬೇರೆ ಬೇರೆ ಪೀಠಗಳ ಮೇಲೆ ಪಕ್ಕದಲ್ಲಿದ್ದರೆ ಅದು ಉಮಾಸಹಿತಮೂರ್ತಿ ಎಂದೆನಿಸುತ್ತದೆ. ಮೂರನೇ ಗುಹೆಯ ಕಂಬ 24ರ ಪಶ್ಚಿಮ ಬದಿಯ ಬೋದಿಗೆ ಶಿಲ್ಪವು ಉಮಾಸಹಿತ ಚಂದ್ರಶೇಖರನು ಮೇಲಿನ ಬಲಗೈಯಲ್ಲಿ ಪರಶು, ಕೆಳಗಿನ ಬಲಗೈಯಲ್ಲಿ ಡಮರು ಹಿಡಿದಿದ್ದಾನೆ. ಮೇಲಿನ ಎಡಗೈಯನ್ನು ಮೇಲಕ್ಕೆ ಚಾಚಿದ್ದಾನೆ. ಕೆಳಗಿನ ಕೈ ಪಾರ್ವತಿಯ ಹಿಂದೆ ಆಕೆಯ ಮೊಳಕೆ ಹತ್ತಿರವಿದೆ. ನಾಗವೊಂದು ಶಿವನ ಕಟುವಸ್ತ್ರವಾಗಿದೆ. ಶಿವನ ಗಣನ ತಲೆಯ ಮೇಲೆ ತನ್ನ ಎಡಗಾಲನ್ನು ಇರಿಸಿದ್ದಾನೆ. ಇದರಿಂದ ತೊಡೆಯ ಭಾಗವು ಭೂಮಿಗೆ ಸಮಾಂತರವಾದೆ. ಅದರ ಮೇಲೆ ದ್ವಿಭುಜ ಪಾರ್ವತಿ ತನ್ನ ಮೊಳಕೈಯನ್ನೂರಿ ಶಿವನತ್ತ ಬಾಗಿದ್ದಾಳೆ. ಪಾರ್ವತಿಯ ಸ್ತ್ರೀ ಸಹಜ ಲಾವಣ್ಯ, ಅಪರೂಪದ ಮೈ ಮಣಿತದಿಂದಾಗಿ ಶಿಲ್ಪವು ಚಿತ್ತಾಕರ್ಷಕವಾಗಿದೆ. ಚಂದ್ರಶೇಖರನ ನಿಲುವು, ಉಮೆಯ ಮೈ ಬಾಗುಗಳು ಶಿಲ್ಪ ಸಂಯೋಜನೆಯಲ್ಲಿ ವೈವಿಧ್ಯ ತಂದಿದೆ.

3. ಸೋಮಸ್ಕಂದ ಮೂರ್ತಿ :

ಚಂದ್ರಶೇಖರನ ಪಕ್ಕದಲ್ಲಿ ಉಮೆಯ ಜೊತೆಗೆ ಕಾರ್ತಿಕೇಯನು ಇದ್ದರೆ ಅದು ಸೋಮಸ್ಕಂದ ಮೂರ್ತಿ ಎನಿಸುತ್ತದೆ. ಇಂತಹ ಶಿಲ್ಪವೊಂದು ಅದೇ ಗುಹೆಯ 22ನೆಯ ಕಂಬದ ಪಶ್ಚಿಮ ಬೋದಿಗೆಯಲ್ಲಿದೆ. ಚಂದ್ರಶೇಖರನು ಯಜ್ಞೋಪವೀತ, ಉದರಬಂಧ, ರತ್ನಹಾರ, ನಾಗಕೇಯೂರ, ಕಟವಸ್ತ್ರಗಳಿಂದ ಭೂಷಿತನಾಗಿದ್ದಾನೆ. ತ್ರಿಶೂಲ ಹಾಗೂ ಪರಿಶುಧಾರಿಯಾಗಿದ್ದಾನೆ. ತನ್ನ ಕೆಳ ಎಡಗೈಯಿಂದ ಪಾರ್ವತಿಯ ಬಲಗೈಗೆ ಆಧಾರ ನೀಡಿದ್ದಾನೆ. ಈ ಆಧಾರ ತಪ್ಪಿದರೆ ಬೀಳುವಷ್ಟು ಪಾರ್ವತಿ ಶಿವನತ್ತ ಬಾಗಿದ್ದಾಳೆ. ಈ ಬಾಗುವಿಕೆಯನ್ನು ಅತಿಭಂಗವೆನ್ನಬಹುದು. ಈ ವೈಮಣಿತದಿಂದಾಗಿ ಶಿಲ್ಪದ ಕೆಳಭಾಗದಲ್ಲಿ ಹೆಚ್ಚಿನ ಸ್ಥಳ ಉಂಟಾಗಿದೆ. ಅದನ್ನು ಬಳಸಿಕೊಳ್ಳುತ್ತ ಶಿಲ್ಪಿಯು ಶಿವನ ಕಟುವಸ್ತ್ರವಾಗಿರುವ ನಾಗನನ್ನು ಕಲಾತ್ಮಕವಾಗಿ ಕೆತ್ತಿದ್ದಾನೆ.

ನಟರಾಜ :

ಶೈವ ಗುಹಾಲಯದ ನಟರಾಜ ಮೂರ್ತಿಯು ಚಾಲುಕ್ಯರ ಶಿಲ್ಪಗಳಲ್ಲಿಯೇ ಉತ್ಕೃಷ್ಟವಾದುವು. ಭಾರತೀಯ ಶಿಲ್ಪಗಳಲ್ಲಿ ವೃತ್ತಾಕಾರದ ಸಂಯೋಜನೆಗಳನ್ನು ಮಂಡಲಗಳೆಂದು ಕರೆದು ಅವುಗಳಲ್ಲಿ ಧಾರ್ಮಿಕ ಅಂಶವನ್ನು ಗುರುತಿಸಲಾಗುತ್ತದೆ. ಈ ಮುರ್ತಿಯ ವಿಶೇಷವೆಂದರೆ ಚಲನಶೀಲತೆ. ಶಿವನು 'ಚತುರ' ನಾಟ್ಯ ಭಂಗಿಯಲ್ಲಿದ್ದು ಅಭಯ ಹಸ್ತ, ಗಜಹಸ್ತಿ, ಚಿನ್ಮುದ್ರ, ಮೊದಲಾದ ಮುದ್ರಗಳಲ್ಲಿ ರೂಪಿತನಾಗಿದ್ದಾನೆ. ಪರಮಾತ್ಮನು ಮಾತ್ರ ನಿರ್ವಹಿಸಬಲ್ಲ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ ಮತ್ತು ಅನುಗ್ರಹಕರಣವೆಂಬ 5 ಕಾರ್ಯಗಳ ಲೀಲೆಯನ್ನು ಸಂಕೇತಿಸುವ ಶಿಲ್ಪವು ಇದಾಗಿದೆ.

ಐಹೊಳೆಯ ರಾವಣಫಡಿಯ ದಶಭುಜ ನಟರಾಜನ ಶಿಲ್ಪ ಕೂಡ ಒಂದು ಉತ್ತಮ ಕಲಾಕೃತಿ. ಚಾಲುಕ್ಯರ ರಾಚನಿಕ ಮಂದಿರಗಳಲ್ಲಿ ನಟರಾಜ ಶಿಲ್ಪಗಳು ಛತ್ತಿನ ಮೇಲೆ ಇಲ್ಲವೆ ಸುಖನಾಸಿಯ ಮೇಲೆ ಕಂಡುಬರುತ್ತದೆ. ಪಟ್ಟದಕಲ್ಲಿನ ಮಲ್ಲಿಕಾರ್ಜುನ, ಪಾಪನಾಥ ಗುಡಿಯಲ್ಲಿನ ಛತ್ತಿನ ಮೆಲೆ, ಮಹಾಕೂಟದ ಮಹಾಲಿಂಗ ಮತ್ತು ಪಟ್ಟದ ಕಲ್ಲಿನ ಜಂಬುಲಿಂಗ ದೇವಾಲಯಗಳ ಸುಕನಾಸಿಯ ಮೇಲೆ ಇವನ್ನು ಕಾಣಬಹುದು. ಚಾಲುಕ್ಯ ಶಿಲ್ಪದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಿಶಿಷ್ಟ ಉಬ್ಬು ಶಿಲ್ಪಗಳಲ್ಲಿ ನಟರಾಜ ಅಥವಾ ಶಿವ ತಾಂಡವಭಂಗಿಯೂ ಒಂದು. ಅದರಲ್ಲೂ ಈ ಗುಹೆಯಲ್ಲಿ ಎದ್ದು ಕಾಣುವ ನಟರಾಜನ ನಾಟ್ಯ ಭಂಗಿ, ಭಾವಪೂರ್ಣವೂ, ಸಜೀವವೂ ಎಂಬಂತೆ ಕಾಣುತ್ತದೆ. ಈ

ತಾಂಡವಮೂರ್ತಿಯ ಎತ್ತರ 152 ಸೆಂ.ಮಿ. ಕಮಲ ಪೀಟದ ಮೇಲೆ ನಿಂತು ತಾಂಡವ ನೃತ್ಯ ಆಡುತ್ತಿರುವ ಕೈಗಳಲ್ಲಿ ಹಾವು, ಡಮರು, ಜಪ ಮಾಲೆ, ತಂತಿವಾದ್ಯ, ಪಾಶ, ತ್ರಿಶೂಲ, ಪರಶು, ವೀಣೆ, ಬೆಂಕಿ ಇವೆ ಉಳಿದ ಹಸ್ತಗಳಲ್ಲಿ ಭರತ ನಾಟ್ಯದ ವಿವಿಧ ಮುದ್ರೆಗಳನ್ನು ಕಾಣಬಹುದಾಗಿದೆ. ಒಂದೊಂದು ದಿಕ್ಕಿನಿಂದ ನೋಡಿದರೆ ಒಂದೊಂದು ವಿಶಿಷ್ಟ 'ಮುದ್ರೆ' ಕಾಣುವಂತೆ ಈ ನರ್ತನ ಭಂಗಿಯನ್ನು ಶಿಲೆಯಲ್ಲಿ ವಿನ್ಯಾಸಗೊಳಿಸಲಾಗಿದೆ. ನಟರಾಜನಿಗೆ ಬಲಭಾಗದ ಯಾವುದೇ ಹಸ್ತವನ್ನು ಅವನ ಎಡಭಾಗದ ಯಾವುದೇ ಹಸ್ತದ ಜೊತೆ ಜೋಡಿಸಿ ನೋಡಿದರೆ ಅವನ ನೃತ್ಯದ ಒಂದು ಭಂಗಿಯು ಕಣ್ಣುಮುಂದೆ ಬರುವುದು. ಈ ರೀತಿ ಶಿವನ ಒಂಭತ್ತು ಹಸ್ತ ಜೋಡಿಯಿಂದ ಎಂಭತ್ತೊಂದು ಬೇರೆ-ಬೇರೆ ಭಂಗಿಯನ್ನು ಕಲ್ಪಿಸಬಹುದು. ಇದುವೇ ಈ ನಟರಾಜಮೂರ್ತಿಯ ವೈಶಿಷ್ಟ್ಯ.

ಅರ್ಧನಾರೀಶ್ವರ :

ಶೈವ ಗುಹಾಲಯದ ಪಶ್ಚಿಮ ಗೋಡೆಯ ಮೇಲೆ ಬ್ರುಹದಾಕಾರದ ಅರ್ಧನಾರೀಶ್ವರ ಶಿಲ್ಪವಿದೆ. ಇದರ ಎಡಭಾಗದಲ್ಲಿ ಸ್ತ್ರೀ ಸಹಜ ಲಾವಣ್ಯವುಳ್ಳ ತರುಣ ಮತ್ತು ಅಸ್ಥಿಪಂಜರದ ವಿಕಾರ ರೂಪದ ಬ್ರುಂಗಿ ಶಿಲ್ಪಿತರಾಗಿದ್ದಾರೆ. ಒಂದು ಸುರೂಪ ಮತ್ತೊಂದು ಕುರೂಪ ಒಂದು ಸಂತೋಷಕರ ಇನ್ನೊಂದು ವಿಷಾದಕರ. ಇವೆರಡನ್ನು ಸಮನಾಗಿ ಕಾಣುವ ಪರಮಾತ್ಮ ಮಧ್ಯದಲ್ಲಿದ್ದಾನೆ.

ಮೂರನೆಯ ಗುಹಾಲಯದ ಬೋದುಗೆಯಲ್ಲಿಯ ಅರ್ಧನಾರೀಶ್ವರನ ದುಂಡು ಶಿಲ್ಪವು ಉಲ್ಲೇಖಾರ್ಹವಾದ ಸುಂದರ ಕಲಾಕೃತಿ ಮಹಾಕೂಟದ ಸಂಗಮೇಶ್ವರ ದೇವಾಲಯದ ಅರ್ಧನಾರೀಶ್ವರ ಶಿಲ್ಪವು ಭಾರತದ ಕೆಲವೆ ಉತ್ಕೃಷ್ಟ ಶಿಲ್ಪಗಳಲ್ಲಿ ಒಂದೊಂದು ಕೆರೋಲ್ ರ್‍ಯಾಡ್‌ಕ್ಲಿಪ್ ಗುರುತಿಸುವಲ್ಲಿ ಸತ್ಯಾಂಶವಿದೆ. ಇದು ದ್ವಿಬಾಹು ಅರ್ಧ ನಾರೀಶ್ವರ ಶಿಲ್ಪವಾಗಿರುವುದೊಂದು ವಿಶೇಷ. ದೀರ್ಘ ವೃತ್ತಾಕಾರದ ಪ್ರಭಾವಳಿ, ಚಿತ್ತಾಕರ್ಷಕ, ಕೇಶವಿನ್ಯಾಸ, ಹಿತಮಿತವಾದ ಆಭರಣಗಳು ಸಂಕೀರ್ಣ ನಕ್ಷೆಗಳಿಂದ ಕೂಡಿದ ನಯ ನಾಜೂಕಿನ ಅಧೋವಸ್ತ್ರ, ತ್ರಿಭಂಗಿ ನಿಲುವಿನಿಂದಾಗಿ ದೇವಿಯ ಸ್ತನದ ಕೆಳಗೆ ಮೂಡಿದ ಸ್ತ್ರೀ ಸೌಂದರ್ಯದ ಕುರುಹಾಗಿರುವ ಮಡಿಗಳು, ಎಲ್ಲಕ್ಕೂ ಮಿಗಿಲಾಗಿ ದವಿ ಕಳೆಯಿಂದ ಕೂಡಿದ ಪ್ರಸನ್ನವಾನ ಮುಖಭಾವ ಇವೆಲ್ಲವೂ ಮಹಾಶಿಲ್ಪಿಯ ಕಲಾಪ್ರೇಮ, ಕಲಾಸೃಷ್ಟಿಯನ್ನು ಸಾರುವಂತಹುಗಳಾಗಿವೆ.

ಹರಿಹರ :

ಮುಖಮಂಟಪದಲ್ಲಿ ಎದುರಿಗೆ ಕಾಣಿಸುವ ಈ ಭವ್ಯಮೂರ್ತಿಯ ಎತ್ತರ 353 ಸೆಂ.ಮಿ. ಬಂಡೆಗಲ್ಲಿನ ಸ್ವಾಭಾವಿಕ ಪದಗಳೊಂದಾಗಿ ಈ ಮೂರ್ತಿಯ ಬಟ್ಟೆ ತೊಟ್ಟಿ ಭಂಗಿ ಸೊಗಸಾಗಿ ಮೂಡಿಬಂದಿದೆ. ಶಿವನ ಅರ್ಥ ಭಾಗದಲ್ಲಿ ನಾಗ, ಕರ್ಣಕುಂಡಲಿ, ಜಡೆ, ಕಪಾಲ, ಅರ್ಧಚಂದ್ರ ಇದ್ದರೆ ಇನ್ನರ್ಧಭಾಗವನ್ನು ಆವರಿಸಿರುವ ವಿಷ್ಣುವು ಕಿರೀಟ, ರತ್ನಖಚಿತ ನಡುಪಟ್ಟಿ, ಶಂಖ ಇವಷ್ಠಿ ಧರಿಸಿದ್ದಾನೆ.

ಶೈವ ಗುಹಾಲಯದ ಹರಿಹರ ಶಿಲ್ಪ ಒಂದು ಬೃಹದಾಕಾರದ ಮಹತ್ವದ ಶಿಲ್ಪ. ಈ ಶಿಲ್ಪವು ಗೋಡೆಯಲ್ಲಿ ಹೆಚ್ಚು ಆಳವಾಗಿದೆ. ಅದರ ಕೆಳಗೆ ಗಣಶಿಲ್ಪಗಳ ಪಟ್ಟಿಕೆ ಇಲ್ಲ. ತುಂಬಿದ ಗಲ್ಲಗಳಿಂದ ಕೂಡಿದ ದುಂಡಾದ ಮುಖ ಹಾಗೂ ಕಿರೀಟ ಆಭರಣಗಳು ಭಿನ್ನ ಶೈಲಿಯವಾಗಿವೆ. ಕೈಕಾಲುಗಳು ಪ್ರಮಾಣ ತಪ್ಪಿ ಉದ್ದಾಗಿವೆ. ಹರಿಹರ ಶಿಲ್ಪವು ಸಾಮಾನ್ಯವಾಗಿ ಶೈವ ಮಂದಿರಗಳಲ್ಲಿ ಕಂಡುಬರುವುದು ವಾಡಿಕೆ. ಮಹಾಕೂಟದ ಸಂಗಮೇಶ್ವರ ದೇವಾಲಯದ ಹರಿಹರನು ಚತುರ್ಭುಜನಾಗಿದ್ದು ಮೇಲಿನ ಬಲಗೈಯಲ್ಲಿ ಸರ್ಪವನ್ನು ಹಿಡಿದಿರುವುದು ಈ ಶಿಲ್ಪದ ವಿಶೇಷತೆಯಾಗಿದೆ. ಎಡಗೈ ಕಟ್ಯವಲಂಬಿತವಾಗಿದೆ. ನಿಂತ ಭಂಗಿ ಧ್ವಾರಪಾಲಕನ ನಿಲುವನ್ನು ಹೋಲುವಂತಹದ್ದಾಗಿದೆ. ಬಾದಾಮಿಯ ಶಿಲ್ಪಗಳಲ್ಲಿ ಶಿವನು ಪರಶುವನ್ನು ಹಿಡಿದಿರುವುದು ಲಕ್ಷಿಸಬೇಕಾದ ಅಂಶ. ಶಿವನ ಕೈಯಲ್ಲಿ ತ್ರಿಶೂಲ ಕಾಣಿಸಿಕೊಳ್ಳುವುದು ನಂತರದ ಶಿಲ್ಪಗಳಲ್ಲಿ.

ಲಕುಲೀಶ :

ಲಕುಲೀಶ ಶಿಲ್ಪಗಳು ಬಾದಾಮಿ ಪರಿಸರದಲ್ಲಿ ಗಣನೀಯ ಸಂಖ್ಯೆಯಲ್ಲಿ ದೊರೆಯುತ್ತವೆ. ಬಾದಾಮಿಯ ಎರಡನೆಯ ಗುಹಾಲಯದ 6ನೇ ಕಂಬದ ಮೇಲಿನ ಲಕುಲೀಶನು ಮಾತ್ರ ಚತುರ್ಭಜನಾಗಿದ್ದಾನೆ. ನಗ್ನವಾಗಿ ಕುಳಿತುಕೊಂಡಿದ್ದಾನೆ. ಬಲಗೈಯಲ್ಲಿ ಲಗುಡವನ್ನು ಹಿಡಿದಿದ್ದಾನೆ. ಆತನ ಜೊತೆಗೆ ಪ್ರಥಮ ಶಿಷ್ಯರಾದ ಕೌಶಿಕ, ಗರ್ಗ, ಮಿತ್ರ, ಹಾಗೂ ಕೌರುಷ್ಯ ಕೆತ್ತನೆಗೊಂಡಿರುವುದು ಈ ಶಿಲ್ಪದ ಇನ್ನೊಂದು ವೈಶಿಷ್ಟ್ಯ.

ಸಾಮಾನ್ಯವಾಗಿ ಕಲುಲೀಶನು ಸಮಭಂಗದಲ್ಲಿರುವ ಊರ್ಧ್ವರೇತೇಶ್ವರನಾಗಿ ಶಿಲ್ಪಿತನಾಗಿರುತ್ತಾನೆ. ಮಹಾಕೂಟದಲ್ಲಿ ಇಂತಹ ನಾಲ್ಕು ಶಿಲ್ಪಗಳಿವೆ. ಇವುಗಳಲ್ಲಿ ಮಹಾಕೂಟೇಶ್ವರ ದೇವಾಲಯದ ನಂದಿಮಂಟಪದ ಉತ್ತರಕ್ಕಿರುವ ಜೀರ್ಣಗೊಂಡ ದೇಗುಲ ದಕ್ಷಿಣ ಗೋಡೆಯ ಮೇಲೆ

[illegible]

ಕೆತ್ತಲಾದ ಲಕುಲೀಶನ ಶಿಲ್ಪವು ಮೊದಲನೆಯ ಹಂತದಲ್ಲಿ ನಿರ್ಮಿತವಾಗಿರಬಹುದು. ಈತನು ಸಮಭಂಗದಲ್ಲಿ ಕಟ್ಯವಲಂಬಿತನಾಗಿ ನಿಂತಿದ್ದಾನೆ. ಬಲಗೈಯಲ್ಲಿ ಬಲ ದಪ್ಪನಾದ ದೊಣ್ಣೆಯಿದೆ. ಮಹಾಕೂಟದ ಉಳಿದ 3 ಶಿಲ್ಪಗಳಲ್ಲಿ ಲಕುಲೀಶನು ಅಪಸ್ಮಾರನ ಮೇಲೆ ನಿಂತಂತೆ, ಮತ್ತು ಲಗುಡದ ಬದಲು ಪರಶು ಹಿಡಿದಂತೆ ಕೆತ್ತನೆಗೊಂಡಿದ್ದಾನೆ. ಇಂತಹ ಇನ್ನೊಂದು ಮೂರ್ತಿಯು ಪಿನಾಕಪಾಣಿ ದೇವಾಲಯದ ಗೋಡೆಯ ಮೇಲಿದೆ. ಚಾಲುಕ್ಯರ ಅತ್ಯಂತ ಸುಂದರ ಲಕುಲೀಶನ ಮೂರ್ತಿ ಅಲ್ಲಿಯ ಸಂಗಮೇಶ್ವರ ಗುಡಿಯ ಹೊರಗೋಡೆಯ ಮೇಲೆ ಕಾಣಸಿಗುತ್ತದೆ.

ಗಣಪತಿ :

ಬಾದಾಮಿಯ ಶೈವಗಾಹಾಲಿಯದ ಸುಖಾಸೀನ ಗಣಪತಿಯ ಶಿಲ್ಪವು ವೈಶಿಷ್ಟ್ಯಪೂರ್ನವಾಗಿದೆ. ಆತನಿಗೆ ಎರಡು ಕೈಗಳಿವೆ ತಲೆಯ ಮೇಲೆ ಕಿರೀಟವಿಲ್ಲ. ಆದರೆ ಬದಲು ಕಮಲ ಪುಷ್ಪವಿದೆ. ಗಣೇಶನ ತಲೆ, ಕಿವಿ, ಸೊಂಡೆಗಳ ನಿರ್ಮಿತಿಯಲ್ಲಿ ಅಂಗಗಲ ವಾಸ್ತವಿಕ ಮಾಟವಿದೆ. ಬಲಗೈಯಲ್ಲಿ ಮುರಿದ ದಂತವಿದೆ. ಎಡಗೈಯಲ್ಲಿ ಮೋದಕಗಲಿಂದ ತುಂಬಿದ ಪಾತ್ರೆ ಇದೆ. ಮಾಲೆಯಂತಹ ಯಜ್ಞೋಪವೀತವಿದೆ. ರಾಪಿಣಫಡಿಯ ನಟರಾಜನ ಪಕ್ಕದಲ್ಲಿ ಸ್ಥಾನಕ ಗಣೇಶನು ಕಿರೀಟಧಾರಿಯಾಗಿದ್ದಾನೆ. ಬಾದಾಮಿ ನಟರಾಜನ ಎಡಭಾಗದಲ್ಲಿ ಸಿರ್ತನಾಸೆಕ್ತಿ ಗಣೇಶನಿದ್ದಾನೆ. ಮೂರನೆಯ ಗುಹೆಯ ಛತ್ತಿನ ಮೂರನೆಯ ಅಂಕಣದಲ್ಲಿ ದ್ವಿಬಾಹು ಗಣೇಶನು ನೃತ್ಯನಿರತನಾಗಿದ್ದಾನೆ. ಪಾಪನಾಥ ದೇವಾಲಯದಲ್ಲಿ ನಾಣ್ಯಗಣಪತಿಯು ಶಿಲ್ಪಿತನಾಗಿದ್ದಾನೆ.

ಬಾದಾಮಿಯ ಶೈವ ಗುಹಾಲಯದ ಉಪಗುಹೆಯೆ ಪೂರ್ವದ ಗೋಡೆಯಲ್ಲಿ ಬೃಹದಾಕಾರದ ಗಣೇಶ ವಿಗ್ರಹವನ್ನು ಕಂಡರಿಸಲಾಗಿದೆ. ಈ ಗಜಮುಖನ ತಲೆಯ ಮೇಲೆ ಕಿರೀಟವಿಲ್ಲ. ಕಿರೀಟದ ಬದಲು ಅಲ್ಲೊಂದು ಕಮಲ ಪುಷ್ಪ ಕೆತ್ತನೆಗೊಂಡದು ಒಂದು ವಿಶೇಷವಾದುದು. ಸುಮಾರು ಇಷ್ಟೇ ಗಾತ್ರದ ಎರಡು ಕೈಗಳುಳ್ಳ ಆಸೀನ ಗಣೇಶ ಶಿಲ್ಪವೊಂದು ಮಹಾಕೂಟೇಶ್ವರ ಗುಡಿಯ ನಂದಿಮಂಟಪದ ಮುಂದಿದೆ. ಕೆಳಗಣ ಶಿವಾಲಯವು ಗಣಪತಿ ದೇವಾಲಯವಾಗಿರಬೇಕೆಂಬ ತರ್ಕ. ಅ. ಸುಂದರ ಅವರದು.[3] ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ಪಲ್ಲವ ನರಸಿಂಹವರ್ಮನು ವಿಜಯದ ಕುರುಹು

---

[3] ಅ. ಸುಂದರ 1977, ಬಾದಾಮಿಯ ಕೆಳಗಣ ಶಿವಾಲಯವು ಮೂಲತಃ ಗಣೇಶ ದೇವಾಲಯವೇ? ಮಾನವಿಕ ಭಾರತಿ, ಸಂ.6, ಧಾರವಾಡ, ಪು.179.

ಎಂದು ವಾತಾಪಿ ಗಣಪತಿ ಮೂರ್ತಿಯನ್ನು ತಮಿಳು ನಾಡಿಗೆ ಒಯ್ದನೆಂದು ಹೇಳಲಾಗುತ್ತದೆ. ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ಪಲ್ಲವ ನರಸಿಂಹವರ್ಮನು ಹಿಂತಿರುಗಿ ಹೋಗುವಾಗ ವಾತಾಪಿಯಿಂದ ಗಣೇಶ ವಿಗ್ರಹವನ್ನು ತೆಗೆದುಕೊಂಡು ಹೋದನಂತೆ ತಿರುಚಿನಪಳ್ಳಿ ಹತ್ತಿರದ ಗುಡ್ಡದ ಗಣೇಶ ದೇವಾಲಯದ ವಿಗ್ರಹವೇ ಈ ವಾತಾಪಿ ಗಣಪತಿ ಎಂದು ಪ್ರತೀತಿಯಿದೆ.[4]

ಕಾರ್ತಿಕೇಯ :

ಬಾದಾಮಿಯ ಶೈವ ಗುಹಾಲಯದ ಕಾರ್ತಿಕೇಯನ ಶಿಲ್ಪವು ಚಾಲುಕ್ಯರ ಅತಿ ಪ್ರಾಚೀನ ಶಿಲ್ಪಗಳಲ್ಲಿ ಒಂದು. ಅದು ಗಾತ್ರ ಮತ್ತು ಗುಣದಿಂದ ಗಮನಾರ್ಹವಾದುದು. ಷಣ್ಮುಖನಿಗೆ ಇಲ್ಲಿ ಒಂದು ಮುಖವಿದೆ. ಬಲಗೈಯ ಲಗಾಮಿನಿಂದ ನವಿಲನ್ನು ನಿಯಂತ್ರಿಸಿದ್ದಾನೆ. ಎಡಗೈಯನ್ನು ನವಿಲಿನ ಮೇಲೆ ಇರಿಸಿ ರಾಜಠೀವಿಯಲ್ಲಿ ಕುಳಿತಿದ್ದಾನೆ. ಶಿಲ್ಪದ ಸಮತೋಲನ ಉತ್ತಮವಾಗಿದ್ದು ಸುತ್ತಲಿನ ಅವಕಾಶವನ್ನೆ ರೂವಾರಿ ಕೆತ್ತನೆಗಾಗಿ ಬಳಸಿಲ್ಲ. ಇದರಿಂದ ಕಾರ್ತಿಕೇಯನ ಶಿಲ್ಪ ಎದ್ದು ಕಾಣುತ್ತದೆ.

ನವಿಲಿನ ಮೇಲೆ ಕುಳಿತು ಹೊರಟಿರುವ ಕಾರ್ತಿಕೇಯನು 3ನೇ ಗುಹಾಲಯದ 23ನೆಯ ಕಂಬದ ವೃತ್ತಾಕಾರ ಉಬ್ಬು ಶಿಲ್ಪದಲ್ಲಿದ್ದಾನೆ. ಅದೇ ಗುಹಾಲಯದ ಮಂಟಪದ ಛತ್ತಿನ ಮೇಲೆ 3 ಮುಖಗಳೊಂದಿಗೆ ಕಾರ್ತಿಕೇಯನನ್ನೆ ಚಿತ್ರಿಸಲಾಗಿದೆ. ಆತನ ಎಡಬಲಗಳಲ್ಲಿ ಗಂಧರ್ವರನ್ನು ಸಂಯೋಜಿಸಲಾಗಿದೆ. ಚಾಲುಕ್ಯರ ಕಾಲದ ಸರ್ವೋತ್ಕೃಷ್ಟ ಕಾರ್ತಿಕೇಯ ಶಿಲ್ಪವನ್ನು ಐಹೊಳೆಯ ಹುಚ್ಚಿಮಲ್ಲಿ ದೇವಾಲಯದ ಮುಖಮಂಟಪದ ಛತ್ತಿನಲ್ಲಿ ಕಾಣಬಹುದು. ಇದರ ವಸ್ತು ಅಪರೂಪದ್ದು. ಕಾರ್ತಿಕೇಯನು ತಾರಕಸುರನೊಂದಿಗೆ ಕಾದಾಡುವ ಸನ್ನಿವೇಶವಿದು. ಮಯೂರುರೂಢನಾದ ಮಹಾಸೇನನು ಬಲಗೈಯಲ್ಲಿ ಶಕ್ತಿ ಆಯುಧವನ್ನು ಹಿಡಿದಿದ್ದಾನೆ. ನವಿಲು ಮೋಹಕವಾಗಿದೆ. ಕೆತ್ತಿ ಗುರಾಣಿಗಳನ್ನು ಹಿಡಿದು ತಾರಕಾಸುರನನ್ನು ನವಿಲಿನ ಕಾಲಿನ ಕೆಳಗೆ ಬಿದ್ದಿರುವಂತೆ ಚಿತ್ರಿಸಿರುವುದು ಒಂದು ಸುಂದರವಾದ ಕಲ್ಪನೆಯೇ ಸರಿ.

ನಂದಿ :

ಶಿವನೊಂದಿಗೆ ಆತನ ವಾಹನನಾದ ನಂದಿಯೂ ಪೂಜಿತನಾಗಿದ್ದಾನೆ. ಎರಡನೆಯ ಹಂತದಲ್ಲಿ ನಂದಿಗೆ ಪ್ರತ್ಯೇಕ ಮಂಟಪದ ಕಾಣಿಸಿಕೊಂಡನೆಂದು ತೋರುತ್ತದೆ. ಚಾಲುಕ್ಯರ ಕಾಲದ ಸರ್ವೋತೃಷ್ಟ

[4] ಅ. ಸುಂದರ, 1977, ಪೂರ್ವೋಕ್ತ.

ನಂದಿ ಹಾಗೂ ನಂದಿ ಮಂಟಪವನ್ನು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪ್ರಾಕಾರದಲ್ಲಿ ಕಾಣುತ್ತೇವೆ.

ನಾಗರಾಜ :

ಬಾದಾಮಿ ಪ್ರದೇಶದಲ್ಲಿ ನಾಗರಾಜನು ಪ್ರಾಯಶಃ ಮೊದಲಬಾರಿ ಕಾಣಿಸಿಕೊಳ್ಳುವುದು ಬಾದಾಮಿಯ ಶೈವ ಗುಹಾಲಯದ ಛತ್ತಿನಲ್ಲಿ. ಇದು ಮೊದಲ ಕಲಾಕೃತಿಯಾಗಿದ್ದರೂ ಒಂದು ಉತ್ಕೃಷ್ಟ ಕಲಾಸೃಷ್ಟಿಯಾಗಿದೆ. ನಾಗರಾಜನು ಮುಖದಿಂದ ನಾಭಿಯವರೆಗೆ ಮನುಷ್ಯರೂಪದಲ್ಲಿದ್ದಾನೆ. ಉಳಿದ ದೇಹ ಸುತ್ತಿಕೊಂಡ ಸರ್ಪದ್ದು.

ನಾಗನಾಥ ದೇವಾಲಯದ ಮುಖಮಂಟಪದ ಛತ್ತಿನಲ್ಲಿ ನಾಗರಾಜನಿರುವುದು ಔಚಿತ್ಯಪೂರ್ಣ. ಈತನೂ ಕೂಡ 5 ಹೆಡೆಗಳ ನಾಗರಾಜ ಬಾದಾಮಿಯ ಜಂಬುಲಿಂಗೆ ದೇವಾಲಯದ ಮುಖಮಂಟಪದ ಛತ್ತಿನಲ್ಲಿರುವ ನಾಗರಾಜನು 7 ಹೆಡೆಗಳನ್ನು ಹೊಂದಿದ್ದು ಕೈಗಳಲ್ಲಿ ಮಾಲೆ ಹಿಡಿದಿದ್ದಾನೆ. ಹುಲಿಗೆಮ್ಮನ ಕೊಳದಲ್ಲಿ ಪೀಠಸಹಿತವಾದ ಚತುರ್ಭುಜ ನಾಗರಾಜನ ಅಪೂರ್ವ ಶಿಲ್ಪವಿದೆ.[5] ನಾಗರಾಜನ ಮೆಲಿನ ಕೈಗಳಲ್ಲಿ ಶಂಖ ಚಕ್ರಗಳಿವೆ. ಆದ್ದರಿಂದ ಇವನು ವಿಷ್ಣುವಿನ ಅನಂತನಾಗಿರಬಹುದು. ನಾಗರಾಜನು ಕಿರೀಟ, ಕಿವಿದುಡಿಗೆ, ಕೊರಳಹಾರ, ಯಜ್ಞೋಪವೀತ, ಉದರಬಂಧ, ಕೈಕಡಗಳಾದ ಅಲಂಕೃತನಾಗಿದ್ದಾನೆ. ಸರ್ಪದೇಹದ ಮಣಿತಕ್ಕೆ ಮಾನವ ದೇಹದ ಮಣಿತವು ಪೂರಕವಾಗಿದೆ ಹಾಗೂ ಚಿತ್ತಾಕರ್ಷಕವಾಗಿದೆ. ಚಾಲುಕ್ಯ ಶಿಲ್ಪರಾಶಿಯಲ್ಲಿ ಇದು ಮಹತ್ವದ ಶಿಲ್ಪವಾಗಿದೆ.

ಇತರ ಹಿಂದೂ ಮೂರ್ತಿ ಶಿಲ್ಪಗಳು :

ಸೂರ್ಯ :

ಚಾಲುಕ್ಯ ಕಾಲದ ಸೂರ್ಯ ಶಿಲ್ಪಗಳು ಕರ್ನಾಟಕದ ಅತಿ ಪ್ರಾಚೀನ ಸೂರ್ಯ ಶಿಲ್ಪಗಳೆಂದು ಹೇಳಬಹುದು.[6] ಸಾಮಾನ್ಯವಾಗಿ ಸೂರ್ಯನನ್ನು 2 ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿರುತ್ತದೆ. ಸಮಭಂಗ ಆತನ ನಿಲುವು. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ

[5] Ramesh K.V., 1984, Op.cit., p.115.

[6] Ibid., P.135.

ಮುಖಮಂಟಪದ ಛತ್ತಿನಲ್ಲಿ ಕಂಡರಿಸಲಾದ ಸೂರ್ಯಶಿಲ್ಪವು ಅಪ್ರತಿಮವಾಗಿದೆ. ಪ್ರಸ್ತುತ ಶಿಲ್ಪದಲ್ಲಿ ಸೂರ್ಯನು ಎರಡೂ ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದಾನೆ. ಬಾಣಪ್ರಯೋಗಿಸುವ ಉಷೆ, ಪ್ರತ್ಯುಕ್ಷಯರು, ಸಪ್ತಾಶ್ವಗಳು, ಅರುಣ, ಮಾಲಗಾರರು, ಗಂಧರ್ವರು ಈ ಶಿಲ್ಪದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ರಥವು ಆಕಾಶದಲ್ಲಿ ಮೋಡಗಳನ್ನು ಛೇದಿಸುತ್ತ ಹೊರಟಿರುವ ದೃಶ್ಯ ಶಿಲ್ಪಿಯ ಕಲಾಚಾತುರ್ಯ ಕೈ ಹಿಡಿದ ಕನ್ನಡಿಯಾಗಿದೆ.

ಅಷ್ಟದಿಕ್ಪಾಲಕರು (ಅಷ್ಟದಿಕ್ಪಾಲಕರು)

ಚಲುಕ್ಯರ ಶಿಲ್ಪಗಳಲ್ಲಿ ದಿಕ್ಪಾಲಕರು ಸಾಮಾನ್ಯವಾಗಿ ದೇವಾಲಯದೆ ಛತ್ತಿನ ಮೇಲೆ ಕಂಡುಬರುತ್ತಾರೆ. ಛತ್ತಿನ ಅಲಂಕಾರಕ್ಕಾಗಿ ಈ ಧಾರ್ಮಿಕ ಶಿಲ್ಪಗಳನ್ನು ಬಳಸಲಾಗಿದೆ. ಮೊದಮೊದಲು ನಾಲ್ಕು ದೇವತೆಗಳನ್ನು, ನಂತರ 8 ದೇವತೆಗಳನ್ನು ದಿಕ್ಪಾಲಕರೆಂದು ಗುರುತಿಸಲಾಯಿತೆಂದು ತಿಳಿದುಬರುತ್ತದೆ. ಯಾವ ದಿಕ್ಕಿಗೆ ಯಾರು ಪಾಲಕರು ಎಂಬ ವಿಷಯದ ಬಗ್ಗೆ ಒಮ್ಮತವಿರಲಿಲ್ಲ.[7] ಮೂರನೆಯ ಗುಹಾಲಯದ ಮಂಟಪದ ಛತ್ತಿನಲ್ಲಿ ದಿಕ್ಪಾಲಕರ ಶಿಲ್ಪಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಬ್ರಹ್ಮನ ಮೂರ್ತಿ ಇದೆ. ಪೂರ್ವ ಹಾಗೂ ಪಶ್ಚಿಮ ಅಂಕಣಗಲಲ್ಲಿ ಕ್ರಮವಾಗಿ ಇಂದ್ರ ಮತ್ತು ವರುಣರು ಕೆತ್ತನೆಗೊಂಡಿದ್ದಾರೆ. ಆದರೆ ದಕ್ಷಿಣ ಅಂಕಣದಲ್ಲಿ ಯಮನ ಬದಲಾಗಿ ನವಿಲಿನ ಮೇಲೆ ಕುಳಿತಿರುವ ಕಾರ್ತಿಕೇಯನಿದ್ದಾನೆ.

'ಮಹಾವಿಷ್ಣು ಗೃಹ'ದ ಮೊಗಸಾಲೆಯ ಛತ್ತಿನ ಮಧ್ಯ ಅಂಕವು ವೃತ್ತಗಳ ಸಂಯೋಜನೆಯಿಂದ ಕೂಡಿದೆ. ಮಧ್ಯದ ವೃತ್ತದಲ್ಲಿ ವಿಷ್ಣು ಲಕ್ಷ್ಮಿ ಇದ್ದಾರೆ. ಮಧ್ಯದಲ್ಲಿ ಬ್ರಹ್ಮನ ಬದಲು ವಿಷ್ಣು ಇರುವುದು ಮತ್ತು ದಿಕ್ಕುಗಳಲ್ಲಿ ದಿಕ್ಪಾಲಕರನ್ನು ತೋರಿಸುವುದು ಈ ಶಿಲ್ಪದ ವಿಶೇಷತೆ. ಶಿಲ್ಪ ಗ್ರಂಥಗಳ ಮೇರೆಗೆ ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯ ದಿಕ್ಕುಗಳಿಗೆ ಕ್ರಮವಾಗಿ ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ವಾಯು, ಕುಬೇರ ಹಾಗೂ ಈಶಾನ ಇವರು ದಿಕ್ಪಾಲಕರೆಂದು ನಿಯಮಿತರು.

---

[7] ಪಾಡಿಗರ ಶ್ರೀನಿವಾಸ 1997, 'ವಾಸ್ತುಶಿಲ್ಪ', ಕರ್ನಾಟಕ ಚರಿತ್ರೆ, ಸಂಪುಟ-1, (ಸಂ.), ಹಂಪಿ, ಪು.480.

ಶಾಕ್ತ ಮೂರ್ತಿಗಳು :

ಮಹಿಷಾಸುರ ಮರ್ಧಿನಿ :

ಶೈವ ಗುಹೆಯ ಉಪಗುಹೆಯಲ್ಲಿ ವೈಶಿಷ್ಟ್ಯಪೂರ್ಣವಾದ ಮಹಿಷಮರ್ಧಿನಿ ಶಿಲ್ಪವಿದೆ. ತನ್ನ ಎಡಗೈಯಿಂದ ಮಹಿಷ ರೂಪದ ರಕ್ಕಸನ ಬಾಲ ಹಿಡಿದು ನೆಲದಿಂದ ಮೇಲಕ್ಕೆ ಎತ್ತಿದ್ದಾಳೆ. ಬಲಗಾಲನ್ನು ಆತನ ತಲೆಯ ಮೇಲಿಟ್ಟು ತ್ರಿಶೂಲದಿಂದ ಇರಿದಿದ್ದಾಳೆ. ಅದು ಮಹಿಷನ ತಲೆಯನ್ನು ಭೇದಿಸಿ ನೆಲವನ್ನು ಮುಟ್ಟಿದೆ. ಚತುರ್ಭುಜೆಯಾದ ದೇವಿಯು ಇನ್ನೆರಡು ಕೈಗಳಲ್ಲಿ ಶಂಖ, ಚಕ್ರಗಳನ್ನು ಹಿಡಿದಿದ್ದಾಳೆ. ಅವಳು ವಿವಿಧ ಆಭರಣಗಳಿಂದ ಭೂಷಿತಳು. ನಾಟ್ಯಭಂಗಿಯನ್ನು ಹೋಲುವ ಆಕೆಯ ಲಾಲಿತ್ಯಮಯ ಮೈ ಮಣಿತಗಳು ಹಾಗೂ ನಗುವೊಗ ಮೊದಲಾದವು ರಕ್ಕಸನ ಸಂಹಾರವು ಆಕೆಗೆ ಒಂದು ಲೀಲೆ ಮಾತ್ರ ಎಂದು ಸೂಚಿಸುವಂತಿದೆ.

ಐಹೊಳೆಯ ರಾವಣಫಡಿಯಲ್ಲಿ ಮಹಿಷಮರ್ಧಿನಿಯು 8 ಕೈಗಳಿಂದ ಶಿಲ್ಪಿತಳಾಗಿದ್ದಾಳೆ. ಅವಳ ಪಕ್ಕದಲ್ಲಿ ಸಿಂಹವಿರುವುದೊಂದು ವಿಶೇಷ ಅಂಶ. ಅಸುರನ ದವಡೆಯನ್ನು ಹಿಡಿದು ಆತನ ತಲೆಯನ್ನೆ ಹಿಂದಕ್ಕೆ ಬಗ್ಗಿಸುವಲ್ಲಿ ದೇವಿಯ ಶಕ್ತಿ ಪ್ರಕಟಿತವಾಗಿದೆ. ದುರ್ಗದೇವಾಲಯದ ಹೊರ ಕೋಷ್ಠದಲ್ಲಿಯ ಮಹಿಷಾಸುರಮರ್ದಿನಿ ಶಿಲ್ಪವು ಚಾಲುಕ್ಯರ ಕಾಲದ ಉತ್ಕೃಷ್ಟ ಕಲಾಕೃತಿಗಳಲ್ಲಿ ಒಂದು.

ಇನ್ನೊಂದು ವಿಶಿಷ್ಟ ಪ್ರತಿಮಾ ಲಕ್ಷಣಗಳಿರುವ ಮಹಿಷಾಸುರ ಮರ್ಧಿನಿಯ ಮೂರ್ತಿಯನ್ನು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಅಂತರಾಳದ ಚಿಕ್ಕ ಕೋಣೆಯಲ್ಲಿ ಕಾಣುತ್ತೇವೆ. ಚಾಲುಕ್ಯರ ಕಾಲದ ಮಹಿಷಮರ್ದಿನಿ ಶಿಲ್ಪದ ಬೆಳವಣಿಗೆಯ ಅಂತಿಮ ಹಂತವನ್ನು ಇದು ಸೂಚಿಸುತ್ತದೆ.

ಲಜ್ಜಾಗೌರಿ :

ಲಜ್ಜಾಗೌರಿ ವೈಶಿಷ್ಟ್ಯಪೂರ್ಣ ಜನಪದರ ದೇವತೆ. ಇವಳು ಸಂತಾನ ನೀಡುವ ದೇವತೆ ಎನಿಸಿದ್ದಾಳೆ. ಇಂದಿಗೂ ಬಾದಾಮಿಯ ಪರಿಸರದಲ್ಲಿ ಪುತ್ರಾಕಾಂಕ್ಷಿ ಮಹಿಳೆಯರು ಈ ದೇವಿಯನ್ನು ಪೂಜಿಸುವ ಸಂಪ್ರದಾಯವಿದೆ. ಚಾಲುಕ್ಯರ ಮಹತ್ವದ ಸ್ಥಳಗಳಲ್ಲಿ ಲಜ್ಜಾಗೌರಿಯ ಶಿಲ್ಪಗಳು ದೊರತಿವೆ. 1–2ನೆಯ ಶತಮಾನದ ಸುಡಾವೆ ಮಣ್ಣಿನ ಲಜ್ಜಾಗೌರಿ ಗೊಂಬೆಗಳು ದೊರೆತಿವೆ. ಸ್ತ್ರೀಯ ಅಂಗಾತವಾಗಿ ಮಲಗಿರುವಂತೆ ಶಿಲ್ಪದ ರಚನೆ ಇರುತ್ತದೆ. ಈ ಶಿಲ್ಪಕ್ಕೆ ಮುಖವಿರದೆ ಅದರ ಜಾಗದಲ್ಲಿ ಕಮಲಪುಷ್ಪವಿರುತ್ತದೆ. ಸ್ತ್ರೀಯ ಎರಡೂ ಕೈಗಳಲ್ಲಿ ಒಂದೊಂದು ಕಮಲ ಪುಷ್ಪವಿರುವುದು ಈ ಶಿಲ್ಪದ

ಲಕ್ಷಣ. ಬಾದಾಮಿಯ ಲಜ್ಜಾಗೌರಿಯಲ್ಲಿ ಈ ಶಿಲ್ಪ ಲಕ್ಷಣಗಳು ಸ್ಪಷ್ಟವಿವೆ. ಅವಳು ಆಭರಣಗಳಿಂದ ಅಲಂಕೃತಳಾಗಿದ್ದಾಳೆ. ಧರಿಸಿದ ಅದೋವಕ್ರ ವಸ್ತ್ರ ಮೇಲೆ ಸರಿಸಿರುವಂತೆ ಶಿಲ್ಪಿ ಸೂಚಿಸಿದ್ದಾನೆ.[8]

ಗಜಲಕ್ಷ್ಮಿ :

ಪ್ರಾಚೀನ ಶಿಲ್ಪಗಳಲ್ಲಿ ಕಮಲದ ಮೇಲೆ ಕುಳಿತಿರುವ ಲಕ್ಷ್ಮಿ ಶಿಲ್ಪಿತಳಾಗಿದ್ದಾಳೆ. ಶೈವ ಗುಹಾಲಯದ ಕಂಬ 13ರಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಲಕ್ಷ್ಮಿ ಕಮಲದ ಮೇಲೆ ಆಸೀನಳಾಗಿದ್ದು ಎಡಬಲಗಳಲ್ಲಿ ಒಬ್ಬೊಬ್ಬ ಗಣರಿದ್ದಾರೆ. ಮೇಲೆ ಕುಂಭಗಳಿಂದ ದೇವಿಗ ಅಭಿಷೇಕ ಮಾಡುವ ಎರಡು ಆನೆಗಳನ್ನು ಕೆತ್ತಲಾಗಿದೆ. ಈ ಆನೆಗಳು ಶಂಖ ಮತ್ತು ಪದ್ಮ ಎಂಬ ನಿಧಿಗಳನ್ನು ಸೂಚಿಸುತ್ತವೆ.[9] ಮೊದಲನೆಯ ನರಸಿಂಹವರ್ಮನ ಕಾಲದ ವಾಸ್ತು ರಚನೆಗಳಲ್ಲಿ ಗಜಲಕ್ಷ್ಮಿ ಶಿಲ್ಪವು ಮೊದಲ ಬಾರಿಗೆ ಬಳಕೆಯಲ್ಲಿ ಬಂದಂತೆ ಕಂಡುಬರುತ್ತದೆ.[10] ಆದ್ದರಿಂದ ಚಾಲುಕ್ಯರು ಪಲ್ಲವರ ನಾಡಿಗೆ ನೀಡಿದ ಕಲಾ ಕೊಡುಗೆಗಳಲ್ಲಿ ಗಜಲಕ್ಷ್ಮಿ ಶಿಲ್ಪವೂ ಒಂದು. ಚಾಲುಕ್ಯ ಮತ್ತು ಚಲುಕ್ಯೋತ್ತರ ಕಾಲದಲ್ಲಿ ಈ ಶಿಲ್ಪವು ಲಲಾಟಜಾಬದಲ್ಲಿ ಕಾಣಿಸಿಕೊಳ್ಳುವುದು ಒಂದು ಪರಂಪರೆಯೇ ಆಗಿದೆ.

ಸಪ್ತ ಮಾತೃಕೆಯರು :

ಏಳು ಸ್ತ್ರೀದೇವತೆಯರ ಶಿಲ್ಪಗಳನ್ನು ಒಂದೇ ಶಿಲ್ಪಪಟ್ಟಿಕೆಯಲ್ಲಿ ಇಲ್ಲವೆ ಬಿಡಿ ಶಿಲ್ಪಗಳಾಗಿ ಕಂಡರಿಸಲಾಗಿರುತ್ತದೆ. ಈ ದೇವತೆಗಳೆಂದರೆ ಕ್ರಮವಾಗಿ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ.[11] ಐತಿಹಾಸಿಕವಾಗಿ ಈ ಸ್ತ್ರೀ ದೇವತೆಗಳ ಪ್ರಾಚೀನತೆಯನ್ನು ಗುಪ್ತರ ಕಾಲದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.[12] ಚಾಲುಕ್ಯರ ಕಾಲದ ಅತ್ಯಂತ ಮನಮೋಹಕ ಸಪ್ತ ಮಾತೃಕೆಯರು ಐಹೊಳೆಯ ರಾವಣಫಡಿಯಲ್ಲಿ ಕಾಣಸಿಗುತ್ತಾರೆ. ನಟರಾಜನ ಬಲಗಡೆಯ ಗೋಡೆಯಲ್ಲಿ ಕ್ರಮವಾಗಿ ವಾರಾಹಿ, ಇಂದ್ರಾಣಿ ಚಾಮುಂಡಂ ನಿಂತಿದ್ದಾರೆ. ಸಪ್ತಮಾತೃಕೆಯರ ಹತ್ತಿರ

---

[8] E.I., XXXII, 21.

[9] ಪಂಚಮುಖಿ ಆರ್.ಎಸ್., 1967, ಪೂರ್ವೋಕ್ತ, ಭಾಗ-2, ಪು.64.

[10] ಅದೇ.

[11] ಬ್ರಾಹ್ಮಿ ಮಹೇಶ್ವರಿ ಜೈವೆ ಕೌಮಾರೀ ವೈಷ್ಣವೀ ತಥಾ ಮೊಹೇಂದ್ರೀ ಚೈವ ವಾರಾಹೀ ಚಾಮುಂಡಾ ಸಪ್ತ ಮಾತರಃ!.

[12] ಮಾತೃಕೆಯರೆಂದು ಹೇಳಲಾಗುವ.

ವಿನಾಯಕ ಮತ್ತು ವೀರೇಶ್ವರರು ಇರಬೇಕೆಂಬ ನಿರ್ದೇಶನವಿದೆ.[13] ಆದರೆ ಪ್ರಸ್ತುತ ಶಿಲ್ಪದಲ್ಲಿ ಗಣೇಶ, ಕುಮಾರರಿದ್ದಾರೆ. ಕಾಲಕ್ರಮೇಣ ಸಪ್ತಮಾತೃಕೆಯರ ಶಿಲ್ಪದಲ್ಲಿ ವೀಣಾಧರ ವೀರಭದ್ರನು ಸೇರಿಕೊಂಡನೆಂದು ಗ್ರಹಿಸಲಾಗಿದೆ.[14] ಐಹೊಳೆಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಚಾಲುಕ್ಯರ ಕಾಲದ ಅನೇಕ ಸಪ್ತಮಾತೃಕಾ ಶಿಲ್ಪಪಟ್ಟಿಕೆಗಳನ್ನು ಕಾಣಬಹುದು. ಭದ್ರನಾಯಕನ ಜಾಲಿಹಾಳದ ಹುಲಿಗೆಮ್ಮನ ಕೊಳ್ಳದ ಗುಹೆಯಲ್ಲಿ ಚಲುಕ್ಯರ ಕಾಲದ ಸಪ್ತಮಾತೃಕಾ ಶಿಲ್ಪಗಳು ಬಿಡಿಬಿಡಿಯಾಗಿ ಚಿತ್ರಿತರಾಗಿದ್ದಾರೆ.

ಎಂಟನೆಯ ಶತಮಾನದ್ದೆಂದು ತಿಳಿಯಲಾದ ಮಾತೃಕೆಯರ ಶಿಲ್ಪವೊಂದು ಬಾದಾಮಿಯ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿದೆ.[15] ಇದರಲ್ಲಿ ಇಬ್ಬರು ಮಾತೆಯರು ಮಾತ್ರ ಕೆತ್ತನೆಗೊಂಡಿದ್ದಾರೆ. ಹಾಗೆಂದೆ ಮಾತ್ರಕ್ಕೆ ಇದು ತುಂಡಾದ ಭಾಗವಲ್ಲ. ಇಬ್ಬರು ದೇವತೆಗಳನ್ನು ಒಳಗೊಂಡ ಪೂರ್ಣ ಶಿಲ್ಪವದು. ಅವರ ವಾಹನಗಳು ಚಿತ್ರಿತವಾಗಿಲ್ಲ. ಜಪಸರವನ್ನು ಹಿಡಿದ ದೇವಿ ಬ್ರಾಹ್ಮಿ ಎಂದೂ ಚಕ್ರಧಾರಿಯಾಗಿರುವವಳು ವೈಷ್ಣವಿ ಎಂದೂ ಗುರುತಿಸಬಹುದು.

ಕೆಂಡೂರಿನ ಕಾಡಿನಲ್ಲಿ ಎರಡು ತುಂಡಾಗಿ ಬಿದ್ದಿದ್ದ ಸಪ್ತ ಮಾತೃಕೆಯರ ಶಿಲ್ಪಪಟ್ಟಿಕೆ ಇತ್ತೀಚೆಗೆ ಈ ಪ್ರಬಂಧಕಾರನ ಕಣ್ಣಿಗೆ ಬಿದ್ದಿತು.[16] ಈ ಶಿಲ್ಪದಲ್ಲಿ ಬ್ರಾಹ್ಮಿಯ ಬಲಕ್ಕೆ ವೀರೇಶ್ವರ ಹಾಗು ಚಾಮುಂಡಿಯ ಎಡಕ್ಕೆ ಗಣೇಶ ಇರುತ್ತದೆ. ಏಕೆಂದರೆ ಬ್ರಾಹ್ಮಿಯ ಬಲಭಾಗದಲ್ಲಿ ವಿನಾಯಕನ ಮೂರ್ತಿಯನ್ನು ಮತ್ತು ಚಾಮುಂಡಿಯ ಎಡಭಾಗದಲ್ಲಿ ವೀರೇಶ್ವರನನ್ನು ಇರಿಸಬೇಕೆಂಬ ನಿರ್ದೇಶನವಿದೆ.[17]

ಸರಸ್ವತಿ :

ಚಾಲುಕ್ಯರ ಕಾಲದಲ್ಲಿ ಸರಸ್ವತಿ ರೂಪದಲ್ಲಿ ದೇವಿಯನ್ನು ಪೂಜಿಸುವುದು ಕಂಡುಬರುವುದಿಲ್ಲ. ಕಲ್ಯಾಣ ಚಾಲುಕ್ಯರಲ್ಲಿ ಸರಸ್ವತಿಯು ವ್ಯಾಪಕವಾಗಿ ಪೂಜೆಗೊಂಡ ಸಂಗತಿ ಸರ್ವವಿಧಿತ ಬಾದಾಮಿ

---

[13] ಶ್ರೀಮತ್ಸ್ಯ ಪುರಾಣ, ಕನ್ನಡಕ್ಕೆ ಪಂಡರೀನಾಥ ಚಾರ್ಯ ಗಲಗಲಿ ಹುಬ್ಬಳ್ಳಿ, ಪು.976.

[14] ಅ. ಸುಂದರ 1977, ಕರ್ನಾಟಕ ಭಾರತೀಯ ಸಂಪುಟ–9, ಸಂಚಿಕೆ–4, ಧಾರವಾಡ, ಪು.87.

[15] ಬಾದಾಮಿ ಪುರಾತತ್ವ, ವಸ್ತು ಸಂಗ್ರಹಾಲಯ, ಶಿಲ್ಪ ಸಂಖ್ಯೆ–34.

[16] ಅದೇ.

[17] ರಾಮಚಂದ್ರರಾವ್ ಎಸ್.ಕೆ., 1975, ಪೂರ್ವೋಕ್ತ, ಪು.173.

ಪರಿಸರದಲ್ಲಿಯೂ ಸರಸ್ವತಿ ಆರಾಧನೆ ನಡೆಯುತ್ತಿತ್ತೆಂಬುದಕ್ಕೆ ಮಹಾಕೂಟದಲ್ಲಿರುವ ದೊಡ್ಡ ಗಾತ್ರದ ಸುಂದರ ಸರಸ್ವತಿ ವಿಗ್ರಹವೇ ಸಾಕ್ಷಿ. ವಿಜಯನಗರ ಅರಸರ ಕಾಲದ ಸರಸ್ವತಿ ಶಿಲ್ಪವೊಂದು ಅರಳಿತೀರ್ಥದ ಶಿಲ್ಪ ಸಮೂಹದಲ್ಲಿದೆ.[18]

4. ಜೈನ ಶಿಲ್ಪಗಳು :

ಚಾಲುಕ್ಯರು ಪಾರ್ಶ್ವನಾಥನ ಜೊತೆಗೆ ಬಾಹುಬಲಿ ಮತ್ತು ಮಹಾವೀರರ ಶಿಲ್ಪಗಳನ್ನು ಕೆತ್ತಿಸಿದರು. ಜೊತೆಗೆ ಯಕ್ಷ-ಯಕ್ಷಿಯರಿಗೂ ಅವರ ಶಿಲ್ಪಗಳಲ್ಲಿ ಜಾಗ ದೊರಕಿತು. ಬಾದಾಮಿ ಮತ್ತು ಐಹೊಳೆಯ ಜಿನಾಲಯಗಳ ಗೋಡೆಗಳ ಮೇಲೆ ಪಾರ್ಶ್ವನಾಥ ಮತ್ತು ಬಾಹುಬಲಿ ಶಿಲ್ಪಗಳನ್ನು, ಗರ್ಭಗೃಹವನ್ನು ಮಹಾವೀರ ಶಿಲ್ಪವನ್ನು ಕಂಡರಿಸಿ ದಕ್ಷಿಣದಲ್ಲಿ ಬೆಳೆಯಿತ್ತೆನ್ನಬಹುದು.

ಬಾಹುಬಲಿ :

ಬಾಹುಬಲಿ ಒಬ್ಬ ಅರ್ಹತನಾದರೂ ಆತನ ಶಿಲ್ಪವು ವ್ಯಾಪಕವಾಗಿ ಪೂಜಿತವಾಗಿದೆ. ದಕ್ಷಿಣ ಮತ್ತು ಪಶ್ಚಿಮ ಭಾರತದ ಜಿನಾಲಯಗಳಲ್ಲಿ ಬಾಹುಬಲಿ ಶಿಲ್ಪವಿರುವುದು ಸಾಮಾನ್ಯ.

ಬಾದಾಮಿ ಐಹೊಳೆಗಳಲ್ಲಿ ಮಾನವಾಕೃತಗಿಂತ ಸ್ವಲ್ಪ ದೊಡ್ಡದಾದ ಪ್ರತಿಮೆಗಳನ್ನು ರೂಪಿಸಲಾಗಿದೆ. ಬಾದಾಮಿ ಜಿನಾಲಯದ ಮೊಗಸಾಲೆಯ ಸುಂದರ ಶಿಲ್ಪ ಇದೆ. ಕೂದಲನ್ನು ಬಾಚಿ ಕಟ್ಟಲಾಗಿದೆ. ಆತನ ಮುಗುಳುನಗೆಯಲ್ಲಿ ಆತ್ಮಿಕ ಆನಂದನ ಅಭಿವ್ಯಕ್ತಿಯಿದೆ. ಬಾಹುಬಲಿ ಶಿಲ್ಪದ ಕೆತ್ತನೆಯನ್ನು ಪೂರ್ಣಗೊಳಿಸಲಾಗಿದೆ. ಆದರೆ ಉಳಿದ ಅಪ್ರಧಾನ ಶಿಲ್ಪಗಳ ಕೆತ್ತನೆಯನ್ನು ಶಿಲ್ಪಿಯು ಉದ್ದೇಶಪೂರ್ವಕವಾಗಿ ರೂಪುರೇಷೆಗಳಲ್ಲಿ ತೋರಿಸಿದ್ದಾರೆ. ಸೋದರಿಯರಾದ ಬ್ರಾಹ್ಮಿ ಮತ್ತು ಸುಂದರಿಯರ ಮಾಧವಿಲತೆಯನ್ನು ಬಿಡಿಸಲು ನಿಂತಿದ್ದಾರೆ.

ಬಾದಾಮಿಯಲ್ಲಿ ಗೌಣ ಶಿಲ್ಪಗಳನ್ನು ಪೂರ್ಣವಾಗಿ ಕಂಡರಿಸದೆ ಬಾಹುಬಲಿ ಶಿಲ್ಪವನ್ನು ಮಾತ್ರ ಸುಂದರವಾಗಿ ಕೆತ್ತಿ ಪೂರ್ತಿಗೊಳಿಸಿರುವ ಕಲಾತಂತ್ರ ಶ್ಲಾಘನೀಯವಾಗಿದೆ. ಅದರಲ್ಲೂ ದೇಹದ ಚಿತ್ರಣಕ್ಕಿಂತ ಮುಖದ ಪ್ರಸನ್ನ ಭಾವ ನಿರೂಪಣೆಗೆ ರೂವಾರಿಯೂ ಪ್ರಧಾನ್ಯ ನೀಡುದುದು ಸ್ಪಷ್ಟ.

---

[18] ಪಾಡಿಗಾರ ಶ್ರೀನಿವಾಸ 1976, Sculptures in Aralitirtha, P.25.

ಬಾಹುಬಲಿ ದೇಹದ ಸೌಂದರ್ಯಕ್ಕಿಂತ ಆತನ ಮನಸ್ಸಿನ ಪರಮಾನಂದದ ಅಭಿವ್ಯಕ್ತಿ ಸ್ಫುಟವಾಗಿದೆ. ಚಾಲುಕ್ಯರ ಈ ಮೇಲಿನ 2 ಶಿಲ್ಪಗಳೇ ದಕ್ಷಿಣ ಭಾರತ ಅತಿ ಪ್ರಾಚೀನ ಬಾಹುಬಲಿ ಶಿಲ್ಪಗಳೆನಿಸಿವೆ.[19]

ಪಾರ್ಶ್ವನಾಥ :

ಪ್ರಾಚೀನ ಕರ್ನಾಟಕದ ಜೈನಶಿಲ್ಪಗಳಲ್ಲಿ 23ನೆ ತೀರ್ಥಂಕರನಾದ ಪಾರ್ಶ್ವನಾಥನ ಶಿಲ್ಪಗಳೇ ಹೆಚ್ಚು. ತೀರ್ಥಂಕರರಲ್ಲಿ ಇವನೇ ಹೆಚ್ಚು ಜನಪ್ರಿಯ.

ಬಾದಾಮಿಯ ಜಿನಾಲಯದ ಪಶ್ಚಿಮ ಗೋಡೆಯ ಮೇಲೆ ಪಾರ್ಶ್ವನಾಥನು ಕಾರ್ಯೋತ್ಸರ್ಗ ಭಂಗಿಯಲ್ಲಿರುವಂತೆ ಮಾನವಕೃತಿಗಿಂತ ತುಸು ದೊಡ್ಡ ಗಾತ್ರದಲ್ಲಿ ಶಿಲ್ಪಿತನಾಗಿದ್ದಾನೆ. ಆತನ ತಲೆಯ ಮೇಲೆ 5 ಹೆಡೆಯ ನಾಗನನ್ನು ಕೆತ್ತಲಾಗಿದೆ. ಪಾರ್ಶ್ವನಾಥನ ಬಲಕ್ಕೆ ಪದ್ಮಾವತಿಯು ನಾಗನ ಹೆಡೆಯ ಮೇಲೆ ಕೊಡೆಯನ್ನು ಚಾಚಿದ್ದಾಳೆ. ಎಡಬದಿಯಲ್ಲಿ ಧರಣೇಂದ್ರನು ಕುಳಿತಿದ್ದಾನೆ. ಕಮಠನು ಮೇಲಿಂದ ಮಳೆಗೆರೆಯುತ್ತಿದ್ದಾನೆ ಇದು ಬಹಳ ಮನಮೋಹಕವಾಗಿದೆ.

ಐಹೊಳೆಯ ಮೀನ ಬಸ್ತಿ ಗರ್ಬಗೃಹದ ಬಲಗಡೆಯ ಕೋಣೆಯಲ್ಲಿ ಸುಮಾರು 2.5 ಮೀ. ಉದ್ದ ಗೋಡೆಯ ಮೇಲೆ ಪಾರ್ಶ್ವನಾಥನ ಜೀವನಕ್ಕೆ ಸಂಬಂಧಿಸಿದ ಘಟನೆಗಳನ್ನು ಕೆತ್ತಲಾಗಿದೆ. ಪಾರ್ಶ್ವನು ಮೊದಲು ರಾಜಭೋಗವನ್ನು ಅನುಭವಿಸುತ್ತಿರುವಂತೆ ತೀರ್ಥಂಕರನಾದ ಬಳಿಕ ಯೋಗಾಸನದಲ್ಲಿ ಕುಳಿತಿರುವಂತೆ, ಧರಣೇಂದ್ರ ಪದ್ಮಾವತಿಯರು ಪಕ್ಕದಲ್ಲಿರುವಂತೆ ಹಾಗೂ ಅಭಿಷೇಕ ಮಾಡಲು ಇಂದ್ರನು ಐರಾವತದ ಮೇಲೆ ಕುಳಿತು ಬರುತ್ತಿರುವಂತೆ ಕೆತ್ತನೆ ಮಾಡಲಾಗಿದೆ. ದಕ್ಷಿಣ ಭಾರತದಲ್ಲಿಯೇ ಈ ಬಗೆಯ ಶಿಲ್ಪ ಇದೊಂದೆ ಎಂದು ಹೇಳಲಾಗುತ್ತದೆ.[20]

ಮಹಾವೀರ :

ಬಾದಾಮಿಯ ಜಿನಾಲಯದ ಗರ್ಭಗೃಹದಲ್ಲಿ ಕೊನೆಯ ತೀರ್ಥಂಕರನಾದ ಮಹಾವೀರನ ಶಿಲ್ಪವನ್ನು ಕಂಡರಿಸಲಾಗಿದೆ. ಮಹಾವೀರನು ಪದ್ಮಾಸನದಲ್ಲಿ ಧ್ಯಾನಸ್ಥನಾಗಿ ಕುಳಿತ ದೃಶ್ಯವದು. ಶಿಲ್ಪವು ಗರ್ಭಗೃಹದ ದಕ್ಷಿಣ ಗೋಡೆಯನ್ನೆಲ್ಲ ಆವರಿಸಿದೆ.

---

[19] ಎಪಿಗ್ರಫಿಯ ಇಂಡಿಯಾ–3, ಪು.1.

[20] Indian Artiquiterex, P.123. The praise of Badami, Aihole, Pattadakal and Mahakoota, Margi Publication, Encyclopedia of India, The South Indian Art and Architecture.

[illegible]

ಮಹಾವೀರನು ಗುಂಗುರುಕೂದಲಿನಿಂದ ಶೋಭಿತನಾಗಿದ್ದಾನೆ. ಆತನ ಉದ್ದದ ಕಿವಿಗಳು ಎದ್ದು ಕಾಣುತ್ತವೆ. ಹಿಂದೆ ತುಸು ದೀರ್ಘ ವೃತ್ತಾಕಾರದ ಪ್ರಭಾವಳಿ ಇದ್ದು ಮೇಲೆ ಮುಕ್ಕೊಡೆ ಇದೆ. ಆತನ ಹಿಂಭಾಗದಲ್ಲಿ ದಿಂಬುಗಳಿವೆ. ಮಹಾವೀರನ ಇಕ್ಕೆಲಗಳಲ್ಲಿ ಪುರುಷ ಚಾಮರಧಾರಿಗಳ ಮೇಲರ್ಧ ಭಾಗ ಮಾತ್ರ ಕೆತ್ತನೆಗೊಂಡಿದೆ. ಹಿಂಭಾಗದ ಉಳಿದ ಅವಕಾಶವಿಲ್ಲ. ಸಾಲ ಗಿಡದ ಎಲೆಗಳಿಂದ ತುಂಬಿಕೊಂಡಿದೆ. ಮೇಲೆ ಮೇಲೆ ಹಿಡಿದು ಹಾರಾಡುವ ಗಂಧರ್ವರು ಶಿಲ್ಪಗಳಾಗಿದ್ದಾರೆ. ಆಯತಾಕಾರದ ಸಿಂಹಾಸನದ ಚೌಕಟ್ಟಿನಲ್ಲಿ ಮಕರ ಚಿತ್ರಗಳ ಅಲಂಕಾರವಿದೆ. ಇದರ ಮೇಲ್ಭಾಗದಲ್ಲಿ ಎರಡು ಮೃದಂಗಗಳನ್ನು ರೂಪಿಸಲಾಗಿದೆ. ಅವುಗಳ ಎರಡು ಬದಿಗಳಲ್ಲಿ ಅವನ್ನು ನುಡಿಸುವ ಅಂಗೈಗಳನ್ನು ಮಾತ್ರ ತೋರಿಸಲಾಗಿದೆ. ಇದು ಮಹಾವೀರನು ಕೇವಲ ಜ್ಞಾನವನ್ನು ಸಂಪಾದಿಸಿದ ಸನ್ನಿವೇಶವಿರಬಹುದು. ಪೀಠದಲ್ಲಿ ಮೂರು ಸಿಂಹಗಳನ್ನು ಕಂಡರಿಸಲಾಗಿದೆ.

ಬೌದ್ಧ ಶಿಲ್ಪಗಳು :

ಬಾದಾಮಿ ಪ್ರದೇಶದಲ್ಲಿ ಕಂಡುಬರುವ ಬೌದ್ಧ ಶಿಲ್ಪಗಳು ತೀರ ಕಡಿಮೆ. ಬಾದಾಮಿಯ ಎರಡು ವೈಷ್ಣವ ಗುಹಾದೇವಾಲಯಗಳ ನಡುವೆ ನೈಸರ್ಗಿಕ ಗುಹೆಯೊಂದಿದೆ. ಇದರ ಪೂರ್ವದ ಗೋಡೆಯ ಮೇಲೆ ಮಾನವನ ಸಹಜ ಗಾತ್ರದಷ್ಟು ದೊಡ್ಡದಾದ ಬೋಧಿಸತ್ವ ಪದ್ಮಪಾಣಿ ವಿಗ್ರಹವೊಂದನ್ನು ಕೆತ್ತಲಾಗಿದೆ. ಇಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದಂತೆ ಇದು ಏಕಮಾತ್ರ ಪುರಾತತ್ತ್ವ ಅವಶೇಷವಾಗಿದೆ. ಬೋಧಿಸತ್ವದ ಮುಖವೆಲ್ಲ ಈಗ ಹಾಳಾಗಿದೆ. ಆತನ ಬಲಗೈಯಲ್ಲಿ ಪದ್ಮವಿರುವುದರಿಂದ ಅವನು ಪದ್ಮಪಾಣಿ. ಎಡಗೈ ಕಟ್ಟವಲಂಬಿತವಾಗಿದೆ. ಆತನ ಅಧೋ ವಸ್ತ್ರ ಪಾದದವರೆಗೆ ಚಾಚಿಕೊಂಡಿದೆ. ಅವನು ಕಿರೀಟ ಇಲ್ಲವೆ ಜಟಾನು ಕುಟವುಳ್ಳವನಾಗಿರಬಹುದು. ತಲೆಯ ಹಿಂಭಾಗದಲ್ಲಿ ಪ್ರಭಾವಳಿ ಇದೆ. ಪಾದದ ಬಳಿ ಒಬ ಪುರುಷನು ಕುಳಿತಿದ್ದಾನೆ. ಪ್ರಧಾನ ಶಿಲ್ಪದ ಇಕ್ಕೆಲಗಳಲ್ಲಿ ಅನೇಕ ಪುಟ್ಟ ಶಿಲ್ಪಗಳಿವೆ. ಅವು ಅಷ್ಟು ಭಯಗಳನ್ನು ಚಿತ್ರಿಸಿವೆ.

ಕಲಾತ್ಮಕವಾದ ಬೌದ್ಧ ಶೈಲ್ಪವೊಂದು ಐಹೊಳೆಯ ಚೈತ್ಯ ವಿಹಾರದ ಮೇಲ್ಗಂಡಿನಲ್ಲಿದೆ. ಅದು ವ್ಯಾಖ್ಯಾನ ಮುದ್ರೆಯಲ್ಲಿಯ ಬುದ್ಧನ ವಿಗ್ರಹವಾಗಿದೆ. ಬುದ್ಧನು ಪದ್ಮಪೀಠದ ಮೇಲೆ ಸತ್ವಪರ್ಯಂಕುಸನದಲ್ಲಿ ಕುಳಿತಿದ್ದಾನೆ. ಆತನ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಎಡಗೈಯನ್ನು

ಬಲಗಾಲಿನ ಮೇಲೆ ಅಂಗೈಯನ್ನು ಮೇಲೆ ಮಾಡಿ ಇರಿಸಲಾಗಿದೆ. ದೇಹವು ಭಾಗಶಃ ಬಟ್ಟೆಯಿಂದ ಆವೃತವಾಗಿದೆ. ತಲೆಯ ಮೇಲೆ ಮುಕ್ಕೊಡೆಯಿದೆ. ಇಕ್ಕೆಲಗಳಲ್ಲಿ ಚಾಮರಧಾರಿಯರಿದ್ದಾರೆ.

ಬ) ಲೌಕಿಕ ಶಿಲ್ಪಗಳು :

ಲೌಕಿಕ ಶಿಲ್ಪಗಳು ಸಾಮಾನ್ಯವಾಗಿ ಚಿಕ್ಕವು. ಅವು ಕಂಬಗಳ ಮೇಲೆ ಚೌಕಕಾರ, ವೃತ್ತಾಕಾರ ಇಲ್ಲವೆ ಅರ್ಧ ವೃತ್ತಾಕಾರದ ಉಬ್ಬು ಶಿಲ್ಪಗಳ್ಳಲಿ ವಿಶೇಷವಾಗಿ ಕಂಡುಬರುತ್ತವೆ. ಗುಹಾದೇವಾಲಯ, ರಾಚನಿಕ ಮಂದಿರಗಲ ಅಧಿಷ್ಠಾನ ಭಾಗಗಳಲ್ಲಿ ಲೌಕಿಕ ಜೀವಿಸಿದ ಚಿತ್ರಣ ನೀಡುವ ಗಣಶಿಲ್ಪಗಳಿವೆ. ಇವು ಸಾಮಾನ್ಯವಾಗಿ ದೀರ್ಘ ಪಟ್ಟಿಕೆಗಳಲ್ಲಿವೆ.

ಮಾನವನ ಐಹಿಕ ಜೀವನದ ನೂರೆಂಟು ರೂಪಗಳು ಈ ಲೌಕಿಕ ಶಿಲ್ಪಗಳಿಗೆ ವಸ್ತುಗಳು , ಬಾದಾಮಿ ಶಿಲ್ಪಕಲೆಯಲ್ಲಿ ಅರಸರು, ಸೇವಕರು, ಗುರು–ಶಿಷ್ಯರು, ಹಾವಾಡಿಗ, ಕುಸ್ತಿಪಟು, ವಿಭಿನ್ನ ಪ್ರಕಾರದ ಪ್ರಾಣಿಗಳು, ಪಕ್ಷಿಗಳು, ಗಿಡಬಳ್ಳಿಗಳು, ಜ್ಯಾಮಿತಿ ನಕ್ಷೆಗಳು, ಪುಷ್ಪ ವಿನ್ಯಾಸಗಳು ಕಾಣಸಿಗುತ್ತವೆ. ವ್ಯಕ್ತಿಗಳು ಆಟ, ಪ್ರಾಣಿ–ವಿನೋದ, ಸಂಗೀತ, ನೃತ್ಯ, ಇಲ್ಲವೆ ಯುದ್ಧ ನಿರತರಾಗಿರುವಂತೆ ಚಿತ್ರಿತರಾಗಿದ್ದಾರೆ. ಪಟ್ಟದಕಲ್ಲಿನ ನೀತಿಬೋಧಕ ಪಂಚತಂತ್ರ ಕತೆಗಳ ಶಿಲ್ಪಗಳೂ ಈ ಗುಂಪಿಗೆ ಸೇರುತ್ತವೆ. ಇವೆಲ್ಲ ವಸ್ತುದೃಷ್ಟಿಯಿಂದ ಮಹತ್ವದ ಶಿಲ್ಪಗಳಾಗಿರುವಂತೆ ಕಲಾದೃಷ್ಟಿಯಿಂದ ಮಹತ್ವದ್ದೆನಿಸುವುದಿಲ್ಲ. ಆದಾಗ್ಯೂ ಕೆಲವು ಲೌಕಿಕ ಶಿಲ್ಪಗಳಲ್ಲಿ ರೂವಾರಿಗಳು ತಮ್ಮ ಶಿಲ್ಪಕಲಾ ಚಾತುರ್ಯವನ್ನು ಪ್ರಕಟಿಸಿದ್ದಾರೆ.

ದ್ವಾರಪಾಲಕರು :

ಬಾದಾಮಿಯ ಪುರಾತತ್ತ್ವ ವಸ್ತು ಸಂಗ್ರಹಾಲಯದ ಪ್ರವೇಶದ್ವಾರದ ಎಡ–ಬಲಗಳಲ್ಲಿ ಮಾನವ ಗಾತ್ರಕ್ಕಿಂತ ದೊಡ್ಡದಾದ ಎರಡು ಸಮಗಾತ್ರದ ಏಕರೂಪ ದ್ವಾರಪಾಲಕರ ಶಿಲ್ಪಗಳಿವೆ. ಇವು ಮೂಲತಃ ಸಮೀಪದ ಮಲ್ಲಿಕಾರ್ಜುನ ದೇವಾಲಯದ ದ್ವಾರಪಾಲಕರ ವಿಗ್ರಹಗಳು. ಏರಿದ ಹುಬ್ಬುಗಳು, ಅಗಲಗೊಂಡ ಕಣ್ಣುಗಳು ಮತ್ತು ಕೋರೆ ಹಲ್ಲುಗಳಿಂದ ಭಯ ಹುಟ್ಟಿಸುವ ದ್ವಾರಪಾಲಕರಿರುವರು. ದ್ವಾರದ ಎಡಕ್ಕೈ ಇರುವ ಶಿಲ್ಪದ ಕೆತ್ತನೆ ಪೂರ್ಣಗೊಂಡಿದೆ. ಚತುರ್ಭುಜನಾಗಿರುವ ಈತನ ಮೇಲಿನ 2 ಕೈಗಳಲ್ಲಿ ಡಮರು ಕಪಾಲಗಳಿವೆ. ಕೆಳಗಿನ ಬಲಗೈಯಲ್ಲಿ ಸರ್ಪ ಸುತ್ತಿಕೊಂಡಿರುವ ಗದೆ ಇದೆ. ಎಡಗೈ ಅಭಯ ಮುದ್ರೆಯಲ್ಲಿದೆ. ತ್ರಿಕೋನಾಕಾರದ ಕಿರೀಟ, ನಾಗಕುಂಡಲ, ಕೊರಳಹಾರ,

ಭುಜಕೀರ್ತಿ, ಕೈಕಡಗ, ನಡುಅಪ್ಪಿಟ್ಟ, ಕಾಲ್ಗಡಿಗ, ರುಂಡ ಮಾಲೆಗಳಿಂದ ಆತನು ಅಲಂಕೃತನಾಗಿದ್ದಾನೆ. ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಈ ಬಗೆಯ ಆಭರಣ ಶ್ರೀಮಂತಿಕೆ ಇದ್ದು ಅದಕ್ಕೆ ಅನೇಕ ಮುತ್ತಿನ ಎಳೆಗಳು ನೇತುಬಿಟ್ಟಂತೆ ಇರುತ್ತದೆ. ಈ ಶಿಲ್ಪ ವಿಶೇಷವನ್ನು ದ್ವಾರಪಾಲಕರ ಶಿಲ್ಪಗಳಲ್ಲಿ ಕಾಣುತ್ತೇವೆ.

ಟಿಪ್ಪಣಿಗಳು :

1. ಮೈಸೂರು ರಾಜ್ಯಸರ್ಕಾರದಿಂದ ಪ್ರಕಟಿತ, ಕರ್ನಾಟಕ ಪರಂಪರೆ ಸಂಪುಟ-1, ಎಚ್. ಪದ್ಮರಾಜ – The Glory that is Iholli, Badami and Pattadkal.
2. ಸಿ. ಹಯವದನರಾವ್ (ಸಂ.), ಮೈಸೂರು ಗೆಜೆಟಿಯರ್ ಸಂಪುಟ-2, ಭಾಗ-2.
3. ಆರ್..ಜೆ. ಭಂಡಾರಕರ್ – Early History of the Deccan.
4. ಕೆ.ಎ. ನೀಲಕಂಠ ಶಾಸ್ತ್ರಿ – A History of South India.
5. ಡಾ. ಎಂ.ಎಸ್. ನಾಗರಾಜ್‌ರಾವ್ (ಸಂ.) – The Chalukyas of Badami
6. Dr. Srinivas Ritti and Dr. B.R. Gopal (Volume) Studies in South Indian History and Culture.
7. ಪ್ರೊ. ಪಿ.ಬಿ. ದೇಸಾಯಿ, ಸಂಸ್ಮರಣ ಸಂಪುಟ.
8. ಪರ್ಸಿ ಬ್ರೌನ್ – ಇಂಡಿಯನ್ ಆರ್ಟಿಟೆಕ್ಚರ್.
9. ಡಾ. ಶಿವರಾಮ ಕಾರಂತ – ಚಾಲುಕ್ಯ ವಸ್ತು ಮತ್ತು ಶಿಲ್ಪ.
10. ಡಾ. ಎಚ್. ತಿಪ್ಪೇರುದ್ರಸ್ವಾಮಿ – ಕರ್ನಾಟಕ ಸಂಸ್ಕೃತಿ ಸಮೀಕ್ಷೆ.
11. ಡಾ. ಸಿಂದಗಿ ರಾಜಶೇಖರ – ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.
12. ಎಚ್ಚೆಸ್ಕೆ (ಸಂ.) – ಅವಲೋಕನ.
13. ಡಾ. ಬಾ.ರಾ. ಗೋಪಾಲ – ಬಾದಾಮಿಯ ಚಾಲುಕ್ಯರು.
14. ಡಾ. ಎಂ.ಎಚ್. ಕೃಷ್ಣ – ಕರ್ನಾಟಕದ ಕಲೆಗಳು.
15. ಶೀಲಾಕಾಂತ ಪತ್ತಾರ – ಬಾದಾಮಿ ಶಿಲ್ಪಕಾಶಿ.
16. ಮಲ್ಲಿಕಾರ್ಜುನ ಕಲ್ಮರ – ಬಾದಾಮಿ ಮಾರ್ಗದರ್ಶಿ.
17. ಸೂರ್ಯನಾಥ ಕಾಮತ್ – ಕರ್ನಾಟಕದ ಸಂಕ್ಷಿಪ್ತ ಇತಿಹಾಸ.
18. ಪ್ರೊ. ಎಸ್.ಕೆ. ರಾಮಚಂದ್ರರಾವ್ – ಭಾರತದ ದೇವಾಲಯದ ನೆಲೆ, ಹಿನ್ನೆಲೆ.
19. Dr. S. Nagaraju, Buddist Caves of Western Indian, Agam Prakashan, New Delhi.

20. Sundararajan K.V., Karnataka Architecture and its Ramifications, Karnataka University, Dharwad.
21. History of Karnataka, H.V. Srinivas Murthy.
22. A Concise History of Karnataka - Suryakanth Kamate.
23. Bhatta - Architecture of Sculpture.
24. Nilakanta Shastri and Srinivasachari - Advanced History of India.

ಅಧ್ಯಾಯ–5

ಸಮಾರೋಪ

ಅಧ್ಯಾಯ–5

ಸಮಾರೋಪ

ಕ್ರಿ.ಶ. 600 ರಿಂದ 800ರ ವರೆಗೆ ಮಲಪ್ರಭಾ ನದಿಯ ತೀರದ ಬಳಿ ವೈಭವಯುತವಾಗಿ ಬಾದಾಮಿಯಲ್ಲಿ ಆಳ್ವಿಕೆ ಮಾಡಿದ ಬಾದಾಮಿ ಚಾಲುಕ್ಯರ ಮನೆತನವು ಹಲವು ಅರಸರುಗಳ ಆಡಳಿತವನ್ನು ಕಂಡಿತು. ಕರ್ನಾಟಕದ ಇತಿಹಾಸಕ್ಕೆ ಹೊಸದಾದ ಮತ್ತು ಮಹತ್ತರವಾದ ಆಯಾಮವನ್ನು ನೀಡಿದರು. ಜಯಸಿಂಹನು ಇವರ ವಂಶದ ಸ್ಥಾಪಕನೆಂದು ತಿಳಿದುಬಂದಿದ್ದರೂ ಇದು ಐತಿಹಾಸಿಕ ಸತ್ಯವಲ್ಲವೆಂದು ತೋರುತ್ತದೆ. ವಂಶದ ಪ್ರಥಮ ಪ್ರಸಿದ್ಧ ದೊರೆ ಒಂದನೇ ಪುಲಕೇಶಿ ಈತನು ಕದಂಬರನ್ನು ಸೋಲಿಸಿ ಈ ವಂಶದ ನಿಜವಾದ ಸ್ಥಾಪಕರೆನಿಸಿಕೊಂಡಿದ್ದಾನೆ. ಕ್ರಿ.ಶ. 543ನೇ ವರ್ಷದ ಇವನ ಬಾದಾಮಿಯ ಬಂಡೆಯ ಪ್ರಪಾತದಲ್ಲಿರುವ ಶಾಸನ. ಇವನು ಬಹಳ ಬಲಶಾಲಿಯಾಗಿದ್ದನೆಂಬ ವಿಷಯವನ್ನು ಹೊರಗೆಡಹುತ್ತದೆ. ಇವನ ಮಕ್ಕಳಾದ ಕೀರ್ತಿವರ್ಮ ಮತ್ತು ಮಂಗಳೇಶರಲ್ಲಿ ಕೀರ್ತಿವರ್ಮನು ಒಂದನೇ ಪುಲಿಕೇಶಿಯ ನಂತರ ರಾಜ್ಯವಾಳಿದನು. ತನ್ನ ತಂದೆಯಿಂದ ಪ್ರಾರಂಭಿಸಲ್ಪಟ್ಟ ಕಾರ್ಯವಾದ ಕದಂಬರ ಮೇಲಿನ ವಿಜಯವನ್ನು ಇವನು ಪೂರ್ಣಗೊಳಿಸಿ ಚಾಲುಕ್ಯರ ಸ್ಥಿತಿಯನ್ನು ಇನ್ನೂ ಉತ್ತಮಪಡಿಸಿದನು. ಇವನು ಮೌರ್ಯವಂಶದ ಸಾಮಂತರು, ತಲಕಾಡಿನ ಗಂಗರು, ಬಳ್ಳಾರಿಯಲ್ಲಿದ್ದ ನಳವಾಡಿಯ ನಳರು ಮತ್ತು ದಕ್ಷಿಣ ಕನ್ನಡದ ಅಳುಪರರನ್ನು ಸೋಲಿಸಿದನು. ಸೇಂದ್ರಕ ರಾಜನನ್ನು ಸೋಲಿಸಿ ಅವನು ಸೋದರಿಯನ್ನು ವಿವಾಹವಾದನು. ಬಾದಾಮಿಯಲ್ಲಿರುವ ಖ್ಯಾತ ವೈಷ್ಣವ ಗುಹಾಲಯ ನಿರ್ಮಾತೃವೂ ಇವನೇ. ಇವನ ಅಕಾಲಿಕ ಮರಣದ ನಂತರ ಇವನ ಸೋದರನಾದ ಮಂಗಳೇಶನು ಅಧಿಕಾರವನ್ನು ವಹಿಸಿಕೊಂಡನು. ಇವನು ಶಕ್ತಿವಂತನೂ, ಧೈರ್ಯವಂತನೂ ಆದ ದೊರೆಯಾಗಿದ್ದನು. ಕಳಚೂರಿ ಶಂಕರಗಣ ಮತ್ತು ಬುದ್ಧವರ್ಮರನ್ನು ಸೋಲಿಸಿದನು. ತನ್ನ ರಾಜ್ಯವನ್ನು ಉತ್ತರದಲ್ಲಿ ಮಹಾನದಿಯವರೆಗೆ ವಿಸ್ತರಿಸಿದನು. ಹದಿನೆಂಟು ಯುದ್ಧಗಳಲ್ಲಿ ಜಯಶಾಲಿಯಾಗಿ ರತ್ನಗಿರಿಯ ಸಮೀಪದಲ್ಲಿಉವ ರೇವತಿ ದ್ವೀಪದಲ್ಲಿ ಆಳುತ್ತಿದ್ದ ಸ್ವಾಮಿರಾಜನನ್ನೂ ಸೋಲಿಸಿ ಕೊಂದನು. ಇದರ ನೆನಪಿಗಾಗಿ ಮಹಾಕೂಟದ ದೇವಾಲಯದಲ್ಲಿ ಒಂದು ವಿಜಯ ಸ್ಥಂಭವನ್ನು ನಡೆಸಿದನು. ಇವನಿಗೆ ರಣವಿಕ್ರಮ, ಶ್ರೀಪೃಥ್ವಿವಲ್ಲಭೇಂದ್ರ, ಪರಮ ಭಾಗವತ, ರಣಪರಾಕಮ ಮುಂತಾದ

ಬಿರುದುಗಳಿದ್ದವು. ತನ್ನ ಸಹೋದರ ಕೀರ್ತಿವರ್ಮನ ಪುಣ್ಯಕ್ಕಾಗಿ ಮಂಗಳೇಶನು ಬಾದಾಮಿಯಲ್ಲಿರುವ ವೈಷ್ಣವ ಗುಹಾಲಯವನ್ನು ನಿರ್ಮಿಸಿದನು. ಕೀರ್ತಿವರ್ಮನ ಮಗನಾದ ಇಮ್ಮಡಿ ಪುಲಕೇಶಿಯು ಪ್ರಾಪ್ತವಯಸ್ಕನಾದರೂ ಅವನಿಗೆ ರಾಜ್ಯವನ್ನು ಬಿಟ್ಟುಕೊಡದಿದ್ದಾಗ ಇಮ್ಮಡಿ ಪುಲಕೇಶಿ ಇವನ ಮೇಲೆ ಯುದ್ಧ ಕೈಗೊಂಡು ಅವನನ್ನು ಕೊಂದು ಬಾದಾಮಿಯ ಚಾಲುಕ್ಯರು ಹೊಸ ಇತಿಹಾಸಕ್ಕೆ ಬುನಾದಿ ಹಾಕಿದನು. ಕ್ರಿ.ಶ. 610ರಲ್ಲಿ ಅಧಿಕಾರ ಸ್ವೀಕರಿಸಿದ ಮೇಲೆ ಚಿಕ್ಕಪ್ಪ ಮಗನ ನಡುವಿನ ಯುದ್ಧದ ಲಾಭವನ್ನು ಪಡೆದ ಇತರ ಸಾಮಂತರು ತಾವು ಸ್ವತಂತ್ರರೆಂದು ಘೋಷಿಸಿಕೊಂಡು ಇವನ ಮೇಲೆ ಯುದ್ಧಕ್ಕೆ ಬಂದರು. ಅವರಲ್ಲಿ ಅಪ್ಪಾಯಿಕ ಮತ್ತು ಗೋವಿಂದರು ಪ್ರಮುಖರು. ಆದರೆ ಇವರಲ್ಲಿ ಒಬ್ಬನು ಪುಲಕೇಶಿಯ ಅಪಾರವಾದ ಸೈನ್ಯವನ್ನು ನೋಡಿ ಓಡಿ ಹೋದರೆ ಮತ್ತೊಬ್ಬನು ಶರಣಾಗತನಾದನು. ಬನವಾಸಿಯ ಕದಂಬರು, ಆಳುಪರು ಮತ್ತು ತಲಕಾಡಿನ ಗಂಗರು ಇವರಿಂದ ಸೋಲಿಸಲ್ಪಟ್ಟರು. ಅವರು ಪುಲಕೇಶಿಯ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಉತ್ತರಭಾರತದ ಕನೋಜಿನ ರಾಜನಾದ ಹರ್ಷವರ್ಧನ ವಿರುದ್ಧ ನರ್ಮದಾ ನದಿಯ ತೀರದಲ್ಲಿ ಯುದ್ಧ ಕೈಗೊಂಡು ಅವನನ್ನು ಸೋಲಿಸಿದನು. ಪುಲಕೇಶಿಯ ಜೀವನದಲ್ಲಿ ಇದೊಂದು ಮಹತ್ವದ ಘಟನೆಯಾಗಿದೆ. ಇದರಿಂದ ಪುಲಕೇಶಿಯು ಮಹಾರಾಷ್ಟ್ರ ಕತ್ರಯ ಎಂದು ಕರೆಯಲ್ಪಡುವ 99,000 ಹಳ್ಳಿಗಳಿಂದ ಕೂಡಿರುವ ವಿಶಾಲವಾದ ರಾಜ್ಯಕ್ಕೆ ಪ್ರತಿಭಟನೆಯಿಲ್ಲದ ದೊರೆಯಾದನು. ಕತ್ರಯ ಎಂಬ ಪದವು ಅವನ ಸಾಮ್ರಾಜ್ಯದ ಮೂರು ಭಾಗಗಳಾದ ಕರ್ನಾಟಕ, ಮಹಾರಾಷ್ಟ್ರ ಮತ್ತು ಕೊಂಕಣಗಳನ್ನು ಸೂಚಿಸುತ್ತದೆ ಎಂದು ಭಾವಿಸಲಾಗಿದೆ.

ಇಮ್ಮಡಿ ಪುಲಕೇಶಿಯು ಪಲ್ಲವರ ರಾಜನಾದ ಮಹೇಂದ್ರವರ್ಮನನ್ನು ಕಂಚಿಯಲ್ಲಿ ಸೋಲಿಸಿದನು. ಪಲ್ಲವರ ಶತೃಗಳಾದ ಚೋಳ ಮತ್ತು ಪಾಂಡ್ಯರೊಡನೆ ವ್ಯವಹಾರ ತಂತಕ್ಕಾಗಿ ಸ್ನೇಹವನ್ನು ಬೆಳೆಸಿದನು. ಇವೆಲ್ಲವೂ ಅವನ ಐಹೊಳೆ ಪ್ರಶಸ್ತಿಯಲ್ಲಿ ಉಲ್ಲೇಖಿತವಾಗಿರುವುದರಿಂದ ಈ ಎಲ್ಲ ವಿಜಯಗಳು ಆ ಶಾಸನದ ಕಾಲವಾದ 634–35ಕ್ಕಿಂತ ಮುಂಚಿತವಾಗಿಯೇ ನಡೆದಿರಬೇಕೆಂದು ಊಹಿಸಲಾಗಿದೆ. ತಾನು ಗೆದ್ದ ಭಾಗಗಳನ್ನೆಲ್ಲಾ ಹಲವು ಪ್ರಾಂತ್ಯಗಳಾಗಿ ವಿಂಗಡಿಸಿ ಅವುಗಳ ಪ್ರಾಂತ್ಯಾಧಿಕಾರಿಗಳಾಗಿ ತನ್ನ ತಮ್ಮಂದಿರನ್ನು ನೇಮಿಸಿದನು. ಅವರಲ್ಲಿ ವೆಂಗಿಯ ಪ್ರಾಂತ್ಯಾಧಿಕಾರಿಯಾದ

ಕುಬ್ಜ ವಿಷ್ಣುವರ್ಧನನು ಸ್ವತಂತ್ರನಾಗಿ ಚಾಲುಕ್ಯ ಮನೆತನವನ್ನು ಸ್ಥಾಪಿಸಿದನು. ಇಮ್ಮಡಿ ಪುಲಕೇಶಿಯ ಸಾಮ್ರಾಜ್ಯವು ನರ್ಮದಾ ಮತ್ತು ಕಾವೇರಿಗಳ ಮಧ್ಯದ ಎಲ್ಲಾ ಪ್ರದೇಶಗಳನ್ನೊಳಗೊಂಡಿತ್ತು.

ಇವನ ಕಾಲದಲ್ಲಿಯೇ ಹ್ಯೂಯೆನ್‌ತ್ಸಾಂಗನು ಇವನ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟಿದ್ದನು. ಇವನು ತನ್ನ ಅನುಭವಗಳನ್ನು ಮತ್ತು ಇವನ ಆಡಳಿತ ರೀತಿಗಳ ಬಗೆಗೆ ಸಿ.ಯು.ಕಿ.ಯಲ್ಲಿ ತಿಳಿಸಿದ್ದಾನೆ. ಇವನು ಪರ್ಷಿಯಾ ದೇಶದ ದೊರೆ 2ನೇ ಖಾಸ್ರುವಿನ ಆಸ್ಥಾನಕ್ಕೆ ಒಬ್ಬ ರಾಯಭಾರಿಯನ್ನು ಕಳುಹಿಸಿದನೆಂದು ಅವನೂ ಇದಕ್ಕೆ ಪ್ರತಿಯಾಗಿ ರಾಯಭಾರಿಯನ್ನು ಪುಲಕೇಶಿಯ ಆಸ್ಥಾನಕ್ಕೆ ಕಳುಹಿಸಿದನೆಂದೂ ಹೇಳಲಾಗಿದೆ.

ಪಲ್ಲವ ದೊರೆಯಾದ ಮೊದಲನೆಯ ನರಸಿಂಹವರ್ಮನು ತನ್ನ ತಂದೆಯು ಹಿಂದೆ ಅನುಭವಿಸಿದ ಪರಾಭಾವದ ಸೇಡನ್ನು ತೀರಿಸಿಕೊಳ್ಳಲು ಇವನ ಮೇಲೆ ದಂಡೆತ್ತಿ ಬಂದು ಇಮ್ಮಡಿ ಪುಲಕೇಶಿಯನ್ನು ಮಂಣಿಮಂಗಲ, ಸೂರಮಾರ ಮತ್ತು ಪರಿಯಾಲಗಳಲ್ಲಿ ನಡೆದ ಯುದ್ಧಗಳಲ್ಲಿ ಸೋಲಿಸಿದನು. ಈ ಅಪಜಯವು ಎಷ್ಟು ನಿರ್ಣಾಯಕವಾಗಿತ್ತೆಂದರೆ ಪಲ್ಲವ ಸೈನ್ಯವು ಚಾಲುಕ್ಯ ರಾಜಧಾನಿಯಾದ ಬಾದಾಮಿಗೆ ನುಗ್ಗಿ ಈ ಘಟನೆಯ ಜ್ಞಾಪಕಾರ್ಥವಾಗಿ ಒಂದು ಶಾಸನವನ್ನು ಕೆತ್ತಲಾಯಿತು. ಈ ಸೋಲಿನಿಂದ ದುಃಖತಪ್ತನಾದ ಪುಲಕೇಶಿಯು ಮರಣ ಹೊಂದಿದನು. ಇಲ್ಲಿ ಸುಮಾರು ಹದಿಮೂರು ವರ್ಷಗಳವರೆಗೆ ಪಲ್ಲವರು ಪ್ರಭುತ್ವ ಸಾಧಿಸಿದ್ದರು. ಇದನ್ನು ಚಾಲುಕ್ಯರ ಇತಿಹಾಸದಲ್ಲಿ ಕತ್ತಲೆಯ ಕಾಲ ಎಂದು ಕರೆಯಲಾಗುತ್ತದೆ.

ಕ್ರಿ.ಶ. 655ರಲ್ಲಿ ಪುಲಕೇಶಿಯ ಮಗನಾದ ಮೊದಲನೆಯ ವಿಕ್ರಮಾಧಿತ್ಯನು ಪಲ್ಲವರ ಬಿಗಿ ಹಿಡಿತದಿಂದ ಚಾಲುಕ್ಯ ರಾಜ್ಯವನ್ನು ಬಿಡಿಸಿದನು. ಕ್ರಿ.ಶ. 670ನೇ ಇಸವಿಯಲ್ಲಿ ಪಲ್ಲವರನ್ನು ಅವರ ರಾಜಧಾನಿಯಾಗಿ ಕಾಂಚಿಯವರೆಗೂ ಓಡಿಸಿದನು. ವಿಕ್ರಮಾದಿತ್ಯನ ಮಗ ವಿನಯಾದಿತ್ಯ ಮತ್ತು ಮೊಮ್ಮಗ ವಿಜಯಾದಿತ್ಯ ಈ ಯುದ್ಧಗಳಲ್ಲಿ ಅವನಿಗೆ ಸಹಾಯ ಮಾಡಿದರು. ಚಾಲುಕ್ಯರ ಕೀರ್ತಿಯನ್ನು ಮತ್ತೆ ಪ್ರತಿಷ್ಠಾಪಿಸಿದ ಕೀರ್ತಿ ವಿಜಯಾದಿತ್ಯನಿಗೆ ಸಲ್ಲುತ್ತದೆ.

ಮೊದಲನೆಯ ವಿನಯಾದಿತ್ಯ ತನ್ನ ತಂದೆಯ ಕಾಲದಲ್ಲಿಯೇ ಯುದ್ಧಗಳಲ್ಲಿ ಭಾಗವಹಿಸಿದುದರಿಂದ ಚಾಲುಕ್ಯ ರಾಜ್ಯಭಾರವನ್ನು ನಿರ್ವಹಿಸುವಲ್ಲಿ ಯಾವ ತೊಂದರೆಯನ್ನೂ

[illegible]

ಅನುಭವಿಸಲಿಲ್ಲ. ಇವನು ಕಮೇರ, ಪಾರಸಿಕ ಮತ್ತು ಸಿಂಹಳ ರಾಜರುಗಳನ್ನು ಸೋಲಿಸಿದನೆಂದು ಹೇಳಲಾಗಿದೆ.

ವಿಜಯಾಧಿತ್ಯನು ತನ್ನ ಅಜ್ಜ ಮತ್ತು ತಂದೆಯ ಕಾಲದಲ್ಲಿ ಆಡಳಿತ ಮತ್ತು ಯುದ್ಧಕಲೆಯಲ್ಲಿ ಚೆನ್ನಾಗಿ ತರಬೇತಿ ಪಡೆದಿದ್ದು ಅನುಭವಿಯಾದ ರಾಜಕುಮಾರನಾಗಿದ್ದನು. ಇವನು ಅನೇಕ ದೇವಾಲಯಗಳನ್ನು ಕಟ್ಟಿಸಿದನು. ತನ್ನ ಕೊನೆಯ ಕಾಲದಲ್ಲಿ ಇವನು ಮತ್ತೆ ಪಲ್ಲವರ ವಿರುದ್ಧ ಯುದ್ಧ ಮಾಡಬೇಕಾಯಿತು. ಅವರನ್ನು ಸೋಲಿಸಿ ಕಪ್ಪ ಕಾಣಿಕೆಗಳನ್ನು ಪಡೆದನು.

ವಿಜಯಾಧಿತ್ಯನ ನಂತರ ಇಮ್ಮಡಿ ವಿಕ್ರಮಾದಿತ್ಯನು ದೊರೆಯಾದನು. ಇವನು ಕೇವಲ ಹನ್ನೆರಡು ವರ್ಷಗಳ ಕಾಲ ರಾಜ್ಯಭಾರ ಮಾಡಿದರೂ ತಾನು ಕೈಗೊಂಡ ಎಲ್ಲಾ ಯುದ್ಧಗಳಲ್ಲಿಯೂ ಜಯಶಾಲಿಯಾದನು. ಇವನು ಗುಜರಾತನ್ನು ಪ್ರವೇಶಿಸಿದ್ದ ಅರಬ್ಬರನ್ನು ಸೋಲಿಸಿದ ಸಾಮಂತ ಅವನಿಜನಾಶ್ರಯನನ್ನು ಗೌರವಿಸಿದನು. ಕಾಂಚಿಯನ್ನು ವಶಪಡಿಸಿಕೊಂಡ ವಿಕ್ರಮಾಧಿತ್ಯನು ಅದನ್ನು ನಾಶಪಡಿಸದೆ ಅಲ್ಲಿದ್ದ ರಾಜಸಿಂಹೇಶ್ವರ ಮತ್ತು ಇತರ ದೇವಾಲಯಗಳನ್ನು ಸಂದರ್ಶಿಸಿ ಆ ದೇವಾಲಯಗಳಿಗೆ ಚಿನ್ನ ಮತ್ತು ಇತರ ಆಭರಣಗಳನ್ನು ದಾನವಾಗಿ ಕೊಟ್ಟನು. ಇದು ಕರ್ನಾಟಕ ದೊರೆಯ ಔದಾರ್ಯ ಮತ್ತು ಹೃದಯ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ.

ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿ ಇವನ ರಾಣಿಯರಾಗಿದ್ದು ಹೈಹೆಯ (ಕಲಚೂರಿ) ವಂಶದವರಾಗಿದ್ದರು. ಇವರಿಬ್ಬರೂ ಪಟ್ಟದ ಕಲ್ಲಿನಲ್ಲಿ ದೇವಾಲಯ ನಿರ್ಮಾಣಕ್ಕೆ ಕೊಟ್ಟ ಪ್ರೋತ್ಸಾಹ ಮತ್ತು ಈ ದೇವಾಲಯಗಳ ಶಿಲ್ಪಿ ಗುಂಡನಿಗೆ ಕೊಟ್ಟ ದತ್ತಿಗಳಿಂದ ಭಾರತೀಯ ಕಲಾ ಇತಿಹಾಸದಲ್ಲಿ ಪ್ರಖ್ಯಾತರಾಗಿದ್ದಾರೆ.

ಬಾದಾಮಿ ಚಾಲುಕ್ಯರ ಕೊನೆಯ ಅರಸನಾದ ಇಮ್ಮಡಿ ಕೀರ್ತಿವರ್ಮನು ಕ್ರಿ.ಶ. 745ರಲ್ಲಿ ರಾಜನಾಗಿ ಕ್ರಿ.ಶ. 757ರ ವರೆಗೆ ಆಳಿದನು. ಇವನ ಕಾಲದಲ್ಲಿ ಪಲ್ಲವರು ತಮ್ಮದೇ ಆದ ಕಷ್ಟಗಳಲ್ಲಿ ಸಿಲುಕಿಕೊಂಡಿದ್ದರಿಂದ ಅವರು ಚಾಲುಕ್ಯ ರಾಜ್ಯದ ಮೇಲೆ ಯುದ್ಧ ಮಾಡಲಿಲ್ಲ. ಇವನೂ ಕೂಡ ಯುದ್ಧ ಹೂಡುವ ಮನಸ್ಸು ಮಾಡಲಿಲ್ಲ. ಇವನು ಕ್ರಿ.ಶ. 753ರಲ್ಲಿ ರಾಷ್ಟ್ರಕೂಟ ಮೊದಲನೆಯ ಕೃಷ್ಣನಿಂದ ಪರಾಜಿತನಾದನು ಇವನೊಂದಿಗೆ ವೈಭವಯುತವಾಗಿ ಮೆರೆದ ಚಾಲುಕ್ಯ ಸಾಮ್ರಾಜ್ಯ ಕೊನೆಗೊಂಡಿತು.

ಇವರ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ನೋಡಿದರೆ ಇಲ್ಲಿನ ಜನರು ಸೌಂದರ್ಯಪ್ರಿಯರಾಗಿದ್ದು ಒಂದೊಂದು ವರ್ಗಕ್ಕೆ ಸೇರಿಸಿದ ಜನರೂ ತಮ್ಮದೇ ಆದ ವಸ್ತ್ರಗಳನ್ನು ಹೊಂದಿದ್ದರು. ಇಲ್ಲಿ ಚಾತುರ್ವರ್ಣ ಪದ್ಧತಿ ಅಸ್ತಿತ್ವದಲ್ಲಿತ್ತು. ರಾಜಮನೆತನಕ್ಕೆ ಸೇರಿದ ಪುರುಷರು ಸೊಂಟಕ್ಕೆ ಸುತ್ತಿದ ತುಂಡುವಸ್ತ್ರವನ್ನು ಎಡಭುಜದ ಮೇಲೆ ಹಾಕಿಕೊಳ್ಳುತ್ತಿದ್ದು, ಸ್ತ್ರೀಯರು ಉದ್ದವಾದ ವಸ್ತ್ರವನ್ನು ಸುತ್ತಿಕೊಂಡು ಎರಡು ಭುಜಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಬಡವರು ನಾರು ಬಟ್ಟೆಯನ್ನು ಧರಿಸುತ್ತಿದ್ದರು. ಹಲವು ಸಾಮಾಜಿಕ ನಿರ್ಬಂಧಗಳಿದ್ದವು. ಸ್ತ್ರೀಯರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ರಾಜಮನೆತನದ ಸ್ತ್ರೀಯರು ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ಆಸಕ್ತಿ ಹೊಂದಿದ್ದರು. ಮತ್ತೆ ಕೆಲವರು ದಾನ ಧರ್ಮಾಧಿಗಳಲ್ಲಿ ಆಸಕ್ತಿ ತಳೆದಿದ್ದರು. ವಿಜಯಾದಿತ್ಯನ ಸೋದರಿ ಕುಂಕುಮ ಮಹಾದೇವಿ, ಇಮ್ಮಡಿ ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಇದಕ್ಕೆ ನಿದರ್ಶನಗಳಾಗಿದ್ದಾರೆ.

ಹ್ಯೂಯನ್‌ತ್ಸಾಂಗನು ಕರ್ನಾಟಕ ಜನತೆಯ ಸ್ವಾಭಿಮಾನ, ಧರ್ಮನಿಷ್ಠೆ, ಸರಳತೆ, ಸಜ್ಜನಿಕೆ, ಶೌರ್ಯ ಸಾಹಸಗಳನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. ಚಾಲುಕ್ಯರ ಸಾಮ್ರಾಜ್ಯವು ಮುಖ್ಯವಾಗಿ ಕೃಷಿಯಾಧಾರಿತ ಗ್ರಾಮೀಣ ಜೀವನವನ್ನು ಹೊಂದಿತು. ಭೂಮಿಯನ್ನು ಫಲವತ್ತತೆಗೆ ಅನುಗುಣವಾಗಿ ಕಪ್ಪುಭೂಮಿ, ಕೆಂಪುಭೂಮಿ, ತರಿ, ಜಾಗಾಯಿತು ಮತ್ತು ಬಂಜರು ಭೂಮಿಯೆಂದು ವಿಭಜಿಸಲಾಗಿದ್ದಿತು. ಕೈಗಾರಿಕೆಗಳು ವೃತ್ತಿನಿರತಶ್ರೇಣಿ ಮತ್ತು ಸಂಘಗಳ ಮೂಲಕ ವ್ಯವಸ್ಥಿತವಾಗಿದ್ದವು. ಒಳಗಡೆ ಮತ್ತು ಹೊರಗಡೆ ವ್ಯಾಪಾರ ವಾಣಿಜ್ಯಗಳು ಪ್ರಗತಿದಾಯಕ ಸ್ಥಿತಿಯಲ್ಲಿದ್ದವು. ವಿದೇಶಿ ವ್ಯಾಪಾರ ಭರದಿಂದ ಸಾಗಿದ್ದಿತು. ಜಾಲ್, ಕಲ್ಯಾಣ, ಸೊಪಾರ, ಠಾಣಾ, ಮಂಗಳೂರು, ಮಲ್ಪೆ ಬಂದರುಗಳು ಪ್ರಮುಖ ವಿದೇಶಿ ವ್ಯಾಪಾರ ಕೇಂದ್ರಗಳಾಗಿದ್ದವು.

ಧಾರ್ಮಿಕ ಜೀವನಕ್ಕೆ ಸಂಬಂಧಿಸಿದಂತೆ ಧರ್ಮ ಸಹಿಷ್ಣುತೆ ಮತ್ತು ಸರ್ವಧರ್ಮ ಸಮನ್ವಯತೆ ಚಾಲುಕ್ಯರ ಕಾಲದ ಧಾರ್ಮಿಕ ಜೀವನದ ಲಕ್ಷಣ. ಇವರ ಸಾಮ್ರಾಜ್ಯದಲ್ಲಿ ವೈಷ್ಣವ, ಶೈವ, ಬೌದ್ಧ ಧರ್ಮಗಳು ಪ್ರಚಲಿತವಿದ್ದವು. ಹ್ಯೂಯೆತ್ಸಾಂಗನು ಇವರಲ್ಲಿದ್ದ ಪರಸ್ಪರ ಸೌಹಾರ್ಧತೆಯನ್ನು ತನ್ನ ಬರವಣಿಗೆಯಲ್ಲಿ ಹೊಗಳಿದ್ದಾನೆ. ಇವರು ವೈದಿಕ ಧರ್ಮದ ಅನುಯಾಯಿಗಳಾಗಿದ್ದು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನನ್ನು ಆರಾಧಿಸುತ್ತಿದ್ದರು. ಬಾದಾಮಿಯ ವಿವಿಧ ಗುಹಾಂತರ ದೇವಾಲಯಗಳು

ಹರಿಹರ ಮತ್ತು ಅರ್ಧನಾರೀಶ್ವರ ವಿಗ್ರಹಗಳು ಆಗಿನ ಕಾಲದ ಧರ್ಮಸಹಿಷ್ಣುತೆಗೆ ಮತ್ತು ಉದಾರತೆಗೆ ನಿದರ್ಶನಗಳಾಗಿವೆ.

ಒಂದು ಶೋಚನೀಯ ಸಂಗತಿಯೆಂದರೆ ಇಲ್ಲಿ ಧಾರ್ಮಿಕ ಪಲ್ಲಟವಾಗಿರುವುದನು ಕಾಣಬಹುದು. ಇಲ್ಲಿನ ಬೌದ್ಧಸ್ತೂಪ ಜೈನಬಸದಿಗಳು ಮೂರ್ತಿಭಂಜನವಾಗಿರುವುದನ್ನು ಕಾಣಬಹುದು. ಅಲ್ಲಿನ ಬಸದಿಗಳು ಮತ್ತು ಸ್ತೂಪಗಳನ್ನು ಒಡೆದು ಹಾಕಿರುವುದನ್ನು ಕಾಣುತ್ತೇವೆ.

ಆಡಳಿತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸಾಮ್ರಾಜ್ಯವನ್ನು ಹಲವು ಭಾಗಗಲಾಗಿ ವಿಂಗಡಿಸಲಾಗಿತ್ತು. ಸಾಮ್ರಾಜ್ಯವನ್ನು ಪ್ರಾಂತ್ಯ, ವಿಷಯ, ನಾಡುಗಳಾಗಿ ವಿಂಗಡಿಸಲಾಗಿತ್ತು. ಒಂದೊಂದು ವಿಭಾಗವನ್ನು ನೋಡಿಕೊಳ್ಳಲು ಒಬ್ಬೊಬ್ಬ ಅಧಿಕಾರಿಗಳನ್ನು ನೇಮಿಸಲಾಗಿತ್ತು. ರಾಜಮನೆತನದವರು ಪ್ರಾಂತ್ಯಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದರು. ನ್ಯಾಯಾಂಗ ಮಂಡಳಿ ಸೇನಾಡಳಿತ ಮಂಡಲಿಗಳು ಇತರೇ ಮಂಡಳಿಗಳು ಇದ್ದವು. ಇವುಗಳನ್ನು ನೋಡಿಕೊಳ್ಳಲು ದಕ್ಷ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಇವರ ವಾಸ್ತುಶಿಲ್ಪ ರಚನೆಯನ್ನು 2 ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಹಂತವು 535-642 ರವರೆಗೆ ನಂತರ ಕ್ರಿ.ಶ. 655 ರಿಂದ ಕ್ರಿ.ಶ.757 ರವರೆಗೆ 3ನೇ ಹಂತ.

ಇವರ ಕಾಲವು ವಾಸ್ತುಶಿಲ್ಪದಲ್ಲಿ ಉತ್ತುಂಗ ಶಿಖರವನ್ನು ಏರಿತ್ತು. ಇವರ ಕಾಲದಲ್ಲಿಯೇ ವೇಸರ ಶೈಲಿ, ನಾಗರ ಶೈಲಿ ಮತ್ತು ದ್ರಾವಿಡ ಶೈಲಿಗಳು ಉಗಮ ಹೊಂದಿದವು. ಐಹೊಳೆಯೊಂದರಲ್ಲಿಯೇ ವೇಸರ, ನಾಗರ, ದ್ರಾವಿಡ ಶೈಲಿಗಳ ಸಂಗಮವಾಗಿರುವುದನ್ನು ಕಾಣಬಹುದು. ಆದ್ದರಿಂದಲೇ ಪರ್ಸಿಬ್ರೌನರು ಐಹೊಳೆಯನ್ನು "ವಾಸ್ತುಶಿಲ್ಪದ ತೊಟ್ಟಿಲು" ಎಂದು ವರ್ಣಿಸಿದ್ದಾನೆ. ದ್ರಾವಿಡ ಶೈಲಿಯ ಉಗಮವಾಗಿದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಎಂಬುದು ಹೆಮ್ಮೆಯ ವಿಚಾರ. ಆದರೆ ಅದನ್ನು ನಮ್ಮ ವಿದ್ವಾಂಸರು ಗಮನಿಸದೇ ಇರುವುದು ಖಂಡನೀಯ. ಇಲ್ಲಿಂದಲೇ ಈ ಶೈಲಿಯನ್ನು ಮಹಾಬಲಿಪುರಂನ ದೇವಾಲಯಗಳಲ್ಲಿ ಬಳಸಲಾಯಿತು. ಇಲ್ಲಿರುವ ಶಿಖರಗಳು, ಕೋಷ್ಠಗಳು ಮನೋಹರವಾಗಿವೆ. ಬೆಳಕನ್ನು ಗರ್ಭಗುಡಿಗೆ ಹಾಯಿಸಲು ಜಾಲಾಂಧ್ರಗಳನ್ನು ಬಿಟ್ಟಿರುವುದು ಶ್ಲಾಘನೀಯ ವಿಚಾರ. ಕೋಷ್ಠಗಳಲ್ಲಿರುವ ವಿಗ್ರಹಗಳು ಮನಮೋಹಕವಾಗಿವೆ. ಇವರ ಕಲಾಶೈಲಿಯನ್ನು ಚಾಲುಕ್ಯ ಶೈಲಿ ಎಂದು ಕರೆಯಲಾಗುತ್ತದೆ. ಮಲಪ್ರಭಾ ಕಣಿವೆಯೊಂದರಲ್ಲಿ

100ಕ್ಕೂ ಹೆಚ್ಚು ವಾಸ್ತುಶಿಲ್ಪ ಕೃತಿಗಳು ಕಂಡುಬಂದಿವೆ. ಕಂಬಗಳು ಒಂದಕ್ಕೊಂದು ಆಕರ್ಷಣೀಯವಾಗಿದ್ದು ಕೆಲವು ಸಿಂಹದ ಮುಖದ ಅಂಚನ್ನೊಂದಿವೆ. ಇಲ್ಲಿರುವ ಶಿಲ್ಪಗಳು ನಯನ ಮನೋಹರವಾಗಿವೆ.

ಗುಹಾಂತರ ದೇವಾಲಯಗಳನ್ನು ಬಾದಾಮಿ ಮತ್ತು ಐಹೊಳೆಯಲ್ಲಿ ಕಾಣುತ್ತೇವೆ. ಬಾದಾಮಿಯಲ್ಲಿ ಎರಡು ವಿಷ್ಣು ಒಂದು ಶೈವ ಮತ್ತು ಒಂದು ಜೈನ ದೇವಾಲಯಗಳನ್ನು ಕಾಣುತ್ತೇವೆ. ಈ ಗುಹಾಂತರ ದೇವಾಲಯಗಳು ಚಾಲುಕ್ಯರ ಮೊಟ್ಟ ಮೊದಲ ವಾಸ್ತುಶಿಲ್ಪ ಕೃತಿಗಳಾಗಿದ್ದು, ಅವುಗಳನ್ನು ಬೃಹತ್ ಬಂಡೆಗಳಲ್ಲಿ ಕೊರೆದು ನಿರ್ಮಾಣ ಮಾಡಲಾಗಿದೆ. ಇವುಗಳನ್ನು ಮೇಣದ ಬಸದಿಗಳೆಂದು ಕರೆಯುತ್ತಾರೆ. ಇವುಗಳ ಪ್ರಮುಖ ಲಕ್ಷಣಗಳೆಂದರೆ ಅನೇಕ ಕಂಬಗಳಿಂದ ಕೂಡಿದ ಹೊರಾಂಗಣ, ಮಧ್ಯದ ಪ್ರಾಂಗಣ, ಚಿಕ್ಕ ಗರ್ಭಗೃಹವೇ ಅಲ್ಲದೆ ತೀರ್ಥಂಕರ ವಿಗ್ರಹಗಳನ್ನು ಕಾಣಬಹುದು. ಮಹಿಷಾಸುರ ಮರ್ಧಿನಿ, ಅರ್ಧನಾರೀಶ್ವರ, ನಾಗಶಿಲ್ಪಗಳು, ನಾಟ್ಯಭಂಗಿಯಲ್ಲಿರುವ ಶೇಷಸೀನನಾದ ವಿಷ್ಣು ಮುಂತಾದ ನಯನಾಕರ್ಷಕ ಮೂರ್ತಿಗಳನ್ನು ಇಲ್ಲಿ ಕಾಣಬಹುದು. ಅದಕ್ಕಾಗಿಯೇ ಡಾ. ಎಂ. ಶೇಷಾದ್ರಿಯವರು "ಚಾಲುಕ್ಯರು ರಾಕ್ಷಸರಂತೆ ಕಡಿದು ರತ್ನಾಗಾರರಂತೆ ಮುಗಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಐಹೊಳೆಯಲ್ಲಿ 5 ಗುಹಾಂತರ ದೇವಾಲಯಗಳಿವೆ ಅವುಗಳಲ್ಲಿ ಒಂದು ಬೌದ್ಧ ಮತ್ತೊಂದು ಜೈನ ಸಂಪ್ರದಾಯಕ್ಕೆ ಸೇರಿದೆ. ಎರಡು ಹಿಂದೂ ಮತ್ತು ಒಂದು ಬೌದ್ಧ ಅಥವಾ ಜೈನ ಎಂಬ ಗೊಂದಲದಲ್ಲಿದೆ.

ಈ ಗುಹಾಂತರ ದೇವಾಲಯಗಳನ್ನು ಮಂಗಳೇಶನ ಕಾಲದಲ್ಲಿ ಕಲ್ಪನೆ ಎಂದು ಕರೆಯುತ್ತಿದ್ದರು. ಇದು ಗುಹಾಲಯಗಳಿಗೆ ಅತ್ಯಂತ ಸಮರ್ಪಕ ಹೆಸರಾಗುತ್ತದೆ. ಇಲ್ಲಿರುವ ಮೂರ್ತಿಗಳು ಇಲ್ಲಿನ ಪ್ರಾಂಗಣ, ಮೇಲ್ಛಾವಣಿ, ಕಂಬಗಳು ಮನಮೋಹಕವಾಗಿವೆ. ಅಲ್ಲಿ ಕೆತ್ತಲ್ಪಟ್ಟಿರುವ ಪ್ರಾಣಿಗಳು ಮತ್ತು ಪಕ್ಷಿಗಳು ನೈಜತೆಯಿಂದ ಕೂಡಿವೆ. ಜೈನ ತೀರ್ಥಂಕರ ಮೂರ್ತಿಗಳಂತೂ ಕಣ್ಣನ್ನು ಸೂರೆಗೊಳ್ಳುತ್ತವೆ.

ಆದರೆ ಸ್ವಚ್ಛತೆಯ ಅಭಾವದಿಂದ ಇವು ಬಾವಲಿಗಳ ವಾಸಸ್ಥಾನವಾಗಿದ್ದು, ಒಳ ಹೋಗಲು ಪ್ರವಾಸಿಗರಿಗೆ ಭಯವುಂಟಾಗುತ್ತದೆ. ಇದನ್ನು ಸಂರಕ್ಷಿಸಲಾರದೆ ಇರುವುದು ನಿಜವಾಗಿಯೂ ನಮಗೆ ದುಃಖವನ್ನು ತರುತ್ತದೆ.

ಚಾಲುಕ್ಯರ ದೇವಾಲಯಗಳು ತಮ್ಮದೇ ಆದ ಅಪೂರ್ವ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಚಾಲುಕ್ಯರನ್ನು ಕರ್ನಾಟಕದ ದೇವಾಲಯದ ವಾಸ್ತುಶಿಲ್ಪದ ಪ್ರವರ್ತಕರೆಂದು ವರ್ಣಿಸಲಾಗಿದೆ. ಅವರ ದೇವಾಲಯ ವಾಸ್ತುಶಿಲ್ಪದ ಪ್ರಯೋಗಗಳು ಮೊದಲಿಗೆ ಐಹೊಳೆಯಲ್ಲಿ ಆರಂಭವಾದವು. ಆದ್ದರಿಂದಲೇ ಇದನ್ನು ವಾಸ್ತುಶಿಲ್ಪದ ತೊಟ್ಟಿಲು ಎಂದೂ ಕರೆದಿದ್ದಾರೆ. ಐಹೊಳೆಯಲ್ಲಿ ಸುಮಾರು 70ಕ್ಕೂ ಹೆಚ್ಚಿನ ದೇವಾಲಯಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ದುರ್ಗಾ, ಹುಚ್ಚಿಮಲ್ಲಿ, ಲಾಡಬಾನ್ ಮತ್ತು ದುರ್ಗಾ ದೇವಾಲಯಗಳು. ಕೊಂತಿ ಗುಡಿ, ಗೌಡರಗುಡಿ, ತಾರಬಸಪ್ಪನ ಗುಡಿ, ಹುಚ್ಚಾಪ್ರಯ ಮಠ, ಹುಚ್ಚಪ್ಪಯ್ಯ ದೇವಾಲಯ, ಮೇಗುತಿಗುಡಿ, ರಾಮಲಿಂಗ ದೇವಾಲಯ.

- ಪಟ್ಟದಕಲ್ಲಿನಲ್ಲಿ 10 ದೇವಾಲಯಗಳನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ವಿರೂಪಾಕ್ಷ ಮಲ್ಲಿಕಾರ್ಜುನ. ತಾಪನಾಥ, ಜಂಬುಲಿಂಗ, ಕಾಶೀನಾಥ, ಗಳಗನಾಥ, ಸಂಗಮೇಶ್ವರ, ಸರ್ವೇಶ್ವರ ಮತ್ತು ಕರಿಸಿದ್ದೇಶ್ವರ. ತಾಪನಾಥ, ಜಂಬುಲಿಂಗ, ಕಾಶೀನಾಥ ಗಳಗನಾಥ, ಸಂಗಮೇಶ್ವರ, ಸರ್ವೇಶ್ವರ ಮತ್ತು ಕರಿಸಿದ್ದೇಶ್ವರ.

- ಬಾದಾಮಿಯಲ್ಲಿ 20 ದೇವಾಲಯಗಳನ್ನು ಕಾಣುತ್ತೇವೆ. ಅವುಗಳಲ್ಲಿ ಮಾಲೆಗಿತ್ತಿ ಶಿವಾಲಯ, ಮೇಲು ಶಿವಾಲಯ, ಜಂಬು ಲಿಂಗ ದೇವಾಲಯ ಪ್ರಮುಖವಾದವುಗಳು.

- ನಾಗರಾಳಿಯಲ್ಲಿ ನಾಗರ ದೇವಾಲಯವನ್ನು ಕಾಣುತ್ತೇವೆ.

- ಮಹಾಕೂಟದಲ್ಲಿ 10ಕ್ಕೂ ಹೆಚ್ಚು ದೇವಾಲಯಗಳಿವೆ. ಇಲ್ಲಿರುವ ಮಹಿಷಾಸುರ ಮರ್ಧಿನಿಯ ದೇವಾಲಯ ಮನಮೋಹಕವಾಗಿದೆ. ಮಲ್ಲಿಕಾರ್ಜುನ, ಶಿವಾಲಯ, ಪಂಚಲಿಂಗ ಗುಡಿಗಳು ಪ್ರಮುಖವಾಗಿವೆ. ಇವುಗಳ ಜೊತೆಗೆ ಸಂಡೂರಿನ ಪಾರ್ವತಿ ದೇವಾಲಯ, ಲಕ್ಕುಂಡಿಯ ಕಾಶೀವಿಶ್ವೇಶ್ವರ ದೇವಾಲಯ, ಇಟ್ಟಗಿಯ ಮಹದೇವ ದೇವಾಲಯ, ಗಳಗನಾಥ ದೇವಾಲಯ, ಕಲ್ಲೇಶ್ವರ ದೇವಾಲಯ, ಬಳ್ಳಿಗಾವಿಯ ಕೇದಾರೇಶ್ವರ ದೇವಾಲಯ, ಹಾನಗಲ್ಲಿನ ತಾರಕೇಶ್ವರ ದೇವಾಲಯ, ಬಂಕಾಪುರದ ನಖರೇಶ್ವರ ದೇವಾಲಯ, ಪುಲಿಗೆರೆಯ ಸೋಮದೇವ ದೇವಾಲಯ, ಬನವಾಸಿಯ ಮಧುಕೇರ್ಶ್ಯಾಗವಲ್ಲದೆ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲೂ ಅವರ ಕಲೆಯ ಸಿರಿಯನ್ನು ಕಾಣಬಹುದು. ಅಜಂತಹ ಗುಹೆಗಳು, ಆಲಂಪುರದ ಸ್ವರ್ಗ ಬ್ರಹ್ಮ

ದೇವಾಲಯ, ಸತ್ಯವೋಲು ಅಪ್ಪಿದಲ ದೇವಾಲಯ ಮತ್ತು ವಿಶ್ವಬ್ರಹ್ಮ ದೇವಾಲಯಗಳು ಪ್ರಮುಖವಾದುವು.

- ಜೆ.ಸಿ. ಹಾರ್ಲೆಯವರು ಉತ್ತರ ಮತ್ತು ದಕ್ಷಿಣ ವಾಸ್ತುಪರಂಪರೆಯ ಸಂಗಮ ಕ್ಷೇತ್ರ ಎಂದು ಅಭಿಪ್ರಾಯ ಪಟ್ಟಿದ್ದಾರೆ.

- ಐಹೊಳೆಯ ಮಧ್ಯದಲ್ಲಿರುವ ಕೊಂತಿಗುಡಿಗಳನ್ನು ಚಾಲುಕ್ಯರ ಕಾಲದ ಮೊದಲ ವಾಸ್ತುಕೃತಿಗಳೆಂದು ಕರೆಯಬಹುದು. ಇದು ಬಹುತೇಕ ನಾಶಹೊಂದಿದ್ದು ತಲವಿನ್ಯಾಸದಲ್ಲಿ ಇದು ಕೇವಲ ಒಂದು ದೊಡ್ಡ ಹಜಾರ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಗರ್ಭಗುಡಿ ಇರುವುದನ್ನು ಕಾಣಬಹುದು.

ಐಹೊಳೆಯಲ್ಲಿನ ಲಾಡಖಾನ್ ದೇವಾಲಯ ಅತ್ಯಂತ ಪ್ರಾಚೀನವಾದುದೆಂದು ಪರ್ಸಿಬ್ರೌನ್ ಅಭಿಪ್ರಾಯ ಪಡುತ್ತಾನೆ. ಇಲ್ಲಿ ಲಾಡಖಾನ್ ಎಂಬ ಮುಸ್ಲಿಂ ಫಕೀರನೊಬ್ಬ ವಾಸವಾಗಿದ್ದುದರಿಂದ ಈ ಗುಡಿಗೆ ಅವನ ಹೆಸರು ಪ್ರಾಪ್ತವಾಯಿತು. ದೇಗುಲದ ವಿಕಾಸದ ಹಂತದಲ್ಲಿ ಮುಂದಿನ ದೇವಾಲಯವೇ ಇಲ್ಲಿನ ದುರ್ಗಗುಡಿ ಬೌದ್ಧ ಚೈತ್ಯಾಲಯದ ವಿನ್ಯಾಸವನ್ನು ಅನುಸರಿಸಿದ ನಿರ್ಮಿಸಿದ ದೇವಾಲಯವಾಗಿವೆ. ಈ ದೇವಾಲಯದ ಹಿಂಭಾಗ ಗಜಪೃಷ್ಠಾಕಾರನಾಗಿದ್ದು, ಇದರಲ್ಲಿ ಅನೇಕ ಸುಂದರ ಶಿಲ್ಪಗಳು ಸ್ತಂಭರಾಜಿಯ ಪ್ರದಕ್ಷಿಣ ಪಥವೂ ಇವೆ. ಇದು ಕುದುರೆ ಲಾಳಾಕಾರದಲ್ಲಿದೆ. ಹುಚ್ಚಿಮಲ್ಲಿ ಗುಡಿ ಮತ್ತೊಂದು ಮುಖ್ಯ ದೇವಾಲಯವಾಗಿದೆ. ಇದರಲ್ಲಿ ಮುಖಮಂಟಪ ಮತ್ತು ಗರ್ಭಗೃಹಗಳ ನಡುವೆ 'ಅಂತರಾಳ'ದಂತಹ ಕೊಠಡಿ ಇರುವುದನ್ನು ಕಾಣಬಹುದು. ಇದರ ನಾಗರಶೈಲಿಯ ಶಿಖರ ಅನಂತರದ ಕಾಲದಲ್ಲಿ ನಿರ್ಮಿಸಿದುದಾಗಿದೆ. ಇಲ್ಲಿನ ದೇವಾಲಯಗಳಲೆಲ್ಲಾ ಸ್ವಲ್ಪ ಮಟ್ಟಿಗೆ ಪ್ರಬುದ್ಧತೆ ಪಡೆದಿರುವ ಗುಡಿಯೆಂದರೆ ಮೇಗುತಿ ಜಿನಾಲಯ ಇದನ್ನು ಕಟ್ಟಿಸಿದವನು ರವಿಕೀರ್ತಿ, ಇದೇ ಕಾಲದಲ್ಲಿ ಒಬ್ಬ ಹೂನಾಡಗಿತ್ತಿಯಿಂದ ನಿರ್ಮಾಣವಾದ ದೇವಾಲಯ ಮಾಲೆಗಿತ್ತಿ ಶಿವಾಲಯ ಇದು ಚಿಕ್ಕದಾದರೂ ಸುಂದರವಾಗಿದೆ. ಇದನ್ನು ಇತ್ತೀಚಿಗೆ ವಿದ್ಯಾರ್ಥಿ ಸಂಘಟನೆಯು ಸ್ವಚ್ಛಗೊಳಿಸಿದ್ದು ಇಲ್ಲಿರುವ ಒಂದು ಬಾವಿಯನ್ನು ಹೊರತೆಗೆದಿದ್ದಾರೆ. ಇಲ್ಲಿ ಗರ್ಭಗೃಹ, ಅಂತರಾಳ, ಮಧ್ಯಮಂಟಪ ಮುಖಮಂಟಪಗಳನ್ನು ಓರಣವಾಗಿ ಜೋಡಿಸಿದಂತೆ ಕಟ್ಟಲಾಗಿದೆ. ಮಾಹಾಕೂಟದ ಮಹಾಕೂಟೇಶ್ವರ ದೇವಾಲಯ ಸುಂದರವಾದ ದೇವಾಲಯವಾಗಿದೆ. ಇಲ್ಲಿ ಶಿವನ ಅರ್ಧನಾರೀಶ್ವರ ಶಿಲ್ಪವನ್ನು ಕಾಣಬಹುದು.

ಚಾಲುಕ್ಯರ ರಾಣಿಯಾದ ದುರ್ಲಭದೇವಿ ಈ ದೇವಾಲಯಕ್ಕೆ ಪಟ್ಟದಕಲ್ಲು ಐಹೊಳೆ ಮುಂತಾದ ಊರುಗಳನ್ನು ದತ್ತಿ ನೀಡಿದಳೆಂದು ಕ್ರಿ.ಶ. 601ರ ಅಲ್ಲಿನ ಶಾಸನವು ತಿಳಿಸುತ್ತದೆ. ಆದರೆ ಐಹೊಳೆಯಲ್ಲಿನ ದೇವಾಲಯಗಳನ್ನು ಗಮನಿಸಿದರೆ ಚಾಲುಕ್ಯರು ವಾಸ್ತುಶಿಲ್ಪದಲ್ಲಿ ನುರಿತ ಪರಿಣತಿಯನ್ನು ಪಡೆದಿರಲಿಲ್ಲವೆಂದು ತಿಳಿದುಬರುತ್ತದೆ. ಶಿಲಾಯುಗಕ್ಕೆ ಸಂಬಂಧಿಸಿದ ಬಹಳಷ್ಟು ಸಮಾಧಿಗಳು, ಶಾಸನಗಳನ್ನು, ವೀರಗಲ್ಲು, ಮಾಸಿಗಲ್ಲುಗಳನ್ನು ಕಾಣಬಹುದು.

ಪಟ್ಟದಕಲ್ಲಿನಲ್ಲಿ ನಾವು ಪ್ರಬುದ್ಧಾವಸ್ಥೆಯ ದೇವಾಲಯಗಳನ್ನು ಕಾಣುತ್ತೇವೆ. ಇಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ, ಪಾಪನಾಥ, ಗಳಗನಾಥ ಮುಂತಾದವು. ಪ್ರಖ್ಯಾತ ದೇವಾಲಯಗಳು ಅವುಗಳನ್ನು ನಾಗರ ಅಥವಾ ದ್ರಾವಿಡ ಮಾದರಿಯಲ್ಲಿ ಕಟ್ಟಲಾಗಿದೆ. ಇವುಗಳೆಲ್ಲೆಲ್ಲಾ ಅತ್ಯಂತ ಪ್ರಮುಖ ದೇವಾಲಯವೆಂದರೆ ವಿರೂಪಾಕ್ಷ ದೇವಾಲಯ. ಇದನ್ನು ಪರ್ಸಿಬ್ರೌನರು "ಅತ್ಯಪೂರ್ವವಾದ ದೇಗುಲ" ಎಂದು ಕರೆದಿದ್ದಾನೆ. ಇದನ್ನು ಎರಡನೇ ವಿಕ್ರಮಾದಿತ್ಯನ ಕಲಾಪ್ರಿಯಳಾದ ರಾಣಿ ಲೋಕಮಹಾದೇವಿ ತನ್ನ ಗಂಡ ಪಲ್ಲವರನ್ನು ಗೆದ್ದ ನೆನಪಿಗಾಗಿ ಕಟ್ಟಿಸಿದಳು. ಇದು ಗರ್ಭಗೃಹ ಪ್ರದಕ್ಷಿಣ ಪಥವನ್ನು ಹೊಂದಿದೆ. ದೇವಾಲಯದ ಭಿತ್ತಿ–ಸ್ತಂಭಗಳು, ಭುವನೇಶ್ವರಿಗಳು ಶಿಲ್ಪಾಲಂಕೃತವಾಗಿವೆ. ದೇಗುಲದ ಮುಂದೆ ಸುಂದರವಾದ ನಂದಿಮಂಟಪವಿದೆ. ಇದೇ ಮಾದರಿಯಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಲಾಗಿದೆ. ಇದನ್ನು ತ್ರೈಲೋಕ್ಯಮಹಾದೇವಿ ನಿರ್ಮಿಸಿದಳು. ಪರ್ಸಿಬ್ರೌನ್ ಇಲ್ಲಿನ ದೇವಾಲಯವನ್ನು ಕುರಿತು ಈ ರೀತಿ ಹೇಳಿದ್ದಾನೆ. ಈ ದೇಗುಲದ ರಚನೆ ಅತ್ಯಂತ ಸುಸಂಬದ್ಧ ಪ್ರಮಾಣಬದ್ಧ ಆಗಿದೆ.

ಇವರ ಕಾಲದ ಶಿಲ್ಪಗಳನ್ನು ಕಂಚಿಯಿಂದಲೂ ಕರೆತರಲಾಗಿತ್ತು. ಇವರ ಕಾಲದಲ್ಲಿ ಲಲಿತಕಲೆಯೂ ಪ್ರಗತಿಯನ್ನು ಸಾಧಿಸಿತ್ತು. ಇವರ ಕಾಲದಲ್ಲಿ ವರ್ಣಚಿತ್ರದ ಬಳಕೆಯನ್ನು ಕಾಣಬಹುದು. ಅಜಂತಾದ ಒಂದನೇ ಗುಹೆಯಲ್ಲಿ ಎರಡನೆ ಪುಲಕೇಶಿಯು ಪರ್ಶಿಯಾದ ರಾಯಭಾರಿಯನ್ನು ಸ್ವಾಗತಿಸುತ್ತಿರುವ ಚಿತ್ರವಿದೆ. ಬಾದಾಮಿಯ ಮೂರನೆಯ ಗುಹೆಯು ಹಿಂದೆ ಚಿತ್ರಾಲಂಕಾರವಾಗಿದ್ದು, ಈಗ ಅದರ ಛಾಯೆ ಮಾತ್ರ ಉಳಿದಿದೆ. ಈ ಭಿತ್ತಿಚಿತ್ರಗಳು ಅಜಂತಾದ ಚಿತ್ರ ಪರಂಪರೆಯನ್ನು ಹೋಲುತ್ತವೆ. ಇಂದ್ರನ ಒಡ್ಡೋಲಗ, ಅಪ್ಸರೆಯರು, ಸಿದ್ಧಚಾರಣರು, ವಿದ್ಯಾಧರ

ದಂಪತಿಗಳು ಆಗಸದಲ್ಲಿ ತೇಲಿಹೋಗುತ್ತಿರುವುದು ಈ ಚಿತ್ರಗಳಲ್ಲಿ ಕಾಣಿಸುತ್ತದೆ. ಆದರೆ ಇವು ಬಹುಮಟ್ಟಿಗೆ ಮಾಸಿ ಹೋಗಿವೆ.

ಒಟ್ಟಾರೆ ಹೇಳುವುದಾದರೆ ಇಷ್ಟೊಂದು ವೈಭವಯುತವಾಗಿ ಬೆಳೆದ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪವು ಇಂದು ಅವನತಿಯ ಅಂಚಿನಲ್ಲಿದೆ. ಇಂದು ಐಹೊಳೆಯಲ್ಲಿನ ದೇವಾಲಯಗಳು ವಿಶ್ವ ಪರಂಪರೆಯ ಪಟ್ಟಿಗೆ ಸೇರಿವೆ. ಆದರೆ ಕೆಲವು ದನಕರುಗಳು ಮತ್ತು ಜನರ ವಾಸದ ಸ್ಥಳವಾಗಿವೆ. ಕೆಲವು ದೇವಾಲಯಗಳನ್ನು ತೆರವುಗೊಳಿಸಲಾಗಿದ್ದರೂ ಅಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಬರುವಲ್ಲಿ ನಾವು ವಿಫಲರಾಗಿದ್ದೇವೆ. ಇವುಗಳಿಗೆ ಸರಿಯಾದ ಪ್ರೋತ್ಸಾಹ ಸಿಗದೇ ಇರುವುದು ನೋವಿನ ಸಂಗತಿಯಾಗಿದೆ. ಅವನತಿಯ ಅಂಚಿನಲ್ಲಿರುವ ದೇವಾಲಯಗಳನ್ನು ದುರಸ್ಥಿ ಮಾಡಬೇಕಾಗಿದೆ. ಶಿಲ್ಪಗಳನ್ನು ರಕ್ಷಿಸಬೇಕಾಗಿರುವುದು ಎಲ್ಲಾ ನಾಗರೀಕರ ಕರ್ತವ್ಯವಾಗಿದೆ. ಇದನ್ನು ಸರಿಯಾಗಿ ಉತ್ಖನನ ಮಾಡಿದರೆ ಪುರಾತತ್ವ ಇಲಾಖೆಗೆ ಬೇಕಾದ ಅತ್ಯುತ್ತಮವಾದ ಮಾಹಿತಿಗಳನ್ನು ಪಡೆಯಬಹುದಾಗಿದೆ.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಕನ್ನಡ ಪುಸ್ತಕಗಳು :

1. ಅಣ್ಣಿಗೇರಿ, ಪಟ್ಟದ ಕಲ್ಲು ಗುಡಿಗಳು.
2. ಅಣ್ಣಗೇರಿ ಎ.ಎಂ., ಆರ್ಕಿಯಾಲಾಜಿಕಲ್ ಸ್ಟಡೀಸ್ (ಸಂ. ನರಸಿಂಹಮೂರ್ತಿ ಎ.ವಿ.), ಸಂಪುಟ–3.
3. ಅಣ್ಣಗೇರಿ ಎ.ಎಂ., ಐಹೊಳೆ ಕಲೆ ಮತ್ತು ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಕಾಣೆ ಸಿ.ವಿ., ಹಿಸ್ಟರಿ ಆಫ್ ದಿ ಧರ್ಮಶಾಸ್ತ್ರಸ್, ಸಂ.3, ಬಾಂಬೆ ಗೆಜೆಟೀರ್, ಭಾಗ–1.
5. ಕೃಷ್ಣ ಎಂ.ಎಚ್, ಕರ್ನಾಟಕದ ಕಲೆಗಳು.
6. ಕೃಷ್ಣರಾಯ ಅ.ನ. (ಸಂ.), ಭಾರತೀಯ ಸಂಸ್ಕೃತಿ.
7. ಕರ್ನಾಟಕ ಸ್ಟೇಟ್ ಗೆಜೆಟಿಯರ್, ಸೂರ್ಯನಾಥ ಯು. ಕಾಮತ್ (ಸಂ.), ಗವರ್ನಮೆಂಟ್ ಆಫ್ ಕರ್ನಾಟಕ.
8. ಡಾ. ಬಾ.ರಾ. ಗೋಪಾಲ, ಬಾದಾಮಿ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.
9. ಡಾ. ಬಾ.ರಾ. ಗೋಪಾಲ, ಐಹೊಳೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
10. ಡಾ. ಬಾ.ರಾ. ಗೋಪಾಲ್, ಬನವಾಸಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
11. ಡಾ. ಬಾ.ರಾ. ಗೋಪಾಲ್, ಕನ್ನಡ ನಾಡಿನ ಹೊರಗೆ ಕರ್ನಾಟಕ ವಾಸ್ತುಶಿಲ್ಪ ಪ್ರಕಾಶನ, ಬೆಂಗಳೂರು.
12. ಡಾ. ಎಸ್. ರಾಜಶೇಖರ್, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.
13. ದೇಸಾಯಿ, ಪಿ.ಬಿ., ಕನ್ನಡ ನಾಡಿನ ಶಾಸನಗಳು, ಕನ್ನಡ ನಾಡಿನ ಚರಿತ್ರೆ 1.
14. ನಾಗರಾಜು ಎಸ್., ಬುದ್ದೀಸ್ಟ್ ಆರ್ಕಿಟೆಕ್ಚರ್ ಆಫ್ ವೆಸ್ಟರ್ನ್ ಇಂಡಿಯ.
15. ಪಂಚಮುಖಿ ಆರ್.ಎಸ್., ಕರ್ನಾಟಕ ಶಾಸನಗಳು.
16. ಪಂಚಮುಖಿ ಆರ್.ಎಸ್., ಕರ್ನಾಟಕದ ಇತಿಹಾಸ.
17. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ವಾರ್ಷಿಕ ವರದಿ, 1917, 1924, 1933, 1936, 1946.
18. ಪಾಡಿಗಾರ ಶ್ರೀನಿವಾಸ, ಕರ್ನಾಟಕ ಚರಿತ್ರೆ, ಸಂ.1, 1997, ಹರತಿ.
19. ಪಾಲ್ ಟರ್ನರ್, ವ್ಯವಹಾರ ಗಣಿತ, ಅಧ್ಯಾಯ–4.
20. ಪಾಲ್ ಟರ್ನರ್, ಸ್ಟಡೀಸ್ ಇನ್ ಸೌತ್ ಇಂಡಿಯನ್ ಕಾಯಿನ್ಸ್, ಸಂಪುಟಗಳು–1–3.
21. ಪಂಚಮುಖಿ ಆರ್.ಎಸ್., 1967. ಕರ್ನಾಟಕ ಇತಿಹಾಸ ಭಾಗ–1, ಧಾರವಾಡ, (ಭಾಗ–1).

22. ಪ್ರೊ. ಎಸ್.ಕೆ. ರಾಮಚಂದ್ರರಾವ್, ಭಾರತದ ದೇವಾಲಯ: ನೆಲೆ ಹಿನ್ನೆಲೆ.

23. ಮಲ್ಲಿಕಾರ್ಜುನ ಕಲ್ಮಠ, ಬಾದಾಮಿ ಮಾರ್ಗದರ್ಶಿ.

24. ಮೈಸೂರು ರಾಜ್ಯ ಸರ್ಕಾರದಿಂದ ಪ್ರಕಟಿತ ಕರ್ನಾಟಕ ಪರಂಪರೆ ಸಂಪುಟ-1.

25. ರಮೇಶ ಕೆ.ವಿ., ಎ ಹಿಸ್ಟರಿ ಆಫ್ ಸೌತ್ ಸೌತ್ ಕನರ, ಧಾರವಾಡ.

26. ರಮೇಶ ಕೆ.ವಿ., ಚಾಲುಕ್ಯಾಸ್ ಆಫ್ ವಟಾಪಿ, ಆಗಮ ಪ್ರಕಾಶನ, ದೆಹಲಿ, 1983.

27. ರಾಜಶೇಖರ ಎಸ್. 1982, ಚಾಲುಕ್ಯ ದೇವಾಲಯಗಳು ಚಾಲುಕ್ಯಶ್ರೀ, ಬಾದಾಮಿ

28. ರಾಮಚಂದ್ರರಾವ್ ಎಸ್.ಕೆ. 1975. ಮೂರ್ತಿ ಶಿಲ್ಪಿ, ನೆಲೆ ಹಿನ್ನೆಲೆ, ಬೆಂಗಳೂರು.

29. ಶಂಕರನಾರಾಯಣ ಎಸ್., ವಿಷ್ಣು ಕುಂಡಿನ್ಸ್ ಅಂಡ್ ದೇರ್ ಟೈಮ್ಸ್.

30. ಸರ್ಕಾರ್ ಡಿ.ಸಿ., ಸಕ್ಸಸರ್ಸ್ ಆಫ್ ದಿ ಶಾತವಾಹನಾಸ್, ಮುನ್ಷಿರಾಂ ಮನೋಹರಲಾಲ್ ಪಬ್ಲಿಕೇಷನ್ಸ್, ದೆಹಲಿ.

31. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ-1.

32. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ.

33. ಶ್ರೀಕಂಠಶಾಸ್ತ್ರಿ ಎಸ್., ಭಾರತೀಯ ಸಂಸ್ಕೃತಿ, ಹೊಯ್ಸಳ ವಾಸ್ತುಶಿಲ್ಪ.

34. ಹಯವದನರಾವ್ ಸಿ. (ಸಂ.), ಮೈಸೂರು ಗೆಜೆಟಿಯರ್, ಸಂಪುಟ-2, ಭಾಗ-2.

35. ಹರತಿಸಿರಿ ನೆನಪಿನ ಸಂಪುಟ, ಪ್ರಕಟಣ ಸಮಿತಿ.

36. ಹೆಚ್.ಎಸ್.ಕೆ., ಅವಲೋಕನ.

ಆಂಗ್ಲ ಪುಸ್ತಕಗಳು :

1. Agrawala Vasudeva, S., The Heritage of Indian Art.

2. Banarji R.D., Bass Relief of Badami, Kolkatta, 1928.

3. Bennet, The Relations of Sculpture to Architecture.

4. Bhandakar R.G., Early History of the Deccan.

5. Bhandarkar R.G., History of the Deccan Vol.3.

6. Bhandarkar, R.G, Vaishnavism, Saivism, etc.

7. Bhattacharya B.C., Indian Images, The Jaina Inconography.

8. Bickhan Lal Atreya, Indian Culture.

9. Bombay Karnatak Inscriptions (2 Volumes).

10. Brown, C.J, Coins of India.

11. Cousen H., The Chalukyas Architecture of the Concerries District Calcultta, 1926.

12. Cousens, H., Chalukyan Architecture.

13. Cultural Heritage of India (4 Volumes).

14. Dasgupta S.N., Fundamentals of Indian Art, History of Indian Philosophy, Vol.V.

15. Deccan Herald, 1978.

16. Desai, P.B., Jainism in South India.

17. Dikshith Political History of Chalukyas of Badami, Delhi, 1980.

18. Dr. C.T. Desai, Dr. S.H. Riti, Dr. B.R. Gopal, History of Karnataka, Karnataka University, Dharwad.

19. Dr. M.S. Nagarajara, The Chalukyas of Badami.

20. Dr. S. Nagaraju, Buddist, Caves of Western India, Agam Prakashana, New Delhi.

21. Dr. Srinivasa Ritti and Dr. B.R. Gopala (Eds.), Studies in South Indian History and Culture, (Prof. P.B. Desai Samkarana Samputa).

22. Eliot, Sir Water, Coins of South India.

23. Epigraphia Carnataka Volumes (E.C.).

24. Epigraphia India, Vol.3-10, 14, 19, 22, 25-28, 32-35.

25. Epigraphia Indica Volumes (E.I.).

26. Fabri Charles, An Introduction to Indian Architecture.

27. Fergusson James, History of India and Eastern Architecture.

28. Fletcher, History of Architecture on the Comparative Method.

29. Gangoly, O.C., Indian Architecture.

30. Garry Barbi Kov and Vidhya Dehiya, Sharing Intrusion and Influence the Mahishasura Mardini Imageri Of the Chalukyas and Pallavas Artiban Ashya Vol.55.

31. George Larence, Indian Art (Moghal Miniatures), Indian Art (Paintings of Himalayan States).

32. Havell, E.B., Ancient and Medieval Architecture of India, Indian Architecture, Hand Book of Indian Art, Himalaya in Indian Art.

33. Hayavadana Rao, C., Mysore Gazetteer (Volumes).

34. Indian Antiquitiry, Vol.3-13, 19,27.

35. Jagadish Ayyar, South Indian Shrines.

36. Karnatak Inscriptions etc.

37. Karnataka Inscriptions, Vol.5.

38. Kerel E., Ryadclus - Early Chalukyan Structure, Vol.1, Unpublished Ph.D. Thesis, New York, 1981.

39. Krishnaswamy Ayangar S., Ancient Indian and South Indian Histlory and Culture, Contribution of South India to Indian Culture.

40. Master M.W. Encyclopedia of Indian Temple Architecture South India-Lower Devidedesa, Delhi, 1983.

41. Mehta N., Studies in Indian Painting.

42. Mugali, R.S. Heritage of Karnataka.

43. Nagaraj S., Buddhist Architecture of Western India.

44. Nandimeth, S.C., Hand Book of Veerashaivism.

45. Narasimha Murthy M.V., Coins of Karnataka Geetha Book House, Mysore.

46. Neelakanta Shastri K.A., A History of South India.

47. Nehru, Jawaharlal, The Discovery of India, Glimpses of World History.

48. Padigar S.V., A Structural Fashion of Voshodhara Story of Pattadakal, Journal of Karnataka University, Dharwad, 1978.

49. Padmaraj, The Glory that is Iholi Badami and Pattadakal.

50. Percy Brown, Indian Architecture Buddhist and Hindu, Mumbai, 1971.

51. Pergusson James, and Burgess James, Cave Temples of India.

52. Pierre Ramabach and Vitold De Golish. The Golden Age of Indian Art.

53. Radha Kamal Mukerjee. Culture and Art of India, The Social Function of Art, Flowerings of Indian Ar.

54. Radha Kumud Mukerjee, Glipses of India.

55. Rajashekar, Early Chalukyas Architecture, Abhinava Prakashana, Delhi, 1985.

56. Samba Murthy, P., History of Indian Music, South Indian Music.

57. Sharma, S.R, Jainism and Karnataka Culture.

58. Smith, Vincent, A. History of Fine Art in India and Ceylon.

59. Sources of the Medieval History of the Deccan, Part-1, Pune.

60. Srikanta Shastry, S. Sources of Karnatak History.

61. Venkatesha Iyengar, Masti, Popular Culture in Karnataka.

62. Yagnani, Early History of the Deccan Part 1-8.

63. Yazdhani, (Ed.), Early History of Deccan (2 Vols.),

64. Zimmer Heinrich, The Art of Indian Asia, Myths and Symbols in Indian Art and Civilization.

ಕೆಲ ವಿಶಿಷ್ಟ ಪದಗಳ ಅರ್ಥ

ಪುಸ್ತಕದಲ್ಲಿ ಬಳಸಿದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ತಾಂತ್ರಿಕ ಪದಗಳು, ಅವುಗಳ ಅರ್ಥ, ಸಮಾನಾರ್ಥಕ ಪದ, ಇತ್ಯಾದಿ.

ಅಧಿಷ್ಠಾನ	:	ನೆಲೆಗಟ್ಟು, ಪಂಚಾಂಗ, ದೇವಾಲಯದ ಅತ್ಯಂತ ಕೆಳಗಿನ ಭಾಗ, ತಳಹದಿ, ಪಾಯ.
ಅಂತರಾಳ	:	ನಡುವಿನ ಜಾಗ
ಅಮಲಕ	:	ಚಿಕ್ಕ ಚಿಕ್ಕ ನಲ್ಲೀಕಾಯಿಯ ಆಕಾರ.
ಕೋಷ್ಠ	:	ಸುತ್ತ ಗೋಡೆಯಲ್ಲಿನ ಗೂಡು, ಕಿರುದೇಗುಲ
ಗಜಪೃಷ್ಠ	:	ದುಂಡಾಯತ, ಬೃಹದ್ವ್ಯಾಸ
ಜಗಲಿ	:	ಕಟ್ಟೆ, ವೇದಿಕೆ, ಜಗತಿ, ತೆರೆದ ಮಂಟಪ.
ಜಾಲಂಧ್ರ	:	ಜಾಲಂದರ, ಜಾಳಂದ್ರ, ಜಾಳಾಂದ್ರ; ಬಲೆಯಂತೆ ಕಂಡಿಗಳನ್ನು ಒಳಗೊಂಡಿರುವ ಕಿಟಕಿ.
ದ್ವಾರಬಂಧ, ದಾರವಂದ, ದಾರಂದ	:	ಬಾಗಿಲ ಚೌಕಟ್ಟು.
ನವರಂಗ	:	ಸಭಾಮಂಟಪ, ಮಹಾಮಂಟಪ, ರಂಗ ಮಂಟಪ, ನಡುಸಾಲೆ.
ಭುವನೇಶ್ವರಿ	:	ದೇವಸ್ಥಾನದ ಮೇಲ್ಛಾವಣಿಯಲ್ಲಿ ಕೆತ್ತನೆ ಕೆಲಸದಿಂದ ಕೂಡಿದ ಭಾಗ.
ಬೋದಿಗೆ	:	ಕಂಬಗಳ ಮೇಲೆ ಛತ್ತಿಗೆ ಆಧಾರವಾಗಿರುವ ಶಿಲೆ.
ಭಿತ್ತಿ	:	ಗೋಡೆ.
ಮುಖಮಂಟಪ	:	ಮೊಗಸಾಲೆ, ಕೈಸಾಲೆ, ಕೈಶಾಲೆ, ವರಾಂಡ, ಒಳ ಮಂಟಪ, ಹಜಾರ, ರಂಗ ಮಂಟಬಪ.
ಮಾಡು	:	ಛಾವಣಿ, ಮಹಡಿ, ವಿಮಾನ.
ಯಾಳಿ	:	ಸಿಂಹಾಕಾರದ ಒಂದು ಕಾಲ್ಪನಿಕ ಪ್ರಾಣಿ.
ಸುಕನಾಸಿ, ಶುಕನಾಸ	:	ದೇವಾಲಯದ ಗರ್ಭಗುಡಿಯ ಮುಂಭಾಗದ ಅಂಕಣ, ಗರ್ಭ ಗುಡಿ ಮತ್ತು ರಂಗ ಮಂಟಪಗಳ ನಡುವಿನ ಚಿಕ್ಕ ಮಂಟಪ.
ಸಾಂಧಾರ	:	ಪ್ರದಕ್ಷಿಣಾ ಪಥ.
ಸ್ತೂಪ	:	ಅರ್ಧ ಗೋಲಾಕಾರ.
ವೇಸರ	:	ದ್ರಾವಿಡ ಮತ್ತು ನಾಗರ ಶೈಲಿಗಳ ಮೇಳವಿಕೆ, ಭೂಮಿಜ.

ಅನುಬಂಧ

ಛಾಯಾಚಿತ್ರಗಳು



ಗಳಗನಾಥ ದೇವಾಲಯ, ಪಟ್ಟದಕಲ್ಲು




ಒಂದನೆಯ ಪುಲಿಕೇಶಿಯ ಕೋಟೆ



ವಿಜಯೇಶ್ವರ (ಸಂಗಮೇಶ್ವರ) ಗುಡಿ, ಪಟ್ಟದಕಲ್ಲು



ನಟರಾಜ, ಬಾದಾಮಿ



ಶ್ರೀ ಬನಶಂಕರಿ ದೇವಾಲಯ, ಬಾದಾಮಿ



ಮೊದಲನೆಯ ಗುಹೆ, ಬಾದಾಮಿ



ಕಾಶಿ ವಿಶ್ವನಾಥ ದೇವಾಲಯ, ಪಟ್ಟದಕಲ್ಲು



ದುರ್ಗಗುಡಿ, ಐಹೊಳೆ










ಶೇಷಶಾಯಿ ವಿಷ್ಣು




ದುರ್ಗದ ಗುಡಿ, ಐಹೊಳೆ



ಮೇಗುತಿ ದೇವಾಲಯ, ಐಹೊಳೆ



ಲಾಡ್‌ಖಾನ್ ದೇವಾಲಯ, ಐಹೊಳೆ



ಜಾಲಂಧರ, ಲಾಡಖಾನ ಗುಡಿ, ಐಹೊಳೆ









ಗುಹೆ ದೇವಾಲಯ, ಬಾದಾಮಿ



ಅಗಸ್ತ್ಯ ತೀರ್ಥ, ಮಹಾಕೂಟ



ದೇವಾಲಯಗಳ ಸಮುಚ್ಚಯ, ಪಟ್ಟದಕಲ್ಲು



ದುರ್ಗ ದೇವಸ್ಥಾನ, ಐಹೊಳೆ







ದೇವಾಲಯಗಳ ಸಮುಚ್ಚಯ, ಐಹೊಳೆ




ಬಾದಾಮಿ ಗುಹೆ



ಪಾಪನಾಥ ದೇವಸ್ಥಾನ, ಪಟ್ಟದಕಲ್ಲು



ಮಂಜುನಾಥ ಮತ್ತು ಕಾಶಿವಿಶ್ವನಾಥ ದೇವಾಲಯ, ಪಟ್ಟದಕಲ್ಲು









ಮಿಥುನಶಿಲ್ಪ, ನಾಗನಾಥ ಗುಡಿ, ನಾಗರಾಳ



ಗುಹೆ ಒಂದು: ಅರ್ಧನಾರೀಶ್ವರ




ರಸಿಕ ದಂಪತಿ



ತ್ರಿವಿಕ್ರಮ



ಭೂವರಾಹ



ಮಹಾವಿಷ್ಣು



ಮೇಲಿನ ದೇವಾಲಯ



ಮಾಲೆಗಿತ್ತಿ ಶಿವಾಲಯ



ಭೂತನಾಥ ಗುಡಿಗುಂಪು (ಪೂರ್ವ)



ಎಲ್ಲಮ್ಮಗುಡಿ



ಐಹೊಳೆಯ ಹುಚ್ಚುಮಲ್ಲೆ ಗುಡಿ



ದುರ್ಗದೇವಾಲಯ, ಐಹೊಳೆ



ಇಟ್ಟಗಿ ಮಹಾದೇವ ದೇವಾಲಯದ ಹಲವು ಸ್ತಂಭಗಳುಳ್ಳ ತೆರೆದ ಮಂಟಪ



ಕೊಂತಿಗುಡಿ, ಐಹೊಳೆ



ಬಳ್ಳಿಗಾವಿ ದೇವಾಲಯ



ಐಹೊಳೆಯ ಒಂದು ದೇಗುಲದ ಕರಿಗಲ್ಲಿನ ಅಲಂಕಾರಿಕ ಸ್ತಂಭ









ದುರ್ಗಾದೇವಾಲಯದ ಬಳಿಯಲ್ಲಿರುವ ಮತ್ತೊಂದು ನಾರಸಿಂಹ




ಬಳ್ಳಿಗಾವಿಯಲ್ಲಿ ಒಬ್ಬಳು ಸ್ತ್ರೀದೇವತೆ







ಎರಡು ಸ್ತ್ರೀ ದೇವತೆಗಳು, ಐಹೊಳೆ (ಚಾಲುಕ್ಯರಿಗಿಂತ ಮೊದಲನೆಯದು)



ಹಾವೇರಿಯ ಕಾಡಸಿದ್ದೇಶ್ವರ ದೇವಾಲಯ



ಶೇಷಾಸೀನನಾದ ವಿಷ್ಣು, ಐಹೊಳೆ









ರಾಮಾಯಣದಿಂದ ಒಂದು ಚಿತ್ರ, ಪಟ್ಟದ ಕಲ್ಲು



ಸೀತೆಯನ್ನು ಸಂತೈಸುತ್ತಿರುವುದು (ಪಟ್ಟದಕಲ್ಲು)



ವಿರಹ – ಮಿಲನ, ಪಟ್ಟದಕಲ್ಲಿನ ಒಂದು ಕಂಬದಲ್ಲಿ












ಪಾಪನಾಥ ದೇವಾಲಯದ ಹೊರಗೋಡೆಯಲ್ಲಿನ ದಳಿ, ಸ್ತಂಭಿಕೆ, ಕಿಟಕಿಗಳು



ಕೊಪ್ಪಳ ಸೀಮೆ ಕುಕ್ಕನೂರಿನ ಕಲ್ಲೇಶ್ವರ ದೇವಾಲಯ



ಡಂಬಳದ ಈಶ್ವರ ದೇವಾಲಯ



ಲಕ್ಕುಂಡಿಯ ಕಾಶೀ ವಿಶ್ವೇಶ್ವರ ದೇವಾಲಯ







ಬಾದಾಮಿ ಮೂರನೆಯ ಗುಹೆಯಲ್ಲಿ ದ್ವಾರಪಾಲಕ



ತೃತೀಯ ಗುಹೆಯ– ತ್ರಿವಿಕ್ರಮ ಮಹಾಶಿಲ್ಪ